ಹೆತ್ತಳಾ ತಾಯಿ

ಶಿವರಾಮ ಕಾರಂತ.

ಮುದ್ರಣ, ಪ್ರಕಟಣಾಲಯ, ಪುತ್ತೂರು. ದ. ಕ.

ಹೆತ್ತಳಾ ತಾಯಿ

ಶಿವರಾಮ ಕಾರಂತ

(ಎರಡನೆಯ ಆವೃತ್ತಿ)

1948

ಹರ್ಷ ಮುದ್ರಣ, ಪ್ರಕಟಣಾಲಯ.
ಪುತ್ತೂರು. ದ. ಕ.

ಬೆಲೆ. 1-12-0

ಹೆತ್ತಳಾ ತಾಯಿ

ಮೊದಲನೆಯ ಅಧ್ಯಾಯ

ಬರಿಯ ಐದು ವರುಷಗಳ ಹಿಂದೆ ತೊಡಗಿದ ಕತೆಯಿದು. ಅಷ್ಟೇ ಸ್ವಲ್ಪ ಸಮಯದ ಹಿಂದೆ ಅವಳು ಹಳ್ಳಿಗಾಡಿನ 'ಗಿರಿಜೆ'ಯಾಗಿದ್ದಳು. ಈಗ ಹೆಸರಿನ ಪರಿವರ್ತನೆಯಾಗಿದೆ; ಮೇಲೆ ಅದು ವಿಕಾಸವನ್ನೂ ಹೊಂದಿದೆ. ಅವಳ ಮನೆಯವರು ದ್ರಾವಿಡ ಸಾಂಪ್ರದಾಯದವರಾದರೂ ಈಗ ಗಿರಿಜೆ ದೇವಿಯಾಗಿದ್ದಾಳೆ. ಆರ್ಯರ ದೇವಿತನ ನವಯುಗದ ತರುಣಿಯರೆಲ್ಲರ ಬೆನ್ನುಹತ್ತಿರುವಾಗ, ಹಳ್ಳಿಯನ್ನು ಬಿಟ್ಟು ನಗರ ಸೇರಿದ ಗಿರಿಜೆ ಏತಕ್ಕೆ ಸುಮ್ಮನಾದಾಳು? ಗಿರಿಜೆಯ ನಾಮಾಂಕಿತ ವಿಕಾಸವಾದಂತೆ ಸ್ವಭಾವ ಶೀಲಗಳೆಲ್ಲವೂ ಅರಳಿದ ಬಗೆಯನ್ನು ಹೇಳುವುದೇ ಈಕತೆಯ ಉದ್ದೇಶ.

ಗುಡ್ಡಗಾಡಿನ ಹಳ್ಳಿ ಅವಳು ಹುಟ್ಟಿದ ಮುಂಡೂರು. ಅದರ ಕರೆಯಲ್ಲಿ, ನಡುವಿನಲ್ಲಿ ಕಾಡುಗಳೂ ಇವೆ. ಊರಿನ ಹೆಸರಿಗೂ ಸಂಭ್ರಮವಿಲ್ಲ, ಊರಿಗೂ ಇಲ್ಲ. ಪ್ರಾಯಶಃ 'ಮೊಂಡೂರು' 'ಮುಂಡೂ'ರಾಯಿತೋ ಏನೋ. ಏನಾದರೇನು—ಪುತ್ತೂರಿನಂಥ ಪೇಟೆಯ ಗಾಳಿ ಬೀಸುವುದಕ್ಕೂ ಎಂಟು ಮೈಲು ದೂರ ನಡೆದು ಬರಬೇಕು. ಊರಿನ ಒಂದೇ ಒಂದು ಸೊಬಗು ಸಮೀಪದ ನದಿ, ಕುಮಾರಧಾರೆ. ಸುಬ್ರಮಣ್ಯದಿಂದ ಹರಿದು ಬಂದು, ನಾಲ್ಕು ನಿಮಿಷ ಮುಂಡೂರಿನ ಬಳಿ ತಂಗಿ, ಮಂಗಳೂರಿಗೆ ಪಯಣ ಸಾಗಿಸುವ ನದಿಯೊಂದು—ಆ ಹಳ್ಳಿಗೂ ನಾಗರಿಕತೆಗೂ ಇರುವ ಒಂದೇ ನಂಟು. ಗಿರಿಜೆಯ ತಂದೆಯ ಹೆಸರು 'ಕೂಜಪ್ಪ'—ಎಂದು. ಅವನ ಹೇಳಿಕೆಯನ್ನು ನಂಬುವುದಾದರೆ—ಕುಮಾರಧಾರಾನದಿಯು ಬಹು ಸಮಯದಿಂದ ಅವರ ಮನೆಯ ಮುಂದಿನಿಂದಲೇ ಹರಿಯುತ್ತಿದೆಯಂತೆ. ನದಿಯು ಹರಿಯುತ್ತಿರುವುದನ್ನು ಕಂಡು, ಅಲ್ಲಿಗೆ ಕೂಜಪ್ಪನೋ, ಅವನ ಹಿರಿಯರೋ ಬಂದು ನೆಲಸಿರಬಹುದಾದರೂ, ಅವನ ಮನಸ್ಸಿನಲ್ಲಿ—ತಾವು ಬಂದ ಮೇಲೆಯೇ ನದಿ

ಬಂದುದು—ಎಂದಿದೆ. ನೀವು ಕೂಜಪ್ಪನನ್ನು ಕೇಳಿರಿ: 'ನೀವು ಈ ತಾವಿಗೆ ಬಂದು ನೆಲೆಸಿ ಎಷ್ಟುಕಾಲವಾಗಬಹುದು?' ಎಂದು. ಅವ- "ನಮ್ಮ ಕುಲವೇ, ನಾನೇ? ಬಹಳ ಅನಾದಿಯಿಂದ ನಾವು ಇಲ್ಲಿ ಮನೆ ಮಾಡಿಕೊಂಡಿದ್ದವರು. ಮೊದಲು ನೋಡಿ--ಇಲ್ಲೊಬ್ಬ ಋಷಿಯ ಆಶ್ರಮವಿತ್ತಂತೆ. ಅವರು ಬಹುಕಾಲ ತಪಸ್ಸಿನಲ್ಲಿ ಮುಳುಗಿದ್ದು, ಎಚ್ಚರಗೊಳ್ಳುವಾಗ ಬಾಯಾರಿಕೆ ಆಯಿತಂತೆ. ಎಷ್ಟೆಂದರೂ ಋಷಿಗಳಲ್ಲವೇ? ನೀರನ್ನು ಹುಡುಕಿ ಹೋದಾರೆಯೇ? ಕೂತಲ್ಲಿಂದಲೇ ಕೈಚಾಚಿ—ನೆಲವನ್ನು ಕೆರೆದುಬಿಟ್ಟರಂತೆ! ಅವರ ಸತ್ಯವನ್ನು ನೋಡಿ! ಕುಮಾರಧಾರೆಯ ಮಗ್ಗುಲು ಮುರಿದು ಆ ನೀರು ಈ ಹಾದಿಯಾಗಿ ಬಂದಿತಂತೆ ತನಗೆ ಬೇಕಾಗುವಷ್ಟು ನೀರನ್ನು ಗಟಗಟ ಕುಡಿದಾದ ಮೇಲೆ, ದಿಕ್ಕುಗಾಣದ ನದಿಯನ್ನು ಕಂಡು 'ಹೂಂ, ಹೀಗೆಯೇ ಬೀರಮಂಗಲದ ಹಾದಿಯಾಗಿ ದಕ್ಷಿಣ ಕಾಶಿ (ಉಪ್ಪಿನಂಗಡಿ) ಯಲ್ಲಿ ನೇತ್ರಾವತಿ ನದಿಯನ್ನು ಸೇರಿಬಿಡು ಅಂದರಂತೆ"ಎನ್ನುವ. ಹಾಗೆಯೇ ನದಿ ಮುಂದಕ್ಕೆ ಹರಿಯಿತು. ಮುಂದೆ—ಕೂಜಪ್ಪನೂ ಅವನ ಹಿರಿಯರು ಬಹುಕಾಲದಿಂದಲೂ ಅಲ್ಲಿಯೇ ವಾಸವಾಗಿದ್ದರು-ಎಂದು ನೀವು ತಿಳಿದರಾಯಿತು. ಅವರ ಮನೆಯ ಹತ್ತಿರ ನದಿಯು ಸಾಧಾರಣ ನೂರು ಗಜ ಅಗಲವಾಗಿದೆ. ಎರಡು ಮಗ್ಗಲಿಗೂ ಎರಡು ಮೂರಾಳು ಎತ್ತರದ ದಂಡೆಗಳು. ಆ ದಂಡೆಯಲ್ಲೇ ವಿಶಾಲವಾದ ಹರಹು.ಆ ಹರಹಿನಲ್ಲಿ ಹಾಯಾಗಿ ಮಲಗಿರುವ ಹೊಲಮನೆಗಳೆಲ್ಲ ಕೂಜಪ್ಪನವು. ಅವನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳವು. ಅಷ್ಟೇನು 'ಊಚು' ಗದ್ದೆಗಳಲ್ಲವಾದರೂ ಅವನೆನ್ನುವಂತೆ 'ಎರಡಕ್ಕೆ ಕಡಮೆಯಾಗದು,ನಾಲ್ಕಕ್ಕೆ ಹೆಚ್ಚಾಗದು' ಎಂಬಂತಿತ್ತು ಅವುಗಳ ಉತ್ಪನ್ನ. ಅಂತು ಮನೆಯಲ್ಲಿರುವ ಕೂಜಪ್ಪ, ಅವನ ಪತ್ನಿ ನಾಗಕ್ಕ, ಕುಮಾರಿ ಗಿರಿಜೆ-ಇವರ ಸಂಸಾರ ಸಾಗಲು ತೊಂದರೆಯಿಲ್ಲದಿತ್ತು.

ಈ ಬರಿಯ ಮೂವರ ಅನ್ನಕ್ಕೆ ಸಾಕಾಗುವ ಉತ್ಪನ್ನ ಆ ಹೊಲಗಳಿಂದ ಕೂಜಪ್ಪನಿಗೆ ದೊರೆತರೂ-ಅವನ ಹೇಳಿಕೆಯಂತೆ ಅದೊಂದು 'ಅಕ್ಷಯಪಾತ್ರೆ'. ಅಂದರೆ ಅವನ ತಂದೆ ಮಾನಪ್ಪನಿಗೆ ಅವರೆಂಟು ಮಂದಿ ಮಕ್ಕಳು. ಅಷ್ಟು ಜನರ ಸಂಸಾರವನ್ನು ಕಟ್ಟಿಕೊಂಡು,

ಮಾನಪ್ಪ ಕಣ್ಮುಚ್ಚಿದುದು ಅದೇ ತಾವಿನಲ್ಲಿ. ಆದರೂ ಅವರ ಜೀವನಕ್ಕೊಂದು ಕೊರತೆಯಿದ್ದಿಲ್ಲವಂತೆ. ನೀವೇನಾದರೂ ಅನುಮಾನದಿಂದ "ಹೌದೋ ಕೂಜಪ್ಪ, ಇಷ್ಟೇ ಹೊಲ ಸಾಗುವಳಿ ಮಾಡಿ ಆ ಹತ್ತೆಂಟು ಮಂದಿಯ ಸಂಸಾರ ಹೇಗೆ ಹೋಯಿತು? ಪಾಪ-ಎರಡು ದಿನಕ್ಕೊಂದು ತುತ್ತು ಅನ್ನವಿತ್ತೋ ಏನೋ" ಎಂದರೆ, ಆತನ ಉತ್ತರ ಬಲ್ಲಿರಾ? "ಏನೆನ್ನುತ್ತೀರಿ ಸ್ವಾಮಿ! ನಾನು ಸುಳ್ಳು ಹೇಳುತ್ತೇನೆಯೇ? ಈಗ ನನ್ನ ಅಣ್ಣತಮ್ಮಂದಿರಿಗೆ ನೀರಿನ ಋಣ ಕಡಿದುದರಿಂದ ಸತ್ತರು; ನಾನೊಬ್ಬನೇ ಉಳಿದವ. ಆದರೆ ಇಂದು ಅವರು ಬದುಕಿದ್ದರೆ, ಇಲ್ಲವೆ ನನ್ನ ಹೊಟ್ಟೆಯಲ್ಲೇ ಹತ್ತುಮಂದಿ ಮಕ್ಕಳನ್ನೇ ದೇವರು ಕೊಟ್ಟಿದ್ದರೆ-ಇದೇ ಐದು ಮುಡಿ ಗದ್ದೆಗಳಿಂದ ಸಂಸಾರ ಹೋದೀತು! ನೀವು ದುಡಿದಷ್ಟು ಬೆಳೆ ಇಲ್ಲಿ. ನಾನೇ ಉದಾಸೀನ ಮಾಡಿಕೊಂಡಿದ್ದೇನೆ. ಯಾಕೆ ನಾನು ಹಗಲೆಲ್ಲ ದುಡಿಯಬೇಕು; ಭೂಮಿ ತಾಯಿಯನ್ನು ಅತಿಯಾಸೆಯಿಂದ ಬೇಕಾದುದಕ್ಕಿಂತ ಹೆಚ್ಚಾಗಿ ದಣಿಸಬೇಕು? ಈ ಜಾಗದಲ್ಲಿ ನೀರಿನ ಒರತೆಯೆಂಥಾದ್ದು! ನೆಲ ಗೀರಿದರೆ ನೀರಿನ ಒರತೆ! ಆ ಋಷಿಗಳು ಹರಸಿಹೋದ ನೆಲ ಇದು. ಬೆಳೆದರೆ ಸುಗ್ಗಿ, ಕೊಳಕೆ ಮಾಡಬಹುದು; ಅಡಕೆ ತೋಟ ಮಾಡಬಹುದು. ನಾನೇನು ದುಡಿಯುತ್ತಿದ್ದೇನೆ? ಎಲ್ಲ ಅಷ್ಟಕ್ಕಷ್ಟೆ. ಆದರೇನು—ನಮ್ಮ ಮೂವರ ಬಾಯಿಗೆ ಒಂದು ಹೊತ್ತು ಉಪವಾಸವಾದ ದಿನವಿಲ್ಲ. ದೇವರು ಹಾಗೆ ನಡೆಯಿಸಿಕೊಂಡು ಬಂದಿದ್ದಾನೆ."

"ಹಾಗಾದರೆ ಈ ತಾವಿಗೆ ಐಬು-ಎಂಬುದೇ ಇಲ್ಲ ಅಲ್ಲವೇ?"
"ಹಾಗೆ ಐಬು ಇಲ್ಲದೆ ಇರಲು ಮನುಷ್ಯನ ಸಂಸಾರ ಅಲ್ಲವೇ. ಏನೇನೋ ಆಯಿತು, ಹ್ಯಾಗೆ ಹೇಗೋ ಆಯಿತು. ಅಪ್ಪ, ಅಣ್ಣಂದಿರು ತಮ್ಮಂದಿರು, ಒಬ್ಬೊಬ್ಬರೇ ತೀರಿಕೊಂಡರು. ನೀರಿನ ಋಣ ಮುಗಿದರೆ ನಾನೂ ಹೋಗುವವನೇ; ಬದುಕು ಯಾರಿಗೆ ಶಾಶ್ವತ! ಅದೊಂದೇ ಐಬು; ಬೇರೆ ಯಾವ ಕೊರತೆಯೂ ನನಗೆ ಕಾಣಿಸಲಿಲ್ಲ.

"ನಾನು ನಾಗುವನ್ನು ಮದುವೆಯಾಗಿ ವರ್ಷವೆಷ್ಟಾಯಿತು? ಇದ್ದೇವೆ ಇಲ್ಲೇ; ಸರಕಾರದ ಬಾಂದುಕಲ್ಲು ನಿಂತಹಾಗೆ. ಗೈಯುತ್ತೇವೆ, ಒಯ್ಯುತ್ತೇವೆ, ರಟ್ಟೆ ಬೀಸಲು ಬಂದಷ್ಟು ದಿವಸ ಕಷ್ಟ ಎಂಬುದು ಕಾಣಿಸಲಿಲ್ಲ. ಕಾಣಿಸಲಿಕ್ಕೂ ಇಲ್ಲ. ಒಂದು ಯೋಚನೆಯಿತ್ತು—ಆದರೂ

ನಾವು ಮದುವೆಯಾಗಿ ಅಷ್ಟು ವರ್ಷವಾದರೂ ಒಂದು ಮರಿಯೂ ಇಲ್ಲ ವಲ್ಲ ಎಂಬ ಚಿಂತೆ! ಇಷ್ಟು ದೊಡ್ಡ ಮನೆಯಲ್ಲಿ ಹತ್ತಾರುಮಂದಿ ಗೊಳ್ಳೆಂದು ನಕ್ಕು, ನಲಿದ ಮನೆಯಲ್ಲಿ—ಬರಿಯ ನಾವಿಬ್ಬರೇ ಗಂಡ ಹೆಂಡಿರು ಸಮಯ ಕಳೆಯಲು ಬೇಸರವಾಗದೇ.

"ಅದರಿಂದಾಗಿ ನನಗೂ, ನಾಗುವಿಗೂ ಒಂದೇ ಸವನೆ ಮಕ್ಕಳ ಚಿಂತೆ ತೊಡಗಿತು. 'ದೇವರೇ, ಒಂದು ಗಂಡಾದರೆ ಗಂಡು, ಹೆಣ್ಣಾ ದರೆ ಹೆಣ್ಣು ಕೊಡಿಸು'ಎಂದು ಬೇಡಿಕೊಂಡೆವು. ಒಂದು ದಿವಸ ನಾಗುಗೆ ಸ್ವಪ್ನವಾಯಿತು: 'ನೀನು ಮೂರುವರ್ಷ ಕಾಲ ಷಷ್ಠಿಗೆ,ಸುಬ್ರಮಣ್ಯಕ್ಕೆ ಹೋಗಿ ಮಡಸ್ತನ ಮಾಡಿದರೆ ಆಗುತ್ತದೆ' ಎಂದು. ಹಾಗೆಯೇ ಹರಕೆ ಹೊತ್ತಳು. ಮೂರು ವರ್ಷ ನಾವಿಬ್ಬರೂ ಷಷ್ಠಿಯಾತ್ರೆ ಮಾಡಿದೆವು. ನಾಲ್ಕನೆಯ ವರ್ಷವೇ ಗಿರಿಜೆಯ ಜನನವಾಯಿತು ನೋಡಿ."

ಗಿರಿಜೆಯ ಬಾಲ್ಯವನ್ನು ಕೂಜಪ್ಪ ಬಣ್ಣಿಸಿ ತಣಿಯ. ಅವಳ ರೂಪ ವೆಂದರೆ ರೂಪ, ಗುಣವೆಂದರೆ ಗುಣ—ಎಂದು ಹೇಳುತ್ತಾನೆ. ಅವಳು ಬಣ್ಣದಲ್ಲಿ ನಿಂಬೆಹಣ್ಣು, ಕೇದಗೆ ಹೂವು, ತೊಳೆದ ಪುತ್ಥಳಿ! "ಹೆಣ್ಣಾದ ರೇನಂತೆ? ಊರವರಂತೆ ನಾವು ತಾತ್ಸಾರ ಮಾಡಿದವರಲ್ಲ. ಲಕ್ಷ್ಮಿ ಸರ ಸ್ವತಿಯರೆಲ್ಲ ಹೆಣ್ಣೇ ಗಂಡೇ? ನಮ್ಮ ಗಿರಿಜೆಗೆ ಸಮನಾದ ರೂಪ,ಗುಣ, ಗಡಸುತನ—ಈ ನೂರು ಗ್ರಾಮಗಳಲ್ಲಿ ಹುಡುಕಿದರೂ ಸಿಗಲಾರದು. ಈಗ ಶಾಲೆಗೆ ಹೋಗಲಿಕ್ಕೆ ತೊಡಗಿ ಮೂರುವರ್ಷವಾಯಿತು. ಆರು ವರ್ಷ ಕಲಿತವರ ಚುರುಕು ಉಂಟು ಅವಳಲ್ಲಿ, ಎನ್ನುತ್ತಾರೆ ಅವಳ ಮಾಸ್ತರರು. ಲೆಕ್ಕದಲ್ಲಂತು ಥೇಟು ಮೆಟ್ರಿಕ್-ಅಂತೆ"

ಈ ಎಲ್ಲ ಆತ್ಮವೃತ್ತಗಳನ್ನು ಮನೆಗೆ ಬರುವ ನೆಂಟರುಇಷ್ಟರು ಗಳ ಮುಂದೆ ಒಮ್ಮೆಯಾದರೂ ಅನ್ನದಿದ್ದರೆ ಕೂಜಪ್ಪಗೆ ಸಮಾಧಾನ ವಾಗದು. ಆ ಮಾತುಗಳಿಗೆ ಸೈಗೊಡದೆ ಹೋದರೆ ನಾಗಮ್ಮನಿಗೂ ಅತೃಪ್ತಿ. ತಂದೆತಾಯಿಗಳ ಮೆಚ್ಚಿನ ಮಾತುಗಳಿಗೆ ಕಿವಿಗೊಟ್ಟು, ಹಂದಿ ತುಟಿಮಾಡಿ ತುಟಿ ಮೂಗಿಗೆ ಮುಟ್ಟಿಸುವುದು ಮಗಳ ಸ್ವಭಾವ.

ಅವರವರ ಮಕ್ಕಳು ಅವರವರಿಗೆ ಮುದ್ದಾಗಿ ಕಾಣಿಸದೆ ಹೋ ದರೆ ಹೇಗೆ? ಆದರೆ ರೂಪ, ಕಾಯಪುಷ್ಠಿಯಲ್ಲಿ ಮಾತ್ರ ಇತರ ಹಳ್ಳಿಯ ಮಕ್ಕಳಂತೆ ನಾಗಮ್ಮನಿರಲಿಲ್ಲ—ನಿಜ. ಅಂದರೆ ಮನೆಯ ಹಾಲು

ಹಯಸು, ಮೆಚ್ಚಿ ಬೆಳೆಯಿಸಿದ ಗಿರಿಜೆಗೇ ಮೀಸಲು. ಹೀಗಾಗಿ ಹದಿನೆರಡು ಪೂರ್ತಿಯಾಗುವ ಮೊದಲೇ ಹದಿನಾಲ್ಕರಂತೆ ಕಾಣಿಸಿದಳು. ಅಲ್ಲಿಗೇನೆ ಹಳ್ಳಿಯ ಶಾಲೆಯ ತರಗತಿಗಳೂ ಮುಗಿದುವು. ಈಗ ಶಾಲೆ ಬಿಟ್ಟು ಎರಡು ವರ್ಷವಾಯಿತು. ನೋಟಕ್ಕೆ ಅವಳು ಶೋಡಷಕಳಾ ಭರಿತೆ. ಆದುದರಿಂದಲೇ ಏನೋ-ಕೂಜಪ್ಪನ ಮನೆಯ ಮುಂದಿನ ಮಜಲು ಗದ್ದೆ-ಊರಿನ ಕಾಲುದಾರಿಯಾಗಿಬಿಟ್ಟಿದೆ. ಅವನ ಮನೆಯ ಮುಂದಿಂದ ಆ ಗ್ರಾಮದಿಂದ ನೆರೆಗ್ರಾಮಕ್ಕೆ ಹೋಗುವ ಹಾದಿಯೇನಿಲ್ಲ. ಆದರೂ ಅಲ್ಲಿಂದ ಬಳಸಾಗಿ, ಊರಿನ ಜವ್ವನರು ಹಾದುಹೋಗುತ್ತಾರೆ. ಕೂಜಪ್ಪನ ಮನೆಯ ತಿಂಗಳ ಬೆಳಕು ತಮ್ಮ ಮೋರೆಯ ಮೇಲೂ ಬೀಳಲಿ—ಎಂಬ ಬಯಕೆಯಿಂದ.

ತಂದೆತಾಯಿಗಳು ಬರಿದೆ ಹೆಣ್ಣು ಹೆತ್ತರೆ ಹೆಗ್ಗಳಿಕೆ ಬಂತೇ? ಹೆತ್ತ ಮಗುವನ್ನು ಯಾರ ಮನೆಗಾದರೂ ಹೊತ್ತು ಮುಟ್ಟಿಸಬೇಕು. ಆ ಕಾಲ, ಆ ಯೋಚನೆ ಕೂಜಪ್ಪಗೆ ಬರುವಂತಾಯಿತು. ಅವನ ಭಾಷೆಯಲ್ಲಿ 'ಏಚನೆ, ಏಚನೆ, ಏಚನೆ'ಯ ದಿನಗಳವು. ಅವನ ಗ್ರಾಮದಲ್ಲಿ ಅವನ ಜಾತಿಯವರು ವಾಸವಾಗಿಲ್ಲ. ಸ್ವತಃ ಅವನಿಗೇನೆ ಹೆಣ್ಣು ತಂದುದು ಇಪ್ಪತ್ತು ಮೈಲು ದೂರದ ಕೊಕ್ಕಡದಿಂದ. ನಾಗಮ್ಮನ ತಾಯಿಮನೆ ಮತ್ತಾವುದೋ ದೂರದ ಕಗ್ಗಾಡು. ಮೊದಲು ಮೊದಲು ಕೂಜಪ್ಪ-ಗಿರಿಜೆಯನ್ನು ಲಗ್ನಮಾಡಿಕೊಟ್ಟರೆ, ಬೇರೆ ಸಂತತಿಯಿಲ್ಲದ ತನ್ನ ಕಣ್ಮುಂದಿಂದ ಅವಳು ಮಾಯವಾದಂತೆಯೇ, ಎಂದು ತಿಳಿದು ಉದಾಸೀನನಾಗಿದ್ದ. ಆದರೆ ಈಗ ವಯಸ್ಸು ತುಂಬಿದೆ; ಊರ ಜನಗಳ ಕಣ್ಣ ಕುದಿಗೆ ಗುರಿಯಾಗಬಾರದಲ್ಲ. ಆದರೆ ಅಳಿಯನನ್ನು ಗಳಿಸುವ ಕೆಲಸ ಸುಲಭವೆ! ಹೊಳೆಯನ್ನು ಹಾರುವುದಾದರೂ ಸುಲಭ, ಅಳಿಯನನ್ನು ದೊರಕಿಸುವುದು ಕಷ್ಟ. 'ಗಂಡು ಪಿಳ್ಳೆಯೇ ಜಾತಿಯಲ್ಲಿ ಕಾಣಸಿಗುತ್ತಿಲ್ಲ' ಎಂದು ಕೂಜಪ್ಪ ಅತ್ತರೆ, ನಾಗಕ್ಕ "ಗಿರಿಜೆಯಂತಹ ರತಿಗೆ ಮನ್ಮಥನಂತ ಗಂಡನನ್ನು ದೊರಕಿಸಬೇಕೆ"ನ್ನುವಳು. ಅದರಿಂದಲೋ ಏನೋ-ತಾವು ಮನ್ಮಥರೆಂದು ತಿಳಿದ ಹಲವರು, ಕೂಜಪ್ಪನ ಮನೆಗೆ ಬಂದು ಬಾಯಾರಿಕೆಯನ್ನು ಕೇಳುತ್ತಾರೆ. ಜಾತಿಯ ಸೋಂಕನ್ನು ಮರೆತವರಂತೆ ಅವರು ತಂದ ನೀರನ್ನು ಕುಡಿಯುತ್ತಾರೆ. ಇಂಥ ವೀರಾಗ್ರಣಿಗಳಲ್ಲಿ,

ನರಿಮೊಗರ ರಾಮಣ್ಣನೊಬ್ಬ. ನರಿಮೊಗದ ರಾಮಣ್ಣನೂ-ಅಹುದು; ಅವನು ನೋಡಲು ಅರೆಕಪ್ಪಾದರೂ ಅರ್ಧ ಕಾಮಣ್ಣನಂತೆ ಅಲೆದಾಡುವವ. ಬೆಳ್ಳಗಿನ ಧೋತ್ರ, ತೆಳ್ಳಗಿನ ಚಡಿ, ಬೆರಳಿಗಿಷ್ಟು ಉಂಗುರ—ತಲೆ ಮುಂದೆ ಕ್ರಾಪು, ಹಿಂದೆ ಜುಟ್ಟು, ಕಿವಿಗೆ ಕೀಲುವಂಟಿ, ಕಾಲಿಗೆ ಮುಡುಪಿನ ಸರಿಗೆ, ಚಿನ್ನದ್ದೇ ಗುಂಡಿಗಳ ಮಲ್ ಮಲ್ಲಿನ ಷರಾಯಿ. ವರ್ಷದ ಹದಿನೆರಡು ತಿಂಗಳೂ ಅವನಿಗೆ ಬೇಸಗೆಯೆ! ನಿತ್ಯ ಬಾಯಾರಿಕೆ, ನಿತ್ಯ ಅವಸರದ ಕೆಲಸಗಳು— ಅವುಗಳಿಂದಾಗಿ ನಿತ್ಯ ಕೂಜಪ್ಪನ ಮನೆಯ ದರ್ಶನ. ಪ್ರತಿದಿನವೂ ಬೇರೆ ಬೇರೆ ನೆಪಹಿಡಿದು ಬಂದರೂ—ಅಚೀಚೆ ಗಿರಿಜೆ ಹಾದು ದರ್ಶನ ಕೊಡದೆ ಹೋದರೆ, ಚಾವಡಿಯಿಂದ ಇವನು ಏಳುವಂತಿರಲಿಲ್ಲ. ಕೊನೆಗೆ ಕೂಜಪ್ಪನ ಸೂಕ್ಷ್ಮ ನದರಿಗೂ ಅವನ ದರ್ಶನದ ಉದ್ದೇಶ ಗೋಚರವಾಗದೆ ಹೋಗಲಿಲ್ಲ. "ಒಮ್ಮೆ ಈ ತೋಳಗಳ ಬಾಯಿಂದ ಮಗಳನ್ನು ಬದುಕಿಸದೆ ನಿರ್ವಾಹವಿಲ್ಲ" ಎಂದು ಚಡಪಡಿಸತೊಡಗಿದ. ಅಳಿಯನ ಶೋಧನೆಗಾಗಿ ಗ್ರಾಮಾಂತರ ಸಂಚಾರ ತೊಡಗಿದ. ಇದರ ವಾರ್ತೆಯು ಕಿವಿಗೆ ಮುಟ್ಟುತ್ತಲೇ ರಾಮಣ್ಣ ನೇರಾಗಿ, ಅವರ ಮನೆಯಲ್ಲಿಯೇ ಕುಳಿತು "ಕೂಜಪ್ಪಣ್ಣನನಗೂ ನಿಮಗೂ ನಂಟುತನವಾದರೆ ಒಳಿತಲ್ಲವೇ" ಎಂದು ಕೇಳಿಯೇ ಬಿಟ್ಟ. ಆ ದಿನದ ಮಟ್ಟಿಗೆ ಆತ ಬೆಪ್ಪಾಗಿ, "ಅದೆಲ್ಲ ಋಣಾನುಬಂಧ. ನಾವು ಎಣಿಸಿದ ಹಾಗೆ ಆಗುತ್ತದೆಯೇ" ಎಂದು ಹೇಳಿದರೂ ಅವನ ಅಂತರಂಗ ಭೀತಿಯಿಂದ ಕುದಿಯತೊಡಗಿತು.

ರಾಮಣ್ಣನ ಇತಿವೃತ್ತಗಳನ್ನು ತಿಳಿಯುವುದು ಕಷ್ಟವಿರಲಿಲ್ಲ. ಅವರಿವರ ಮನೆಗಳಿಗೆ ಎರಡು ಮೈಲಿನ ದೂರ. ಆತ ಅನುಕೂಲವಂತ. ಅದಕ್ಕೂ ಮಿಗಿಲಾಗಿ ಕಾರುಭಾರಿ. ಇಷ್ಟರ ತನಕವೂ ಲೆಕ್ಕಚಾರದ ಮದುವೆಗೆ ಸಿಕ್ಕಿಬಿದ್ದವನಲ್ಲ. ಆದರೆ ಈಗೇಕೋ ಗಿರಿಜೆಯ ಮೇಲಿನ ಮೋಹದಿಂದ ವಿವಾಹದ ಸಂಕಲೆಗೆ ತಾನೇ ಕೈಯೊಡ್ಡುತ್ತೇನೆಂದ. ಆದರೆ ಅವನ ಕುಲ ಬೇರೆ, ಜಾತಿ ಬೇರೆ. ಕೂಜಪ್ಪನ ಜಾತಿಗೂ ಅವನ ಜಾತಿಗೂ ಬಂಗಾರಕ್ಕೂ, ಬೆಟ್ಟು ಚಿನ್ನಕ್ಕೂ ಇರುವಷ್ಟೇ ದೂರ. "ಈ ನಾಯಿಗೆ ನನ್ನ ಮಗಳನ್ನು ಕೇಳುವ ಧೈರ್ಯ ಬಂದಿತೇ?" ಎಂದು ಕೂಜಪ್ಪ ಮೈಮರೆತು ನುಡಿಯುವಂತಾಯಿತು. ಅದು ಬರಿಯ ಬಾಯಿ

ಮಾತಾದರೂ, ಗ್ರಾಮ ಸಂಚಾರಮಾಡಿ, ರಾಮಣ್ಣನ ಕಿವಿಗೂ ತಲುಪಿತು. ರಾಮಣ್ಣ-ರಾವಣನೇ ಆದ. ಅದೇ ಮಾರ್ಗದಿಂದ ತನ್ನ ಸೀತೆಯನ್ನು ತಾನು ಗಳಿಸಬೇಕೆಂಬ ತನಕವೂ ಯೋಚಿಸಿದ. ಆದರೆ, ಆಗಿನ ಸಿಟ್ಟು ತುಸುಕಾಲದಲ್ಲಿ ತಣಿದು ಬೇರೆ ಹಾದಿ ಹಿಡಿಯಿತು. ಶಕುನಿಯಾಗಿ ಬಿಡುವೆನೆಂದು ಬೇರೆಯೇ ದಾರಿ ತೆಗೆದನು.

ಕೂಜಪ್ಪನ ಪಿತ್ರಾರ್ಜಿತ ಹೊಲಗಳ ಮೇಲುಗಡೆಯಲ್ಲಿ ಬೇರೊಬ್ಬರಿಗೆ ಸ್ವಲ್ಪ ಜಮೀನಿತ್ತು. ಅದನ್ನು ಹೇಗಾದರೂ ಮಾಡಿ ತಾನೇ ದೊರಕಿಸಿಕೊಂಡರಾಗುತ್ತಿತ್ತು—ಎಂದು ಕೂಜಪ್ಪನ ಹಂಬಲವಿತ್ತು. ಆದರೆ ಹಳ್ಳಿಯವರ ಗಾದೆಯಂತೆ 'ಹಣವಿಲ್ಲದೆ ಬಡ್ಡಿ ಕಳೆದುಕೊಳ್ಳುವಂತಾಯಿತು.' ಆ ಭೂಮಿಯನ್ನು ಅನಾವಶ್ಯಕವಾಗಿ ಮೇಲಾಡಿಸಿ ರಾಮಣ್ಣನೇ ಕೊಂಡುಕೊಂಡನು. ಅವನು ಕೊಂಡನೆಂದು ತಿಳಿದುದೇ-ಅವನ ಆಳುಗಳು ಸುತ್ತಲೂ ಅಗಳು, ಬೇಲಿ ಹಾಕಿಸಲು ತೊಡಗಿದ ಮೇಲೆ. ಕೂಜಪ್ಪನ ಎದೆ ಧಸಲ್ಲೆಂದಿತು. ಹೊಸ ಅಗಳಿನ ಕಂದಕ ಕೂಜಪ್ಪನ ಜಾಗದಿಂದ ಹೋಯಿತು. ಒಂದು ಮಗ್ಗುಲಲ್ಲಿ ಬಾಂದುಕಲ್ಲನ್ನು ಮೀರಿ ಆಪಾರ ಎದ್ದಿತು. ಅಷ್ಟಕ್ಕೂ ಅವನು ಸುಮ್ಮನಿದ್ದ. ಆದರೆ ರಾಮಣ್ಣನ ತಂತ್ರ ಸ್ಪಷ್ಟವಾಗಿ ಬಯಲಾದುದು-ಮಳೆಗಾಲ ತೊಡಗಿದ ಮೇಲೆ. ಮೇಲಣ ಜಾಗದ ನೀರು ಬೇರೆಯೇ ಒಂದು ತೋಡಿನ ಮೂಲಕ ಹರಿಯುತ್ತಿತ್ತು ಈ ತನಕ. ಈ ವರ್ಷ ನಡೆದ ಹೊಸ ಏರ್ಪಾಟಿನಿಂದ—ಅದೆಲ್ಲ ಕೂಜಪ್ಪನ ಹೊಲಗದ್ದೆಗಳ ಮೇಲೆ ಕೊಚ್ಚಿ ಹರಿದು, ಆ ವರ್ಷ ಬಿತ್ತದಂತೆ, ನಡದಂತೆ ಮರಳಿನಿಂದ ತುಂಬಿಸಿಬಿಟ್ಟಿತು. ಕೂಜಪ್ಪ ರಾಮಣ್ಣನನ್ನು ಕಂಡು ಹೇಳಿದ; ಬಲ್ಲವರಿಂದ ತಿಳಿಸಿ ಹೇಳಿಸಿದ. ಅದಕ್ಕೆ "ಅಂಥಾದಿದ್ದರೆ ಕೋರ್ಟಿಗೆ ಹೋಗಲಿ" ಎಂದು ಜಬರಿಸಿದ ರಾಮಣ್ಣ.

ಬೆಳೆಯೆಲ್ಲವೂ ಮಣ್ಣುಪಾಲಾದ ಮೇಲೆ ಕೂಜಪ್ಪ ಸುಮ್ಮನಾದಾನೆಯೇ? ಕೋರ್ಟಿಗೆ ಹೋದ. ಎರಡು ವರ್ಷಗಳಕಾಲ ಕೋರ್ಟುಮನೆಗಳ ಜಾತ್ರೆಯು ಸತತವಾಗಿ ನಡೆಯಿತು. ಸುಳ್ಳು ಸಾಕ್ಷಿಗಳ ಬಲದಿಂದ ಮೊದಲನೆಯ ಬಾರಿ ಆತನೇ ಸೋತು, ಮಂಗಳೂರಿನಲ್ಲಿ ಅಪೀಲು ಮಾಡುವಂತಾಯಿತು. ಇಷ್ಟಕ್ಕೆ ಮೂರು ವರ್ಷಕಾಲ ಹಿಡಿಯಿತು. ಕೂಜಪ್ಪ ಅನ್ನಕ್ಕೆ ಸಾಲಮಾಡುವಂತಾಯಿತು. ಈ ನಡುವೆ ರಾಜಿಮಾ

ಡುವ ಮುಖಂಡರೂ ಮುಂದೆ ಬಂದರು. ಆದರೆ ನೋವಿನಿಂದ ಕೂಜಪ್ಪನ ಕೋಪ ಶಾಂತವಾಗುವಂತಿರಲಿಲ್ಲ. "ಒಂದೂ ನಾನು ಮುಳುಗುತ್ತೇನೆ, ಇಲ್ಲವಾದರೆ ಅವನು ಹಾಳಾಗಿ ಹೋಗಬೇಕು" ಎಂಬುದೇ ಅವನ ಖಂಡು ತುಂಡು ನಿರ್ಣಯವಾಗಿತ್ತು. ಕೂಜಪ್ಪನ ರಥಕ್ಕೆ ಈ ಕೋರ್ಟಿನ ಬಿರಿಯನ್ನೇ ಹಾಕಿ,ತರುಬಿ,ತನ್ನ ದಾರಿಗೆ ತಿರುಗಿಸಿಕೊಳ್ಳುವೆ ಎಂದು ಯೋಚಿಸಿದ್ದ ಯೋಚನೆಗಳು ಮಾತ್ರ ಸಫಲವಾಗಲಿಲ್ಲ. ಮಗಳನ್ನು ಲಗ್ನಮಾಡಿಕೊಡುವುದಾದರೆ—ಎಲ್ಲ ನಷ್ಟ ತುಂಬಿಸಿಕೊಡುತ್ತೇನೆಂದು ಹೇಳಿಯೂ ಕಳುಹಿಸಿದ. "ನಮ್ಮ ಜಾತಿ ಹುಡುಗರು ಸಿಗದೆ ಹೋದರೆ ಬೇರೆ ಜಾತಿ ನಾಯಿಗೆ ಮಗಳನ್ನು ಕೊಡುವುದಲ್ಲವೇ" ಎಂದು ಅಭಿಮಾನದಿಂದ ಕೂಜಪ್ಪ ನುಡಿದ.

ಅಭಿಮಾನವೆಲ್ಲವೂ ಸರಿಯೆ;ಆದರೆ ಅಳಿಯನ ಬೇಟೆ ಈ ಮೂರು ವರ್ಷಗಳ ಕಾಲದಲ್ಲಿಯೂ ಸಫಲವಾಗಲೇ ಇಲ್ಲ.ನಾಗಕ್ಕ ಅದರ ಹೊರೆಯನ್ನು ಸುಬ್ರಮಣ್ಯ ದೇವರಿಗೇನೆ ವಹಿಸಿದಳು. ಅವಳ ಮನಸ್ಸಿನಲ್ಲಿ ಸುಬ್ಬಪ್ಪ ನಡೆಯಿಸಿ ಕೊಡುತ್ತಾನೆಂದು ಖಂಡಿತ ಹೇಳುತ್ತಿದ್ದರೂ ಆಗಳಿಗೆ ತನಕ ಬದುಕುವುದು ಹೇಗಪ್ಪ-ಎಂದೂ ತೋರುತ್ತಿತ್ತು. ಮೂರಕ್ಕೆ ಮುಕ್ತಾಯ--ಎಂಬಂತೆ ಆ ವರ್ಷವೇ ಅವನ ಸಂಶಯಗ್ರಸ್ತ ಮನಕ್ಕೆ ಶಾಂತಿ ದೊರೆಯುವಂತಾಯಿತು.

ಅಪೀಲಿನಲ್ಲಿ ಅವನ ಜಾಗ ಸಂದರ್ಶಣೆ ಮಾಡಿ ತಿರುಗೊಮ್ಮೆ ಸ್ಥಳ ತನಖಿ ನಡೆಯಿಸುವರೆ, ಕಮಿಶನ್ ನೇಮಕವಾಗಿತ್ತು. ಒಂದು ದಿವಸ ಉಭಯಪಕ್ಷದ ವಕೀಲರುಗಳು,ಕಮಿಶನರನ್ನು ಕೂಡಿಕೊಂಡು ಅವರ ಗ್ರಾಮಕ್ಕೆ ಆಗಮಿಸಿದರು. ಮೊದಲೇ ತಿಳಿಸಿದ್ದರಾದುದರಿಂದ -- ಎಳೆನೀರು, ಬಾಳೆಹಣ್ಣುಗಳು ಸಿದ್ಧವಾದುವು. ಕೂಜಪ್ಪ — ವಕೀಲರುಗಳ ಮುಂದೆ ಬೆನ್ನು ಮುರಿಯುವಷ್ಟು ಬಾಗಿ, ಅವರ ಮನ ಒಲಿಸಲೆತ್ನಿಸಿದ. ರಾಮಣ್ಣ ಬಿಟ್ಟಾನೆಯೇ? ಅಂಕದ ಕೋಳಿಯಂತೆ ತಲೆಗೊಂದು ಎಲೆ ವಸ್ತ್ರ ಸುತ್ತಿಕೊಂಡು ಮೆರೆದಾಡಿದ. ಕೂಜಪ್ಪನದು ಬರಿಯ ಎಳೆನೀರು ಬಾಳೆಹಣ್ಣುಗಳ ಎದುರು, ಕಾಫಿ-ಶೀರಾ ಸಂಧಾನ ನಡೆಯಿಸಿದ. ಬಿಸಿಲಿನಲ್ಲಿ—ಕಮಿಷನ್ ವಕೀಲರು ಗುಡ್ಡ ಹತ್ತಿ ಇಳಿದರು, ಬೆವರು ಸುರಿಸಿ ದಣಿದರು. ಜಾಗ ಅಳೆದು ನೋಡಿದರು. ಇಕ್ಕಡೆಯವರೂ ಒದಗಿಸಿದ

ಫಲಾಹಾರ ಉಪಾಹಾರಗಳನ್ನು ಪರಿಗ್ರಹಿಸಿ ಪುನೀತವನ್ನಾಗಿ ಮಾಡಿದರು. ಕಮಿಷನರು ಸ್ವತಃ "ಯಾಕೆ ಇಷ್ಟು ಚಿಲ್ಲರೆ ವಿಷಯದಲ್ಲಿ ನೀವು ರಾಜಿಯಾಗದೆ ಹೀಗೆಲ್ಲಾ ಸಾಧನೆ ಮಾಡಿದರೆ ಗತಿ! ನಮಗೆ ಲಾಭ ಇದೆ ನಿಜವಾದರೂ........" ಎಂದದ್ದನ್ನು ಕೇಳಿ ಕೂಜಪ್ಪ ತಣ್ಣಗಾದ. ಗ್ರಹಗಳೆಲ್ಲಾ ತನ್ನೊಬ್ಬನ ಮೇಲೆ ವಕ್ರಿಸಿವೆಯೆಂದು ತಿಳಿದುಕೊಂಡ. ಆದರೂ ಕಣ್ಣೀರನ್ನೇ ಆಯುಧವಾಗಿ ಮಾಡಿಕೊಂಡು "ಸ್ವಾಮಿ ತಾವು ನೋಡಿದ್ದೀರಿ. ನನ್ನ ಮೇಲೆ ಜಗಳವನ್ನು ಕಾರಲಿಕ್ಕೆ ಆತ ಜಾಗ ಕೊಂಡು ಇಷ್ಟೆಲ್ಲ ಮಾಡಿರುವಾಗ-ಏನು ರಾಜಿ? ದೈವೇಚ್ಛೆ ಇದ್ದಹಾಗೆ ಆಗುತ್ತದೆ" ಎಂದ.

ರಾಮಣ್ಣನು ತಮ್ಮ ಕಡೆಗೆ ವಕೀಲರನ್ನು ಊಟಕ್ಕೆ ಆಮಂತ್ರಿಸಿದ. ಅವರು ಬ್ರಾಹ್ಮಣರಾಗಿದ್ದುದರಿಂದ ಊರಿನ ಬ್ರಾಹ್ಮಣರ ಮನೆಯಲ್ಲಿ ಮೂವರಿಗೂ ಯೋಗ್ಯ ವ್ಯವಸ್ಥೆ ಮಾಡಿದ್ದ. ಆದರೆ ಕೂಜಪ್ಪನ ವಕೀಲರು ಅವನ ಜಾತಿಯವರು. ಅದರಿಂದ ಮನೆಯಲ್ಲೇ ಆತ 'ಕುಕ್ಕುಟ ಸಂಹಾರ' ವೆಸಗಿದ್ದ. ಕಮಿಷನರ್ ವೆಂಕಪ್ಪನವರೂ, ಕೂಜಪ್ಪನ ವಕೀಲ ಸುಬ್ಬಯ್ಯನವರೂ ಸ್ವಜಾತಿಯ ಗೃಹಸ್ಥರು. ಹೀಗಾದುದರಿಂದ ಅವರ ಪಂಗಡ ಒಡೆಯಿತು. ಮೊದಲು ಅವರು ಕೂಜಪ್ಪನಲ್ಲಿ ಊಟ ಸ್ವೀಕರಿಸಿ, ಮುಂದೆ ರಾಮಣ್ಣನ ಕಾಫಿ ಆತಿಥ್ಯ ಮುಗಿಸಿ, ಮಂಗಳೂರಿಗೆ ಮರಳುವುದು ಎಂದು ತೀರ್ಮಾನವಾಯಿತು. 'ರಾಮಣ್ಣನ ಕಾಫಿಗೆ ವಕೀಲರು ಬಲಿಯಾದರೆ' ಎಂದು ಕೂಜಪ್ಪಗೆ ಒಳಗಿಂದೊಳಗೇನೆ ಅನುಮಾನ. 'ಈಶನ ಕೂಳಿಗೆ ಕಮಿಷನರು ವಶವರ್ತಿಯಾದರೇ'—ಎಂದು ರಾಮಣ್ಣಗೆ ಅಪನಂಬುಗೆ.

ಕೂಜಪ್ಪನ ಮನೆಯ ಊಟ ಬಿದ್ದಿನವರ ಸಮ್ಮಾನಕ್ಕಿಂತಲೂ ಮೇಲೆನಿಸಿತು. ಕೂಜಪ್ಪನು ಬಾಯಿ ಉಪಚಾರಕ್ಕೆ ಕಡಮೆ ಮಾಡಲಿಲ್ಲ. ಮೇಲಿಂದ ಮೇಲೆ 'ಏನೋ ಸ್ವಾಮಿ ದೇವರು ನಡೆಯಿಸಬೇಕು' ಎಂದು ಒಗ್ಗರಿಸಿದ. ಸುಬ್ಬಯ್ಯ ವಕೀಲರು ಹೊರಟುಹೋಗುವಾಗ, 'ಹೆದರಬೇಕಾಗಿಲ್ಲ ನೀವು--ಸತ್ಯವಿದ್ದ ಹಾಗೆ ಆಗುತ್ತದೆ' ಎಂದು ಅಭಯವಿತ್ತು ಹೋದರು.

ಮುಂದಿನ ತಿಂಗಳಲ್ಲೇ ಕೂಜಪ್ಪನಿಗೆ ದಾವೆ ಗುಣವಾದ ವಾರ್ತೆ

ಬಂದಿತು. ಖರ್ಚು ಸಹಿತ ಅವನಿಗಾದ ನಷ್ಟವನ್ನು ರಾಮಣ್ಣ ತುಂಬಿಸಿ ಕೊಡುವಂತಾಯಿತು. ರಾಮಣ್ಣನು 'ಹೈಕೋರ್ಟಿಲ್ಲವೆ. ಕಮಿಷನರಿಗೆ ಕೋಳಿ ಕೊಟ್ಟು ಗೆದ್ದ ನಂಬ್ರ ಮುರಿಯಲಿಕ್ಕೆ!' ಎಂದು ಬಡಾಯಿ ಕೊಚ್ಚಿದರೂ, ಕೊನೆಗೆ ಕೂಜಪ್ಪನಿಗೆ ಮೂರು ವರ್ಷಗಳಲ್ಲಿ ನಷ್ಟವಾದ ಫಸಲಿನ ಜತೆಗೆ ಉಳಿದೆಲ್ಲಾ ದಂಡಗಳನ್ನು ತೆತ್ತು ಸುಮ್ಮನಿರುವಂತಾಯಿತು. ಅಂತು 'ಶ್ರೀ ಸುಬ್ರಮಣ್ಯನೇ ತನ್ನನ್ನು ಪಾರುಮಾಡಿದ'ನೆಂದು ಕೂಜಪ್ಪ ತಿಳಿದ. ಮುಂದಾದರೊ ಅವನಿಗೆ ಯೋಗ್ಯ ಅಳಿಯನನ್ನು ದೊರಕಿಸುವ ಭಾರ ಸದರಿ ಘಾಟಿ ಸುಬ್ರಮಣ್ಯನಿಗೇನೆ ಸಂದ ಕೆಲಸವಾಯಿತು.

ಆ ವರ್ಷ ಬೇಸಗೆ ಕಾಲಿರಿಸುವುದರೊಳಗಾಗಿ ಕೂಜಪ್ಪ, ಆಳುಗಳನ್ನು ಜಮಾಯಿಸಿ ಮೂರು ವರ್ಷದಿಂದ ಹೊಲಗಳಲ್ಲಿ ಜಮೆಯಾದ ಮರಳನ್ನು ಹೊತ್ತು ಸಾಗಿಸುವ, ನೀರಿನ ಕಣಿಗಳನ್ನು ತಿರುಗಿಸುವ ಕೆಲಸದಲ್ಲಿ ಉದ್ಯುಕ್ತನಾದ. ಅದನ್ನು ಮುಗಿಸಿಕೊಂಡು, ತನ್ನನ್ನು ಪಾರುಮಾಡಿದ ಸುಬ್ಬಯ್ಯ ವಕೀಲರ ಸಂದರ್ಶನೆ ಮಾಡಿ ಬರಬೇಕೆಂದು ಅವನ ಎಣಿಕೆಯಾಗಿತ್ತು. ಆದರೆ ಅವನೆಂಬಂತೆ ಅವನಂತಹ ಬಡವನ ಮನೆಗೇನೆ ಭಾಗೀರಥಿಯ ಆಗಮನವಾಯಿತು. ಒಂದು ದಿನ ಹೊತ್ತು ತಿರುಗುವ ವೇಳೆಗೆ, ಗಲ್ಲಕ್ಕೆ ಕೈಕೊಟ್ಟು ಗದ್ದೆ ಅಂಚಿನಲ್ಲಿ ಕುಳಿತು ನೋಡುತ್ತಿದ್ದಂತೆಯೇ—ಅವನ ಮುಂದುಗಡೆ ವಕೀಲರು ಉದಯಿಸಿದ್ದು ಕಾಣಿಸಿತು. ಜತೆಗೆ ಆ ದಿನ ಕಮಿಷನರ್ ಪ್ರಭೃತಿಗಳಾಗಿ ಬಂದಿದ್ದ ವೆಂಕಪ್ಪನವರೂ ಇದ್ದರು. ಇದು ಕನಸೋ ನೆನಸೋ ಎಂಬಷ್ಟು ವಿಸ್ಮಯವಾಯಿತು ಅವನಿಗೆ. 'ಅಯ್ಯೋ ನಾನೇ ತಮ್ಮ ಬಾಗಿಲಿಗೆ ಬರುವವನಿದ್ದೆ, ತಾವು ನನ್ನ ಮನೆಯ ಬಾಗಿಲಿಗೆ ಬರುವಂತಾಯಿತೇ'ಎಂದು ಕುಗ್ಗಿ ನುಡಿದ. ಅವರಾದರೂ ಅಷ್ಟೇ ಬಣ್ಣದ ಮಾತಿನಿಂದ 'ಇಲ್ಲ, ಇಲ್ಲೆಲ್ಲೋ ಸವಣೂರಿನಲ್ಲಿ-ಒಂದು ಕಮಿಷನ್ ಇತ್ತು—ಬಂದಿದ್ದೆವು. ಹಾಗೆ ನಿನ್ನನ್ನು ನೋಡಿ ಹೋಗುವ. ರಾತ್ರಿಯೊಂದು ಕಡೆ ಬಿಡಾರವಾಗಬೇಕಲ್ಲ'ಎಂದು ಹೇಳಿ ಉಪಚರಿಸಿದರು. ಕೂಜಪ್ಪ ಅವರನ್ನು ಕರೆದುಕೊಂಡು, ನಿಡುಗಾಲು ಹಾಕಿ ಮನೆಯನ್ನು ಸೇರಿದ. ಆಚೀಚೆ ಮನೆಗಳಿಗೆ ಸರಬರಾಯಕ್ಕೆ ಜನ ಅಟ್ಟಿದ. ಮರಗಳಿಂದ ಎಳನೀರುಗಳನ್ನು

ಇಳಿಸಿದ. ಮನೆಯವರು ಬಹು ಉತ್ಸುಕತೆಯಿಂದ ಅವರ ಉಪಚಾರಕ್ಕೆ ನಿಂತರು. ರಾತ್ರಿ ಊಟ ಮುಗಿಯುತ್ತಲೇ ಊರೂರು ಪಂಚಾಯತಿ ಯಿಂದ,ಗಿರಿಜೆಯ ಲಗ್ನದ ವಿಷಯ ಬಂದಿತು. 'ಏನೋ ಅಪ್ಪ-ದೇವರು ಇದೊಂದು ಅಭೀಷ್ಟ ನೆರವೇರಿಸಿದನೆಂದರೆ, ಸುಖವಾಗಿ ಶಿವಾಶಿವಾ ಎಂದು ಪ್ರಾಣಬಿಡುತ್ತೇನೆ' ಎಂದ. ಆ ರಾತ್ರಿ ಕಳೆದು ವಕೀಲರುಗಳು ಬೆಳಗ್ಗೆ ಹೊರಡುತ್ತೇವೆಂದರು. 'ಅಯ್ಯೋ, ಬೇಸಗೆ ರಜೆ ಅನ್ನುತ್ತೀರಿ. ನಾಲ್ಕು ದಿವಸ ಇದ್ದು ಹೋಗಬೇಕು. ನೀವೇನು ಆಗಾಗ ಬಂದು ಹೋಗುವವರೇ!' ಎಂದು ಬಲವಂತ ಮಾಡಿದನು. ಅಂತು ನಾಲ್ಕು ದಿವಸವಲ್ಲದೆ ಹೋದರೂ ಎರಡು ದಿನ ಅವರು ನಿಂತುದು ನಿಜ. ಎರಡನೆಯ ದಿವಸ ವಕೀಲ ವೆಂಕಪ್ಪನವರು "ಕೂಜಪ್ಪಣ್ಣ ನೋಡಿ-ನೀವೂ ನಾವೂ ಒಂದೇ ಜನ. ಊರೇನೋ ದೂರ. ನೀವೂ ನಿಮ್ಮ ಮಗಳಿಗೆ ಲಗ್ನವಾಗಿಲ್ಲ ಅನ್ನುತ್ತೀರಿ. ನಮ್ಮ ತರಪಿನಲ್ಲಿ ಒಂದು ಗಂಡು ಇದೆ. ನೀವೆನ್ನುವಂತೆ ಮನೆಯ ಅಳಿಯನಾಗುವ ಬಾಬಲ್ಲ. ಮಗಳನ್ನೇ ನೀವು ಬಿಟ್ಟು ಇರುವ ತರಹ. ಆದರೆ— ಒಳ್ಳೆಯ ಸಂಬಂಧ" ಎಂದು ತನ್ನೊಬ್ಬ ವಕೀಲ ಮಿತ್ರನ ಪರವಾಗಿ ತುಂಬ ಹೇರಿಂಗು ಮಾಡಿದರು. ಕೂಜಪ್ಪನ ಬಾಯಲ್ಲಿ ನೀರುಸುರಿತು. ಕೊನೆಗೆ, ಸುಬ್ಬಯ್ಯ ವಕೀಲರೇ ಆ ಕನ್ಯಾರ್ಥಿ ಎಂದು ಕೇಳಿ "ಥೂತ್—ನಿಮ್ಮ ಚೇಷ್ಟೆಯೇ! ನಾನು ನಿಜ ವೆಂದೇ ತಿಳಿದಿದ್ದೆನಲ್ಲ" ಎಂದನು ಆತ.

"ಚೇಷ್ಟೆಯೇನು! ಸುಬ್ಬಯ್ಯನಿಗೆ ಲಗ್ನವಾಗಿಲ್ಲ ಇನ್ನೂ"

"ಅದು ಇರಬಹುದು. ಆದರೆ ಅವರ ಮನೆಯ ಹೊಸ್ತಿಲು ದಾಟುವ ಯೋಗ್ಯತೆ ನಮಗೆಲ್ಲಿಂದ ಬರಬೇಕು. ಅವರೇನು — ಅವರ ಯೋಗ್ಯತೆಯೇನು! "ಎಂದ.

"ಈಗ ನಿಮಗೆ ಸಂಬಂಧ ಆಗಬಾರದೆಂದಿದೆಯೆ?ಮೊದಲು ನಿಮ್ಮ ಮಗಳ ಒಪ್ಪಿಗೆಯೇ; ಎಂದು ಕೇಳಿ" ಎಂದರು.

ಅಂತು ಪರಿಹಾಸ್ಯವಾಗದೆ ಅದು ನಿಜವಾದ ಸಂಧಾನವಾಯಿತು. ಕೂಜಪ್ಪನ ಯೋಗ್ಯತೆಗೆ ಮೀರಿದ ಅಳಿಯನು ದೊರೆವಂತಾಯಿತು. ಗಿರಿಜೆ— ಒಡಂಬಡಲಾರದ ವಿಷಯುವೇ ಅಲ್ಲಿರಲಿಲ್ಲ! ಹಳ್ಳಿಯ ಹುಡುಗಿಯಾದ ತನಗೆ ಪೇಟೆಯ ವಕೀಲರು ಮೆಚ್ಚಲು ಬಂದರೆಂದರೆ ಅವಳ

ಗೆಷ್ಟು ತಲೆತಿರುಗಬೇಕಿಲ್ಲ.

* * * * * * *

ಅಂದಿನ ಬೇಸಗೆಯಲ್ಲೇ ಲಗ್ನ ನೆರವೇರಿತು-ಗಿರಿಜೆ, ಸುಬ್ಬಯ್ಯನ ಮನೆಯನ್ನು ಸೇರಿದಳು. ಗಂಡನ ಮನೆಯಲ್ಲಿ ಕುಸುಮೆ ಎಂಬ ಹೊಸ ಹೆಸರನ್ನು ಪಡೆದು ಮೆರೆದಳು.

೨ನೆಯ ಅಧ್ಯಾಯ

ಗಿರಿಜೆ ಲಗ್ನವಾಗಿ ಬಂದುದು ವೆಂಕಪ್ಪಣ್ಣನ ಮನೆಗೆ. ಸುಬ್ಬಯ್ಯ ಸ್ವತಃ ಬೇರೆಯೇ ಬಿಡಾರವನ್ನು ಹೂಡಲು ತುಸು ನಿಧಾನವಾಯಿತು. ಅವರಿವರೊಳಗಣ ಆಪ್ತತ್ವವು ತುಂಬ ಇದ್ದುದರಿಂದಲೂ, ಗಂಡನಂತೆ ವೆಂಕಪ್ಪನ ಹೆಂಡತಿ ಶೀಲಕ್ಕನಿಗಾದರೂ ಸುಬ್ಬಯ್ಯನ ಮೇಲೆ ಅತಿಶಯ ಮಮತೆಯಿದ್ದುದರಿಂದಲೂ, ಅವಳಿಗೂ ಅದು ಇಷ್ಟವೇ ಆಗಿತ್ತು. ಮೇಲೆ ಶೀಲಕ್ಕನಿಗೆ, ತಾನು ಹೊಸತಾಗಿ ಹಳ್ಳಿಯಿಂದ ಬಂದ ಗಿರಿಜೆಯನ್ನು ಸುಧಾರಿಸಿ, ಗೃಹಕೃತ್ಯಕ್ಕೆ ತಿದ್ದುತ್ತಿದ್ದೇನಲ್ಲ ಎಂಬ ಉಕ್ಕು ಬೇರೆ. ಬಂದ ಹೊಸತರಲ್ಲಿ ಶೀಲಕ್ಕನಿಗೂ ಗಿರಿಜೆಗೂ ತುಂಬ ಮೇಳವಾಗಿತ್ತು. ಒಬ್ಬರನ್ನು ಬಿಟ್ಟು ಒಬ್ಬರು ಕದಲರು; ಒಬ್ಬರನ್ನು ಬಿಟ್ಟು ಇನ್ನೊಬ್ಬರು ಮಾತನಾಡರು. ಕಂಡವರು 'ಅಕ್ಕತಂಗಿಯರೇ ಇವರು'ಎಂದು ವಿಸ್ಮಯಪಡಬೇಕಿತ್ತು. ಹೊಸತನದಲ್ಲಿ ಸ್ನೇಹ, ಪ್ರೇಮಗಳ ಕಾವೇ ಅಂಥದು. ಬಿಸಿಯಲ್ಲಿ ಎಂಥ ಲೋಹಗಳನ್ನೂ ಅದು ಬೆಸೆಯುತ್ತದೆ. ಮೊದಲ ಕಾವು ತಣಿದ ಮೇಲೆ ಮಾತ್ರ-ಅದು ತೋರಿಕೆಯ ಬೆರಕೆಯೋ, ಒಕ್ಕೂಟವಾದ ಸ್ನೇಹವೇ ಎಂದು ತಿಳಿಯಬೇಕಷ್ಟೆ.

ವೆಂಕಪ್ಪ, ಸುಬ್ಬಯ್ಯರೊಳಗಣ ಸ್ನೇಹವು ಬಹುಕಾಲದ್ದು. ಕಲಿಯುವಾಗ ಒಂದೇ ವರ್ಗದಲ್ಲಿ ಅಲ್ಲದೆ ಹೋದರೂ ಒಂದೇ ಕಾಲೇಜನ್ನೇ ತುಳಿದವರು. ಇಬ್ಬರಲ್ಲಿ ವೆಂಕಪ್ಪನೇ ಹಿರಿಯ. ಸುಮಾರು ಮೂವತ್ತೆರಡು ವಯಸ್ಸು; ಅಷ್ಟೊಂದು ತೆಳ್ಳಗೂ ಅಲ್ಲ, ಕುಳ್ಳಗೂ ಅಲ್ಲ, ಬೆಳ್ಳಗೂ

ಅಲ್ಲ, ಕರ್ರಗೂ ಅಲ್ಲ ಬಣ್ಣ. ಮುಖ ಮೊಟ್ಟೆಯಾಕಾರವಾಗಿದ್ದು, ದಪ್ಪನಾಗಿ ಬೆಳೆದು ಒಂದಾದ ಹುಬ್ಬನ್ನು ಬಿಲ್ಲಿಂತೆಯೇ ಎತ್ತಿ ತೋರಿಸುತ್ತಿತ್ತು. ಕಿಡುಗೆ ಲೋಹ ತುಂಬಿಸಿಕೊಂಡ ಒಂದೆರಡು ಹಲ್ಲುಗಳಲ್ಲವಾದರೆ—ಅವನ ನಗುವು ತುಂಬ ಮೋಹಕವಾಗಿತ್ತು. ಅವನ ವಯಸ್ಸು ಮುಖದ ವರ್ಚಸ್ಸಿನಲ್ಲಿ ಕಾಣುತ್ತಿರಲಿಲ್ಲ. 'ಏನು ಇಪ್ಪತ್ತೈದೋ—ಇಪ್ಪತ್ತೆಂಟೋ ಅನ್ನಬೇಕು'ಕಂಡವರು. ಹಾಗೆ ನೋಡಹೋದರೆ ಅವನ ಮಡದಿ—ಸುಶೀಲ, ರೂಢಿಯ ಶೀಲಕ್ಕ—ಅವಳೇ ಗಂಡನಿಗಿಂತ ಹಿರಿಯಳಾಗಿ ಕಾಣಿಸುತ್ತಾಳೆ. ಅದು ತೋರಿಕೆಗೆ. ನಿಜಕ್ಕೂ ಅವಳು ಅವನಿಗಿಂತ ನಾಲ್ಕು ವರ್ಷಕ್ಕೆ ಕಿರಿಯಳು. ಕುಸುಮೆಗೆ ಲಗ್ನವಾದ ವರ್ಷ ಅವನಿಗೆ ಮೂವತ್ತೆರಡು, ಅವಳಿಗೆ ಇಪ್ಪತ್ತೆಂಟು.

ಶೀಲುವಿನ ತಾಯಿಮನೆಯ ಹೆಸರು ಸುಶೀಲ ಎಂದು. ಅವರ ಊರು ಕಾರ್ಕಳದ ಒಳನಾಡಿನ ಒಂದು ಹಳ್ಳಿ. ಹಳ್ಳಿಯ ಹುಡುಗಿಗೆ ಪೇಟೆಯ ಗಂಡನು ಇರಿಸಿದ ಸುಧಾರಣೆಯ ಹೆಸರೇ ಶೀಲ. ವೆಂಕಪ್ಪ ಕರೆಯುವಾಗಲೆಲ್ಲ 'ಶೀಲಾ ಶೀಲಾ' ಎಂದು ಬಾಯಿತುಂಬ ಕರೆಯುವ ವಾಡಿಕೆ. ಅದನ್ನೇ ಅನುಕರಿಸಿ ಅವಳ ಮಕ್ಕಳಿಗೂ, 'ಶೀಲಾ ಶೀಲಾ' ಎಂದು ಹೆಸರೆತ್ತಿಯೇ ತಾಯನ್ನು ಕರೆಯುತ್ತಾರೆ. ಶೀಲ ಗಂಡನಿಗಿಂತ ಕುಳ್ಳಜಾತಿ. ಬಣ್ಣ ಬೆಳ್ಳಗೆ, ದುಂಡು ಮುಖ; ತುಂಬಿದ ಶರೀರ. ಆದರೆ ಈಗಲೇ ಕೂದಲು ನರೆಯತೊಡಗಿದೆ. ಅಂದರೆ, ಆಕೆಯ ತಾಯ್ತನದ ಹೊರೆಯೆಲ್ಲ ನರೆಯ ರೂಪತಾಳಿದೆ. ಅದರಿಂದಲೇ ಅವಳ ವಯಸ್ಸು ನಿಜಕ್ಕೂ ಮೀರಿದಂತೆ ಕಾಣಿಸುವುದು. ಕೂದಲು ನರೆತರೂ ಆಕೆಯ ಸೊಬಗಿಗೊಂದು ಕಡಿಮೆಯಿಲ್ಲ. ಅದನ್ನು ಚೆಲುವು ಎಂದು ಕರೆಯುವ ಬದಲು 'ಲಕ್ಷಣ' ಎಂದು ಕರೆಯುವುದು ಮೇಲು. ಅವಳ ಕಣ್ಣುಗಳಲ್ಲೇ ಒಂದು ರೀತಿಯ ಲಾವಣ್ಯ ಮಿನುಗುತ್ತದೆ.

ಶೀಲೆಯ ತಾಯ್ತನದ ಸರದಿ ಸಮನಾದ ಕಂತುಗಳಲ್ಲಿದೆ. ಎರಡೆರಡು ವರ್ಷಗಳಿಗೊಂದರಂತೆ ಹಡೆಯುತ್ತಿರುವುದೇ ಅವಳ ಭಾಗ್ಯ. ಮದುವೆಯಾಗುವಾಗ ಅವಳಿಗೆ ಹದಿನೆಂಟು ವಯಸ್ಸಿತ್ತು. ಅದರಿಂದ ಈಗಷ್ಟೇ ಅವಳು ಐದನೆಯ ಮಗುವಿನ ತಾಯಿಯಾಗಿದ್ದಾಳೆ-ಎಂದು ಬರಿಯ ಲೆಕ್ಕದಿಂದಲೇ ಹೇಳಬಹುದು. ಹಿರಿಯದು ಗಂಡು, ಎರಡನೆ

ಯದು ಹೆಣ್ಣು, ತಿರುಗಿ ಮೂರು ಗಂಡು ಹುಡುಗರು. ಮಕ್ಕಳೆಲ್ಲ ಸುಂದರಕಾಯರು. ಎಂಥ ತಾಯಿತಂದೆಯರೂ ನೋಡಿ ಹಿಗ್ಗಬಹುದಾದ ಬದುಕುಗಳು. ಹಿರಿಯವ ನಿರಂಜನ, ಎರಡನೆಯವಳು ಜಮುನಾ, ಅನಂತರ ಮೋಹನ, ಮದನ, ರಂಜನರು. ಶೀಲ ತನಗೇನೆ ಚಂದವಾದ ಹೆಸರನ್ನು ಒಲ್ಲೆನೆಂದಿದ್ದರೂ ಮಕ್ಕಳಿಗೆ ಹಳ್ಳಿಯ ಹಳೆಯವೊಂಡ ಹೆಸರುಗಳು ಕೂಡದೇ ಕೂಡದು. 'ಮುಂದೆ ಏನು ಇಲ್ಲದೆ ಹೋದರೂ, ತಾಯಿ ತಂದೆಯರಿಗೆ ಮಕ್ಕಳಿಗೆ ಮತ್ತೇನು ಕೊಡಲು ಬರದೆಹೋದರೂ—ಹೆಸರಾದರೂ ಒಂದು ಚಂದವಾಗಿರಲಿ. ಬಾಯ್ತುಂಬ ಕರೆಯುವಷ್ಟು ಚೆನ್ನಾಗಿರಲಿ' ಎಂಬುದು ಅವಳ ತತ್ವ. ಮುಂದೆ ನ--ಕಾರಾಂತ ಹೆಸರುಗಳ ಅನ್ವೇಷಣೆಯಲ್ಲಿ ಅವಳು ಲೀನವಾಗಿದ್ದಳು.

ಇತ್ತ ವೆಂಕಪ್ಪನ ಪರಿಚಿತ ಮಿತ್ರನಾದ ಸುಬ್ಬಯ್ಯಗೆ ಬರಿಯ ಇಪ್ಪತ್ತೆಂಟು ವರ್ಷ ನಡೆಯುತ್ತಿರುವುದು. ಅವನ ಬಿ. ಎಲ್. ಆಗಿ ನಾಲ್ಕು ವರ್ಷದ ಬಳಿಕ ಈತ ಅದನ್ನು ಮುಗಿಸಿ ಕೆಲಕಾಲ ಅವನ ಕಚೇರಿಯಲ್ಲಿಯೇ ಕೆಲಸ ಮಾಡುತ್ತಿದ್ದನು. ಇಬ್ಬರೂ ಬೇರೆಬೇರೆಯಾಗಿ ವಕಾಲತು ನಡೆಯಿಸಲು ಅವಕಾಶವಾಯಿತು. ಸುಬ್ಬಯ್ಯನಿಗೆ ಈಗ ಮದುವೆಯಾದ್ದಾಯಿತು. ಇನ್ನು ಬೇಗನೆ ಸ್ವಂತ ಬಿಡಾರ ಹೂಡಬೇಕು. ಜತೆಗೆ ತನ್ನದೇ ಆದ ವಕೀಲಿ ಕಚೇರಿ ತೆರೆದೂ ಆಗಿದೆ. ಅವನಿಗೆ ಅವಸರವೇನು? "ಇನ್ನೆರಡು ತಿಂಗಳು ಕಳೆಯಲಿ, ನಿನ್ನ ಹೆಂಡತಿಗೆ ಸರಿಯಾಗಿ ಒಂದಿಷ್ಟು ಕಾಫಿ ತಿಂಡಿ ಮಾಡಲು ಬರಲಿ" -- ಎಂದು ಶೀಲಕ್ಕ ಉಪದೇಶಿಸುತ್ತಿದ್ದಾಳೆ. ಸುಬ್ಬಯ್ಯ ಮಮತೆಗೆ ಕಟ್ಟುಬಿದ್ದು ಹೂಂ"— ಎಂದಿದ್ದಾನೆ.

ಆತನೂ ಅಷ್ಟೊಂದು ದೀರ್ಘಕಾಯನಲ್ಲ. ಐದೂವರೆ ಅಡಿಯಾದರೆ ತುಂಬ. ಶರೀರವೂ ತುಸು ತೆಳ್ಳನ ತರವೇ. ಕೋಲು ಮುಖ. ಮುಖಭಾವದಲ್ಲಿ ಒಂದು ಉಲ್ಲಾಸವೂ ಇಲ್ಲ, ವೈರಾಗ್ಯವೂ ಇಲ್ಲ. ವೆಂಕಪ್ಪನು ಮೀಸೆ ಬೋಳಿಸಿ ಇನ್ನಷ್ಟು ತರುಣನಾಗಲು ಪ್ರಯತ್ನಿಸುತ್ತಿದ್ದರೆ, ಈತ ಇಟ್ಟ ಮೀಸೆಗಳ ಬೆಳವಣಿಗೆಗಳಿಗೆ ತನ್ನದೊಂದು ಆತಂಕ ಒಡ್ಡಲಿಲ್ಲ. ಆದರೂ ಅವುಗಳು ಬೇಕೋ ಬೇಡವೋ ಎಂಬಷ್ಟು ಮಿತವಾಗಿಯೇ ಮುಖದಲ್ಲಿ ಮೂಡಿವೆ. ಗಿರಿಜೆಯನ್ನು ಲಗ್ನವಾಗುವುದರಲ್ಲಿ ವೆಂಕಪ್ಪನ ಪ್ರೋತ್ಸಾಹವೇ ಬಹಳ. ಇನ್ನು ಎಷ್ಟು ಕಾಲ ಒಂಟಿ ಜೀವನ

ನಡೆಸುತ್ತೀಯಾ—ಎಂದು ಅವನು ಗದರಿಸಿ, ಹೋದಲ್ಲೆಲ್ಲ ಹೆಣ್ಣು ಶೋಧಿಸಿ, ಕೊನೆಗೆ ಗಿರಿಜೆಯನ್ನು ಆರಿಸಿ ಬಂದಿದ್ದ. ಅವರ ಬಳಗದಲ್ಲಿ ಸ್ತ್ರೀವಿದ್ಯಾಭ್ಯಾಸ ಮುಂದುವರಿದಿಲ್ಲವಾದುದರಿಂದ ಆ ವಿಷಯವಾದ ಅತ್ಯಾಶೆಗಳಿಗೆ ಎಡೆಯೂ ಇರಲಿಲ್ಲ.

ಅಂತು ಗಿರಿಜೆಯು ಲಗ್ನವಾಗಿ ಗಂಡನ ಹಿಂದೆಯೇ ಬಂದಳು. ಬಂದ ನಾಲ್ಕು ದಿವಸ, ಸುಬ್ಬಯ್ಯನ ಹುಟ್ಟೂರಾದ ಬೆಳ್ತಂಗಡಿಯ ಬಳಿಯ ಒಂದು ಹಳ್ಳಿಯನ್ನು ಸಂದರ್ಶಿಸಿದಳು. ಅಲ್ಲಿಯೇ ಸುಬ್ಬಯ್ಯನ ಬಳಗದವರಿದ್ದರು. ಅವರು ಕುಟುಂಬಸ್ಥರೆಂಬ ಬಿರುದಿಗೆ ಪಾತ್ರರಷ್ಟೆ. ಆದುದರಿಂದ ಕಟ್ಟಲೆಯ ವಾಸ ಅಲ್ಲಿ ನಡೆದು, ಮಂಗಳೂರಿಗೆ ಬಂದುದಾಯಿತು. ಬಂದವರೇ ವೆಂಕಪ್ಪ, ಶೀಲಕ್ಕ ಇವರ ಆಗ್ರಹದ ಮೇರೆಗೆ ಅವರಲ್ಲಿಯೇ ತಳವೂರಿದರು. ಶೀಲಕ್ಕನ ಮಕ್ಕಳಿಗೆ ಗಿರಿಜೆ—'ಸಣ್ಣಮ್ಮ' ನೆನಿಸಿಕೊಂಡಳು. ಸುಬ್ಬಯ್ಯ ಎಲ್ಲರ ಬಾಯಲ್ಲೂ ಸುಬ್ಬಯ್ಯಣ್ಣನಾಗಿಯೇ ಇದ್ದನು. ಶೀಲುವಿನ ತಂಗಿಯೆನಿಸಿದಳು ಗಿರಿಜೆ. ಅವಳ ಗಿರಿಜೆಯೆಂಬ ಹೆಸರು ಮಾತ್ರ ಅಲ್ಪಾಯುಷಿಯಾಗಿತ್ತು. ಆಕೆಗೆ 'ಕುಸುಮಾ' ಎಂದು ನಾಮಕರಣಮಾಡಿದಳು ಶೀಲಕ್ಕನೇ. ಮಂಗಳೂರಿನ ತಾರೆ, ಲಲಿತ, ವನಮಾಲೆ, ಹೇಮಲತೆಯರ ಎಡೆಯಲ್ಲಿ ಹಳ್ಳಿಯ ಗಿರಿಜೆ ಸೇರಿದರೆ ಶೊಭೆಯಿಲ್ಲೆಂದು ಬೇರೆಯೇ ನಾಮಕರಣವನ್ನು ಎಲ್ಲರೂ ಒಪ್ಪಿದರು. ಗಿರಿಜೆಗಂತೂ ಹೊಸ ಹೆಸರಿನಲ್ಲಿ ತುಂಬಾ ಉತ್ಸಾಹವೇ! ನಗರದ ಬೆಡಗು ಅವಳ ಕಣ್ಣನ್ನು ಕುಕ್ಕಿತು. ಅಲ್ಲಿನ ರೀತಿ, ಹೆಸರು, ಮಾತುಗಳೆಲ್ಲ ತನ್ನ ಪೂರ್ವ ಜೀವನದ ಅನಾಗರಿಕತೆಯನ್ನು ನೆನಪಿಗೆ ತರುವಂತಿದ್ದುವು.

ಶೀಲಕ್ಕನ ಹಟ ಬರಿಯ ಹೆಸರಿನ ವಿಷಯದಲ್ಲಿ ಮಾತ್ರ ಇರಲಿಲ್ಲ. ನಿಮ್ಮ ಹೆಂಡತಿಯನ್ನು ನೀವು-ಶಾಲೆಗೆ ಕಳುಹಿಸಿದರೂ ಸರಿಯೆ, ಮನೆಯಲ್ಲಿ ಅವಳಿಗೆ ಪಾಠ ಹೇಳಿಸಿದರೂ ಸರಿಯೆ—ಒಂದಿಷ್ಟು ಇಂಗ್ಲಿಷು ಕಲಿಸದೆ ಹೋದರೆ ಆಗದೇ ಆಗದು, ಎಂದು ಅವಳ ಆಗ್ರಹ. 'ಯಾವ ಮಣ್ಣಿಗೆ ಇಂಗ್ಲಿಷ್, ಅವಳೂ ನನ್ನಂತೆ ವಕಾಲತು ಮಾಡಬೇಕೇ" ಎಂದು ಸುಬ್ಬಯ್ಯ ನಕ್ಕು ಹೇಳಿದರೆ—ಶೀಲಕ್ಕ ಕೋಪಿಸುತ್ತಾಳೆ. "ನಿಮಗೆ ಗಂಡುಸರಿಗೆ ಬರಿಯ ಸ್ವಾರ್ಥ. ಇಲ್ಲಿ ಯಾರ ಮನೆಗೋ, ಕ್ಲಬ್ಬಿಗೋ

ಹೋದರೆ ನಮ್ಮ ಸಂಕಟ ನಮಗೆ ತಿಳಿಯುತ್ತದೆ. ಇಂಗ್ಲಿಷ್ ಬಾರದ ವರನ್ನುಕಂಡು,ಮೂಸುವವರಿದ್ದಾರೆಯೇ ಇಲ್ಲಿ? ಹೆಂಗಸರಾದರೇನು? ಒಂದು S. S. L. C. ಮಾಡದೆ ಹೋದರೆ ಮರ್ಯಾದೆಯೇ ಇಲ್ಲ" ಎಂದು ತೀರ್ಪು ಕೊಟ್ಟಾಯಿತು. ಶೀಲಕ್ಕ ಸ್ವತಃ ಮಂಗಳೂರಲ್ಲಿ ಮನೆ ಯನ್ನೇ ಶಾಲೆಯಾಗಿ ಮಾಡಿದ್ದುಂಟು. ಇಂಗ್ಲಿಷ್ ಸ್ವಯಂಬೋಧಿನಿ ಗಳನ್ನು ತಲೆಕೆಳಗು ಮಾಡಿದ್ದುಂಟು. ಮುಂದೆ ಸಂಸಾರದ ಭಾರ ಬಿದ್ದಂತೆ ಇಂಗ್ಲಿಷಿನ ಭಾರ ತೇಲುತ್ತ ಹೋಯಿತಷ್ಟೆ!

ಆದುದರಿಂದ ಕುಸುಮೆಯ ಶಾಲೆಯೂ ಅವರ ಮನೆಯಲ್ಲೇ ತೆರೆಯಿತು. ಮೂರವರ್ಷಕಾಲ ಆಕೆ ಆ ಪರದೇಶೀಯ ಭಾಷೆಯೊಡನೆ ಜಟ್ಟಿ ಕಾಳಗ ಮಾಡಿದಳು. ಆ ಬಳಿಕ ತಪ್ಪೇ ಇರಲಿ, ಸರಿಯೇ ಇರಲಿ —'ಎರಡು ಇಂಗ್ಲೀಷ'ನ್ನು ಸಮಯ ಬಂದಾಗಲೆಲ್ಲ ಹಾರಿಸಿಬಿಡು ತ್ತಾಳೆ. ಗಂಡನ ಮುಂದೆ ಮಾತ್ರ,ಇತರ ಅಳುಕುಗಳಿಲ್ಲದೆ ಹೋದರೂ, ಇಂಗ್ಲೀಷ್ ಬಿಗಿಯಲು ತುಸು ಅಂಜಿಕೆಯಿದೆ.

ಕುಸುಮ ಶೀಲಕ್ಕನ ಮನೆಯಲ್ಲಿ ಕಳೆದ ಆರುತಿಂಗಳ ಕಾಲ ಆರು ದಿವಸಕ್ಕಿಂತ ಲಘುವೆನಿಸಿರಬೇಕು. ಅವಳ ಮುಖ್ಯ ಕೆಲಸವೆಂದರೆ ಶೀ ಲಕ್ಕನ ಕೊನೆಯ ಕೂಸು'ರಂಜನ'ನನ್ನು ತನ್ನದೆಂದೇ ತೋರಿಸಿಕೊಂಡು ಅಲೆದಾಡುವುದು, ಓದುವುದು, ವಾರಕ್ಕೆ ಎರಡು ಮೂರು ಬಾರಿ ಸಿನೆ ಮಾಕ್ಕೆ ಹೋಗುವುದು. ಅದರಲ್ಲಿ ಉಭಯ ದಂಪತಿಗಳೂ, ಮಕ್ಕಳನ್ನು ಕೂಡಿಯೇ ಸಾಗುತ್ತಿದ್ದರು. ಹೀಗೆ ಆರುತಿಂಗಳ ಕಾಲ ಸರಿಯುವಾಗ, ಅವರಿರುವ ಮನೆಗೆ ಸಮೀಪವಾಗಿ, ಇನ್ನೊಂದು ಅನುಕೂಲದ ಮನೆ ಬಾಡಿಗೆಗೆ ದೊರೆಯಿತು. ಕ್ರಿಸ್‌ಮಸ್ ರಜೆಯನ್ನು ಬಳಸಿಕೊಂಡು ಸುಬ್ಬಯ್ಯ ಹೊಸ ಬಿಡಾರವನ್ನು ಹೂಡಿದ. ಅಲ್ಲಿ ಕುಸುಮೆ ನಿಸ್ಸಹಾ ಯಳಾಗಿ, ತನ್ನ ಮನೆಯ ಯಜಮಾನಿಕೆಯನ್ನು ನಿರ್ವಹಿಸಿ, ಮೆರೆ ಯಲು ಕಲಿತಳು. ಅತ್ತ ಶೀಲಕ್ಕಗೆ ಆರನೆಯ ತಾಯ್ತನದ ಹೊರೆಯು ಲ್ಲವಾಗಿದ್ದರೆ, ಅವಳಲ್ಲಿಗೆ ಬಂದು ಇಂಥದೇ ಅಡುಗೆಮಾಡು--ಎಂದು ಉಪದೇಶಿಸಿ ಹೋಗುತ್ತಿದ್ದಳು. ಆದರೂ ಸುಬ್ಬಯ್ಯನಾಗಲಿ, ಕುಸುಮೆ ಯಾಗಲಿ ತಮ್ಮ ಮನೆಯ ಕಡೆಗೆ ಸುಳಿದಾಗ-'ಏನು ಪದಾರ್ಥ ಇವ ತ್ತು? ನಿನ್ನೆ ನಾನು ಹೇಳಿದ ಚಟ್ನಿಮಾಡಿದೆಯಾ? ಹೇಗಾಯಿತು? ಕಾಫಿಗೆ

ನಿತ್ಯವೂ ಅವಲಕ್ಕಿ ಉಸಳಿ ಮಾಡಿದರೆ ಬೇಸರವಾಗುವುದಿಲ್ಲವೇ' ಎಂದು ಕೇಳಿ ಕೇಳಿ ವಿಮರ್ಶೆಮಾಡುತ್ತಾಳೆ.

ಸುಬ್ಬಯ್ಯ "ಯಾವ ಅಡುಗೆಯೆಂದು ಯಾರಿಗೆ ನೆನಪಿದೆ ಅವೆಲ್ಲ. ಮನೆಯಲ್ಲಿ ಉಸುಳಿಯಾದರೆ ಬಾರ್ ರೂಮಿನಲ್ಲಿ ಹಲವಾ ತರಿಸಿಕೊಂಡರಾಯಿತು. ಅಂತು ಇಷ್ಟು ಬೇಯಿಸಿ ಹಾಕುತ್ತಾಳಲ್ಲ......" ಎಂದು ಉದಾಸೀನತೆಯ ಉತ್ತರ ಸಲಿಸುತ್ತಾನೆ. "ನಮ್ಮ ಬೀದಿಯಲ್ಲಿ ಯಾವ ಮಣ್ಣಿನ ತರಕಾರಿಯೂ ಬರುವುದಿಲ್ಲ. ಮಾರ್ಕೆಟಿಗೆ ಹೋಗಿ ತರಕಾರಿ ತರಲು ಅವರಿಗೆ ಉದಾಸೀನ.. ನಿತ್ಯ ಒಂದೊಂದು ತಿಂಡಿ ತಯಾರಿಸಲು ನಾನು ಇಂಗ್ಲಿಷ್ ಕಲಿಯುವುದನ್ನು ಬಿಟ್ಟು, ಪಾಕಶಾಸ್ತ್ರ ಕಲಿಯಬೇಕಾದೀತು." ಎಂದು ಕುಸುಮೆ ತಪ್ಪಿಸಿಕೊಳ್ಳುವ ಮಾತಾಡುತ್ತಿದ್ದಳು. ಇವುಗಳನ್ನು ಹೋಲಿಸಿ ಹೊಸ ದಂಪತಿಗಳ ಸಂಸಾರ ಹೇಗೆ ಸಾಗುತ್ತಿರಬಹುದು ಎಂದು ಶೀಲ ತೀರ್ಮಾನಿಸಬೇಕಿತ್ತು.

ಒಂದು ದಿವಸ ವಕೀಲ ವೆಂಕಪ್ಪನ ಮನೆಗೆ ಕಕ್ಷಿಗಾರರು ತುಂಬ ಮಟ್ಟೆಯ ಗುಳ್ಳ ತಂದಿದ್ದರು. 'ವಾದಿರಾಜ ಬದನೆ' ಎಂದು ವಿಶ್ವದಲ್ಲೇ ಖ್ಯಾತಿಗೊಂಡ ಬದನೆಕಾಯಿಗಳು ಮನೆಗೆಬರುತ್ತಲೇ ಶೀಲಕ್ಕ, ಮನೆಯ ಆಳು ಕಾಳನೊಡನೆ ಹತ್ತೆಂಟು ಗುಳ್ಳಗಳನ್ನು ಕುಸುಮೆಯ ಮನೆಗೆ ಕಳುಹಿಸಿದಳು. ಒಳ್ಳೆಯ ಕೊತ್ತಂಬರಿ ಸೊಪ್ಪನ್ನೇ ಹಾಕಿ ಬಜ್ಜಿಯನ್ನು ಮಾಡಿದರೆ--ದಿವ್ಯವಾಗುತ್ತದೆ ಎಂದು ಸಂದೇಶ ಬೇರೆ ಕಳುಹಿಸಿದ್ದಳು. "ಹೂಂ-ಅಲ್ಲಿ ಒಂದು ಮೂಲೆಯಲ್ಲಿ ಸುರಿದುಬಿಡು"-ಎಂದು ಕುಸುಮೆ ಸ್ವೀಕರಿಸುವಾಗಲೇ ಉದಾಸೀನಳು. ಮುಂದೆ ನಾಲ್ಕಾರು ದಿವಸಗಳ ತನಕ ಕುಸುಮ ಬಂದಾಗಲೆಲ್ಲ "ಏನು ಮಾಡಿದೆಯೇ? ಗುಳ್ಳ ಕಳುಹಿಸಿದ್ದೆನಲ್ಲ....ಬಜೆಮಾಡಿ ಕರಿಯಬಹುದು, ಪಲ್ಯ ಹುಳಿ, ಬಜ್ಜಿ ಸಾಸಿವೆ ....ಯಾವುದು ಮಾಡಿದರೂ ಅಷ್ಟು ಪಸಂದವಾಗುತ್ತದೆ" ಎಂದು ಹೇಳಿದಳು....."ಹೂಂ, ಮಾಡುವ. ಅದೇನು ಕೊಳೆಯುತ್ತದೆಯೇ!" ಎಂದು ಕುಸುಮೆ ವಾಯಿದೆ ಮುಂದುವರಿಸುತ್ತಿದ್ದಳು. ಮುಂದೆ ಬೇರೊಬ್ಬ ಕಕ್ಷಿಗಾರ ಅವರ ಮನೆಗೂ ಗುಳ್ಳದ ಕಾಯಿಗಳನ್ನು ತಂದು ಸುರುವಿದನು. ಅಲ್ಲಿಂದ ಕುಸುಮೆ ಬೆಳಗು ಸಂಜೆಗಳೆಂದು ಒಂದು ವಾರ ಮುಗಿಯುವ ತನಕ ಗುಳ್ಳದ ಸಪ್ತಾಹವನ್ನೇ ಮಾಡಿಬಿಟ್ಟಳು.

ಪುಣ್ಯಾತ್ಮ ಸುಬ್ಬಯ್ಯ "ಏನೇ, ಗುಳ್ಳದಲ್ಲೇ ನನ್ನನ್ನು ಸಾಯಿಸಿಬಿಡುತ್ತೀಯಾ" ಎಂದವನೂ ಅಲ್ಲ.

ಅಂಥ ದರಿದ್ರ ಗುಳ್ಳವೇ ಬೇರೊಂದು ದಿನ ಅವರೊಳಗಣ ಮನಸ್ತಾಪಕ್ಕೆ ಕಾರಣವಾಗಬೇಕೆ? ಸುಬ್ಬಯ್ಯ ಸಪತ್ನಿಕನಾಗಿ ಒಂದು ಆದಿತ್ಯವಾರ ಶೀಲಕ್ಕನ ಮನೆಗೆ ಊಟಕ್ಕೆ ಹೋಗಿದ್ದ. ಗುಳ್ಳದ ಶ್ರಾಯವಾದುದರಿಂದ ಅದೇನೆ ಪ್ರಧಾನ ತರಕಾರಿಯಾಗಿತ್ತು. ಸುಬ್ಬಯ್ಯ ಊಟ ಮಾಡುತ್ತಾ "ಅಲ್ಲ ಶೀಲಕ್ಕ, ನೀವು ಅಡುಗೆ ಮಾಡಲು ಎಲ್ಲಿ ಕಲಿತಿರಿ ಹೇಳಿ. ಒಂದು ದಿನದ ಅಡುಗೆ ಇನ್ನೊಂದು ದಿವಸವಿಲ್ಲ. ಒಂದೇ ತರಕಾರಿಯಾದರೂ ನೂರು ನಮೂನೆಯಲ್ಲಿ ಮಾಡುತ್ತೀರಿ. ಈಗ ನನಗೆ ಮನೆಯಲ್ಲಿ ಗುಳ್ಳದಕಾಯಿ ತಿಂದು ಬೇಸರ ಬಂದಿತ್ತಾದರೂ--ಇವತ್ತಿನ ಅಡುಗೆಯಲ್ಲಿ ಅಚ್ಚೇರು ಅನ್ನವನ್ನು ದಕ್ಕಿಸಬಹುದು" ಎಂದು ಹೊಗಳಿಬಿಟ್ಟನು. ಈ ಮಾತಿಗೆ ವೆಂಕಪ್ಪ ಬೇರೆ ಪುಟಕೊಟ್ಟ. "ಸುಬ್ಬಯ್ಯ, ನಮ್ಮ ಶೀಲುವಿಗೆ ಅಡುಗೆ ಮಾಡುವುದರಲ್ಲಿ ಒಂದು ಆಸಕ್ತಿ. ಅವಳು ಯಾರ ಮನೆಗೆ ಹೋದರೂ ಯಾವ ಜಾತಿಯುವರ ಮನೆಗೆ ಹೋದರೂ, ಅದು ಹೇಗೆ-ಇದು ಹೇಗೆ ಎಂದು ಕೇಳಿ, ತಿಳಿದು, ಮನೆಗೆ ಬಂದು ಮಾಡುತ್ತಾಳೆ. ಈಗ ಬ್ರಾಹ್ಮಣರ ಕೊದ್ದೆಲು, ಐಯ್ಯರರ ಮೊಳಗುತನ್ನಿ, ಮರಾಟರ ಅಮಟಿ, ಕೊಂಕಣಸ್ಥರ ದಾಳಿತೊವ್ವೆ-ಯಾವುದು ಬೇಕೋ ಅದನ್ನು ಮಾಡಬಲ್ಲಳು" ಎಂದು ಮಾತಿಗೆ ಪುಷ್ಟಿ ಕೊಟ್ಟನು. ಮುಂದೆಯೂ ಅವರ ಮಾತುಕತೆಗಳು ಶೀಲಕ್ಕನ ನಳಪಾಕವನ್ನೇ ಬಣ್ಣಿಸುವುದರಲ್ಲಿ ಕಳೆದುವು.

ಎದುರಿಗೆ ಕುಳಿತ ಜಂಟಿ ಗಂಡುಸರು ಉಂಡು, ತೇಗಿ, ಎಲೆ ಬರಿದು ಮಾಡಿ ಹೋದರು. ಆದರೆ ಹುಡುಗರ ಜತೆಗೆ ಕೈಯೂರಿ ಕುಳಿತ ಕುಸುಮ ಮಾತ್ರ ತಾನೆಲ್ಲ ಹಸಿ ಹಾಗಲಕಾಯ ಪದಾರ್ಥಗಳನ್ನುಣ್ಣುವವಳಂತೆ— ಮೂಸಿ, ಮಡಗಿ, ಎದ್ದಳು. ಶೀಲಕ್ಕನ ದೃಷ್ಟಿಗೂ ಅದು ನಾಟಿತು. ಅದರ ಕಾರಣವು ಸ್ವಯಂವ್ಯಕ್ತವಾಗಿದ್ದುದರಿಂದ ಅವಳು ಸುಮ್ಮನೆಯೆ ಇದ್ದಳು. ಅವಳು, ಅವರೆಲ್ಲರೂ ಹೊರಟುಹೋದ ಬಳಿಕ ಗಂಡನೊಡನೆ-"ಹಾಗೆ ಬಂದವರ ಮುಂದೆ ನಮ್ಮನಮ್ಮನ್ನೇ ಹೊಗಳುವುದು ಚೆಂದವಲ್ಲ. ಬೇರೆಯವರನ್ನು ನಾವು ದೂರಬಾರದು; ಪರ್ಯಾ

ಯವಾಗಿ 'ಕುಸುಮಾ ನಿನಗೆ ಅಡುಗೆ ಬಾರದೇ ಬಾರದು' ಎಂದಷ್ಟೇ ಆಗುತ್ತದೆ" ಎಂದು ಗಂಡನನ್ನು ಟೀಕಿಸಿದಳು.

ಆಸಂಜೆ ಅವರು ತಮ್ಮಪದ್ಧತಿಯಂತೆ ಸಿನೆಮಾ ದರ್ಶನ ಮಾಡು ವುದಿತ್ತು. ಆದರೆ ತುಂಬ ನೋವುಗೊಂಡ ಕುಸುಮೆ, ತನಗೆ ತಲೆನೋವು ತಾನು ಬರುವುದಿಲ್ಲವೆಂದು ಹೇಳಿ, ನಟ್ಟಗೆ ಮನೆಯನ್ನು ಸೇರಿದಳು. ಊಟದವೇಳೆ ನಡೆದ ಮಾತುಕತೆಗಳೆಲ್ಲವೂ ತನ್ನ ಮುಖಭಂಗದ ಸಂಚು —ಎಂದು ಅವಳು ತೀರ್ಮಾನಿಸಿಬಿಟ್ಟಳು. ಸುಬ್ಬಯ್ಯ ಮಾತ್ರ ಅವ ರೊಂದಿಗೆ ಹೋಗಿ ಬಂದನು.

ಮನೆಗೆ ಬರುವಾಗ ಅವನಿಗೆ ಊಟ ಕಾದಿರಲಿಲ್ಲ. "ಏನು-ತುಂಬ ತಲೆ ನೋವೇ? ಹಾಲು ಕಾಯಿಸಿದೆಯೋ? ಇಲ್ಲವಾದರೆ ನಾನು ಕಾಯಿ ಸುತ್ತೇನೆ" ಎಂದರೆ "ನಿಮ್ಮ ಮಟ್ಟಿಗುಳ್ಳದ ಪುರಾಣವನ್ನು ಕೇಳಿ ಯಾರಿ ಗಾದರೂ ತಲೆನೋವು ಬಂದೀತು. ನಾಳೆಯಿಂದ ನೀವು ಬಲ್ಲವರಿಂದ ಅಡುಗೆ ಮಾಡಿಸಿ; ನನ್ನ ಕೈಯ ಅಡುಗೆ ತಿಂದು ಉಪವಾಸ ಸಾಯು ಬೇಡಿ" ಎಂದಳು.

ಮಾತಿನ ಧ್ವನಿ, ವಕ್ರತೆ, ತೀಕ್ಷ್ಣತೆಗಳಿಂದ ತಲೆನೋವಿನ ಕಾರಣ ವಕೀಲ ಸಾಹೇಬರಿಗೆ ವ್ಯಕ್ತವಾಯಿತು. "ನಿನಗೆ ನಾವೇನೆಂದೆವೇ?" ಎಂದು ಅವನು ಸಮಾಧಾನ ಹೇಳಲು ಬಂದರೆ,ಆಕೆ ಮತ್ತಷ್ಟು ರೇಗಿ ದಳು. "ಏನು ನಾನು ಅಷ್ಟು ಮಂಕೇ? ಮನೆಯಲ್ಲಿ ಒಂದು ದಿವಸ ಅಡುಗೆ ಚೆನ್ನಾಗಿದೆ ಎನ್ನದ ಬಾಯಿ, ಅಲ್ಲಿ ಹೊಗಳಿದ್ದೇ ಹೊಗಳಿದ್ದು. ಅದರ ಅರ್ಥ ನನಗೇನು ಆಗುವುದೇ ಇಲ್ಲವೆಂದು ತಿಳಿಯುತ್ತೀರಾ" ಎಂದು ಮೂದಲಿಸಿದಳು.

ಆ ರಾತ್ರಿಯೆಲ್ಲ ಮುನಿಸಿನಲ್ಲೇ ಬೆಳಗಾಯಿತು. ಬೆಳಗಿನ ಕಾಫಿಗೆ ಒಲೆ ಹಚ್ಚಲು ಸ್ವತಃ ವಕೀಲರೇ ಮುಂದುವರಿದರು. ಆ ಹೊಗೆಯಲ್ಲಿ ಕಣ್ಣು ಹಿಚುಕುತ್ತಿರುವ ಅವರನ್ನು ಕಂಡು ಕುಸುಮೆ ಪ್ರಸನ್ನಳಾಗಿ— "ಆಡಿದಂತಲ್ಲ ಮಾಡುವುದು" ಎಂದು ವಿಜಯೋನ್ಮುಖಳಾಗಿ ಸಹಾ ಯಕ್ಕೆ ಬಂದಳು. "ನನಗೆ ಅಡುಗೆ ಬರುತ್ತದೆಂದು ನಾನೆಲ್ಲಿ ಹೇಳಿದ್ದೆನೇ!" ಎಂದು ನುಡಿದು ಆತ ಪಾರಾದನು. ಅನಂತರ ಉಪ್ಪುಹಾಕದ ದಿವಸವೂ "ಅಡುಗೆ ಮಾತ್ರ—ಬೇಷಾಗಿದೆ. ಆದರೂ ಸ್ವಲ್ಪ ಉಪ್ಪು ಬಿದ್ದಿದ್ದರೆ

ಮತ್ತಷ್ಟು ಪಸಂದವಾಗುತ್ತದೆ” ಎಂದು ಪುಸಲಾಯಿಸಿ ದಿನ ನಿರ್ವಹಿ ಸಬೇಕಾಯಿತು.

ಹೀಗೆ ಬದನೆಕಾಯಿ ಬ್ರಹ್ಮರಾಕ್ಷಸವಾಗಿಯೇ ಬಿಟ್ಟಿತು. ಅದ ರಿಂದ ಕುಸುಮೆಯು ಬಸಿರಿಯಾಗಿದ್ದ ಶೀಲಕ್ಕನ ಮನೆಗೆ ಹೋಗಿ ಬರು ವುದೂ ಕಡಮೆಯಾಯಿತು. ಅವಳಾಗಿ ಅಪೂರ್ವಕ್ಕೆ ಬಂದುಹೋ ದಾಗ—ಲೆಕ್ಕಾಚಾರದ ಮಾತನ್ನು ಇರಿಸಿಕೊಂಡಳು ಆಕೆ. ಮುಂದೆ ಶೀಲಕ್ಕ ಬಾಣಂತಿತನಕ್ಕೆ ತನ್ನ ರಂಜನ, ಮದನರನ್ನು ಕರೆದುಕೊಂಡು ತವರಿಗೆ ತೆರಳಿದಳು. ಅವಳು ಮನೆಯಲ್ಲಿ ಇಲ್ಲದುದರಿಂದಲೋ ಏನೋ ‘ಮಕ್ಕಳನ್ನು ವಿಚಾರಿಸಿಕೊಂಡು ಬರುತ್ತೇನೆ’ ಎಂದು ಅವರ ಮನೆಗೆ ಕುಸುಮೆ ಹೋಗಿಬರುತ್ತಿದ್ದಳು. ಶೀಲ ತಿರುಗಿ ಆರನೆಯ ಮಗುವನ್ನು ತಂದು ಮನೆತುಂಬಿಸಿದಳು. ಮಗು ಈ ಬಾರಿ ಹೆಣ್ಣು. ಮಾಧವಿಯೆಂದು ನಾಮಕರಣವಾಯಿತು. ಮಗುವಿನ ಕೈಮೇಲೆ ಬೆಳ್ಳಿ ಬಟ್ಟಲಿರಿಸಲು ಕುಸುಮೆ ಬಂದಿದ್ದರೂ, ಮಾತು ಲೆಕ್ಕಾಚಾರದಷ್ಟೇ ಇತ್ತು.

ಅವರಲ್ಲಿ ಮೊದಲಿನ ಬಳಕೆ ಬರಲು ಮತ್ತೂ ನಾಲ್ಕಾರು ತಿಂಗಳ ಕಾಲ ಸರಿಯಿತು. ಹೊರಗಿನ ಗಾಳಿಯೇ ಅದರ ಕಾರಣ. ಶೀಲ ಕುಸು ಮೆಯರಿಬ್ಬರೂ ಊರಿನ ಪ್ರಮುಖ ಸಂಘವಾದ ‘ವನಿತಾ ನಿಲಯದ ಸದಸ್ಯೆ’ಯರು. ಮಂಗಳೂರಿನ ಮುಂದುವರಿದ ಮಹಿಳೆಯರು ಮೆರೆ ದಾಡುವ ಕ್ಲಬ್ಬುಗಳಲ್ಲಿ ಈ ನಿಲಯವೊಂದು. ಇವರು ಆ ಸಭೆಯ ಸದ ಸ್ಯೆಯರು. ಆದುದರಿಂದ ಒಂದು ದಿನ ನಡೆದ ಅಪೂರ್ವದ ಒಂದು ಸಮಾರಂಭಕ್ಕೆ ಅತಿಥಿಗಳಾಗಿ ಹೋಗಿದ್ದರು.

ಊರಿಗೆ ಹೊಸತಾಗಿ ಆಮದಾದ ಕಲೆಕ್ಟರ ಪತ್ನಿ, ಅಬಾದಿಯೂ ಬೇಗಮರ ಸಲುವಾಗಿ ಸತ್ಕಾರಕೂಟ ಏರ್ಪಾಟಾಗಿತ್ತು. ಅದರ ಸಲು ವಾಗಿಯೇ ಜರತಾರಿ, ರೇಷ್ಮೆ, ಅಲಂಕಾರಗಳು ಅಲ್ಲಿ ಬಂದು ನಲಿಯು ತ್ತಿದ್ದವು. ಈ ವೇಷಗಳಲ್ಲಿ ಪ್ರಮುಖ ವೇಷಧಾರಿ ಮಿಸೆಸ್ ಮಾಲತೀ ರಾಮಚಂದ್ರನ್. ಈಕೆ ಸಂಘದ ಕಾರ್ಯದರ್ಶಿ. ವನಿತಾ ನಿಲಯದ ಯಜಮಾನಿಯೇ ತಾನು-ಎಂಬ ಹುಮ್ಮಸ ಅವಳಿಗೆ. ಮುಖ್ಯ ಅತಿಥಿ ಯಾದ ಅಬಾದಿಯರನ್ನು ಆಕೆ ಸ್ವಾಗತಿಸಿ, ತಮ್ಮ ಸದಸ್ಯೆಯರಿಗೆ ಪರಿ ಚಯ ಮಾಡಿಕೊಟ್ಟಳು. ಆ ಭರದಲ್ಲಿ ಸಮೀಪದಲ್ಲಿದ್ದ ಕುಸುಮೆ ಶೀಲೆ

ಯರಾಗಲಿ, ಅವರಂತ ಸಾದಾ ಉಡುಗೆಯಲ್ಲಿ ಬಂದ ಒಬ್ಬಿಬ್ಬರು ಸಾಮಾನ್ಯ ಮಹಿಳೆಯರಾಗಲಿ ಕಾಣಿಸಲಿಲ್ಲ. ಸತ್ಕಾರ, ಸ್ವಾಗತ, ಉಪಹಾರ—ಎಲ್ಲ ವಿಧಿಗಳೂ ಕಾರು, ಸೀರೆ, ವಜ್ರಗಳ ತೂಕದ ಮೇಲಿಂದಲೇ ನಡೆದುವು. ಶ್ರೀಮಂತರು, ಮುಂದಾಳುಗಳು ಮುಖ್ಯ ಅತಿಥಿಗೆ ಸಮೀಪಕ್ಕೆ ಬಂದು ಕುಳಿತು ರಂಜಿಸಿದರು. ಉಳಿದವರು ಮೂಲೆಗಳಲ್ಲಿ ಮಾತಿಲ್ಲದೆ ಕೊಳೆತರು. ಉಪಹಾರ ಮುಗಿದು ಆಟವುತೊಡಗಿತು. ಆಟದ ವೇಳೆ ಇವರಿಗೆ ಆಡಲು ಬೇಟೂ ಇಲ್ಲ; ಕುಳಿತಿರಲು ಸೀಟೂ ದೊರೆಯಲಿಲ್ಲ.

ಇದಕ್ಕೆಲ್ಲ ಸೂತ್ರಧಾರಿಯಾದ ಮಿಸೆಸ್. ಮಾಲತಿ ರಾಮಚಂದ್ರಳ ಮೇಲೆ ಕುಸುಮೆಗೆ ಹಿಡಿಸಲಾರದ ಕೋಪ. "ಹೌದೇ ಶೀಲಕ್ಕ, ಇಲ್ಲಿ ನಮ್ಮಂಥವರು ಇವರ ಕಣ್ಣಿಗೆ ಕಾಣಿಸುವುದೇ ಇಲ್ಲ, ಅಲ್ಲವೇ" ಎಂದು ತಾನಾಗಿ ಮಾತುಕತೆ ತೊಡಗಿ, ಪ್ರತಿಭಟೆಯಿಂದೆಂಬಂತೆ, ಸಭಾತ್ಯಾಗವನ್ನು ಮಾಡಿದಳು. ಜತೆಯಲ್ಲೇ ಮನೆಯ ಕಡೆಗೆ ತೆರಳಿದರು. ಎಲ್ಲ ಬೇಸರವನ್ನು, ಈ ನೋವಿನಲ್ಲಿ ಮರೆತು, ತಿರುಗಿ ಗೆಳತಿಯರಂತೆ ತಮ್ಮ ಸ್ಥಳಗಳನ್ನು ಸೇರಿದರು. ಆದರೆ ಅಲ್ಲಿ ಕುಳಿತಿದ್ದಾಗ ಅವರಾಡಿದ ಅತೃಪ್ತಿಯ ಮಾತುಗಳು ನಿಲಯದ ಗೋಡೆಗೆ ಕೇಳಿಸಿ, ಅಲ್ಲಿಂದ ಕಾರ್ಯದರ್ಶಿನಿಯ ಕಿವಿಯನ್ನು ಸೇರಿದುವು.

ಆಕೆಯಂತು ಹೆಚ್ಚಿನ ಜಂಬದಿಂದ "ಈ ಕೀಳು ಜಾತಿಯವಕ್ಕೆ ಏನು ಜಂಬ" ಎಂದು ಚುಚ್ಚಿ ಆಡಿದಳು. "ಇಂಥ ಇಂಗ್ಲಿಷ್ ಬಾರದ ಗೊಡ್ಡುಗಳನ್ನು ಅವರಂಥ ಇಂಗ್ಲೆಂಡ್ ರಿಟರ್ನ್ಡ್ ಲೇಡಿಗೆ ಪರಿಚಯ ಮಾಡಿಸಿ ನಮ್ಮ ಮರ್ಯಾದೆ ಕಳೆದು ಕೊಳ್ಳಬೇಕೇನು? ಅವರು ಇವರ ವಿಚಿತ್ರ ಉಡುಗೆ ನೋಡಿ 'ಇವರು ನಿಮ್ಮ ಕ್ಲಬ್ ಚಾಕರರೇ' ಎಂದರೆ! ಇವತ್ತು ನಮ್ಮ ಪ್ಯೂನ್ಸ್ ಇದಕ್ಕಿಂತ ಚೆನ್ನಾಗಿ ಬಂದಿದ್ದಾರೆ" ಎಂದು ಆರ್ಭಟಿಸಿದಳು.

ಈ ಮಾತುಗಳು ಕ್ರಮವಾಗಿ ಗೋಡೆಗಳಿಂದ ಶೀಲ ಕುಸುಮೆಯರ ಕಿವಿ ತನಕ ಸೇರಿದುವು. ಉರಿಗೆ ತುಪ್ಪ ಸುರಿದಂತಾಯಿತಷ್ಟೆ. ತಮ್ಮ ಬಡತನ, ಜಾತಿಗಳ ತೂಕ ಮಹಿಳೆಯರ ಎಡೆಯಲ್ಲಿ ಎಷ್ಟು ಇದೆ—ಎಂಬ ಅರಿವಿನಿಂದ ಶೀಲ ಕುಸುಮೆಯರಿಬ್ಬರೂ ಅತೃಪ್ತರಾದರು.

ಶೀಲು ಬೇಸರಗೊಂಡಳು, ಕುಸುಮೆ ಮಾತ್ರ ರೇಗಿ ಉರಿದಳು. ಕೊನೆಗೆ ದೂರು ಗಂಡಂದಿರ ತನಕ ಹೋಯಿತು. ಸುಬ್ಬಯ್ಯ—"ಅಂಥ ಕ್ಲಬ್ಬೇ ಬೇಡ ನಿಮಗೆ" ಎಂದು ಹೇಳಿಬಿಟ್ಟ. ವೆಂಕಪ್ಪ—ಮಹಿಳೆಯರ ಪ್ರಪಂಚದ ನಡತೆಯನ್ನು ಗಂಡುಸರ ಕ್ಲಬ್ಬಿನಲ್ಲೂ ಪಸರಿಸಿ ನಗೆಗೆ ಹವಿಸ್ಸನ್ನು ಒದಗಿಸಿದ. ಅಲ್ಲಿಂದ ಸುದ್ದಿ ಹೊರಗಣ ಜಗತ್ತಿಗೂ ಹೋಯಿತು. ಸಂಗತಿ ನಡೆದ ಒಂದು ವಾರದಲ್ಲಿ, ಊರಿನ ವಾರಪತ್ರಿಕೆಯೊಂದು "ಮಂಗಳೂರಿನ ಕೆಪಿಟಲಿಸ್ಟ್ ಕನ್ಯೆಯರಿಗೆ ಬೇಗಮರೇ ಭಂಡವಳ" ಎಂದು ಅಗ್ರಲೇಖನವನ್ನು ಬರೆದು ಒಂದಕ್ಕೆ ನಾಲ್ಕು ಟೀಕಿಸಿಯೂ ಆಯಿತು.

ಆ ಅಗ್ರಲೇಖವನ್ನು ನೋಡಿದ ದಿವಸ ಕುಸುಮೆಗೆ ಮನದಣಿಯೆ ಸಂತೋಷವಾಯಿತು. ಒದೆಕೊಟ್ಟರೆ ಹಾಗೆ ಕೊಡಬೇಕು-ಎಂದು ಬಲುವಾಗಿ ಹಿಗ್ಗಿದಳು. ಅದನ್ನು ಯಾವಾವ ಗೆಳತಿಯರಿಗೆ ತೋರಿಸುವುದು ಸಾಧ್ಯವೋ ಅವರೆಲ್ಲರಿಗೂ ತೋರಿಸಿ ತೃಪ್ತಿಪಟ್ಟಳು.

* * * * *

ಸಮಾಜದಲ್ಲಿ ತಮ್ಮಂತಹ ಮಧ್ಯಮ ವರ್ಗದವರೂ ಎಷ್ಟು ಬಗ್ಗಿ ನಡೆಯಬೇಕೆಂಬ ನೋವು ಕುಸುಮೆಯ ಮನಸ್ಸಿನಲ್ಲಿ ತುಂಬಿಕೊಂಡಿದ್ದ ಕಾಲಕ್ಕೇನೆ—ಇನ್ನೊಂದು ಅತೃಪ್ತಿಯು ಅವಳಲ್ಲಿ ಮನೆಮಾಡಿತು.

ಒಂದು ದಿನ ವಕೀಲದ್ವಯರು ಸಪತ್ನಿಕರೂ, ಸಕುಟುಂಬಿಗಳೂ ಆಗಿ ಸಿನೆಮಾ ಸಂದರ್ಶನ ಮಾಡಿದರು. ಸಕುಟುಂಬವೆಲ್ಲ—ಶೀಲು ವೆಂಕಪ್ಪರದೇ. ಕುಸುಮೆ ರಂಜನನನ್ನು ಕೈಯಲ್ಲಿ ಹಿಡಿದು ಹೊರಟಿದ್ದಳು. ಸಿನೇಮಾ ನೋಡುವಾಗಲೂ ಅದೇ ಅವಳ ತೊಡೆಯಲ್ಲಿ ಕುಂಯಿಗುಡುತ್ತಿತ್ತು. ಅದನ್ನು ನಗಿಸಿ ನಗುವುದರಲ್ಲಿ ಲೀನಳಾದ ಅವಳ ಮನಸ್ಸನ್ನು, ಮಗ್ಗುಲಿನ ಪ್ರೇಕ್ಷಕಳೊಬ್ಬಳು—ತಡೆದಳು. "ಎಷ್ಟು ತಿಂಗಳಾಯಿತು? ಏನು ಹೆಸರು?"—ಎಂದು ಕೇಳಿದಳು, 'ಹೆಸರು ರಂಜನ' ಎಂದು 'ತಿಂಗಳಲ್ಲ ಎರಡು ವರ್ಷವೆಂದು ಕಾಣುತ್ತದೆ' ಎಂದು ಜವಾಬುಕೊಡಲು-ಆಕೆ, 'ನಿಮ್ಮದಲ್ಲವೇ ಹಾಗಾದರೆ?' ಅಂದಳು. "ಅವರು ಅಜೆ ಕೂತಿದ್ದಾರಲ್ಲ—ವಕೀಲರ ಹೆಂಡತಿ.... ಅವರದ್ದು"

"ನಿಮಗೆ?"

"ನಮಗಿನ್ನೂ ಇಲ್ಲ"

"ಇನ್ನೂ ಇಲ್ಲ...ನಿಮಗೆ ಪ್ರಾಯ ಮೂವತ್ತು ಆಗಬಹುದಲ್ಲ"—ಎಂದಳು ಆ ಅಧಿಕ ಪ್ರಸಂಗಿ.

ಕುಸುಮೆಗೆ ಬೇಸರವಾಯಿತು. ಇಪ್ಪತ್ತರ ತನ್ನನ್ನು ಮೂವತ್ತು ಎಂದು ಅಪಮಾನಿಸುವುದರ ಜತೆಗೆ, ತನಗೆ ಇಲ್ಲದ ಭಾಗ್ಯವನ್ನು ಚುಚ್ಚಿ ಆಡುತ್ತಿದ್ದಾಳಲ್ಲ—ಎಂದೆನಿಸಿತು ಮನಸ್ಸಿನಲ್ಲಿ.

೩ನೆಯ ಅಧ್ಯಾಯ

ವನಿತಾನಿಲಯದ ಕಾರ್ಯದರ್ಶಿಯ ಸೂಜಿಮಾತುಗಳು ಬಹು ದಿವಸಗಳಿಂದಲೂ ಕುಸುಮೆಯ ಮನಸ್ಸನ್ನು ಕೊರೆಯುತ್ತಿವೆ. ತಾನು ಎರಡು ವರ್ಷಕಾಲ ಖಾಸಗಿಯಿಂದ ಇಂಗ್ಲಿಷ್ ಓದಿಕೊಂಡರೂ "ಹೊಡೆದರೆ ಎರಡು ಇಂಗ್ಲಿಷು ಬರುವಂತಿಲ್ಲ"--ಎಂದು ಅವಳು ನುಡಿದುದು, ಅವಳ ಕಣ್ಣಿಗೆ ವಕೀಲನ ಹೆಂಡತಿಯಾದ ತಾನೂ ಸಾಮಾನ್ಯ ಸೀರೆ ಉಟ್ಟುಬಂದ ಮಾತ್ರಕ್ಕೆ, ಚಾಕರಳಂತೆ ಕಂಡುದು--ತುಂಬ ಅಸಹನೀಯವಾಗಿತ್ತು. ಮೇಲೆ--'ಕೀಳು ಜಾತಿ'ಯೆಂಬ ಚುಚ್ಚು ನುಡಿಗಳು ಬೇರೆ. ಗಂಡನು, ತನಗೆ ಅಡುಗೆ ತಿಳಿಯದು ಎಂದು ತೋರಿಸಿಕೊಟ್ಟುದರಿಂದಲೇ ತನ್ನವರ ಮುಂದೆ ನೊಂದ ಅವಳ ಪ್ರತಿಷ್ಠೆ, ಈಗ ಅಸಾಮಾನ್ಯ ಸಂಕಟಕ್ಕೆ ಗುರಿಯಾಯಿತು. ಅವಳು ಹಳ್ಳಿಯಿಂದ ನಗರಕ್ಕೆ ಬಂದು ಬಹಳ ಕಾಲವಾಗಿಲ್ಲ, ನಿಜ; ಆದರೆ ಬಂದ ಮೂರು ದಿವಸಗಳಿಂದಲೇ ತಾನು ನಾಗರಿಕೆಯೆಂದು ತಿಳಿಯ ತೊಡಗಿದ್ದಾಳೆ. ತನ್ನ ಪೂರ್ವದ ಬಾಳ್ವೆಗೆ ತಿರುಗಿ ಮರುಕಳಿಸಲಾರದೆಂದು ಖಚಿತಮಾಡಿದ್ದಾಳೆ. ಹುಟ್ಟೂರಲ್ಲಿ ಅವಳು ಹುಲ್ಲು ಹೆರೆದಿರಬಹುದು, ಗೊಬ್ಬರ ಹೊತ್ತಿರಬಹುದು, ಮುಸುರೆ ತಿಕ್ಕಿರಬಹುದು, ಅಡುಗೆ ಅಟ್ಟಿರಬಹುದು. ಆದರೆ ಈಗ ಹಾಗೇನು? ಆಳುಗಳಿಂದ ಕೀಳುಗೆಲಸಮಾಡಿಸುತ್ತಾಳೆ. ಸಮನಾದ ಅಡುಗೆಯವನು ದೊರೆತಿಲ್ಲವೆಂದು ಅಡುಗೆಮನೆಯಲ್ಲಿ ಓಡಾಡುವಳಾದರೂ, ವಕೀಲರ ಹೆಂಡತಿಯಾದ ತಾನು 'ಅಡುಗೆಯವಳಲ್ಲ.

ತನಗೆ ಅಡುಗೆ ಬರಬೇಕಾಗಿಯೂ ಇಲ್ಲ! ಎಂದು ತಿಳಿಯುತ್ತಿದ್ದಾಳೆ. ತನ್ನ ಯೋಗ್ಯತೆಯೊಂದಿಗೆ ಆಕೆ ಮಾಲತಿರಾಮಚಂದ್ರಳ ತೂಕ ಮಾಡಿಕೊಳ್ಳುತ್ತಾಳೆ! ಅವಳಿಗೇನು ಗೊತ್ತು? ಅವಳೇನು S. S. L. C. ಓದಿರಬಹುದು-ನಾನು ಅಷ್ಟು ಓದಿಲ್ಲವಾದರೂ, ಅಷ್ಟೊಂದು ಇಂಗ್ಲಿಷು ತಿಳಿಯದವಳೇ? ಆಕೆಯ ಚೆಲುವೂ ಅಷ್ಟರಲ್ಲಿದೆ! ಸೀರೆ ಆಭರಣಗಳಿಂದ ಅವಳೊಂದು ವ್ಯಕ್ತಿಯೆನಿಸಬೇಕು. ಗಂಡನೊಬ್ಬ ಗಣ್ಯ ನೌಕರನಾದ ಮಾತ್ರಕ್ಕೆ—ಇವಳೇನು ಅಷ್ಟು ಹೆಮ್ಮೆ ತಾಳಬೇಕು. ನಾಳೆ ಕಾಲ್ಚೆಂಡಿನಂತೆ ಜಿಲ್ಲೆಯಿಂದ ಜಿಲ್ಲೆಗೆ ಒಗೆಯಲ್ಪಡುವ ಗಂಡನ ಜತೆಗೆ ಇವಳೂ ಸಾಗಿದರಾಯಿತು. ಹೀಗಿರಲು ಊರವರ ಮುಂದೆ ಅವಳ ಜಂಭವೇ!" ಎಂದೆಲ್ಲ ತರ್ಕವಿತರ್ಕಗಳಾದುವು.

ಆದರೆ ಒಳಗಿಂದೊಳಗೆ ಸರಕಾರಿ ನೌಕರಿಗೆ ಊರಲ್ಲಿ ದೊರೆಯುವ ಮನ್ನಣೆ ಖಾಸಗಿ ವಕೀಲರಿಗೆ ದೊರೆಯಲಾರದು--ಎಂಬ ಅನುಮಾನ ಬೇರೆ. ಅದರಿಂದ ತನ್ನ ಪತಿಯು, ಮುನಸೀಫಿಯಂತಹ ಹುದ್ದೆಗೆ ಏಕೆ ಸೇರಬಾರದೆಂಬ ಬಯಕೆ. ತಾನು ಮುನಸೀಫರ ಮಡದಿಯಾಗಿದ್ದರೆ, ಆ ದಿನ ಅಬಾದಿಯ ಬೇಗಮಳನ್ನು ಬರಮಾಡಿಕೊಂಡ ದಿನ, ನಾಯಂತೆ ಇವರು ತನ್ನ ಹಿಂದೆ ಬಾಲ ಅಲ್ಲಾಡಿಸುತ್ತಿದ್ದರೆಂಬ ಊಹೆಯಲ್ಲಿ ತೇಲಾಡುವಳು. ಕೊನೆಗೆ ಅದಲ್ಲದೆ ಹೋದರೂ ತನ್ನ ಗಂಡ ವಕೀಲರಲ್ಲಿ ಪ್ರಮುಖನೆನಿಸಿ ಮೋಟರುಕಾರಿನಲ್ಲಿ ತಿರುಗಾಡುವಂತಿದ್ದರೆ, ಹರಿವೆಸೊಪ್ಪು ತರುವುದಕ್ಕೂ ಕಾರನ್ನು ಕಳುಹಿಸುವಂತಿದ್ದರೆ, ಆ ತೆರನ ಅಪಮಾನವಾಗುತ್ತಿದ್ದಿಲ್ಲವೆಂಬುದು ನಿಶ್ಚಯ.

ಈ ಯೋಚನೆಗಳೆಲ್ಲ ಹಂಬಲವಾಗತೊಡಗಿದುವು. ಸದ್ಯವೇ ಮದ್ರಾಸಿನಲ್ಲಿ ಮುನಸೀಫರ ಆಯ್ಕೆಯಾಗಲಿದೆಯೆಂದು ಕೇಳಿದ ಬಳಿಕಂತು ಹಂಬಲಗಳು ಬಲವಂತ—ವಾಗತೊಡಗಿದುವು. ನಿತ್ಯ ಗಂಡನನ್ನು ಆ ಸಲುವಾಗಿ ಕಾಡತೊಡಗಿದಳು. ಸುಬ್ಬಯ್ಯ ಈಗ ವಕೀಲನಾಗಿ ಆರು ವರುಷವಾಯಿತು. ಇನ್ನು ತಾನು 'ಜೂನಿಯರ್'. ತಿಂಗಳಿಗೆ 100—150 ಸಿಗುತ್ತಿದೆ—ಇದಕ್ಕಿಂತ ಹೆಚ್ಚನ್ನು ಈ ಅವಧಿಯಲ್ಲಿ ಗಳಿಸಲು ಬಂದೀತೆ?-ಎಂದು ಅವನಿಗೆ ಇದ್ದುದರಲ್ಲಿ ತೃಪ್ತಿ. ಮುಂದೆ ತನ್ನ ಕಕ್ಷಿಗಳು ಬೆಳೆಯಬಹುದೆಂಬ ವಿಶ್ವಾಸ. ಆದುದರಿಂದ ಊರೂ

ರಿನ ವರ್ಗಾವರ್ಗಿಗೆ ಬಲಿಯಾಗುವ ಮುನಸೀಫಿಕೆಯ ಆತುರ ಅವನಿಗಿಲ್ಲ. ಆದರೆ ಕುಸುಮೆಗೆ ಮುನಸೀಫಗಿರಿಯ ಮೇಲಿರುವ ಅಭಿಮಾನವನ್ನು ತಡೆಯುವವರಾರು? ಮನೆಗೆ ಬಂದ ತಂದೆಯಿಂದ, ವೆಂಕಪ್ಪಣ್ಣನಿಂದ—ಹೇಳಿಸಿ ನೋಡಿದಳು. 'ಎಲ್ಲಿ ಸಿಕ್ಕುತ್ತದೆ ಅಷ್ಟು ಸುಲಭದಲ್ಲಿ' ಎಂದು ಅವನು ಹೂಡಿದ ಅನುಮಾನಕ್ಕೆ "ನಾವು ಅಲ್ಪ ಸಂಖ್ಯಾಕರೆಂದು" ಹೇಳಿದರೆ ಬಲು ಸುಲಭವಾಗಿ ಕೆಲಸವಾದೀತೆಂದು ಯೋಚನೆ ಹೇಳಿದಳು. ಅಲ್ಪ ಸಂಖ್ಯಾಕ ಜಾತಿಯೆಂಬ ಅಪಮಾನದ ನೋವು ಉಳಿದಿರುವಾಗಲೇ ಅದನ್ನು ಲಾಭಕ್ಕೆ ತಿರುಗಿಸಿಕೊಂಡು ಮೇಲೇರುವ ಹಂಬಲ ಬೇರೆ.

ಅಂತು ಪತ್ನಿಯ ಬಲವಂತಕ್ಕಾಗಿ ಅರೆಮನಸ್ಸಿನಿಂದ ಮದ್ರಾಸಿನ ತನಕ ಸುಬ್ಬಯ್ಯ ಯಾತ್ರೆಮಾಡಿ ಬಂದನು. ಅಲ್ಲಿ ಕಾಣಬೇಕಾದವರನ್ನು ಕಂಡನೋ, ಹಳೆಯಗೆಳೆಯರ ಸಂದರ್ಶನಮಾಡಿ ಮರಳಿದನೋ -ಆದರೆ ಯಶಸ್ಸು ಮಾತ್ರ ದೊರೆಯಲಿಲ್ಲ. 'ನೀವು ಮೊದಲೇ, ಬೇಡ —ಬೇಡ ಎಂದು ರಾಗಮಾಡಿ ಕೆಲಸಕ್ಕೆ ಹೊರಟರೆ, ಹೊರಟ ಕೆಲಸ ಕೈಗೂಡುವುದುಂಟೇ?' ಎಂದು ಕುಸುಮೆಯ ಟೀಕೆಗೆ ಗುರಿಯಾಗುವುದಾಯಿತು.

ಈ ಎಲ್ಲ ನಿರಾಶೆಗಳ ಎಡೆಯಲ್ಲಿ ಅವಳ ವಯ್ಯಕ್ತಿಕ ಹೆಮ್ಮೆ ಕುಗ್ಗುವಂತಿರಲಿಲ್ಲ. ತಾನು ಬಲ್ಲವಳು; ಇತರರಿಗಿಂತೇನು ಕಡಮೆ— ಎಂಬ ಉಕ್ಕು ಸಾಯುವಂತಿರಲಿಲ್ಲ. ಒಂದು ದಿನ ಆಕೆ ಶೀಲಕ್ಕನೊಡನೆ ಮಾತನಾಡುವಾಗ ಹೊಸತೇ ಒಂದು ಪಾಯತೆಗೆದಳು; "ಅಕ್ಕ ಯಾಕೆ ನಾವೇ ಒಂದು ಹೊಸ ಕ್ಲಬ್ಬು ತೆರೆಯಬಾರದು? ನಾವಿರುವ ವಟಾರದಲ್ಲಿ ಯಾವ ಕ್ಲಬ್ಬೂ ಇಲ್ಲ. ಕೊಡಿಯಾಲಬೈಲಿನಲ್ಲೇ ತೆರೆಯುವ. 'ಸ್ತ್ರೀ ಸಮಾಜ' ಎಂದು ಹೆಸರಿರಿಸುವ. ಆಚೀಚೆ ಶಾಲೆಗಳ ಹಲವು ಉಪಾಧ್ಯಾಯಿನಿಯರ ಗುರುತು ನನಗಿದೆ. ಅವರಿಗೆ ದೊಡ್ಡವರ ಕ್ಲಬ್ಬಿಗೆ ಹೋಗಲು ಮನಸ್ಸಿಲ್ಲ; ಅನುಕೂಲವೂ ಇಲ್ಲ. ನಾವು ಅದಕ್ಕೆ ಸಮನಾಗುವಂತೆ ತಿಂಗಳಿಗೆ ಬರಿಯ ನಾಲ್ಕಾಣೆಯೋ ಎಂಟಾಣೆಯೋ-ವಂತಿಗೆ ಇರಿಸುವ. ಈಗಂತು ಸ್ವತಂತ್ರ ಜಾಗಮಾಡುವುದಕ್ಕೆ ಹಣವಿಲ್ಲ; ಅಲ್ಲಿಯ ತನಕ ನಮ್ಮ ಮನೆಯ ಉಪ್ಪರಿಗೆಯಿಂದೆಯಲ್ಲ,"—ಎಂದು

ಪೀಠಿಕೆ ಹಾಕಿದಳು. ಶೀಲಕ್ಕ ದೊಡ್ಡ ಉಸಿರು ಬಿಡುತ್ತ "ಹೂಂ-ನಮಗೆ ಕ್ಲಬ್ಬುವಾಡಿ ಆಗಬೇಕೇನು? ಮನೆಯಲ್ಲಿ ನನಗಂತು ಹೊತ್ತು ಹೋಗುತ್ತದೆ. ಆರು ಮಕ್ಕಳನ್ನು ಕಟ್ಟಿಕೊಂಡು ಸಂಸಾರ ಮಾಡುವಾಗ ಗಳಿಗೆ ಹೇಗೆ ಹೋಗುತ್ತದೆಂದೇ ತಿಳಿಯುವುದಿಲ್ಲ"—ಎಂದಳು.

"ಹೋಗಲಿ—ಕ್ಲಬ್ಬು ನಾವು ಮಾಡಿದರೆ ಸೇರದೆ ಇರಲಿಕ್ಕಿಲ್ಲವಲ್ಲ. ಅವರೆಲ್ಲ ಜರಿ ಸೀರೆಯ ಅಬ್ಬರದಿಂದ ನಮ್ಮನ್ನು ಅಷ್ಟು ಮೂದಲಿಸುವಾಗ, ಅದಕ್ಕೆ ಜವಾಬುಕೊಡದೆ ಸುಮ್ಮನೆ ಇರುವುದೇ? ಅಷ್ಟು ಕೈಲಾಗದವರೇ ನಾವು."

"ನನಗೇನು ಕುಸುಮ. ಅಲ್ಲಿ ಮೆಂಬರಳಾದಂತೆ ಇಲ್ಲೂ ಆದರಾಯಿತು. ನಿಮ್ಮ ಮನೆಯೇನು ದೂರವಲ್ಲ. ಮನೆಯಲ್ಲಿ ಅಳುವ ಮಕ್ಕಳನ್ನು ಕ್ಲಬ್ಬಿಗೆ ತಂದು ಕೂಗಿಸಿದರಾಯಿತು."

"ಇಲ್ಲ; ನಮ್ಮ ಕ್ಲಬ್ಬಿನಲ್ಲಿ ಮಕ್ಕಳನ್ನು ಆಡಿಸಿಕೊಂಡಿರುವುದಕ್ಕೇನೆ ಒಂದು ಎಕಸ್ಟ್ರಾ ಪ್ಯೂನ್—ನೇಮಿಸಬೇಕು. ಬಾಡಿಗೆಗೆ ಕೊಡುವ ಹಣ ಅವಳ ಸಂಬಳಕ್ಕಾಗಲಿ. ಕ್ಲಬ್ಬಿರುವುದೇ ಯೋಚನೆ ಬಿಟ್ಟಿರುವುದಕ್ಕೆ; ಮಕ್ಕಳ ಗೋಳು ನೆನೆಯುವುದಕ್ಕಲ್ಲ. ಈಗ ನಮ್ಮಗಂಡುಸರು ಕ್ಲಬ್ಬಿಗೆ ಹೋಗುತ್ತಾರೆ. ಊರಲ್ಲಿ ಭೂಕಂಪವಾದರೂ, ಇಸ್ಪೀಟು ಪಿಡಿ ಕೆಳಗಿರಿಸಲಿಕ್ಕಿಲ್ಲ. ಅವರ ಹಾಗೆ ರಾತ್ರಿ ಎಂಟು ಹತ್ತು ಘಂಟೆಮಾಡಿ ಮನೆಗೆ ಬರಬೇಕಿಲ್ಲವಾದರೂ, ಅಲ್ಲಿ ಇರುವಷ್ಟು ಸಮಯ ನಿಶ್ಚಿಂತೆಯಿಂದ ಇರಬೇಡವೆ?"

"ನೀನು ಏನೆಲ್ಲ ಮಾಡಿಸುತ್ತಿಯೋ ಮಾಡಿಸು. ನಾನು ಹಿಂದಿನಿಂದ 'ಹೂಂ' ಅನ್ನಲಿಕ್ಕೆ ಇದ್ದೇನೆ. ಆದಕ್ಕಾ ಹೆಚ್ಚಿಗೆ ನನ್ನ ಕೈಯಲ್ಲಾಗುತ್ತದೆಯೇ? ನಾಲ್ಕು ಮಕ್ಕಳಾದ ಮೇಲೆ ನಿನಗೂ ಬೇಸರಬಂದೀತು. ಆದರೆ ಈಗಲೇ ಏಕೆ ಆ ಯೋಚನೆ. ನಡೆವಷ್ಟು ದಿವಸ ನಡೆಯಲಿ."

'ನಾನು ಒಮ್ಮೆ ಕ್ಲಬ್ಬಿನ ಕೆಲಸಕ್ಕೆ ಕೈಹಾಕಿದರೆ—ಒಂದಲ್ಲ ನೂರು ಮಕ್ಕಳಾದರೂ ಬಿಡಲಿಕ್ಕಿಲ್ಲ.'

ಶೀಲ ನಕ್ಕಳು. "ಯಾತಕ್ಕೂ ಮಕ್ಕಳಾಗಲಿ, ಆಗಿನ ಚಿಂತೆ ಈಗೇಕೆ" ಎಂದು ವಿಷಯ ಮುಂದುವರಿಸಿದಳು. ಏನು ಪತ್ರಿಕೆ ತರಿಸಬೇಕು, ಏನು ಆಟಗಳ ಏರ್ಪಾಟು ಮಾಡಬೇಕು, ಕೊನೆಗೆ ತೊಡ

ಹಾದವರ ಪ್ರೋತ್ಸಾಹದಿಂದ ಬರಬೇಕಾದರೆ ಕನಿಷ್ಠ ಎಷ್ಟು ಜನ ಸದಸ್ಯೆಯರನ್ನು ಸೇರಿಸಬೇಕು — ಎಂಬ ವಿಚಾರಗಳನ್ನು ವಿಮರ್ಶಿಸಿದರು.

ಕೃಷ್ಣನ ಕನಸೇ, ಕುಸುಮೆಯ ಬೆನ್ನುಹತ್ತಿದ ಬೇತಾಳವಾಯಿತು. ಒಂದು ಕರಪತ್ರ ಹೊರಡಿಸಿದಳು. ಕುಸುಮಾವತಿ ದೇವಿ—ಎಂದು ಸಹಿ ಮಾಡಿದಳು. ಬೆಂಬಲಕ್ಕೆ ಶೀಲವತಿಯ ಹೆಸರನ್ನು ಬಳಸಿಕೊಂಡಳು. ತನ್ನ ಪಟಾಲದ ಗೆಳತಿಯರನ್ನು, ಪರಿಚಿತರನ್ನು ಮನೆಮನೆಗೆ ಹೋಗಿ ಸಂದರ್ಶಿಸಿ, ಪರ್ದಾ ಲೀಗಿನ ಸಭೆಗೆ ಆಮಂತ್ರಣ ಕೊಟ್ಟಳು. ಬಲು ಎಚ್ಚರದಿಂದ, ಕಾವಿರುವ ಮನೆಗಳನ್ನು, ವಜ್ರದ ಕಟುಕಿನ ಮಹಿಳೆಯರನ್ನು ದೂರವಿರಿಸಿದಳು. ಬಡವರಿಗೂ ಬದುಕಲು ಅವಕಾಶವಿದೆ ಯೆಂಬ ಹೊಸ ಆಸೆಯನ್ನು, ಅನೇಕ ಗೆಳತಿಯರ ಮನಸ್ಸಿನಲ್ಲಿ ಪ್ರೇರಿಸಿ ಉತ್ಸಾಹ ಹುಟ್ಟಿಸಿದಳು.

ಮೊದಲ ಸಭೆಯು ಅವರ ಮನೆಯ ಮಹಡಿಯಲ್ಲಾಯಿತು. ಬಂದ ಮಹಿಳೆಯರೆಲ್ಲರೂ ಏಕಕಂಠದಿಂದ ಮಾತನಾಡಿದರು. ಅವಕಾಶ ದೊರೆತರೆ ಬಡವರೂ ಮುಕ್ತಕಂಠಗಳಿಂದ ಉಪನ್ಯಾಸ ಮಾಡಬಲ್ಲರೆಂದು ತೋರಿದರು. ಜತೆಗೆ ಅವರು ಕರೆತಂದ ಮಕ್ಕಳ ಆರ್ಕೆಸ್ಟ್ರಾ ಬಂದ ಸ್ವಲ್ಪವೂ, ಯಾರಿಗೂ ತೊಂದರೆಯಾಗಲಿಲ್ಲ. ಕೃಷ್ಣನ ಸ್ಥಾಪನೆ ಯಾಯಿತು. ಯೋಗ್ಯಸ್ಥಳ ದೊರೆಯುವ ತನಕ ಕುಸುಮೆಯ ಮನೆಯ ಮಹಡಿಯೇ ಅದರ ನಿವೇಶ. 'ಯೋಗ್ಯಸ್ಥಳ' ಎಂದರೆ 'ಸ್ವಂತ ಕಟ್ಟಡ' ಎಂದು ಆದಿನವೇ ಕುಸುಮಾವತಿ ದೇವಿಯವರು ಅಪ್ಪಣೆ ಕೊಡಿಸಿದರು. ಆ ವರ್ಷದ ಅವಧಿಗೆ ಸ್ಥಾಪಕರಾದ ಸು'ಶೀಲವತಿ'ಯು ಅಧ್ಯಕ್ಷೆ! ಕುಸುಮಾವತಿಯು ಕಾರ್ಯದರ್ಶಿನಿಯಾದಳು. ಅಧ್ಯಕ್ಷೆಯು "ನಾನು ಹೇಳಿದ್ದಕ್ಕೆ ಸಹಿ ಹಾಕುವುದು ಮಾತ್ರ; ಕೆಲಸಕ್ಕೆಲ್ಲಾ ನೀನೇ" ಎಂದು ಕುಸುಮೆಯನ್ನು ತೋರಿಸಿ ಹೊಗಳಿದಳು.

ಹಿಂದಣಬಾರಿ ವನಿತಾಲಯವನ್ನು ಕುರಿತು ಟೀಕೆ ಮಾಡಿದ "ವಾರ್ತಾದುಂದುಭಿಯು ಈ ಬಾರಿ ಹೊಸ ಸಮಾಜದ ಜನ್ಮದ ಒಸಗೆಯನ್ನು ಜಗತ್ತಿಗೆ ಬೀರಿತು. ಅದರ ತರುಣೋಗ್ರ ಸಂಪಾದಕರಾದ ಭಾಸ್ಕರರಾಯರು ಸದಾ ಉತ್ಸಾಹಿ. ಮೇಲೆ, ಬೆಕ್ಕನ್ನು ಬೆಟ್ಟವಾಗಿಯೂ, ಬೆಟ್ಟವನ್ನು ಬೆಕ್ಕಾಗಿಯೂ ಮಾಡಬಲ್ಲ ಚತುರ. ಕುಸುಮೆಯ ದೂರದ

ಪರಿಚಯವನ್ನು ಹತ್ತಿರದ ಪರಿಚಯವಾಗಿ ಮಾಡಿಕೊಂಡು, ಮಹಿಳೆಯ ಪ್ರಪಂಚದ ಕಸರು ಕೆಸರುಗಳನ್ನು ದೊರಕಿಸಿಕೊಳ್ಳಲು ಅವಕಾಶ ಮಾಡಿಕೊಂಡನು. ಜತೆಗೆ ಮಹಿಳೆಯರಿಗೆ ವಿಶೇಷ ಪ್ರೋತ್ಸಾಹ ಸಲಿಸುವಂತೆ ತನ್ನ 'ದುಂದುಭಿ'ಯಲ್ಲಿ ಒಂದು ಪುಟವನ್ನೇ "ಸ್ತ್ರೀಯರ ಚಟುವಟಿಕೆ"ಗಾಗಿ ಮೀಸಲಾಗಿರಿಸಿದ. ಅದರಲ್ಲಿ ಪ್ರತಿವಾರವು ಹೊಸದಾಗಿ ಹುಟ್ಟಿದ ಸ್ತ್ರೀ ಸಮಾಜದ ಪ್ರಶಂಸೆಯೂ 'ಹಳೆಯ ಮುದುಕಿ ವನಿತಾಲಯ'ದ ಅವಹೇಳನವೂ ಬರತೊಡಗಿತು.. ಆತ ತನ್ನ ಅಗತ್ಯದ ತೊಂದರೆಗಳಿಗೆ ಐದು, ಹತ್ತು ರೂಪಾಯಿಗಳನ್ನು ಎಂದೂ ತೀರಿಸದ ಎರವಾಗಿ ಕೊಡುತ್ತಿದ್ದ ಕುಸುಮೆಗೆ, ಸಮಾಜ ಸೇವಾ ವಿಷಯಗಳಲ್ಲಿ ಉಪದೇಶಕನಾದ. ಅವನ ಸೂಚನೆಯಿಂದಲೇ, ಅವರ ಮನೆಯ ಅಂಗಣದಲ್ಲಿ "ಮಕ್ಕಳ ಮೂಲೆ"ಯೆಂಬುದು ತೊಡಗಿತು. ವಾರ ವಾರ ಆರೋಗ್ಯ ಸಂದರ್ಶನಗಳ ಏರ್ಪಾಡಾಯಿತು. ಅಂತು ಪತ್ರಿಕೆಯ ಪುಟ ತುಂಬಿಸಲು ತುಂಬ ಆಹಾರ ಸಿದ್ಧವಾಯಿತು. ಪ್ರತಿಬಾರಿಯೂ ಶ್ರೀಮತಿ ಕುಸುಮಾ ದೇವಿಯವರ ಆದರ್ಶ ಸಮಾಜ ಸೇವೆಯನ್ನು ಕುರಿತು ಪ್ರಶಂಸೆ ಬರುತ್ತಲೇ ಇತ್ತು. ಆ ಪತ್ರಿಕೆಯ ಮಿತ ಸಂಚಾರವಲ್ಲದಿದ್ದರೆ, ಕುಸುಮೆಯ ಕೀರ್ತಿ ಆರು ತಿಂಗಳಲ್ಲೇ ದಿಗಂತ ವಿಶ್ರಾಂತವಾಗುತಿತ್ತು.

ಉಳಿದೇನು ಕೆಲಸ ಅದರಿಂದ ಆಗದೆ ಹೋದರೂ ವಾರ್ತಾ ಪತ್ರಿಕೆಯಿಂದ ಮಾಲತಿ ರಾಮಚಂದ್ರಳ ದ್ವೇಷ ಅಸೂಯೆಗಳು ಇಮ್ಮಡಿಯಾದುದು ನಿಜ. ಆಕೆ ಸಾಹಸಮಾಡಿ ಇನ್ನೊಂದು ವಾರಪತ್ರಿಕೆಯಾದ "ಸಮಾಚಾರ"ದಲ್ಲಿ ತನ್ನ ಭಾವಚಿತ್ರ ಸಹಿತವಾದ ಜೀವನ ವೃತ್ತ ಬರೆಯಿಸಿಕೊಂಡಳು. ಅದರ ಪ್ರತಿಯಾಗಿ 'ದುಂದುಭಿಯ' ದೀಪಾವಳಿ ಅಂಕದಲ್ಲೇ ಕುಸುಮಾವತಿ ದೇವಿಯ ಪೂರ್ಣ ಚಿತ್ರ ಪ್ರಕಟವಾಯಿತು. ಬ್ಲಾಕು, ಕಾಗದಗಳ ವೆಚ್ಚವನ್ನು ಕೃತಜ್ಞತೆಯಿಂದ ಆಕೆಯೇ ವಹಿಸಿದಳಂತೆ, ಅದರಿಂದ ಮಹಿಳಾ ಜಗತ್ತಿನಲ್ಲಿ ಉಂಟಾದ ಕ್ರಾಂತಿ ಸಾಮಾನ್ಯವೇ? ಆ ಚಿತ್ರದಲ್ಲಿ ಕಾಣಿಸಿದ ಸೀರೆಯ ಅಂಚು ಸೆರಗುಗಳನ್ನು ಕುರಿತು 'ಇದು ಯಾವ ಲೇಟೆಸ್ಟ್ ಪೆಟರ್ನ್'ಎಂದು ಚರ್ಚಿಸಿದವರೂ ಉಂಟು.

ವನಿತಾಲಯದ ಸದಸ್ಯೆಯರು ಸಾಮಾನ್ಯವಾಗಿ ಶ್ರೀಮಂತರು.

ಮೋಟರುಗಳಲ್ಲಿ ಸಂಚರಿಸುವವರು. ಅವರು ಸಭೆಗೆ ಬರುವುದೆಂದರೆ ಆಗಾಗ ನಡೆಯುತ್ತಿರುವ ಉಪಾಹಾರ, ಸತ್ಕಾರ, ವಿದಾಯಕೂಟಗಳಿಗೆ. ಅವು ತಿಂಗಳಿಗೆ ಮೂರು ನಾಲ್ಕಾದರೂ ಇರುತ್ತಿದ್ದವು. ಆದರೆ ಪ್ರತಿ ದ್ವಂದಿಯಾದ ಸ್ತ್ರೀ ಸಮಾಜವು ಅವುಗಳಿಗೆ ಹೆಸರಾಗಿರಲಿಲ್ಲ. ಅದು ಚಟುವಟಿಕೆಗಳ ತವರು ಮನೆಯಾಗಿತ್ತು. ಹುಟ್ಟಿದ ವರ್ಷದೊಳಗಾಗಿಯೇ ಅದು ಮಕ್ಕಳ ಮೂಲೆ ತೆರೆಯಿತು. ಚಟುವಟಿಕೆ ವಿಸ್ತರಿಸಿದುದರಿಂದ, ಬೇರೆಯೇ ಬಾಡಿಗೆ ಮನೆಕೊಂಡಿತು; ವಾಚನಾಲಯ ಪುಸ್ತಕಾಲಯಗಳಂತು ಇದ್ದೇ ಇವೆಯಲ್ಲ. ಮೇಲೆ ಸಂಗೀತದ ತರಗತಿ, ಅಡುಗೆ ತರಗತಿ, ಹೊಲಿಗೆ ತರಗತಿಗಳು ಎದ್ದವು. ಅವಕ್ಕೆ ಕಿರೀಟಪ್ರಾಯವಾಗಿ-ಎಂಬಂತೆ ಹಿಂದೀ ತರಗತಿಯು ಸೇರಿಕೊಂಡಿತು. ಇವು ಒಂದೊಂದಕ್ಕೂ ಒಂದೊಂದು ಬೋರ್ಡು ತೂಗಿ, ಕ್ಲಬ್ಬಿನ ವರಾಂಡವೆಲ್ಲ ಬೋರ್ಡುಗಳಿಂದಲೇ ಮರೆಯಾಗಿತ್ತು. ಇವೆಲ್ಲಕ್ಕೂ ಬೇರೆ ಬೇರೆ ಉತ್ಸವದ ದಿನಗಳಿರುತ್ತಿದ್ದವು. ಇದರಿಂದ ಕುಸುಮೆಯ ಕೀರ್ತಿಯೂ ಹೆಚ್ಚಿತು; ಕೆಲಸವೂ ಹೆಚ್ಚಿತು.

ಇವೆಲ್ಲವುಗಳು ತುಂಬಿ ಇರುತ್ತಿದ್ದ ಹರ್ಷದ ಜತೆಗೆ ಬೇಸರದ ಸಂಗತಿಯೇ ಇಲ್ಲವೆಂದು ತಿಳಿಯಬಾರದು. ಆ ದಿನ ಸಿನೆಮಾದಲ್ಲಿ, ಬಳಿಗೆ ಕುಳಿತವಳು 'ನಿಮಗಿನ್ನೂ ಮಕ್ಕಳಾಗಿಲ್ಲವೇ, ಪ್ರಾಯವೆಷ್ಟು, ಈ ಮಗು ನಿಮ್ಮದಲ್ಲವೇ' -- ಎಂದು ಕೆಣಕಿದ ವಿಷಯವೇ ಇಂದೂ ಅವಳನ್ನು ಕೊರೆಯುತ್ತಿದೆ. ಅವರ ಸಮಾಜಕ್ಕೆ ಬರುವ ಸದಸ್ಯೆಯರಲ್ಲಿ ಹಲವರು ತಮ್ಮ ಮಕ್ಕಳನ್ನು ಕರೆದುಕೊಂಡು ಬರುತ್ತಾರೆ. ಮಕ್ಕಳ ಮೂಲೆಯನ್ನು ಏರ್ಪಡಿಸಿ, ಅವಕ್ಕೆ ಆಟದ ಒಡವೆಗಳನ್ನು ಒದಗಿಸಿದ ಬಳಿಕಂತೂ ಎರವಾಗಿ ತರುವ ಮಕ್ಕಳೂ ಬರುತ್ತಾರೆ. ಬಂದವರು ತಮ್ಮ ಕೂಸುಗಳ ವಿಷಯ ಹೊಗಳಿಯೇ ಹೊಗಳುತ್ತಾರೆ. 'ಅವುಗಳ ತಂಟೆಯಾರು ಸಹಿಸುವವರು' ಎಂದರೂ, ಹೆಮ್ಮೆಯ ನುಡಿಗಳೇ ಅಧಿಕ. ಒಮ್ಮೊಮ್ಮೆ ಹೊಸ ಸದಸ್ಯರು--'ನೀವೇನು ನಿಮ್ಮ ಮನೆಯ ಮಕ್ಕಳನ್ನು ಕರೆದು ತರುವುದಿಲ್ಲ' ಎಂದು ಇತರರ ಕೂಸುಗಳಿಂದ ದೂರವಿರುತ್ತಿದ್ದ ಕುಸುಮೆಯನ್ನು ಕೇಳುತ್ತಿರುತ್ತಾರೆ. ಈಗೀಗ ಅವಳಿಗೆ ಪರರ ಮಕ್ಕಳೆಂದರೆ ಕರಕರೆಯುಂಟಾಗುತ್ತದೆ. ಅವುಗಳ ಆಟದ ಮೂಲೆಯನ್ನು

ಬಿಟ್ಟು ಹಿರಿಯರು ಓದುವಲ್ಲಿಗೆ ಆಟವಾಡುವಲ್ಲಿಗೆ ಬಂದು 'ಪಿರಿಪಿರಿ' ಮಾಡಿದರೆ, ಅವಳು ಮುಖವನ್ನು ಉದ್ದಮಾಡುತ್ತಾಳೆ.

ಮಕ್ಕಳೆಂಬುದು ಅವಳ ಮನಸ್ಸಿನ ಸಮಸ್ಯೆಯಾಗಿರುವಾಗಲೇ, ಒಂದುದಿನ ಅವರ ಮನೆಗೆ ಒಬ್ಬ ಬಾಯಿಬಡಕ ಸಾಮುದ್ರಿಕ ಬಂದಿದ್ದ. ಬಂದವನೇ ಕುಸುಮೆಯ ಮುಖನೋಡಿ--"ಈ ತಿಂಗಳಲ್ಲಿ ನಿಮಗೆ ೨೪ ವರ್ಷ ತುಂಬುತ್ತದೆಯಲ್ಲವೇ" ಎಂದ. ಬಳಿಯಲ್ಲಿ ಮಗಳ ಮನೆಗೆ ಬಂದಿದ್ದ ನಾಗಕ್ಕನೂ ಇದ್ದಳು. ಅವಳ ಪಾಲಿಗೆ ಅಂಥ ಅದ್ಭುತ ಸತ್ಯ ಹೇಳುವುದು ಸಾಧ್ಯವೇ--ಅನಿಸಿತು. "ಹೌದು-ಅವಳು ಇದೇ 'ಧನು' ವಿಗೆ ಹುಟ್ಟಿದವಳು" — ಎಂದು ಅಚ್ಚರಿಗೊಂಡಳು. 'ಬನ್ನಿ' ಕುಳಿತಿರಿ- ಎಂದು ತಾವು ಕೊಟ್ಟು, ಮಗಳ ಅಂಗೈ ತೋರಿಸಿ ಅವಲಕ್ಷಣ ಕೇಳಲು ಉತ್ಸುಕಳಾದಳು. ಆಚೀಚೆ ಮನೆಗಳಲ್ಲಿ ಇವಳ ವಿಷಯ ಕೇಳಿ ತಿಳಿದ ಆತ, ಸಾಕಷ್ಟು ಸತ್ಯವನ್ನು ಹೇಳಿದ. ಮಕ್ಕಳ ವಿಚಾರ ಬಂದಿತು, ಗಂಡನ ವಿಚಾರ ಬಂದಿತು. "ಅಮ್ಮ ನಿಮಗೆ ಆರು ಮಕ್ಕಳ ಯೋಗವಿದೆ. ನಿಮ್ಮ ಗಂಡನ ಅದೃಷ್ಟ ಅಷ್ಟು ಚೆನ್ನಾಗಿಲ್ಲ--ಆದುದರಿಂದ...... ಎಂದು ಅನುಮಾನಿಸಿ ಅಂತು ಮೂರು ಮಕ್ಕಳು ನಿಜ. ಒಳ್ಳೆ ಕೀರ್ತಿ ತರುತ್ತಾರೆ' ಎಂದ. ಗಂಡನ ವಿಷಯವಾಗಿ "ಇದ್ದಾರೆ. . . .ಚೆನ್ನಾಗಿದ್ದಾರೆ. ಆದರೆ ನಿಮ್ಮ ಯೋಗ್ಯತೆಗೆ ತಕ್ಕವರೆನ್ನಲು ಬರುವುದಿಲ್ಲ. ಅವರಿಗೆ ನಿಮ್ಮಲ್ಲಿ ಒಲ ಕಡಿಮೆ. ಆದರೆ ಯೋಗ್ಯ ಪರಿಹಾರ ಮಾಡುವ"ಎಂದು ಭರವಸೆಯಿತ್ತನು. ಕೈನೋಡಿದುದಕ್ಕೆ ಎಂಟಾಣೆ ಸರಿಯಿತು, ಪರಿಹಾರಕ್ಕೆರೂಪಾಯಿ ಹೋಯಿತು;ಮೇಲೆ ಸುಬ್ಬಯ್ಯನ ವರುಷವೂ ಕಳೆಯದ ಕೋಟೊಂದು ದಾನವಾಯಿತು.

ಅದೇ ಕೋಟನ್ನು ಅವನು ಧರಿಸಿ ಹಾದಿಯಲ್ಲಿ ಚಲಿಸುವಾಗ ಸುಬ್ಬಯ್ಯನ ಗಮನಕ್ಕೆ ಬಂದುದು, ಮನೆಗೆ ಬಂದು ಅವನದನ್ನು ಅರಸಿ ಕಾಣದೆ, ಏನಾಯಿತೆಂದು ಕೇಳಿದುದು ಆ ದಿನದ ಪ್ರಕರಣಗಳು. ಕೊನೆಗೆ ಸಂಗತಿ ತಿಳಿದು-"ಹೂಂ, ಒಂದಿಷ್ಟು ಹೊಗಳಿರಬೇಕೆಂದು ಕಾಣುತ್ತದೆ." ಎಂದು ನಕ್ಕು ಸುಮ್ಮಗಾದ.

ಸಂತಾನಯೋಗದ ಚರ್ಚೆಯಾಯಿತು;'ಹೌದು, ಯಾರಾದರೂ ಮದ್ರಾಸಿನ ತಜ್ಞರಿಗೆ ತೋರಿಸಬಹುದು. ನಿನ್ನ ಮುಟ್ಟಿನದೋಷಕ್ಕೂ

ಆಯಿತು, ಗರ್ಭಕೋಶದ ತೊಡಕಿದೆಯೋ ಎಂದು ತಿಳಿದ ಹಾಗೂ ಆಯಿತು"—ಎಂದು ಸುಬ್ಬಯ್ಯ ನುಡಿದು ಅತ್ತೆಯ ಎದುರಿಗೆ ಮಂಗಳಾರತಿ ಮಾಡಿಸಿಕೊಂಡ. "ನಿಮಗೇನೆ--ಸಂತಾನದ ಯೋಗ ಕಡಿಮೆಯೆಂದು ಅವನು ಹೇಳಿದುದು. ನನಗೆ ಆರು ಮಕ್ಕಳ ಯೋಗವಿದೆಯಂತೆ. ಮೂರಕ್ಕಂತು ಮೋಸವೇ ಇಲ್ಲ. ಇವೇ ಮೂರು ಗೆರೆಗಳು ಬಲವಾಗಿವೆ" ಎಂದು ತೋರಿಸಿದ್ದಾನೆ, ಎಂದು ಗಂಡನನ್ನು ಆರ್ಭಟಿಸಿ ಇದಿರಿಸಿದಳು. ಅದರಿಂದ ಸುಬ್ಬಯ್ಯ 'ಇಲ್ಲ ಹಾಗಾದರೆ, ನಾನೇ ಡಾಕ್ಟರರಿಂದ ಮದ್ದು ಮಾಡಿಸುತ್ತೇನೆ" ಎಂದು ಪ್ರತಿವಾದ ಹೂಡಿ, ವಿಷಯವನ್ನೇ ಬೇರೆ ಊರಿಗೆ ಸಾಗಿಸಿ ಪಾರಾದನು.

ಆದರೆ ಕುಸುಮೆಗೆ ವಾಗ್ಯುದ್ಧದಲ್ಲಿ ಗಂಡನನ್ನು ಗೆಲ್ಲುವ ಆಸೆ ಮುಖ್ಯವಾಗಿತ್ತು. "ನೀವು ಮಾತನ್ನು ಅಡ್ಡ ತಿರುಗಿಸುವುದು ಬೇಡ. ಏನು-ನನಗೆ ಮಕ್ಕಳ ಯೋಗವಿಲ್ಲ ಎನ್ನುತ್ತೀರಾ? ಅಲ್ಲ ನಮಗೆ ಮಕ್ಕಳೇ ಬೇಡ ಅನ್ನುತ್ತೀರಾ" ಎಂದು ಎದುರಾಡಿದಳು.

"ಮಹರಾಯತಿ, ಮಕ್ಕಳು ಆದರೆ ಯಾರಾದರೂ ಬೇಡವೆನ್ನುತ್ತಾರೆಯೇ? ಮಕ್ಕಳು ಎಲ್ಲರಿಗೂ ಬೇಕೇ. ವೆಂಕಪ್ಪಣ್ಣನ ಹಾಗೆ-ಆರು ಎಂಟು-ಎಂದರೆ ಮಾತ್ರ ದಿಗಿಲು ಹಾರುತ್ತದೆ; ನಾಳೆ ಸಾಕಬೇಡವೇ ಅವುಗಳನ್ನು. ಶೀಲಕ್ಕನ ಸಂಸಾರ ನೋಡಬಾರದೇ--ಎರಡು ವರ್ಷಕ್ಕೊಂದು ಹೆರಿಗೆ ತಪ್ಪದು. ಆ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ —ಅವಳು ಸೋತು ಸುಣ್ಣ"

"ಅಂತಹ ಕಾಲಕ್ಕೆ, ಕೆಲಸಕ್ಕೆ ಆಳನ್ನೂ ಬೇರೆ ಮಾಡಿದರಾಯಿತು. ನಾನು ಆರು ಮಕ್ಕಳ ಯೋಗವಿದೆಯೆಂದುದಕ್ಕೆ ಈ ಹೆದರಿಕೆಯೇ?"

"ನಿನ್ನ ವಿಷಯವಲ್ಲ ನಾನೆಂದುದು; ನಿನಗೆ ಆರೇ ಆಗಲಿ"

"ನಿನಗೆ ಆರೇ ಆಗಲಿ" ಎಂದರೆ?

"ಇಲ್ಲ ತಪ್ಪಿದೆ; ನಮಗೆ. ಆರುತಪ್ಪಿ ಹನ್ನೆರಡು ಆಗುವವರ ಗತಿಯನ್ನು ಯೋಚಿಸು. ನಾಳೆ ಅವರನ್ನು ದೊಡ್ಡದು ಮಾಡಿ ಶಾಲೆ ಕಾಲೇಜುಗಳಿಗೆ ಕಳುಹಿಸುವಾಗ ಎಷ್ಟು ಬೇಕು ಖರ್ಚಿಗೆ-?"

"ಹೋ-ನೀವು ಕಾಸು ಎಣಿಕೆ ಹಾಕುವವರು. ಹೌದು, ದುಡ್ಡಿನ ಆಸೆ ಹಿಡಿದವರಿಗೆ, ಒಂದು ಮಗುವಾದರೂ ಹೆಚ್ಚೇ! ಅದು ಹುಟ್ಟಿದರೂ

ಉಡುವ, ಉಣಿಸುವ ಮಗುವಾಗಿರಬಾರದು. ಅದಕ್ಕೊಂದು ಸೆಲು ಲಾಯಿಡು ಗೊಂಬೆ ತಂದು ಸಿಂಗರಿಸಿ ಇಡಬಹುದಲ್ಲ."

ಸುಬ್ಬಯ್ಯ ಹೆಂಡತಿಯ ಚಮತ್ಕಾರದ ಮಾತಿಗೆ ನಕ್ಕ. ಅವನು ಬಹಿರಂಗದ ಅಸಮಾಧಾನ ತೋರಿಸುವುದು ಕಡಮೆ. ಆದರೂ "ಸೆಲು ಲಾಯಿಡು ಗೊಂಬೆ ಈಗಿನ ಮನೆಗಳಲ್ಲಿ ಕಡಮೆಯಿರುತ್ತವೆಯೇ" ಎಂದು ನುಡಿದು ತನ್ನ ಕೆಲಸಕ್ಕೆ ಹೊರಟುಹೋದ.

ತಾಯಿಯೊಡನೆ ಕುಸುಮೆ "ನಾನು ಚಂದವಾಗಿ ಸೀರೆ ಉಟ್ಟು ಗೊಂಬೆಯಂತೆ ಕುಳಿತಿರುತ್ತೇನೆ ಎಂದು ಅವರು ಹಂಗಿಸುವುದು" ಎಂದು ದೂರಿಟ್ಟಳು. ಅಷ್ಟೆಲ್ಲ ಸೂಕ್ಷ್ಮ, ನಾಗಕ್ಕನ ಹಳ್ಳಿಯ ಬುದ್ಧಿಗೆ ಬಂದೀತೆ? "ಹೋಗಲಿ, ಬಿಡೆ, ಅವರು ಅಂದರೇನು ಮಹಾ! ಅಷ್ಟು ಅಂದರೂ ಮನೆಗೆ ತರುವುದೇನು ಕಡಮೆ ಮಾಡುತ್ತಾರೆಯೇ" — ಎಂದು ಸಮಾಧಾನ ಹೇಳಿದಳು.

ಕುಸುಮೆಯ ಹಲವು ಗೆಳತಿಯರ ಮನಸ್ಸಿನಲ್ಲಿಯೂ, ಕುಸುಮೆ ಡಾಕ್ಟರರನ್ನು ಕೇಳುವುದು ಒಳಿತೆಂದೇ ಇತ್ತು. ಆದರೆ ಹೇಳುವ ಸಾಹಸ ಯಾರಿಗೆ ಬರಬೇಕು? ಮಾತಿಗೆ ಕುಳಿತರೆ, ಅವಳದ್ದೆ ಮುಕ್ಕಾಲುಮೂರು ವೀಸ ನಡೆಯಬೇಕು. ಶೀಲಕ್ಕನಿಗೂ ಹಾಗನಿಸಿತ್ತು. ಅವಳು ವಿಷಯವನ್ನು ಗಂಡನ ಮೂಲಕ, ಸುಬ್ಬಯ್ಯನ ಕಿವಿಗೆ ಸೂಚನೆಯಾಗಿ ಹಾಕಿಸಿದಳು. ಅದರ ಪರಿಣಾಮವನ್ನು ತಿಳಿದಾಯಿತಲ್ಲ.

ಇದರಿಂದ ಸುಬ್ಬಯ್ಯ 'ಯಾವುದಾದರೂ ನೆಪದಿಂದ ಒಮ್ಮೆ ಮದ್ರಾಸಿನ ತನಕ ಸರ್ಕೀಟು ಮಾಡಿಬರುವ. ಇಲ್ಲಿ ಅದರ ಪ್ರಸ್ತಾಪವೇ ಬೇಡ' ಎಂದು ತೀರ್ಮಾನಿಸಿ ಮೇ ತಿಂಗಳ ರಜೆಯನ್ನು ಕಾಯುತ್ತಿದ್ದ. ಕುಸುಮೆ ಮಂಗಳೂರನ್ನು ಬಿಟ್ಟು ಅಲೆದವಳಲ್ಲ. 'ಮದ್ರಾಸು' ಎಂದರೆ ಜತೆಗೆ 'ಊಟಿ' ಸೇರಿಸಿದಳು. 'ಹೋಗುವಾಗ ಊಟಿ, ಮದ್ರಾಸು ಮಾಡಿಕೊಂಡು ಬರುವಾಗ ಬೆಂಗಳೂರು--ಮೈಸೂರೆ'ಂದು ಗೊತ್ತಾಯಿತು. ಸುಬ್ಬಯ್ಯ "ಇನ್ನೂ ಹತ್ತೂರು ತಿರುಗಾಡಿ ಬರಬಹುದು. ಆದರೆ ನಿನಗೆ ನಿನ್ನ ಸ್ತ್ರೀ ಸಮಾಜದ ಕೆಲಸದಿಂದ ಬಿಡುವಾಗ ಬೇಕಲ್ಲ. ಹೋದ ಮೇಲೆ ಒಂದೊಂದು ಊರಿನಲ್ಲಿ ನಾಲ್ಕು ನಾಲ್ಕು ದಿವಸವಾದರೂ ಇರಬೇಡವೆ" — ಎಂದನು. "ನೀವು ಹಣದ ಆಸೆ ಬಿಟ್ಟು ನನ್ನನ್ನು

ಕರೆದುಕೊಂಡು ಹೋಗುವಾಗ ನಾನು ಕೆಲಸದ ಯೋಚನೆ ಬಿಟ್ಟು ಬರ ಬಾರದೇ?" ಎಂದು ಉತ್ತರ ಕೊಟ್ಟಳು.

ಈಸ್ಟರ್ ಉಪಯಿಸುತ್ತಲೇ ಕುಸುಮೆಯ ಮನಸ್ಸು ಮದ್ರಾಸಿ ನಿಂದ ಮುಂಡೂರಿಗೆ ತಿರುಗಬೇಕೆ? ಅದನ್ನು ಗಂಡನೊಡನೆ ಹೇಳಲು ತವಕವಾಗುತ್ತಿತ್ತು. ಹೇಳಿದರೆ 'ತಾಯಿ ಕಿವಿಚುಚ್ಚಿರಬೇಕು, ಅಂದಾನು. ಆದರೆ ಮನೆಗೆ ಬಂದ ನಾಗಕ್ಕ, ಮಗಳನ್ನು ತಮ್ಮ ಮನೆಗೆ ಕರೆದೊ ಯ್ಯಲು ಬಂದವಳಂತೆಯೇ, ಹೊರಡುವ ವಾಯಿದೆ ಮುಂದುವರಿಸಿ ದಳು. ಒಂದು ದಿನ ಸುಬ್ಬಯ್ಯ "ಮದ್ರಾಸಿಗೆ ಹೋಗುವ ಮೊದಲು, ನಿನ್ನ ಅಮ್ಮನನ್ನು ಊರಿಗೆ ಬಿಟ್ಟು ಬರಬೇಕಲ್ಲ" ಎಂದು ಸೂಚನೆ ತೆಗೆ ದರೆ, "ನಾನೂ ಊರಿಗೆ ಹೋಗಬೇಕು. ಊರಿಗೆ ಹೋಗದೆ ಎರಡು ವರ್ಷವಾಯಿತು" ಎಂದಳು.

"ಮತ್ತೆ ಮದ್ರಾಸಿಗೆ?"

ಸುಬ್ಬಯ್ಯ ಅವಳ ದುರಾಗ್ರಹವನ್ನು ತಡೆಯಲು ವಾದ ಹೂಡಿ ದನು. ವಯಸ್ಸಾಯಿತು. ಹೆರಿಗೆಯ ವಯಸ್ಸು ತೀರ ಮುಂದೆ ಹೋಗ ಬಾರದು, ವೈದ್ಯರನ್ನು ಕೇಳಿ ತಿಳಿಯುವ-ಎಂದರೂ ಕುಸುಮೆ, ಅಲು ಗಾಡಲಿಲ್ಲ.

ಅವಳ ಮನಸ್ಸಿನಲ್ಲಿ: ತಾನು ತಾಯ್ತನ ತೊಡಗಿದ್ದೇನೆ. ಈ ತಿಂಗಳು ಹೊರಗಾಗಲಿಲ್ಲ. ತನ್ನ ಮುಟ್ಟಿನ ನಿಯಮ ಅಸ್ತವ್ಯಸ್ತದ್ದಾ ದರೂ ಈ ಬಾರಿ ಅದು ದೂರ ಸರಿದಿದೆ-ಎಂದು ತಿಳಿದಿದ್ದಾಳೆ. ಅದನ್ನು ಹೇಳಲು ನಾಚಿಕೆ, ಮೇಲೆ ಗೋಪ್ಯವಾಗಿಡಬೇಕೆಂಬ ಯೋಚನೆ. ಊರಿಗೆ ಹೋದರೆ, ಅಲ್ಲಿಯೇ ಇನ್ನು ಆರು ತಿಂಗಳ ಕಾಲವಿರುವ ವಿಚಾರ. ಇಂತು, ರಜೆ ಪ್ರಾರಂಭವಾಗುವಾಗ ಅನಿಶ್ಚಿತತೆಯು ಕಳೆದಿತ್ತು. 'ತಾನು ಗರ್ಭಿಣಿ'ಯೆಂದು ಸುಬ್ಬಯ್ಯಗೆ ತಿಳಿಯಹೇಳಿದಳು.

ಪಯಣ ಸ್ವಗ್ರಾಮಾಭಿಮುಖವಾಯಿತು. "ಅಲ್ಲಿ ಬರಿಯ ಒಂದು ವಾರ ಇದ್ದು ಬಾ. ಅಷ್ಟೇ ಕಾಲವಾದರೆ ನಾನೂ ಬಂದು ನಿಲ್ಲುತ್ತೇನೆ" ಎಂದು ಹೇಳಿದ. ಅವನಿಗೆ ಮಲೇರಿಯದ ಊರಿನ ಅಂಜಿಕೆ. ಅಲ್ಲದೆ ಹಳ್ಳಿಯ ಮೂಲೆಯಲ್ಲಿ ಬಾಣಂತಿತನ ಚೆನ್ನಾಗಿ ನಡೆಯದೆಂಬ ಅಂಜಿಕೆ. ಅಂತು ಆಕೆ ಊರಿಗೆ ಹೊರಡುವಾಗ "ಬಂದರೆ ಬರುತ್ತೇನೆ—ಇಲ್ಲವಾ

ದರೆ ಇಲ್ಲ" ಎಂದು ಹೊರಟಳು. ಅವಳ ಗೆಳತಿಯರು ಅವಳನ್ನು ಪ್ರೀತಿಯಿಂದ ಬೀಳ್ಕೊಟ್ಟರು. "ಈಗ ಮೂರನೆ ತಿಂಗಳೆಂದಿರಾ? ಹಾಗಾದರೆ ಜೂನಿಗೆ ಐದಾಗುತ್ತದೆ. ನೆಟ್ಟಗೆ ಇಲ್ಲಿಗೆ ಬಂದುಬಿಡಿ" ಎಂದೂ ಉಪದೇಶಿಸಿದರು. 'ನೋಡುವ, ನೋಡುವ' ಎಂದೇ ಕುಸುಮೆ ಊರನ್ನು ಸೇರಿದಳು. ಗಂಡ ಅವರಿಬ್ಬರನ್ನು ಮನೆಯ ತನಕ ಮುಟ್ಟಿಸಿ ಬಂದ. ಊರು ಬಿಟ್ಟು ಹೊರಡುವಾಗ 'ಜೂನು ತಿಂಗಳಲ್ಲಿ, ಕೋರ್ಟು ಶುರುವಾಗುವ ಮೊದಲಿಗೇ ಬಂದು ಕರೆದುಕೊಂಡು ಹೋಗುತ್ತೇನೆ' ಎಂದು ವಚನವಿತ್ತ.

"ನೀವೇನು ಮಾಡುತ್ತೀರಿ ರಜೆಯಲ್ಲಿ?"

"ನಾನೇ — ಮಂಗಳೂರಿಗೆ ಹೋಗಿ ನೋಡಬೇಕು. ವೆಂಕಪ್ಪಣ್ಣ ಬಂದರೆ ಮದ್ರಾಸಿಗೆ ಹೋಗಿ ಬರುವ ಎಂದಿದೆ. ಇಲ್ಲವಾದರೆ ಬೆಳ್ತಂಗಡಿ, ಕಾರ್ಕಳಗಳಲ್ಲಿ ಹತ್ತು ದಿವಸ ಕಳೆದು, ಮಂಗಳೂರಿಗೇನೆ ಹಿಂದಕ್ಕೆ" — ಎಂದನು. ಅಂತು ಆತ ಹೊರಡುವಾಗಲೇ ಜೂನಿಗೆ ಬರುವ ವಿಷಯದಲ್ಲಿ ಆಕೆ ಒಪ್ಪಿಗೆ ಕೊಡಲಿಲ್ಲ.

ಮೇ ತಿಂಗಳ ರಜೆ ಸುಬ್ಬಯ್ಯನ ಪಾಲಿಗೆ ಬರಡಾಗಿಯೇ ಇತ್ತು. ಮನೆಯು ಮಡದಿಯಿಲ್ಲದೆ ಅದು ಬರಡಾಗಿ ಕಾಣಿಸಿತು. ನಿತ್ಯ ಕೇಳುತ್ತಿದ್ದ ಧ್ವನಿಗಳು ಇಲ್ಲವಾದರೆ — ಅದೊಂದೇ ಬೇಸರ ಉಂಟುಮಾಡಲು ಸಾಕು. ಹಾಗೆಂದು ಬೇರೆಲ್ಲಿ ಪ್ರವಾಸಕ್ಕೂ ಹೊರಡಲಿಲ್ಲ. ಮನೆ, ಕ್ಲಬ್ಬು ವೆಂಕಪ್ಪನ ಕುಟೀರ ಮೂರರಲ್ಲೇ ಮುಕ್ತಾಯವಾಯಿತು. ಮೇ ರಜೆ ಮುಗಿಯುತ್ತಲೇ ಹೆಂಡತಿಗೆ ಕಾಗದವನ್ನೂ ಬರೆದ. 'ಕರೆಯುವುದಕ್ಕಾಗಿ ಬರುವುದೇ ಬೇಡ. ನಾನು ಖಂಡಿತವಾಗಿಯೂ ಬರುವುದಿಲ್ಲ. ಇನ್ನು ಬರುವುದು ಮಗುವಿನೊಂದಿಗೆ' ಎಂದು ಶಾಸನವೇ ಬಂದಿತು. ಬಸಿರಿಯ ಮನಸ್ಸಿಗೆ ವಿರುದ್ಧವಾಗಿ ವರ್ತಿಸಲಾರದೆ ಇದ್ದಲ್ಲಿ ಕುಳಿತುಬಿಟ್ಟ.

ಮಳೆಗಾಲದ ಜಡಿಮಳೆ ಸುತ್ತ ಸುಳಿಯುತ್ತಿದ್ದರೆ, ಮುಂಡೂರಿನ ಕಾಡುಜ್ವರಗಳ ಕನಸು ಸುಬ್ಬಯ್ಯಗೆ. ಅಲ್ಲದೆ ಬಾಣಂತಿ ತನಕ್ಕೆ ಪೇಟೆಯ ಸೌಕರ್ಯ ಹಳ್ಳಿಗಿದೆಯೇ? ನಡುನಡುವೆ ಹೆಂಡತಿಯ ಪತ್ರ ಬರುತ್ತಲಿತ್ತು. "ಯೋಚನೆ ಬಿಡಿ, ತುಂಬಾ ಹಾಲುಂಟು ಮನೆಯಲ್ಲಿ. ನಾನು ಮೊದಲಿಗಿಂತ ಬಹಳ ಪುಷ್ಟಿಯಾಗಿದ್ದೇನೆ" ಎಂದೊಮ್ಮೆ ಬರೆದಿದ್ದಳು.

ಅವಳಿಗೆ ಅಲ್ಲಿರುವುದರಲ್ಲೇ ತುಷ್ಟಿಯಿತ್ತು. 'ಆಗಲಿ'ಎಂದು ನಿಟ್ಟುಸಿರು ಕರೆದು ಸುಬ್ಬಯ್ಯ ಮೌನವಾದ.

ನವರಾತ್ರಿಯ ಸುಮಾರಿಗೆ ಅವನ ನೆಮ್ಮದಿ ಮುರಿಯುವಂಥ ಪತ್ರವೊಂದು ಮಾವನ ಮನೆಯಿಂದ ಬಂದಿತು. ಕೂಜಪ್ಪ ನಡುನಡುಗಿ ಬರೆದ ಪತ್ರ. ಅದರಲ್ಲಿ ಕುಸುಮೆ ಅಕಾಲ ಪ್ರಸವದಿಂದ ಪಾರಾದ ಬಗೆ ಬಣ್ಣಿಸಿತ್ತು. ಅವನ ಕೂಸಿನ ಸ್ವಪ್ನ ಥಟ್ಟನೆ ಅದೃಶ್ಯವಾಗಿ ಬದಲು ನರಳುತ್ತಿರುವ ಕುಸುಮೆಯ ಚಿತ್ರವೇ ಕಣ್ಮುಂದೆ ನಿಂತಿತು. 'ಮಗಳು ಈಗ ಚೆನ್ನಾಗಿದ್ದಾಳೆ. ಯೋಚನೆ ಬೇಡ' ಎಂದು ಕುಸುಮೆಯ ಆರೋಗ್ಯವನ್ನು ಕುರಿತು ಮಾವ ಪತ್ರ ಬರೆದಿದ್ದರೂ ಆತನ ಮನಸ್ಸು ತೃಪ್ತವಾಗಲಿಲ್ಲ. ಪತ್ರ ಮೂರು ದಿವಸಗಳ ಹಿಂದಿನ ತಾರೀಕಿನದು. ಅಷ್ಟರಲ್ಲಿ ಏನೂ ಆಗಬಹುದು. ಆ ಪತ್ರವನ್ನು ಕುಸುಮೆಯಂತೂ ಬರೆದುದಲ್ಲ.ಆತ ನೇರಾಗಿ ವೆಂಕಪ್ಪನ ಮನೆಗೆ ಹೋದ. ಅಲ್ಲಿ ಶೀಲಕ್ಕನೊಡನೆ ಚರ್ಚಿಸಿದ. 'ಏನೂ ಆಗಲಿ, ಮೋಟರನ್ನು ಮಾಡಿಕೊಂಡು ಅಲ್ಲಿಗೆ ಹೋಗಿ ಅವಳನ್ನು ಕರೆದುತರುವುದು ಒಳ್ಳೆಯದು' ಎಂದು ಅವರಿತ್ತ ತೀರ್ಮಾನದಂತೆ ವರ್ತಿಸಿದ.

ಸುಬ್ಬಯ್ಯ, ಮುಂಡೂರು ಸೇರುವಾಗ ಸಂಜೆಯ ಏಳು ತಾಸಾಗಿತ್ತು. ಮಳೆ ಜಿರಿಜಿರಿ ಸುರಿಯುತ್ತಿತ್ತು. ಅವನ ಹಾದಿಯಲ್ಲಿ ಹಳ್ಳವೊಂದು ಅಡ್ಡವಿತ್ತು. ಅದರಿಂದಾಗಿ ಕಾಲುನಡೆಯಿಂದ ಮಾವನ ಮನೆಯನ್ನು ಸೇರಿದ. ಕುಸುಮೆಯನ್ನು ಹೊತ್ತು ಮರುದಿನ ತರಬೇಕಲ್ಲ. ಮಳೆಯಿದರಂತೆಯೇ ಇದ್ದರೆ! ಏನು ಕಠಿಣ!-ಎಂಬ ಭೀಕರ ಕನಸುಗಳನ್ನು ನೆನೆಯುತ್ತ ಮಾವನ ಮನೆಯನ್ನು ಸೇರಿದನು. ಕುಸುಮೆಯ ಮುಖನೋಡುವ ತನಕ ಅವನ ತತ್ತರ ಹೋಗದು. ಅವಳು ಕ್ಷೀಣವಾಣಿಯಲ್ಲಿ "ಈಗ ಚೆನ್ನಾಗಿದ್ದೇನೆ" ಎಂದು ಹೇಳುವ ತನಕ ಧೈರ್ಯವಾಗದು.

ಆ ರಾತ್ರಿಯಂತು ಕಳೆಯಿತು. ಅತ್ತೆಮಾವಂದಿರನ್ನು ಸಮಾಧಾನಪಡಿಸಿ ಒಂದೆರಡು ತಿಂಗಳು, ಅವಳು ಬಾಣಂತಿ ಆಸ್ಪತ್ರೆಯಲ್ಲಿರುವುದು ಒಳ್ಳೆಯದು ಎಂದು ಹೇಳಿ,ಅವಳನ್ನು ಹೊತ್ತು ಮೋಟರಿನ ತನಕ ಸಾಗಿಸಿದ್ದಾಯಿತು. ಆಗ ಮಳೆ ಬಿಟ್ಟದ್ದೂ ಅವನ ಪುಣ್ಯ. ಅಂತು ಮಧ್ಯಾಹ್ನ

ವಾಗುವುದರೊಳಗೆ ಕುಸುಮೆ ಮಂಗಳೂರಿನ ಬಾಣಂತಿ ಗೃಹವೊಂದರಲ್ಲಿ ದಾಖಲಾದಳು. ಡಾಕ್ಟರರು—'ಏನೂ ಗಾಬರಿ ಬೇಡ. ನೀವು ಮನೆಗೆ ಹೋಗಿ. ಅವರು ಇಲ್ಲಿ ಒಂದು ತಿಂಗಳು ಇರಲಿ. ಇನ್ನೊಮ್ಮೆ ಹೀಗೆ ಹಳ್ಳಿಗೆ ಕಳುಹಿಸಬೇಡಿ. ನಿಮಗೂ ಈ ಹಳ್ಳಿಯ ಬಾಣಂತಿತನದ ವಿಶ್ವಾಸವೇ!" ಎಂದು ನಕ್ಕು ನುಡಿದ ಹಾಸ್ಯದ ಮಾತಿಗೆ, ಆತ ಪ್ರತಿನುಡಿಯಲಿಲ್ಲ. ಕುಸುಮೆಯ ಮುಂದೆ 'ಇದು ಅವಳ ಹಟದ ಪರಿಣಾಮ' ವೆಂದು ಹೇಳಿ ನೊಂದವಳನ್ನು ಮತ್ತಷ್ಟು ನೋಯಿಸುವುದೇ? 'ಆಗಲಿ ಒಂದು ಸಾರಿ ತಪ್ಪಿ, ಪಾಠ ಕಲಿತಾಯಿತು. ಇನ್ನೊಮ್ಮೆ ಹಾಗೆ ಮಾಡಲು ಮರುಳೇ'—ಎಂದು ಹೇಳಿ ತನ್ನ ಮನೆಯನ್ನು ಸೇರಿದ.

ರಕ್ತ ಬಲವು ಕುಂದಿದ್ದ ಕುಸುಮೆ ನಡೆದಾಡಲು ಎರಡು ತಿಂಗಳ ಕಾಲವೇ ಹೋಯಿತು. ಆದರೆ ನಿತ್ಯವೂ ಸುಬ್ಬಯ್ಯ ಬಂದು ವಿಚಾರಿಸುತ್ತಿದ್ದ. ಇತರ ಗೆಳೆಯರು ಬಂದು ಸಂತಾಪ ಪ್ರದರ್ಶಿಸುತ್ತಿದ್ದರು. ಆದರೂ ಮನಸ್ಸಿನಲ್ಲಿ "ಹಳ್ಳಿಯಾದರೇನು? ಪೇಟೆಯಲ್ಲಿದ್ದರೆ ಬ್ರಹ್ಮ ಬರೆದುದನ್ನು ತಪ್ಪಿಸಲು ಬರುತ್ತಿತ್ತೇ" ಎಂದು ಆಕೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವಳು. 'ಮೃತ್ಯುವಿನಿಂದ ಪಾರಾದೆನಲ್ಲಾ' ಎಂದು ಅಂತರಂಗದಲ್ಲಿ ಹಿಗ್ಗಿಯೂ ಹಿಗ್ಗುವಳು. ಎಡೆಯಲ್ಲಿ ನಷ್ಟ ಸಂತತಿಗಾಗಿ, ನೆನಪಾದಾಗಲೆಲ್ಲ, ಕೊರಗಿಯೂ ಕೊರಗುವಳು.

೪ನೆಯ ಅಧ್ಯಾಯ.

ಕುಸುಮೆ ಸುಮಾರು ಎರಡು ತಿಂಗಳ ದಿವಸ ಆಸ್ಪತ್ರೆಯಲ್ಲಿದ್ದು ಬಳಿಕ ಮನೆಗೆ ಬಂದಳು. ಇನ್ನೂ ಅಶಕ್ತಿಯು ಹೊಡೆದು ಕಾಣುತ್ತಿತ್ತು. ಮುಗ್ಗಿದ ಶರೀರಕ್ಕೆ ಹೊಂದಿಕೆಯಾಗಿ ನೊಂದ ಮನಸ್ಸು ಬೇರೆ. ತನ್ನ ಕೂಸಿನ ಬಯಕೆಯು ಹೀಗೆ ಹಿಂಗಿ, ನಿರಾಶೆಯಲ್ಲಿ ಕೊನೆಗೊಂಡಿತಲ್ಲಾ ಎಂದು ಬೇಯುವಳು. ಯಾರ ಮನೆಗೆ ಹೋಗುವುದಾಗಲಿ, ಯಾವ ಚಟುವಟಿಕೆಗಳ ಸಾಕ್ಷಿಯಾಗುವುದಾಲಿ ಮನಸ್ಸಿಗೆ ಒಪ್ಪದು. ಶೀಲಕ್ಕನೇ ಹಲವು ಬಾರಿ ಅವಳ ಮನೆಗೆ ಬರುತ್ತಾಳೆ. ವೆಂಕಪ್ಪನೂ ಜತೆಗೆ ಬಂದು ಅವಳನ್ನು ಉಲ್ಲಾಸವಾಗಿರಿಸಲು ಯತ್ನಿಸುವನು. ಕೊನೆಗೆ

"ನೀನೇನು ಮುದುಕಿಯೇ? ನಿನಗೇನು ವಯಸ್ಸೇ? ಯಾಕೆ ಯೋಚನೆ ಮಾಡುತ್ತೀ? ಮುಂದಣ ಬಾಣಂತಿತನದಲ್ಲಿ ಹಾಗಾಗಲಾರದು. ಆಗ ಊರಿಗೆ ಹೋಗಿ ದೂರವಿದ್ದುದರಿಂದ, ಸಮಯಕ್ಕೆ ತಕ್ಕ ಎಚ್ಚರ ತೆಗೆದು ಕೊಳ್ಳಲು ಬಾರದಿದ್ದುದರಿಂದ ಹಾಗಾಗಿರಬಹುದು" — ಎಂದು ಉಪ ದೇಶಮಾಡುವನು. ಸುಬ್ಬಯ್ಯನಂತು ಮಡದಿಯ ಬಳಿಯಿದ್ದು, ಕ್ಲಬ್ಬಿಗೆ ಹೋಗಿ ಕಳೆಯುವ ಸಮಯವನ್ನೆಲ್ಲ ವ್ಯಯಮಾಡುವನು. ತೀರ ಬೇಸ ರವಾದರೆ 'ಸಿನೆಮಾ'ಕ್ಕೆ ಹೋಗಿಬರುವ, ಎನ್ನುವನು.

'ಸಿನೆಮಾ' ಕುಸುಮೆಯ ಮೆಚ್ಚಿನ ವಿನೋದವೇ. ಆದರೆ ಅವಳ ಗಂಡ ಸಿನೆಮಾ ನೋಡುವಾಗಲೆಲ್ಲ, ಮೊದಲಿನಿಂದಲೂ ತನ್ನ ಇಷ್ಟ, ಮಿತ್ರ, ಬಂಧು, ಬಾಂಧವರೊಡಗೂಡಿ ಹೊರಡುವವನು. ವೆಂಕಪ್ಪನ ಮನೆಗೆ ಹೋಗಿ, ಅವನನ್ನು ಎಬ್ಬಿಸಿಕೊಂಡು, ಜತೆಯಲ್ಲಿ ಶೀಲಕ್ಕನ ಮಕ್ಕಳ ಪಡೆಯನ್ನು ಕೂಡಿಹೊರಡುತ್ತಾನೆ. ಈಗೀಗ ಕುಸುಮೆಗೆ ಮಕ್ಕ ಳೆಂದರೆ ಬೇಸರ. ಇತರರ ಮಕ್ಕಳೊಡನೆ ಮಾತನಾಡುವುದೆಂದರೆ ಏನೇ ನೋ ಮನಸ್ಸಿಗೆ ಅನಿಸುತ್ತದೆ. ಅದೂ ವೆಂಕಪ್ಪಣ್ಣನ ಮಕ್ಕಳೆಂದರೆ— ಒಂದೊಂದಕ್ಕೆ ಹತ್ತತ್ತು ಬಾಯಿ ಇದ್ದಂತೆ. ಅವುಗಳಲ್ಲಿ ತೀರ ಕಿರಿಯ ಕೂಸೊಂದು, ಕುಸುಮೆಯ ಹೆಗಲೇರಿ ಕುಳಿತಿರುವುದಕ್ಕೇನೆ ತವಕ ಪಡುತ್ತದೆ. ಅವುಗಳ ಕೊಳೆ ಕೈ,ಮೈಗಳಿಂದ ತೊಟ್ಟ ಸೀರೆ ಹೊಲಸಾಗು ವುದು ಸಹ,ಮಕ್ಕಳನ್ನು ಹೆತ್ತ ತಾಯಿಗೆ ಕಾಣಿಸುವುದಿಲ್ಲ. ಆದರೆ ಕುಸು ಮೆಗೆ ಕಣ್ಣಿದೆಯಲ್ಲ. ಸಿನೆಮಾಕ್ಕೆ ಹೊರಟರೆ ಆಗ ಕುಸುಮೆಯೇ ಎತ್ತಿ ಕೊಳ್ಳಬೇಕು. ಮುಖ್ಯ, ಆ ಕೂಸಿಗೆ ಬೇಕು-ತೀರ ಚೆಂದವಾಗಿ ಅರಿವೆ ಉಟ್ಟವರು. ಶೀಲಕ್ಕ ಬೆಡಗಿಗೆ ಒಲಿಯುವುದನ್ನು ಮರೆತು ಎಷ್ಟೋ ಕಾಲವಾಗಿತ್ತು.

ಆಕೆ ಸಿನೆಮಾಕ್ಕೆ ಬಂದರೆ, ಕಿರಿಗೂಸುಗಳು ಕುಸುಮೆಯನ್ನು ಕಾಡದಂತೆ ಎಚ್ಚರ ನೋಡುತ್ತಾಳೆ. ಅವಳಿಗೆ ಕುಸುಮೆಯ ಮನೋ ಭಾವ ಸ್ಪಷ್ಟವಾಗುತ್ತಿದೆ. 'ಈ ಮಕ್ಕಳ ತುಂಟತನ ಯಾರಿಗೂ ಸಹಿಸ ದೆಂದು' ಅವಳೇ ಊಹಿಸುತ್ತಾಳೆ. ಆದರೆ ಮಾಧವಿಯಂತಹ ಬಿಳಿ ಮೊಗದ ಕೂಸು "ನಾನು ಸಣ್ಣಮ್ಮನೊಂದಿಗೆ" ಎಂದು ಚಂಡಿಹಿಡಿದರೆ 'ಅಲ್ಲ'ವೆನ್ನಲು ಬಂದೀತೇ? ಅಷ್ಟಕ್ಕೂ ತಾಪತ್ರಯ ಮುಗಿಯುವಂತಿಲ್ಲ.

ಆಚೀಚೆ ಕುಳಿತ ಬಾಯಿತುರಿಕೆಯ ಮಹಿಳೆಯರು "ಇದು ನಿಮ್ಮ ಮಗುವೇ, ಎಷ್ಟು ಚೆನ್ನಾಗಿದೆ!" ಎಂದರೆ ಅವಳಿಗೆ ಸಂಕಟ. ಈ ಮಕ್ಕಳ ಕೊಳೆಯುರಿವೆಗಳನ್ನು ಅವಳು ನೆನೆದು ಬೇಸರಗೊಳ್ಳುವಳು; ತನಗಿಲ್ಲದ ಸಂಪತ್ತನ್ನು ನೆನೆದು ಕೊರಗುವಳು.

ಒಂದು ದಿವಸ ಸುಬ್ಬಯ್ಯ ಅತಿಶಯ ಬಲವಂತಮಾಡಿದ—"ನೀನು ಮನೆಯಲ್ಲಿ ಕುಳಿತು ಎಣಿಸುತ್ತಿದ್ದರೆ ಆಗದು; ಹೋಗುವ. ಚಂದದ ಸಿನೆಮಾ ಇವತ್ತಿನದು"—ಎಂದು ಬಲವಂತಪಡಿಸಿದ. ಆಕೆ ಮೊದಲಬಾರಿಗೆ "ನೀವು ಊರವರನ್ನೆಲ್ಲ ಕಟ್ಟಿಕೊಂಡು ಹೊರಡುವುದಾದರೆ ನಾನು ಬರುವುದಿಲ್ಲ" ಎಂದು ಬಹುಕಾಲ ತನ್ನ ಬಚ್ಚಿಟ್ಟ ಮನವನ್ನು ಬಯಲಿಗೆಳೆದಳು.

"ಊರವರೆಂದರೆ--ಯಾರು ಬರುತ್ತಾರೆ? ನಾನು ಯಾರ ಮನೆಗೆ ಹೋಗುತ್ತೇನೆ. ಇರುವುದೊಂದು ವೆಂಕಪ್ಪಣ್ಣನ ಮನೆ. ಶೀಲಕ್ಕನಿಗಂತು ಮೈ ಸರಿಯಿಲ್ಲ. ಬಂದರೆ ವೆಂಕಪ್ಪಣ್ಣ, ಅವನ ನಾಲ್ಕು ಮಕ್ಕಳೂ ಬರುತ್ತವೆ.... ಅವರೇನು ಹೊರಗಿನವರೇ?"

ಆಕೆ ತಿರುಮಂತ್ರ ಹೇಳದೆ-"ಈಗ ಬೇಡ; ಸಂಜೆಯ ದೇಖಾವೆಗೆ ಹೋಗುವ" ಎಂದು ಮುಂದುವರಿಸಿಬಿಟ್ಟಳು. ಅದರಿಂದ ಸುಬ್ಬಯ್ಯ ಬೇಗನೆ ಕ್ಲಬ್ಬಿಗೆ ಹೋಗಿ ಬರುವೆನೆಂದು ಮನೆ ಬಿಟ್ಟನು. ಹೋಗಿ ಬೇಗನೆ ಮನೆಗೆ ಬಂದುದೂ ನಿಜ. ಆದರೆ ಅಲ್ಲಿ ರೂಢಿಯಂತೆ "ವೆಂಕಪ್ಪಣ್ಣ, ಇವತ್ತು ರಾತ್ರಿ 'ಶೋ'ವಿಗೆ ಹೋಗೋಣ ಎಂದುದೂ ನಿಜ. 'ಬರುತ್ತೀಯಾ?' ಎಂದು ಆಮಂತ್ರಣ ಕೊಟ್ಟದೂ ನಿಜ.

"ರಾತ್ರಿಯೇ—ಬೇಡ. ಮಕ್ಕಳನ್ನು ಕಟ್ಟಿಕೊಂಡು ಹೊರಡಬೇಕಲ್ಲ. ಅಲ್ಲದೆ ನೋಡು, ಸುಮಾರು ದಿವಸಗಳಿಂದ ಶೀಲುಗೆ ಮೈ ಅಷ್ಟು ಚೆನ್ನಾಗಿಲ್ಲ. ನೆಗಡಿಯೋ ನೇವಸವೋ! ತುಂಬ ಕೆಮ್ಮು, ಕಫ......... ಅದರಿಂದ ನಾನು ಬರುವುದಿಲ್ಲ. ನಾಳೆ ಆದಿತ್ಯವಾರದ ಮೆಟಿನಿಗಾದರೆ ಹೋಗುವ" ಎಂದು ವಾಯಿದೆ ಮುಂದುವರಿಸಿದನು.

ಊಟಮಾಡುತ್ತ ಸುಬ್ಬಯ್ಯ "ಆದಿತ್ಯವಾರದ ತನಕವೂ ಈ ಆಟ ಇರಬೇಕು. ಆ ದಿನ ಮೆಟಿನಿಗೆ ಹೋಗುವ ಎಂದ ವೆಂಕಪ್ಪಣ್ಣ" ಎಂದು ಸೂಚನೆ ಮಾಡಿದನು.

"ಹೂಂ—ನೀವು ಬೇಕಾದರೆ ಆದಿತ್ಯವಾರವೇ ಹೋಗಿ. ನಾನೊಬ್ಬಳೇ ಇವತ್ತು ಹೋಗುತ್ತೇನೆ. ಹೆದರಿಕೆಯಾಗಲಾರದು" ಎಂದಳು. ಮಾತಿನ ನಂಜನ್ನು ತಿಳಿದು, "ರಾತ್ರಿ ಹೋಗಬಾರದೆಂದು ಅಂದದ್ದಲ್ಲ; ಒಟ್ಟಿಗೆ ಹೋಗಬೇಕಾದರೆ ಹಾಗೆ ಮಾಡಬೇಕಾಗುತ್ತದೆ"ಎಂದು ಹೇಳಬೇಕಾಯಿತು.

"ಯಾಕೆ—ನಾವಿಬ್ಬರೇ ಹೋದರೆ ಚಿತ್ರ ತೋರಿಸುವುದಿಲ್ಲವೇ? ಟಿಕೇಟು ಕೊಡುವುದಿಲ್ಲವೇ? ಪ್ರತಿ ಸಾರಿಯೂ ಪರಿವಾರ ಕಟ್ಟಿಕೊಂಡು ಹೋಗುವುದರಿಂದ ನನಗೆ ಸಿನೆಮಾ ನೋಡಿದರೂ ನೋಡಿದ ಹಾಗೆ ಆಗುವುದಿಲ್ಲ" ಎಂದಳು.

ಕುಸುಮೆಗೆ ಜನರ ಗದ್ದಲ ಸಹಿಸುತ್ತಿರಲಿಲ್ಲ. ಈಚೆಗೆ ಅವಳಿಗೆ ಯಾವ ಮೇಳವೂ ಕೂಡುವುದಿಲ್ಲ' ಎಂದು ಗ್ರಹಿಸಿ, "ನಾವು ಬೇಕೆಂದರೂ ಅವರು ಬರುವ ಹಾಗಿಲ್ಲ. ಶೀಲಕ್ಕಗೆ ಮೈ ಚೆನ್ನಾಗಿಲ್ಲವಂತೆ" ಎಂದ.

'ಯಾಕೆ, ಏನು'—ಎಂದು ಕುಸುಮೆ ತಿರುಗಿ ಪ್ರಶ್ನೆಮಾಡಲಿಲ್ಲ. ಊಟ ಮುಗಿಸಿದಳು. ಮನೆಯನ್ನು ಕಾಯಲು ಒಬ್ಬ ಮುದುಕನಿದ್ದ; ಅವನಿಗೆ ಎಚ್ಚರ ಹೇಳಿದಳು. ತಾನು ಸಿಂಗಾರಮಾಡಿಕೊಳ್ಳಲು ಅಣಿಯಾದಳು. ಅಷ್ಟರಲ್ಲೇ ಸಾಕಷ್ಟು ವೇಳೆಯೂ ಸಂದಿತು. ಸುಬ್ಬಯ್ಯ ಜಟಪಟನೆ ಉಡುಗೆ ಉಟ್ಟು—'ಕುಸುಮಾ, ಜಟಕಾ ಕರೆದು ತರುವಷ್ಟು ಸಮಯ ಸಾಲದು. ಜಟಕಾ ಮಾಳವೇ ಸಮೀಪವಿದೆಯಲ್ಲ. ಅಲ್ಲಿಂದಲೇ ಬಾಡಿಗೆಮಾಡಿಕೊಂಡು ಹೋಗುವ" ಎಂದು ಹೇಳಿ, ಹೆಂಡತಿಯೊಡನೆ ಹೊರಬಿದ್ದನು.

ಬಲು ದಿವಸಗಳಿಂದ ತುಸುವಾದರೂ ಉಲ್ಲಾಸವಾಗಿ ಕಾಣಿಸಿದ ದಿವಸವೇ ಅದು. ಅವಳು ನಗುತ್ತ, ಮಾತನಾಡುತ್ತ, ಗಂಡನ ಭುಜದ ಮೇಲೆ ಕೈಯಿರಿಸಿ, ಮನೆಯ ಗೇಟಿನ ತನಕ ಬಂದಳು. ಮುಂದೆ ಕೈ ಕೆಳಕ್ಕೆ ಬಿದ್ದಿತು. ಉಭಯತರೂ ಮಾತನಾಡುತ್ತ ಸರಿದರು. ದಾರಿಯಲ್ಲಿ ಕುಸುಮೆ ಶೀಲಕ್ಕನ ಪರಿವಾರದ ವಿಷಯ ತಾನು ನುಡಿದ ಮಾತುಗಳಿಗೆ, ಪತಿ ಬೇಸರಗೊಳ್ಳಬಾರದೆಂದು—"ನೋಡಿ, ನನಗೇಕೋ ಆಚೀಚೆ,ಮಕ್ಕಳ ಚಿರಿಚಿರಿ ತುಂಬಿದಾಗ, ಸಿನೆಮಾ ನೋಡಿದರೆ ಸಮಾ

ಧಾನವಾಗುವುದಿಲ್ಲ. ಅವು ಕ್ಷಣಕ್ಕೆ ಹತ್ತು ಪ್ರಶ್ನೆ ಕೇಳುತ್ತವೆ. ಅವಕ್ಕೆ ಉತ್ತರ ಕೊಡುವುದರಲ್ಲಿ ಬೇಸರ. ಹಾಗೆಂದು ಸ್ವಲ್ಪ ಗದರಿಸಿದರೆ—ರಾಗಮಾಲಿಕೆ ಹೊರಡುತ್ತದೆ. ಅಲ್ಲದೆ—ಹೋದಲ್ಲಿ ಯಾರ್‍ಯಾರ ಮಕ್ಕಳನ್ನು ಅಳುವಂತೆ ಮಾಡಿದೆವೆಂದು ಕೀರ್ತಿಯೂ ಬಂದೀತು." ಎಂದು ಪ್ರಸ್ತಾಪಮಾಡಿದಳು.

"ಅಯ್ಯೋ, ಮಹಾರಾಯಿತಿ! ಇಷ್ಟು ಸಂಗತಿಯಿದ್ದರೆ-ಮೊದಲೇ ಹೇಳಬೇಡವೇ? ಅವು ಬಹು ಮಾತನಾಡುವವು ನಿಜ. ಏನೋ ಬಹು ಕಾಲದ ಸ್ನೇಹ. ಅದರಿಂದ, ಅವರ ಜತೆಯಲ್ಲಿ ಹೋದ ರೂಢಿ. ನನಗೆ ಒಬ್ಬನೇ ಸಿನೆಮಾ ನೋಡಿದರೂ ನೋಡಿದಂತೆ ಆಗುವುದಿಲ್ಲ. ಆದರೆ ನಿನಗೆ ಇಷ್ಟೆಲ್ಲ ತೊಂದರೆ ಯಾಗುತ್ತಿದೆ-ಎಂದು ನನಗೆ ಗೊತ್ತೇ? ಅಂಥ ಸಣ್ಣ ವಿಷಯದಲ್ಲಿ ವೆಂಕಪ್ಪಣ್ಣನಾಗಲಿ ಶೀಲಕ್ಕನಾಗಲಿ ಒಂದಕ್ಕೊಂದು ತಿಳಿಯುವವರಲ್ಲ."

"ಹೌದು--ಹಾಗೆ ಘಟ್ಟನೆ ಮನಸ್ಸಿಗೆ ಬಂದುದನ್ನು ನಿಮಗೆ ಹೇಳಿದರೆ ನೀವೇನು ತಿಳಿದು ಕೊಳ್ಳುತ್ತೀರೋ—ಎಂದು ಅಂಜಿದೆ. ನಿಮ್ಮ ಅವರ ಸ್ನೇಹ ಬಹುಕಾಲದ್ದು. ನಾನು ಹೊಸಬೆ; ಇತ್ತ ನಿಮಗೇ ನನ್ನ ಈ ಸಂಕಟ ತಿಳಿಯುವ ಹಾಗಿಲ್ಲ. ನೀವು ಗಂಡಸರ ಸೀಟಿನಲ್ಲಿ ಗಮ್ಮತ್ತಾಗಿ ಕುಳಿತಿರುತ್ತೀರಿ. ನಾವೆಲ್ಲರು ಈ ಮಕ್ಕಳು ಮರಿಗಳನ್ನು ಕಟ್ಟಿಕೊಂಡು, ಹೆಂಗಸರ ಸೀಟಿನಲ್ಲಿ ಕುಳಿತರೆ, ಆಚೀಚೆಗಿನ 'ಕಸಲೆಪಿಸಲೆ' ಕೇಳಿಯೇ ಸಾಕಾಗುತ್ತದೆ. ಅದರ ಜೊತೆಯಲ್ಲಿ ನಾವು ಸಂಪಾದಿಸಿದ ಹಾರ್ಮೋನಿಯಂ, ಕೊಳಲು, ಬಾರಿಸಿದರೆ ಕೇಳಬೇಕೆ?"

ಸುಬ್ಬಯ್ಯ "ಒಹೋ—ಇಷ್ಟೆಲ್ಲ ಪಚೀತಿಯಿತ್ತೆಂದು ಯಾರು ಬಲ್ಲರು? ಇನ್ನು ನಾವು ಬೇರೆಯೇ ಹೋಗುವುದಾದರೆ ರಾತ್ರಿ ದೇಖಾವೆಯೇ ಒಳಿತು. ಆದರೂ ಆದಿತ್ಯವಾರ ಅವರಾಗಿ 'ಬರುತ್ತೀರಾ?' ಎಂದರೆ 'ಬರುವುದಿಲ್ಲ' ಎನ್ನಬೇಡ. ಅದು ಕ್ರಮವೆನಿಸುವುದಿಲ್ಲ" ಎಂದು ಉಪದೇಶಿಸಿದ. ಅಷ್ಟರಲ್ಲಿ ಬಂಡಿಯ ಮಾಳ ಬಂದಿತು. ಅವನು ಬಂಡಿಯವನನ್ನು ಕರೆದು ಮಾತನಾಡಿಸುತ್ತಿರಲು, ವೆಂಕಪ್ಪಣ್ಣನ ಮನೆಯ ಆಳು, ಕಾಳ, ಆಚೆಗೆ ಅವಸರದಿಂದ ಹೋಗುತ್ತಿದ್ದುದು ಕಾಣಿಸಿತು. ಸುಬ್ಬಯ್ಯ ಕುತೂಹಲದಿಂದ "ಎಲ್ಲಿಗೋ ಕಾಳ?" ಎಂದು ಕರೆದು

ಕೇಳಿದ. "ನಾವಿಬ್ಬರೇ ಸಿನೆಮಾ ನೋಡಲು ಹೊರಟುದನ್ನು ಜಾಹೀರು ಮಾಡಲಿಕ್ಕೇನು?" ಎಂದು ಕುಸುಮೆ ಗಂಡನನ್ನು ಬೆದರಿಸಿದಳು.

ಅಷ್ಟರಲ್ಲಿ ಸುಬ್ಬಯ್ಯನ ದನಿ ಕೇಳಿ, ಕಾಳನು ಹಿಂದಕ್ಕೆ ಮುಖ ತಿರುಗಿಸಿ "ಡಾಕ್ಟರರ ಮನೆಗೆ ಹೋಗಿ ಬಾ ಎಂದರು" ಎಂದು ಅವಸರವಾಗಿ ಹೇಳಿ ಹೊರಟೇ ಹೋದನು.

"ಡಾಕ್ಟರರಲ್ಲಿಗೆ! ಯಾತಕ್ಕೆ?" ಎಂದು ಸುಬ್ಬಯ್ಯ ಆತುರಪಡುತ್ತಿರಲು ಬಂಡಿ ಎದುರಿಗೆ ಬಂದು ನಿಂತಿತು. "ನೀವು ಯಾಕೆಗೀಕೆ ಎನ್ನುವಾಗ ಬೆಳಗಾಗುತ್ತದೆ" ಎಂದು ಅವಸರಿಸಿ, ಆಕೆ ಬಂಡಿಯೇರಿದಳು. ಅದನ್ನು 'ಹಿಂದುಸ್ಥಾನ ಸಿನೆಮಾ'ಕ್ಕೆ ಹೊಡೆ ಎಂದಳು. ಸುಬ್ಬಯ್ಯ ಗತ್ಯಂತರವಿಲ್ಲದೆ ತಾನೂ ಕುಳಿತ. ಅವನ ಮನಸ್ಸು ತೀರಾ ಕಕ್ಕಾಬಿಕ್ಕಿಯಾಯಿತು. ಸಂಜೆ ವೆಂಕಪ್ಪಣ್ಣ 'ಶೀಲಕ್ಕನಿಗೆ ತುಸು ನೆಗಡಿ, ನೇವಸ, ಏನೋ'ಅಂದ ನೆನಪು. ಆದರೆ ಡಾಕ್ಟರರನ್ನು ಒಮ್ಮೆಗೇ ಕರೆಯುವ ಆಪತ್ತೇನು ಬಂದಿತು--ಎಂದು ಯೋಚಿಸುತ್ತಿರುವಾಗ ಗಾಡಿಯು 'ಹೈ ಹೈ' ಮಾಡಿಕೊಂಡು ಸಾಗಿ, ಸಿನೆಮಾ ಮಂದಿರದ ಮುಂದುಗಡೆಯಲ್ಲಿ ನಿಂತೂ ಆಯಿತು. ಸುಬ್ಬಯ್ಯ ಇನ್ನೂ ಬಂಡಿಯಿಂದಿಳಿಯನು. "ಎಲ್ಲಿ ನಿಮ್ಮ ಮನಸ್ಸು? ಸ್ಥಳ ಬಂದುದು ಕಾಣಿಸುವುದಿಲ್ಲವೇ?" ಎಂದು ಟೀಕೆ ನಡೆದ ಬಳಿಕವೇ ಕೆಳಕ್ಕಿಳಿದನು. ಅಲ್ಲಿಂದ ಟಕೇಟು ಪಡೆಯಲು ಹತ್ತು ನಿಮಿಷಕಾಲ ಹೋಯಿತು.ಆ ಬಳಿಕ ಪತ್ನಿಯೊಡಗೂಡಿ ಚಿತ್ರಮಂದಿರದ ಮಹಡಿಯನ್ನೇರುತ್ತಲೂ ಚಿತ್ರ ಪ್ರಾರಂಭಿಸಿತು. ಕತ್ತಲಲ್ಲಿ, ಅರ್ಧವೂ ತುಂಬಿರದ ಮಹಡಿಯಲ್ಲಿ, ತಮ್ಮ ತಾವನ್ನು ಆರಿಸಿ, ಕುಳಿತುಕೊಳ್ಳುವುದೊಂದು ಕಷ್ಟವೆನಿಸಲಿಲ್ಲ. ನಿತ್ಯದಂತೆ ಸ್ತ್ರೀಪುರುಷರ ವರ್ಗೀಕರಣವಾಗಲಿಲ್ಲ. 'ಬಾಲ್ಕನಿ'ಯಲ್ಲಿ ಕುಳಿತಿರುವವರೆಲ್ಲ ಸುಧಾರಿತ ಜನರು. ಅದೂ ಅಲ್ಲದೆ ಅಲ್ಲಿರುವುದು ವಿರಳ ಜನಸಂದಣಿ. ಹೀಗಾಗಿ ಗಂಡಹೆಂಡಿರು ರಸಿಕರಂತೆ ಬಳಿಯಲ್ಲೇ ಕುಳಿತರು. ಕುಸುಮೆ ಕತ್ತಲುಮನೆಯನ್ನು ಆಚೀಚೆ ಕತ್ತು ತಿರುವಿ ನೋಡಿದಳು. ಮಹಡಿಯ ಕೆಳಗೆ ಜನರು ಕಿಕ್ಕಿರಿದಿದ್ದರೂ ಮೇಲುಗಡೆ ಬಹು ಕಡಿಮೆ ಮಂದಿ ಸೇರಿದ್ದರು. ತಮ್ಮಂತೆ ಸೀಟಿಗೆ ಹದಿನಾರಾಣೆ ತೆತ್ತು ಬರುವ ಜನ ಎಷ್ಟು ಸ್ವಲ್ಪ—ಎಂದು ತೋರಿತು.

'ಇವತ್ತಾದರೆ ಸುಖವಾಗಿ ಚಿತ್ರವನ್ನು ನೋಡಬಹುದು' ಎಂದು ಉಲ್ಲಾಸದಿಂದ ನುಡಿಯುತ್ತ ಕುಸುಮೆ ಚಿತ್ರಮುಖಳಾದಳು. ಅವರ ತಲೆಯ ಮೇಲೆಯೇ ರೊಂಯಿ ರೊಂಯಿಯೆಂದು ವಿದ್ಯುತ್ತಿನ ಬೀಸಣಿಗೆ ತಿರುಗುತ್ತಿತ್ತು. ಆಕೆ ತನ್ನ ಕೈಯ್ಯನ್ನು ಬಳಿಯಲ್ಲಿ ಕುಳಿತ ಪತಿಯ ಭುಜದ ಮೇಲಿರಿಸಿ 'ಈವತ್ತಾದರೆ ಯಾವ ಕರಕರೆಯೂ ಇಲ್ಲದೆ ಚಿತ್ರ ನೋಡಬಹುದು' ಎಂದು ಇನ್ನೊಮ್ಮೆ ನುಡಿದಳು. ಇದರಂತೆ ನಡುನಡುವೆ ಒಂದೊಂದು ಮಾತು ಅವಳ ಬಾಯಿಂದ ಬರುತ್ತಲೇ ಇತ್ತಾದರೂ ಪತಿರಾಯನ ಉತ್ತರ ಮಾತ್ರ ಹೊರಡುತ್ತಿರಲಿಲ್ಲ. ಆತ ಚಿತ್ರದಲ್ಲಿ ತೀರ ತಲ್ಲೀನನಾಗಿರುವನೆಂದು ಅವಳು ತಿಳಿದಳು. ಆದರೂ ಅವಳು ತನ್ನ ವಿಮರ್ಶೆಗಳೊಂದನ್ನೂ ನಿಲ್ಲಿಸಲಿಲ್ಲ. 'ಈ ಮಗುವಿನ ಅಭಿನಯವಾದರೆ ಚಿಂತೆಯಿಲ್ಲ!' 'ಅವಳ ಮುಖಕ್ಕೆ ಆ ಮೂಗು ಉದ್ದವಲ್ಲವೇ?' 'ಇಂಥ ಸೀರೆ ನಮ್ಮ ಊರಿಗೆ ಮಾರಲು ಬರುವುದೇ ಇಲ್ಲಪ್ಪ' 'ಇವಳ ಮುಸುಡಿಗೆ ಒಂದೇಟು ಬಡಿಯಬೇಕು ಎಂದೆನಿಸುತ್ತದೆ' ಎಂದು ಅನೇಕ ಬಗೆಯ ಟೀಕಾ ಬಾಣಗಳನ್ನು ಎಸೆಯುತ್ತಲೇ ಇದ್ದಳು.

ಸುಬ್ಬಯ್ಯನಂತು ತೀರ ಮೂಕ. ನಡುವೆ ನಿದ್ದೆಯಿಂದ ಎಚ್ಚೆತ್ತವನಂತೆ "ಆಂ-ಏನೆಂದೆ" ಅನ್ನುತ್ತಿದ್ದ. ಆದರೂ ಅವನ ಮನಸ್ಸು ಹೆಂಡತಿಯ ಮಾತುಗಳ ಕಡೆಗೆ ಹರಿಯಲೂ ಇಲ್ಲ; ಎದುರಿಗೆ ತೆರೆಯಲ್ಲಿ ಓಡುತ್ತಿದ್ದ ದೃಶ್ಯಾವಳಿಗಳ ಕಡೆಗೂ ಇಲ್ಲ. ಅವನು ಬಂದುದೇನೋ ಕುಸುಮೆಯ ಉಲ್ಲಾಸದ ಸಲುವಾಗಿ; ಆದರೆ ಅದನ್ನು ಮರೆತಂತೆ ಕಾಣುತ್ತದೆ. ಆತನ ಧ್ಯಾನವೆಲ್ಲ—'ಆಳು ಕಾಳ, ಡಾಕ್ಟರರು, ಶೀಲಕ್ಕ' ಎಂದು ಬೇರೆಯೇ ಸ್ವತಂತ್ರವಾದ ಚಲಚ್ಚಿತ್ರ ನಿರ್ಮಾಣದಲ್ಲಿ ಲೀನವಾಗಿತ್ತು.

'ಕಾಳ ಆಗ ಡಾಕ್ಟರರ ಮನೆಗೆ ಹೊರಟನಲ್ಲ. ಡಾಕ್ಟರ್ ನಾರಾಯಣರಾಯರೇ? ಅವರು ವೆಂಕಪ್ಪನ ಮನೆಯ ಡಾಕ್ಟರರು. ಅವರನ್ನು ಚಿತ್ರ ಮಂದಿರದಲ್ಲಿ ಕಾಲಿರಿಸುವಾಗ ನೋಡಿದೆನೇ? ಎಲ್ಲಿ? ಬಾಲ್ಕನಿ ಏರುವಾಗಲೇ? ಟಿಕೇಟು ಕೊಳ್ಳುವಾಗಲೇ?' ಎಂದು ಊಹಿಸಲೆಣಿಸುತ್ತಾನೆ. ಅಷ್ಟಕ್ಕೆ ವಿರಾಮ ಬಂದಿತು. ಬೆಳಕುಗಳು ಉರಿದುವು. ಬಾಗಿಲು ತೆರೆಯಿತು. ಎಚ್ಚರಾದವನಂತೆ ಕಣ್ಣೊರಸಿ, ತನ್ನ ಮಗ್ಗುಲ ಮಂಚಗ

ಳನ್ನು ನೋಡಿದನು. ಯಾರೂ ಇರಲಿಲ್ಲ. ಹಿಂದಕ್ಕೆ ತಿರುಗಿದ. ಅವನ ಬೆನ್ನಿಗೇನೆ ಬೇರೊಬ್ಬ ವಕೀಲ ಮಿತ್ರರು ಕುಳಿತಿದ್ದರು. "ಹುಲ್ಲೋ. ರಾವ್ – ಇಲ್ಲಿ ಡಾಕ್ಟರ್ ನಾರಾಯಣರಾವ್ ಬಂದ ಹಾಗಿತ್ತಲ್ಲ"— ಎಂದು ಅವರನ್ನು ವಿಚಾರಿಸಿದನು. "ಹೌದು-ನನ್ನ ಜತೆಯಲ್ಲೇ ಕುಳಿತಿದ್ದರು. ನೀವೇನು ತಡವಾಗಿ ಬಂದಿರಾ?"

"ತೀರ ಸಮಯಕ್ಕೆ ಬಂದೆವು. ಅವರೆಲ್ಲಿ? ಡಾಕ್ಟರರು?"

"ಅವರಿಗೆಲ್ಲಿನ ಸಿನೆಮದ ಋಣ? ಯಾರೋ ಕರೆಯಲು ಇಲ್ಲಿಗೇನೆ ಬಂದಿದ್ದರು. ಡಾಕ್ಟರುಗಳಿಗೆ ಸ್ವಾತಂತ್ರ್ಯವೆಂಬುದಿದೆಯೇ? ದೇಶಕ್ಕೆ ಸ್ವರಾಜ್ಯ ಬರಬಹುದು-ಅವರಿಗೆ ಸ್ವರಾಜ್ಯ ಒಂದೇ ದಿನ" ಎಂದು ನಕ್ಕು ನುಡಿದರು.

ಸುಬ್ಬಯ್ಯ ನಗುವಿಗೆ ತಿರುಗಿ ನಗುವನ್ನು ಸೂಚಿಸಿ, ಮುಖ ತಿರುಗಿಸಿ ಬಿಳಿತೆರೆಯನ್ನೇ ಈಕ್ಷಿಸಿದ. ಅಲ್ಲಿ ಅವನ ಕಣ್ಣೆದುರಿಗೆ ಇನ್ನೂ ವಿಚಿತ್ರ ನೋಟಗಳು ಕಾಣಿಸಿದುವು. ಬೆಳಕಿನಲ್ಲಿ ಬೆಪ್ಪನಂತೆ ಕುಳಿತ ಗಂಡನನ್ನು ಕುಸುಮ "ಏನು ನಿಮ್ಮ ತನಖೆ? ಏನು ಯೋಚನೆ ಮಾಡುತ್ತಿರುವುದು? ನೀವು ಇವತ್ತು ಈ ಊರಿನಲ್ಲಿಯೇ ಇರುವ ಹಾಗಿಲ್ಲ" ಎಂದಳು.

"ಹೂಂ, ಮನಸ್ಸು ಎಲ್ಲೆಲ್ಲೋ ಓಡುತ್ತಿದೆ. ಬರುವಾಗ ಕಾಳನನ್ನು ಕಂಡ ಸಮಯದಿಂದಲೂ ಹಾಗೇನೆ ಇದೆ. ಯಾಕಾಗಿ ಕಾಳನನ್ನು ವೆಂಕಪ್ಪ, ಡಾಕ್ಟರರ ಮನೆಗೆ ಕಳುಸಿರಬಹುದು? ಡಾಕ್ಟರ ನಾರಾಯಣರಾಯರು ಇದೇ ಶೋವಿಗೆ ಬಂದಿದ್ದರು. ಈಗ ಕಾಣಿಸುವುದಿಲ್ಲ. ಕಾಳನೇ ಬಂದು ಕರೆದುಕೊಂಡು ಹೋಗಿರಬೇಕು. ಆದರೆ— ಶೀಲಕ್ಕನ ನೆಗಡಿ, ಕೆಮ್ಮ ಒಂದೆರಡು ತಾಸಿನೊಳಗೆ ಇಷ್ಟು ವಿಚಿತ್ರವಾದೀತೆ! ಇಲ್ಲವೇ ಮಕ್ಕಳೇನಾದರೂ ಮಾಡಿಕೊಂಡಿರಬಹುದೇ? ಆದರೂ ಅಂಥ ಕಠಿಣವೇನಾದರೂ ಇದ್ದರೆ ನಮ್ಮ ಮನೆಗೆ ಹೇಳಿಕಳುಹಿಸದೆ ಇರುವವನಲ್ಲ."

"ಅಷ್ಟಿರುವಾಗ ನೀವೇಕೆ ತಲೆಕರಡು ಮಾಡಿಕೊಳ್ಳಬೇಕು? ಬೆಳಗಾಗುತ್ತಲೇ ಹೋಗಿ ನೋಡಿ ಬಂದರಾಯಿತು"-ಎಂದು ಕುಸುಮ ಸಮಾಧಾನಪಡಿಸಿದಳು. ಚಿತ್ರಾರಂಭವಾದುದರಿಂದ ಅವಳ ದೃಷ್ಟಿ ತೆರೆಯ ಕಡೆಗೆ ಸಂಚರಿಸಿತು. ಆಕೆ ಕಾಲಿನಮೇಲೆ ಕಾಲಿರಿಸಿಕೊಂಡು, ಗಲ್ಲಕ್ಕೆ ಕೈಕೊಟ್ಟು, ಏಕೈಕ ದೃಷ್ಟಿಯಿಂದ ಕಥೆಯನ್ನು ಅನುಸರಿಸಿದಳು.

ಆತ ಮಾತ್ರ ಗಗನ ಸಂಚಾರಿಯಾಗಿದ್ದ. ಆತನ ಕಾಲುಗಳು ಈಗಲೇ 'ಈ ಸ್ಥಳ ಬಿಡುವ' ಎನ್ನುತ್ತಿದ್ದುವು. ಇನ್ನೂ ಒಂದು ತಾಸಿದೆ; ಅಷ್ಟರಲ್ಲಿ ತಾನೊಬ್ಬನೇ ಅವರ ಮನೆಗೆ ಹೋಗಿಬರಲೇ—ಎಂದೂ ಯೋಚಿಸಿದ, "ಕೊನೆಗೆ ಪಕ್ಕನೆ ಬರಲಾರದೆ ಹೋದರೆ ಕುಸುಮೆ ಇಲ್ಲೇನೆ!". ಇದರಿಂದ ನಿರ್ಧಾರ ಬದಲಿಸಿ, ಹೇಗೂ ಚಿತ್ರದ ಕರಕರೆ ಮುಗಿಯಲಿ ಎಂದು ವಿರಕ್ತಿಯಿಂದ ಕುಳಿತ. "ಈ ಹುಡುಗ ಮಾತ್ರ ದೊಡ್ಡವನಾದರೆ ಬಹುಬುದ್ಧಿವಂತನಾದಾನು" ಎಂದು ಕುಸುಮೆ ವಿಮರ್ಶಿಸುತ್ತಿದ್ದಳು. 'ಯಾರು ಅವನೇ...." ಎಂದು ಉದಾಸೀನದ ಉತ್ತರ ಇವನದು. ಅವಳು ತುಂಬ ಆಸಕ್ತಿಯಿಂದ, ಚಿತ್ರ ನೋಡುತ್ತಿದ್ದುದರಿಂದ ಪತಿಯ ಪ್ರಪಂಚವನ್ನೂ ಮರೆತುಬಿಟ್ಟಳು.

ಸಮಾಪ್ತಿಯಾಯಿತು ಚಿತ್ರ. ಬೆಳಕು ಮಿಂಚಿತು. ಜನಗಳೆಲ್ಲ 'ಹೋ' ಎಂದು ಎದ್ದುನಿಂತರು. ಸುಬ್ಬಯ್ಯ ತೆರೆಯನ್ನು ತೆರೆಗಣ್ಣಿನಿಂದ ನೋಡುತ್ತಲೇ ಇದ್ದ. 'ಏನು? ಚಿತ್ರ ಮುಗಿದರೂ ಕಾಣಿಸುವುದಿಲ್ಲವೆ' --ಅಂದಳು ಕುಸುಮೆ. ಎದ್ದುನಿಂತು ಮೆಲ್ಲಗೆ ಹೊರಕ್ಕೆ ಬಂದ. ಅವರು ರಸ್ತೆಯನ್ನು ಸೇರುವಾಗ ಯಾವೊಂದು ಜಟಕಾಬಂಡಿಯೂ ಕಾಣಿಸಲಿಲ್ಲ. 'ಹೂಂ-ನಡೆದೇ ಹೊಗಬೇಕೆಂದು ಕಾಣುತ್ತದೆ' ಎಂದು ಕುಸುಮೆ ಅಸಮಾಧಾನದ ನುಡಿಗಳನ್ನಾಡಿದಳು. 'ಮತ್ತೇನು ಮಾಡಲು ಬರುತ್ತದೆ? ಯಾವಾಗಲೂ ಒಂದಲ್ಲ ಒಂದು ಜಟಕಾ ನಿಂತಿರುತ್ತಿತ್ತು. ಇವತ್ತೇನು ಶನಿಯೋ" ಎಂದು ಶಾಪವಿಡುತ್ತ ಇಬ್ಬರೂ ಹೊರಟರು.

ನಡೆನಡೆದು ಮನೆಯನ್ನು ಸಮೀಪಿಸಿದರು. ತುಸು ಮುಂಚೆ ವೆಂಕಪ್ಪನ ಮನೆಗೆ ತಿರುಗುವ ಒಂದು ಓಣಿ ಸಂಧಿಸುತ್ತದೆ. ಅಲ್ಲಿ ಅವನ ಕಾಲು ತಡವರಿಸಿತು. "ಕುಸುಮಾ, ನಿನಗೆ ನಿದ್ರೆ ಬಾರದಿದ್ದರೆ ಹೋಗಿಬರುವ" ಎಂದು ಹೇಳಿದ. 'ಘಂಟೆ ಒಂದಾಗುತ್ತಾ ಬಂದಿತು. ನಿದ್ರೆ ಬಾರದಿರುತ್ತದೆಯೇ? ಬೆಳಗ್ಗೆ ಬೇಗನೆ ಹೋಗಬಹುದಲ್ಲ"-ಎಂದುದರಿಂದ ವಿಧೇಯನಾಗಿ ಅವಳ ಹೆಜ್ಜೆಯನ್ನು ಅನುಸರಿಸಿದನು.

ಮನೆಯನ್ನು ಸೇರಿದರು; ಕಾಲು ತೊಳೆದು ಮಲಗಿಕೊಂಡರು. ಕುಸುಮೆಗೆ ಮಲಗಿದೊಡನೆಯೇ ಉಸಿರು ದಟ್ಟವಾಯಿತು. ತಾರಾಲೋಕವು ಮಿಂಚತೊಡಗಿತು. 'ಹೂಂ, ತುಂಬಾ ಆಯಾಸವಾಗಿರಬೇಕು'

ಎಂದು ಸಂತಾಪ ತೋರಿಸಿ, ಸುಬ್ಬಯ್ಯ ಹಾಸಿಗೆಯಲ್ಲಿ ಹೊರಳಾಡಿದ. ಈ ಮಗ್ಗುಲಿಂದ ಆಚೆಗೆ, ಆಚಿಂದ ಈಚೆಗೆ ಮಗ್ಗುಲು ತಿರುಗಿಸಿದ್ದೇ ಬಂತು. ನಿದ್ದೆ ಬರಲಿಲ್ಲ. ಮನಸ್ಸಿನಲ್ಲಿ ಇಲ್ಲದ ಯೋಚನೆಗಳು. 'ಹೇಗೂ ನಿದ್ರೆಯಿಲ್ಲ; ಶೀಲಕ್ಕನಿಗೇನಾಗಿದೆಯೆಂದು ನೋಡಿಕೊಂಡು ಬರಲೇ' ಎಂದು ಹಾಸಿಗೆಯ ಮೇಲೆ ಕುಳಿತನು. ಫಕ್ಕನೆ ಅವಳಿಗೆ ಎಚ್ಚರವಾದರೆ! 'ಈಗಲೇ ಏನು ಅವಸರ...... ಎಂದರೆ' ಎಂದು ತಿರುಗಿ ಮಲಗಿಕೊಂಡನು.

ಹೀಗೆ ನಿದ್ರೆ—ಎಚ್ಚರಗಳ ಹೊಯ್ದಾಟ ಅವನ-ರೆಪ್ಪೆಗಳಲ್ಲಿ ನಡೆಯುತ್ತಲೇ ಇದ್ದು, ಮನೆಗೆ ಬಂದು ಮಲಗಿ, ಒಂದು ತಾಸಾದರೂ ಸಂದಿರಬೇಕು. ಹೊರಗಡೆಯಿಂದ ಯಾರೋ ಕರೆದ ಧ್ವನಿ ಕೇಳಿಸಿತು. 'ಛೀ, ನಿದ್ರೆಯಲ್ಲಿ ಹಾಗೆ ಅನಿಸಿರಬೇಕು' ಎಂದು ತಿರುಗಿ ಒರಗಿದನು. ಇನ್ನಷ್ಟು ಸ್ಪಷ್ಟವಾದ ಕರೆಯು ಕೇಳಿತು.'ಸುಬ್ಬಯ್ಯಣ್ಣ'ಎಂದೇ ಕರೆ ಕೇಳಿಸಿತು. ಕರೆದಾತ ಕಾಳನೆಂಬುದೂ ಸ್ಪಷ್ಟವಾಯಿತು. ಅಲ್ಲಿಂದಲೇ 'ಯಾರು-ಕಾಳನೇ, ಬಂದೆ' ಎಂದ. 'ಅಹುದು' ಎಂದು ಮರುತ್ತರ ಬಂದಿತು. ಹೊರಗಿನ ಕದ ತೆಗೆದು ಬಂದು, ಕಣ್ಣು ಹಿಚುಕಿಕೊಂಡು 'ಏನು ಬಂದೆ ಕಾಳ' ಎಂದು ವಿಚಾರಿಸಿದ. ಕಾಳನು ಬಾಯಿ ನಡುಕದೊಡನೆ "ಅಯ್ಯ ಬರಹೇಳಿದರು" ಎಂದುತ್ತರವಿತ್ತನು.

ಒಮ್ಮೆಗೇ ಎಲ್ಲ ಸ್ಮೃತಿಯೂ ಕೂಡಿ ಬಂದಿತು. ಒಳಕ್ಕೆ ಹೋಗಿ ಕತ್ತಲಲ್ಲೇ ಅಂಗಿ ಸಿಕ್ಕಿಸಿಕೊಂಡು, ಚಪ್ಪಲಿ ಹಾಕಿ, ಮನೆಯ ಅಗಳಿಯನ್ನೆಳೆದುಕೊಂಡು, ತಟಪಟ ಕಾಲಿರಿಸಿ ಮೆಟ್ಟಲಿಂದಿಳಿದ. 'ಏನು ಏಕೆ'ಎನ್ನುವುದಕ್ಕೂ ಹೋಗಲಿಲ್ಲ. ಕುಸುಮೆಯನ್ನು ಎಚ್ಚರಿಸಲೇ-ಎಂದು ಒಮ್ಮೆ ತೋರಿತು. ಆದರೆ ಮರುಕ್ಷಣಕ್ಕೆ 'ಪಾಪ ಮಲಗಿರಲಿ' ಎಂದು ಹೊರಟೇಬಿಟ್ಟ. ದಾರಿಯಲ್ಲಿ ಕಾಳನನ್ನು ವಿಚಾರಿಸಲಾಗಿ "ಶೀಲಕ್ಕನಿಗೆ ಈಗಲೋ ಇನ್ನೊಂದು ಕ್ಷಣವೋ"ಎಂಬುದನ್ನು ತಿಳಿದು ದಿಗಿಲುಹಾರಿತು. ಬರಿಯ ಕೆಮ್ಮು, ನೇವಸ ಎಂಬುದು ಇಷ್ಟು ಅಲ್ಪ ವೇಳೆಯಲ್ಲಿ ಈ ತೆರನ ಘೋರಕ್ಕಿಟ್ಟಿತೇ—ಎಂದು ಕಕ್ಕಾಬಿಕ್ಕಿಯಾದ.

ಆತ, ಓಡೋಡಿ ಅವರ ಮನೆಗೆ ಬಂದನು. ಮನೆಯ ಹೊರಜಗುಲಿಯಲ್ಲಿ ನೆರೆಕರೆಯ ನಾಲ್ಕಾರು ಮಂದಿಯ ಗುಜುಗುಜು ತುಂಬಿತ್ತು.

ಒಳಗಡೆಯಿಂದ ಮಕ್ಕಳ ಅಳು ಕೇಳಿ-ಬರುತ್ತಿತ್ತು. ಒಳಕ್ಕೆ ಕಾಲಿರಿಸು ವಾಗ—ವೆಂಕಪ್ಪ ಕುಳಿತಿದ್ದ. ಶೀಲಕ್ಕ, ದಿಂಬಿಗೊರಗಿ ಪತಿಯ ಮೇಲೆ ಆನಿಸಿಕೊಂಡಿದ್ದಳು. ತುಸು ಸಮೀಪ ನಿದ್ರೆಗಣ್ಣಿಂದ ತೂಗುತ್ತಿದ್ದ ಡಾಕ್ಟರ್ ನಾರಾಯಣರಾಯರು ಕುಳಿತಿದ್ದರು. ವೆಂಕಪ್ಪ ಕುಳಿತಲ್ಲಿಂದ, 'ಡಾಕ್ಟರರೇ, ಇನ್ನೇನೂ ಮಾಡುವಂತಿಲ್ಲವಲ್ಲ. ನೀವೇಕೆ ನಿದ್ರೆ ಬಿಡ ಬೇಕು' ಎಂದ. ಅವರೂ ಎದ್ದು ನಿಂತರು. 'ಗುಡ್‌ನೈಟ್ ಸುಬ್ಬಯ್ಯ' ಎಂದರು. ಅನಂತರ "ಯಾರೂ ಏನೂ ಮಾಡುವಂತಿಲ್ಲ. ಇದು ಇಷ್ಟು ತೀವ್ರದಲ್ಲಿ ಹೀಗೆ ಕೊನೆಗಾಣುವುದೆಂದು ಯಾರು ಊಹಿಸಬೇಕು"— ಎಂದರು. ಆತನ ಕಣ್ಣಿಂದ ನೀರು ಹನಿಯುತ್ತಿತ್ತು. ಕಾಳನನ್ನು ಕರೆದು "ಕಾಳ ಅವರನ್ನು ಮನೆಗೆ ಮುಟ್ಟಿಸಿ ಬಾ" ಎಂದು ಆಜ್ಞೆಮಾಡಿದ.

ಸುಬ್ಬಯ್ಯ ಶೀಲಕ್ಕನ ಬಳಿಯಲ್ಲಿ ಕುಳಿತನು. ಅವನ ಬಾಯಿಂದ ಏನೂ ಹೊರಡಲಿಲ್ಲ. ಎಲ್ಲ ಸ್ಪಷ್ಟವಾಗಿತ್ತು—ಶೀಲಕ್ಕನ ಮಗ್ಗುಲಲ್ಲಿರಿಸಿದ ಕಫ, ರಕ್ತಮಿಶ್ರಿತ ಬಟ್ಟಲುಗಳು ಕತೆ ಹೇಳುತ್ತಿದ್ದುವು. ಆತ ಶೀಲಕ್ಕನ ನಾಡಿ ಹಿಡಿದು ನೋಡಿದ.........ಏನೂ ತಿಳಿಯುತ್ತಿರಲಿಲ್ಲ. ಎದೆ ಜಲ್ಲೆಂದಿತು. ಅಲ್ಲಿನ ರಕ್ತಮಯ ಬಟ್ಟಲನ್ನು ತಾನೇ ಕಾಣಲು ಅಸಹ್ಯಪಟ್ಟು, ಎತ್ತಿ ಬಿಸುಡಲು ಹೊರಟ. ಅವನು ಹಿಂದಿರುಗುವಾಗ, ದುಃಖದಿಂದ ದಣಿದ ವೆಂಕಪ್ಪ, ಶೀಲೆಯನ್ನು ಹಾಗೇ ದಿಂಬಿಗೆ ಆನಿಸಿ ಮಲಗಿಸಿದನು. ಅಲ್ಲಿಂದಲೇ, ಸುತ್ತ ಕವಿದ ಮಕ್ಕಳ ಅಳುವಿನ ಕೋಲಾಹಲ ಹೊರಟಿತು.

ಸುಬ್ಬಯ್ಯ ಒಬ್ಬೊಬ್ಬರ ಹೆಸರು ಹೇಳಿ ಕರೆದು, "ಹೋಗಿ ಮಲಗಿಕೊಳ್ಳಿ. ಅಮ್ಮ ನಿದ್ದೆಮಾಡಲಿ. ನಾಳೆ ಶಾಲೆಯಿಲ್ಲವೇ........' ಎಂದೇನೇನೋ ನುಡಿದ. ಹಿರಿಯಾತ ನಿರಂಜನಗೆ "ಅಮ್ಮ, ನಿದ್ರೆ ಮಾಡುತ್ತಿದ್ದಾಳೆ"ಂಬುದು ತಿಳಿಯುತ್ತಿತ್ತು. ಆತನು ಕದಲಲಿಲ್ಲ. ತಬ್ಬಲಿಯಾಗಿ ಆಚೀಚೆ ನೋಡುತ್ತಿದ್ದ. ಸುಬ್ಬಯ್ಯ ಕೂಸುಗಳ ಸಲುವಾಗಿ ಹಾಸುಗೆ ಹಾಸಿ, ನಿದ್ರೆ ಮಾಡಿದುವುಗಳನ್ನೂ ಮಾಡದವುಗಳನ್ನೂ ಒಳಕ್ಕೆ ಮಲಗಿಸಿ ಬಂದ. ದಣಿವಿನ ಪ್ರಪಂಚವದು—'ಏನಾಗಿದೆ, ಏನಾಗುತ್ತಿದೆ' ಎಂಬ ಪರಿವೆಯಿಲ್ಲ. ನಿರಂಜನನೊಬ್ಬನೇ ಹಟವಾಗಿ ಕುಳಿತ. 'ಅಳದೆ ಇರುವುದಾದರೆ ಇರು' ಎಂದು ನುಡಿದ. ತಿರುಗಿ ಹತ್ತೆಂಟು ನಿಮಿಷಕಾಲ

ಕಳೆಯುಲು ಶೀಲುವಿನ ಹಣೆಯುಮೇಲೆ ಕೈಯನ್ನಿರಿಸಿದ. ಕೈಹಿಂದಕ್ಕೆ ಜಿಗಿಯಿತು. ವೆಂಕಪ್ಪ ಅವಳ ತೋಳುಗಳೆರಡನ್ನು ಚುಂಬಿಸುತ್ತ ಅಳತೊಡಗಿದ. ನಿರಂಜನ ತಾಯಿಯ ಪಾದಗಳ ಮೇಲೆ ಬಿದ್ದು ಅಳಲಾರಂಭಿಸಿದನು. "ಸುಬ್ಬಯ್ಯ, ಆ ಮಕ್ಕಳು ಸಹ ಏಳುವಂತೆ ಮಾಡಿ ಗೋಳಿನ ಅರಣ್ಯ ಎಬ್ಬಿಸಿದರೆ ಏನು ಬಂತು? ನೀವು ಧೈರ್ಯವಾಗಿರಬೇಡವೇ?" ಎಂದು ಉಪಚರಿಸಿದ. "ಈ ಸಂಸಾರ ಕಟ್ಟಿಕೊಂಡು ನಾನಿನ್ನು ಧೈರ್ಯವಾಗಿ ಬದುಕಿಯಾಯಿತು" ಎಂದು ಆತ ತಿರುತಿರುಗಿ ಅಳತೊಡಗಿದ. ಶೀಲು ಬಿಟ್ಟುಹೋದ ಹಿರಿಯ ಸಂಸಾರವನ್ನು ನೆನೆದುಕೊಂಡು, ಸುಬ್ಬಯ್ಯನ ಎದೆಯು ನಡುಗಿತು. ಆದರೆ ಈಗ ಆತನೊಬ್ಬನೇ ಗಂಡುಸಾಗಿ ವರ್ತಿಸಬೇಕಾಗಿದೆ. ಹೊರಕ್ಕೆ ಬಂದು ನೋಡಿದ. ಪರಿಚಿತ ನೆರೆಕರೆಯವರನ್ನು ಕರೆದು ಕೂಡಿಸಿದ. 'ವೆಂಕಪ್ಪ, ಬೆಳಗಾಗುವುದರೊಳಗೆ ಎಲ್ಲ ಮುಗಿಸಿಬಿಡುವುದು ಶ್ರೇಯಸ್ಕರ' ಎಂದು ಕೆಲಸವನ್ನು ಮುಂದುವರಿಸಲು ಆಜ್ಞೆಮಾಡಿದನು.

ಬೆಳಕು ಹರಿಯುವುದರೊಳಗೆ ಆ ಮನೆಯೆಲ್ಲ ರೋದನದಿಂದ ಪ್ರಲಯವಾಗಿತ್ತು. ಕಣ್ಣೆದುರಿಲ್ಲದ ತಾಯಿಗಾಗಿ, ಕೂಸುಗಳ ಅಳು ಹೇಳಿ ತೀರದು. 'ಅಪ್ಪಾ ಅಮ್ಮನನ್ನು ಏನು ಮಾಡಿದಿ' ಎನ್ನುವ ಮಾಧವಿಯನ್ನು, ಸುಬ್ಬಯ್ಯ ಎಷ್ಟು ತಬ್ಬಿ ಸಮಾಧಾನಪಡಿಸಿದರೂ ಸಾಧ್ಯವಾಗಲಿಲ್ಲ. ಉಳಿದವರು ಅತ್ತು ಅತ್ತು ದಣಿವಿನಿಂದಲೇ ಮೂಲೆಹಿಡಿದರು.

ಬೆಳಕು ಹರಿಯಿತು. ಮನೆಯಲ್ಲಿ ಕಾಣಿಸದ ಪತಿರಾಯನ ಹಂಬಲದಿಂದ ಕುಸುಮೆ ವೆಂಕಪ್ಪನಮನೆಗೆ ಹೊರಟಳು. ಹಾದಿಯಲ್ಲೇ, ಹಿಂದಣ ರಾತ್ರಿಯ ವಾರ್ತೆ ದೊರೆಯಿತು. ಮುಖ ತಗ್ಗಿಸಿಕೊಂಡು ಆತುರವಾಗಿ ಗೆಳೆಯನ ಮನೆಗೆ ಬಂದಳು. ಸುಬ್ಬಯ್ಯನ ಭುಜದಿಂದಿಳಿದು ಮಾಧವಿಯು, ಅವಳ ಮೈಯನ್ನು ಏರಲು ಹೋದಳು. "ಸಣ್ಣಮ್ಮ, ಇವರು ಅಮ್ಮನನ್ನೇನೋ ಮಾಡಿದ್ದಾರೆ" ಎಂದು ದೂರುಕೊಟ್ಟಳು. ಶೀಲಕ್ಕನ ಮುಖದರ್ಶನವು ತನಗಾಗದೆಯೆ ಹೋಯಿತಲ್ಲಾ ಎಂದು ಆಕೆಗೂ ನೋವು ನಾಟಿತು. "ನನಗೆ ಒಂದು ಮಾತು ತಿಳಿಸದೆ ಹೋದಿರಲ್ಲಾ" ಎಂದು ಸಾವಿನ ಮನೆಯಲ್ಲೇ, ಸುಬ್ಬಯ್ಯನನ್ನು ಆಕೆ ಚುಚ್ಚಿ ನುಡಿದಳು.

೫ನೆಯ ಅಧ್ಯಾಯ.

ಸೂತಕದ ಮನೆಯು ನರಕವೇ ಅನಿಸಿತ್ತು. ಆರೆಂಟು ಮಕ್ಕಳು ಗಳ ತಾಯ ಹಂಬಲವು ಹಾಹಾಕಾರವಾಗಿ ಗಳಿಗೆ ಗಳಿಗೆಗೂ ಮನೆ ತುಂಬುತ್ತಿತ್ತು. ಸಾವಿನ ಎರಡು ದಿವಸಗಳಲ್ಲಿ, ಶೀಲುವಿನ ತಂದೆತಾಯಂದಿರು ಧಾವಿಸಿ ಬಂದರು. ಅದು ತತ್ಕಾಲಕ್ಕೆ ಇದ್ದ ಕೋಲಾಹಲವನ್ನು ಹೆಚ್ಚಿಸುವುದಕ್ಕೇನೆ ಆಯಿತು. ಅವರು ಬರುವ ತನಕ ಕುಸುಮೆ, ಅವರ ಮನೆಯಲ್ಲಿದ್ದುಕೊಂಡು ಮಕ್ಕಳನ್ನು ನೋಡಿಕೊಂಡಳು. ಅಲ್ಲಿಯ ತನಕ ಅವಳ ಮನಸ್ಸು ಕಠಿಣವಾಗಿದ್ದಂತೆ ಕಂಡರೂ ಮಾಧವಿ,ರಂಜನ, ಮದನರಂಥ ತೀರ ಎಳೆಗೂಸುಗಳ ದರ್ಶನದಿಂದ ಅವಳಿಗೆ ತುಂಬ ಮರುಕವುಂಟಾಯಿತು. ಇತ್ತ ಕೆಲವು ದಿವಸಗಳ ತನಕ ಸುಬ್ಬಯ್ಯನಿಗೆ ವಿರಾಮ ದೊರೆಯಲಿಲ್ಲ. ತನ್ನ ಗೆಳೆಯನ ಕಕ್ಷಿಗಳನ್ನು ಸೇರಿಸಿಕೊಂಡು ಕೋರ್ಟಿಗೆ ಹೋಗಿ ವಾದಿಸಬೇಕಿತ್ತು. ಸೂತಕದ ದಿವಸಗಳು ಕಳೆಯುವ ತನಕ ತಮ್ಮ ಬಿಡುವಿನ ಕಾಲವನ್ನೆಲ್ಲ ಆ ದಂಪತಿಗಳು ವೆಂಕಪ್ಪನ ಮನೆಯಲ್ಲಿ ಕಳೆದರು. ಮುಂದೆ ಮನೆಗೆ ಬಂದ ಅತ್ತೆಮಾವಂದಿರು, ಕೆಲವು ದಿನಗಳ ಕಾಲವಾದರೂ ಸರಿ, ಮಕ್ಕಳನ್ನು ಈ ಆವರಣದಲ್ಲಿದ್ದುಕೊಂಡು ತಾಯನ್ನು ಕನವರಿಸುವುದು ಬೇಡವೆಂದು ತಮ್ಮ ಹಳ್ಳಿಗೆ ಕರೆದೊಯ್ದುರು. ಅಂದು ಕುಸುಮೆ ತನ್ನ ಮನೆಗೆ ಬಂದಳು. ಅವರ ಮನೆಯಲ್ಲಿ ಉಳಿದವರೆಂದರೆ— ವೆಂಕಪ್ಪ ಮತ್ತು ಕಾಳ ಮಾತ್ರ.

ತಿಂಗಳು ಸರಿಯಿತು. ಅಜ್ಜನ ಮನೆಯನ್ನು ಸೇರಿದ ಕೂಸುಗಳಲ್ಲಿ ಹಿರಿಯರು ಮೂವರು—ನಿರಂಜನ, ಜಮುನ, ಮೋಹನರು. ಶಾಲೆ ತಪ್ಪಿಸಬಾರದೆಂದು ಅಂಜಿ ಮಂಗಳೂರಿಗೆ ಮರಳಿ, ತಮ್ಮ ದಿನ ಕೆಲಸಗಳಲ್ಲಿ ನಿವೃತ್ತರಾದರು. ಆದರೂ ಮನೆಯಲ್ಲಿ ಕುಳಿತಾಗ ತಾಯ ನೆನಪು ಬಾರದಿದ್ದೀತೆ? ಅದನ್ನು ಮರೆಯುವುದಕ್ಕೆಂದು ಆಗಾಗ ಸುಬ್ಬಯ್ಯನ ಮನೆಗೆ ಹೋಗುವರು. ಜಮುನೆ ಕುಸುಮೆಯ ಹಿಂದೆಯೇ ಮೂಕಿಯಂತೆ ಸುಳಿದಾಡುವಳು. ಹಾಗೆ ಬರಿಯ ಮಕ್ಕಳಷ್ಟೇ ಮನೆಗೆ ಬರುವುದಿಲ್ಲ. ಅವರ ಬೆನ್ನಿಗೆ ವೆಂಕಪ್ಪನೂ ಆಗಾಗ ಬರುವನು. ಕುಸುಮೆಯ ಮುಂದೆ ಕುಳಿತು, ತನ್ನ ಸಂಸಾರವನ್ನು ಬೆಳಗಿ ಮಾಯವಾದ

ಮಡದಿಯನ್ನು ಕುರಿತು ಆಗಾಗ ಹೊಗಳಿ, ಕಣ್ಣೊರಸಿಕೊಳ್ಳುವ. ಆಗ ಕುಸುಮೆಯೇ ಸಮಾಧಾನ ಹೇಳಬೇಕು. "ಎಷ್ಟು ನೆನೆದು ಏನು ಫಲ? ಹೋದ ಬದುಕು ತಿರುಗಿ ಬರುವುದುಂಟೇ? ಇಷ್ಟು ಮಕ್ಕಳಿದ್ದಾರೆ. ಅವರನ್ನು ಕಂಡಾದರೂ ನಿಮ್ಮ ವ್ಯಥೆಯನ್ನು ಮರೆಯಲು ಕಲಿಯಬೇಕು................"ಎನ್ನುವಳು. ಎಲ್ಲಾದರೊಮ್ಮೆ ಆತ 'ಇಷ್ಟು ದಿನ ಜತೆಯಾಗಿ ಜೀವಿಸಿ, ಈಗ ಒಬ್ಬನೇ ದಿನಕಳೆಯಬೇಕಾದುದನ್ನು ನೆನೆದರೆ..................."ಎಂದು ತಿರುಗಿ ಶೋಕದಲ್ಲಿ ಕಣ್ಣೊರಸಿಕೊಂಡರೆ ಕುಸುಮೆ-"ಯಾಕಿಷ್ಟು ಕೊರಗುತ್ತೀರಿ? ನಿಮಗೇನು ಹೆಚ್ಚಿನ ವಯಸ್ಸೆ? ಮೂವತ್ತೈದೋ ಮೂವತ್ತಾರೋ ಅನ್ನುತ್ತೀರಿ........"ಎಂದು ಮಾತು ಎದುರೊಡ್ಡುವಳು. ನಿಜ—ವೆಂಕಪ್ಪನ ಮನಸ್ಸು ಮೊದಲು ಕೆಲವು ದಿವಸಗಳ ತನಕ ಶೋಕದಿಂದ ತುಂಬಿಕೊಂಡಿದ್ದರೂ, ಈಗ ವಿರಹ, ಮುಂದಣ ಏಕಾಕಿತನಗಳನ್ನು ನೆನೆದು ನೋಯುತ್ತಿದೆ. ಅದರಲ್ಲಿ ಎರಡನೆಯ ಲಗ್ನದ ನೆನಪು ಹಾಯದೆಯೆ ಇಲ್ಲ. ತಾನು ಬಹುಕಾಲ ಒಂಟಿ ಜೀವನ ನಡೆಯಿಸಲಾರೆನೆಂದು ಅವನ ಮನಸ್ಸೂ ಹೇಳುತ್ತಿತ್ತು; ಆದರೆ ಮರುಮದುವೆಯನ್ನು ನೆನೆದರೆ ಮಾತ್ರ ಅಂಜಿಕೆಯಾಗುತ್ತದೆ! ಮಲತಾಯನ್ನು ಮನೆಗೆ ಹೊಗ್ಗಿಸಿದರೆ ಮಕ್ಕಳ ಗತಿಯೇನೆಂದು-ಒಂದು ಭೀತಿ. ಈಗಲೇ ಆರು ಮಕ್ಕಳು ತುಂಬಿರುವ ಮನೆಯಲ್ಲಿ ಇನ್ನೆಷ್ಟು ತುಂಬಿಸಬಂದೀತು; ನಾಳೆ ಅವರ ಹೊಟ್ಟೆ ಹೊರೆದು ಬೆಳೆಯಿಸಿ ಬರಬೇಡವೇ ಎಂಬುದು ಇನ್ನೂ ಹೆಚ್ಚಿನ ಭೀತಿ. ಇವುಗಳಿಂದಾಗಿ, ಕುಸುಮೆ ಪುಷ್ಟಿಕೊಟ್ಟರೂ-ಮನಸ್ಸು ಮಾತ್ರ ಅಳುಕುತ್ತಿತ್ತು-ಮದುವೆಯ ಯೋಜನೆಯನ್ನು ಮುಂದುವರಿಸಲು.

ಇತ್ತ ಕುಸುಮೆಯು ತನ್ನ ಮೊದಲಿನ ತೂಕಕ್ಕೆ ಬಂದಳು; ಅಷ್ಟು ದಿವಸ ಶರೀರದ ಅಶಕ್ತಿಯಿಂದ, ಮನಸ್ಸಿನ ಬೇಸರದಿಂದ ಸ್ತ್ರೀಸಮಾಜದ ಕಡೆಗೆ ಅಪೂರ್ವವಾಗಿ ಪೋಗುತ್ತಿದ್ದಳಷ್ಟೆ. ಈಗೀಗ ನಿತ್ಯ ಹೋಗತೊಡಗಿದಳು. ಹೋಗಿ ಬರುತ್ತಿದ್ದಂತೆ, ಸಮಾಜದ ಸ್ಥಾಪಕರಲ್ಲಿ ಒಬ್ಬಳಾದ ಶೀಲಕ್ಕನ ನೆನೆಪೂ ಆಗುತ್ತಿತ್ತು. "ಇಲ್ಲ, ಆಕೆಯ ನೆನೆಪು ಉಳಿಯುವಂತೆ, ಒಂದು ಭಾವಚಿತ್ರವನ್ನಾದರೂ ನಮ್ಮ ಸಮಾಜದಲ್ಲಿ ತೂಗಾಡಿಸಬೇಕು"-ಎಂದು ತೋಚಿತು. ಈ ಸಂಗತಿಯನ್ನು ಸಮಾಜದಲ್ಲಿ ಪ್ರಸ್ತಾಪಿ

ಸಲು,ಎಲ್ಲರೂ ಸಹಿಮಾಡಿದರು. ಆದುದರಿಂದ ಒಂದು ದಿವಸ ಅವಳ ಚಿತ್ರ ಗೋಡೆಯ ಮೇಲೆ ನಿಲ್ಲುವಂತಾಯಿತು. ಚಿತ್ರವನ್ನು ತೂಗಿಸುವ ತನಕ ಇದ್ದ ಉತ್ಸಾಹ, ತೂಗಿಸಿದ ಮೇಲೆ ಕುಸುಮೆಗೆ ಉಳಿಯಲಿಲ್ಲ. ಏನೋ ಒಂದು ಅಶಾಂತಿ. ಅದೊಂದೇ ಚಿತ್ರ ಅಲ್ಲಿ ತೂಗಿರಲು ಅವಳೊಬ್ಬಳೇ ಸಮಾಜದ ನಿರ್ಮಾತೃವೇ? ತಾನೇ ಮೂಲಕಾರಣಳಲ್ಲ-ಎಂಬ ಭಾವನೆ. ಆದರೆ ಸಾವಿಗೂ ಭಾವಚಿತ್ರಕ್ಕೂ ಮೇಳವಾದುದನ್ನು ಕಂಡು ಜತೆಯಲ್ಲೇ ಕಳವಳ. ಆದರೆ ಸತ್ತಮೇಲೆ ಇತರರ ಕಣ್ಣಿಗೆ ಮಣ್ಣೆರೆಚಿದರೆ ಬಂತೇನು? ಬದುಕಿರುವಾಗ ತಮ್ಮನ್ನು ಜನ ಗೌರವಿಸುತ್ತಿದ್ದಾರೆಂದು ತಿಳಿದರೆ ಒಂದು ಸಂತೋಷವಲ್ಲವೇ--ಎಂದು ಮನಸ್ಸು ಹೇಳುತ್ತಿತ್ತು.

ಈ ಎಲ್ಲ ಆಸೆಗಳು ಅವಳ ನಿತ್ಯದ ಚಟುವಟಿಕೆಗಳಲ್ಲಿ ವಿಚಿತ್ರ ತೆರನಾದ ಕನಸುಗಳನ್ನು ಹೆಣೆಯತೊಡಗಿದುವು. ಮೊದಲು ಶೀಲಕ್ಕ ಅವಳ ಬಲಗೈಯಂತಿದ್ದರೆ ಈಗ, ಅವಳ ಸ್ಥಾನದಲ್ಲಿ ಒಬ್ಬ ಹೊಸ ಗೆಳತಿ ದೊರಕಿದ್ದಾಳೆ. ಮಿಸ್. ನಾರಾಯಣಿಯು ಅಂತಹಳು. ಅವಳು ವೃತ್ತಿಯಲ್ಲಿ ಉಪಾಧ್ಯಾಯಿನಿ. ತುಂಬ ಉತ್ಸಾಹಶಾಲಿ. ಈಗ ಶೀಲಕ್ಕನ ಸ್ಥಾನದಲ್ಲಿ ಕುಸುಮೆ ಅಧ್ಯಕ್ಷೆ; ನಾರಾಯಣಿಯೇ ಕಾರ್ಯದರ್ಶಿನಿ. ನಾರಾಯಣಿಯ ಮನಸ್ಸಿನಲ್ಲಿ 'ಇನ್ನಾರು ತಿಂಗಳಿಗೆ ನಮ್ಮ ಸಮಾಜಕ್ಕೆ ಐದು ವರ್ಷ ತುಂಬುತ್ತದೆ. ಸಣ್ಣದೊಂದು ತರಹದಲ್ಲಿ ಒಂದು ಜುಬಿಲಿ ಉತ್ಸವ ಮಾಡಬೇಕು.ಬರುವ ವರ್ಷ ಅವರ ವನಿತಾನಿಲಯದ'ಸಿಲ್ವರ್ ಜ್ಯುಬಿಲಿ'ಯಂತೆ! ಅವರು ಇಪ್ಪತ್ತೈದು ವರ್ಷಗಳಲ್ಲಿ ಕೊಚ್ಚಿದ ಮಹಾ ಕೆಲಸಕ್ಕಿಂತ, ನಮ್ಮ ಐದು ವರ್ಷದ ಸಾಹಸವೇ ಮಿಗಿಲು" ಎಂದಳು.

ಈ ಯೋಚನೆ ಕುಸುಮೆಯ ಮನಸ್ಸನ್ನು ತುಂಬ ಹಿಗ್ಗಿಸಿತು. 'ನಾವು ಐದನೆಯ ವರ್ಷ ಮುಗಿಸುವ ವೇಳೆಗೆ ಸರಿಯಾಗಿ ಒಂದು ಸ್ವಂತ ಮಂದಿರವನ್ನೇ ಕಟ್ಟಿಸುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೇ?' ಎಂದಳು. ಅದೇ ದಿವಸವೇ ಸೂಚನೆಯು ಸದಸ್ಯೆಯರ ಮನಸ್ಸುಗಳಲ್ಲಿ ಉತ್ಸಾಹ ಕ್ರಾಂತಿಯನ್ನುಂಟುಮಾಡಿತು. ಅವಳೊಬ್ಬ ಸದಸ್ಯೆಯೇ ಹೆಚ್ಚಿನ ದಾನ ಮಾಡಲಾರಳಾದವಳೂ, ಊರಲ್ಲಿ ಬೇಡಿಯಾದರೂ ಒಂದು ಸ್ವಂತ ಕಟ್ಟಡಮಾಡಿದರೆ ಚೆನ್ನ--ಎಂಬ ವಿಷಯದಲ್ಲಿ ಎಲ್ಲರೂ

ವಿಕಕೆಂಠರಾದರು. ವನಿತಾನಿಲಯದ ಮುಂದೆ ಸ್ತ್ರೀಸಮಾಜ ತಲೆತಗ್ಗಿಸಿ ನಿಲ್ಲಕೂಡದೆಂಬುದೇ ಮುಖ್ಯ ಕಾರಣ. ನಾರಾಯಣಿಯಂತು "ನಾವಿಷ್ಟೆಲ್ಲ ಸಾರ್ವಜನಿಕ ಕೆಲಸಮಾಡುವಾಗ, ಯಾರೂ ಸಹಾಯ ಒಲ್ಲೆನ್ನಲಾರರು. ಬೇಕಾದರೆ ಆಚೆ ಕ್ಲಬ್ಬಿನವರ ಮನೆಗಳಿಗೆ ಬೇಡಲು ಹೋಗಬೇಕಾಗಿಲ್ಲ... ನಾನು ನಾಳೆಯಿಂದಲೇ ಒಂದು 'ವೆರೈಟಿ ಶೋ'ವಿಗೆ-ತಯಾರುಮಾಡುತ್ತೇನೆ. ನಾವಿಷ್ಟು ಮಂದಿಯೂ ಟಿಕೇಟು ಮಾರಲು ಹೊರಟರೆ ರೂ. ೫೦೦ಕೂತಲ್ಲಿ ಸೇರುತ್ತದೆ" ಎಂದು ಸಾರಿದಳು.

ಈ ಅಮಲು ಕುಸುಮೆಯ ತಲೆಯನ್ನೂ ಸೇರಿತು."ಯಾವುದಕ್ಕೂ ಸಮನಾದ ಜಾಗ ಅರಸಿ,ಒಂದು ಕಟ್ಟಡದ ಪ್ಲೇನ್ ಮತ್ತು ಅಂದಾಜು ಮಾಡಿಸುವ" ಎಂದಳು. ಮರುದಿವಸವೇ ದುಂದುಭಿಯ ಸಂಪಾದಕನನ್ನು ಕರೆಯಿಸಿ ಈ ವಿಷಯವಾಗಿ ಒಂದು ಅಗ್ರಲೇಖನವನ್ನು ಬರೆಯಲು ಏರ್ಪಡಿಸಿದಳು. ಆದರೂ ಗಂಡನ ಮುಂದೆ, ಈ ವಿಷಯ ಪ್ರಸ್ತಾಪಮಾಡಲು, ಇನ್ನೂ ಎರಡು ಮೂರು ದಿವಸ ಹೋಯಿತು. ಒಮ್ಮೆಗೇ 'ಪುಸ್' ಮಾಡಿಬಿಟ್ಟರೆ—ಎಂದು ನಿಧಾನಿಸಿದಳು. ಆದರೂ ಅವನ ನೆರವಿಲ್ಲದೆ ಸಾಧ್ಯವಿಲ್ಲ--ಎಂಬುದರಿಂದ, ಒಂದು ದಿವಸ ನಾರಾಯಣಿಯನ್ನು ಮುಂದಕ್ಕಿರಿಸಿಕೊಂಡು, ಮಾತಿಗೆ ಪೀಠಿಕೆ ಹಾಕಿಸಿ, ಮುಂದೆ ಅರೆತಾಸಿನ ತನಕ ಬಿಡುವಿಲ್ಲದೆ ಮಾತನಾಡಿದಳು. ಅದರಲ್ಲಿ ಮುಖ್ಯ ವಿಷಯ—ಎದುರು ಪಂಗಡದ ವನಿತಾಲಯದ ದೂಷಣೆಯೇ ಇತ್ತು. ಸುಬ್ಬಯ್ಯ-ಹುಬ್ಬನ್ನೆತ್ತಿ ನಸುವಾಗಿ ನಕ್ಕ. ಹೌದು, ಕುಸುಮ, ಕ್ಲಬ್ಬಿಗೆ ಸ್ವಂತ ಕಟ್ಟಡವಿದ್ದರೆ ಚೆನ್ನಾಗುತ್ತದೆ. ಆದರೆ ನೋಡು ಅದು ಸುಲಭದ ವಿಷಯವೇ? ಏನಾದರೂ 10,000ರೂಪಾಯಿಗಳು ಎದುರಿಗೆ ಇಲ್ಲದೆ ಸಾಧ್ಯವೇ? ಅದರಿಂದಲೇ ಅಲ್ಲವೇ-ನಮ್ಮ ಕ್ಲಬ್ಬಿಗೆ ಅಷ್ಟೆಲ್ಲ ವರಮಾನವಿದೆ, ಆದರೂ ಅಲ್ಲಿಂದಲ್ಲಿಗೆ ಆಗಿ ಬಾಡಿಗೆ ಕಟ್ಟಡದಲ್ಲಿಯೇ ಉಳಿದುಕೊಂಡಿದ್ದೇವೆ"-ಎಂದ.

"ಹೌದು-ನೀವು ಗಂಡುಸರಿಗೆ ಯಾವುದೂ ಬೇಕಿಲ್ಲ.ಎರಡು ಇಸ್ಪೀಟಿನ ಪಿಡಿಗಳಿದ್ದರೆ ನಿಮ್ಮ ಕ್ಲಬ್ಬು ನಡೆಯುತ್ತದೆ. ನಮಗೆ ಹಾಗೇನು? ಎಷ್ಟೆಲ್ಲ ಕ್ಲಾಸುಗಳಿವೆ. ಈಗ ಕುಕ್ಕಿಂಗ್ ಕ್ಲಾಸು ಸಹ ತೆರೆಯಬೇಕೆಂದಿದ್ದೇವೆ. ಈಗ ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆಗೇ ಹೋಗುತ್ತದೆ-

ಜಾಗ ಸಾಲುವುದಿಲ್ಲ. ಸ್ವಂತ ಕಟ್ಟಡವಿದ್ದರೆ ವರ್ಷಕ್ಕೆ 120 ರೂಪಾಯಿ ಉಳಿತಾಯವಾಗುವುದಿಲ್ಲವೇ" ಎಂದು ವಾದಿಸಿದಳು. "ಮೊದಲಿಗೆ ನೀವು ನನ್ನ ಹೆಸರಿನಲ್ಲಿ ಎಷ್ಟು ಹಾಕುತ್ತೀರಿ?" ಎಂದು ಕೇಳಿಯೇ ಬಿಟ್ಟಳು. "ಉಳಿದವರೆಲ್ಲ ಏನು ಕೊಡುವರೆಂದು ನೋಡುವ. ನಾವೇನು ಕೊಡಬಹುದು. ನಮ್ಮ ಯೋಗ್ಯತೆಗೆ ತಕ್ಕ ಹಾಗೆ ಕೊಟ್ಟರಾಯಿತು" ಎಂದು ಉತ್ತರ ಬಂದಿತು. ಬಹಳ ಬಲವಂತ ಮಾಡಿದಬಳಿಕ ಸುಬ್ಬಯ್ಯ 'ನೂರು ರೂಪಾಯಿ ಕೊಡುವ. ಆಯಿತಲ್ಲ' ಎಂದು ಉದಾರವಾಗಿ ನುಡಿದು ಬಿಟ್ಟ. ಕುಸುಮೆಯ ಮುಖ ಸಪ್ಪಗಾಯಿತು. ನಾರಾಯಣಿಯ ಮುಂದೆ ತನ್ನನ್ನು ಅವಮಾನಿಸಿದಂತಾಯಿತೆಂದು ಅವಳು ತಿಳಿಯುವಳೋ ಎಂದು ಅಂಜಿ 'ಹೂಂ, ನನಗೇನು ನೀನು ಕೊಡಬೇಕೆನ್ನುವಷ್ಟು ಕೊಡುತ್ತೇನೆ. ನಮಗೆ ಕೊಡುವ ತ್ರಾಣವೆಷ್ಟು ಇದೆಯೆಂದು ನಿನಗೆ ತಿಳಿಯದ್ದೇನು?" ಎಂದು ಹೇಳಿದ ಬಳಿಕ, ಅವಳು ಸಮಾಧಾನಗೊಂಡಳು. "ನಾವು, ಮೊದಲು ಊರವರಲ್ಲಿ ಭಿಕ್ಷೆ ಕೇಳಿ ನೋಡುವ. ಎಷ್ಟಿಮೇಟಂತು ಮೊದಲು ಆಗಬೇಕು. ನಮ್ಮ ನಮ್ಮವರು ಏನು ಓಡಿಹೋಗುತ್ತಾರೆಯೇ?" ಎಂದು ನಾರಾಯಣಿಯು ನಡುವೆ ವಕೀಲಿ ನಡೆಸಿದಳು. ಆ ಗಳಿಗೆಗೇನೋ ವಿಷಯ ಕೊನೆಗೊಂಡಿತು.

ಆದರೆ ವಾರ ಮುಗಿಯುವುದರಲ್ಲಿ ಮೂರಾವರ್ತಿ ಗಂಡನೊಡನೆ ಕುಸುಮೆ ಅದೇ ಅದೇ ಪ್ರಸ್ತಾಪವನ್ನು ತೆಗೆದಳು. ಇನ್ನೊಮ್ಮೆ ವೆಂಕಪ್ಪ ತಮ್ಮಲ್ಲಿಗೆ ಹರಟೆಗೆ ಬಂದಾಗ ಸುದ್ದಿಯನ್ನು ಮುಂದಿರಿಸಿದಳು. "ವೆಂಕಪ್ಪಣ್ಣ, ಇವರಿಗೆ ಹೇಳಿದರೆ ಕಿವಿಯ ಮೇಲೆ ಹಾಕಿಕೊಳ್ಳುವುದೇ ಇಲ್ಲ. ನೀವು ನಮಗೊಂದು ಜಾಗ ಹುಡುಕಿ ಕೊಡಿ ನೋಡುವ. ಕೊಡಿಯಾಲ ಬೈಲಿನಲ್ಲೇ ಆಗಬೇಕು, ರಸ್ತೆಗೆ ತಾಗಿರಬೇಕು" ಎಂದು ಉದ್ದೇಶವನ್ನು ವಿವರಿಸಿದಳು. 'ಬೇಗನೆ ಚಂದವಾದ ಆಯ ತಯಾರಿಸಿ, ಅಂದಾಜು ಮಾಡಿಸಿ ಕೊಡಬೇಕು' ಎಂದಳು. 'ಆಗಲಿ ನೋಡುವ' ಎಂದು ಉತ್ತರ ಬಂದಿತು. 'ಆಯ, ಪಾಯ, ಅಂದಾಜು ಮಾತ್ರ ಜಾಗ ನೋಡದೆ ಮಾಡಿ ಫಲವಿಲ್ಲ.' ಎಂದನು ಆತ.

ಆತ ಮನೆಗೆ ಹಿಂದಿರುಗುವಾಗಲೇ ಶೀಲಕ್ಕನ ನೆನವರಿಕೆಯಿಂದ ಮರಳಿ ಹೋದನು. ಕತ್ತಲಾಗಿ ಮನೆಯ ಮುಂಬಾಗಿಲಿಗೆ ಕದವಿಕ್ಕಿದ್ದರೆ

ಮೆಟ್ಟಿಲಿನ ಮೇಲೆ ಕಾಲು ಸಪ್ಪುಳ ಕೇಳಿ ಕದತೆರೆಯುವ ಅರಸಿಯನ್ನು ನೆನೆಯುತ್ತಿದ್ದ. ಅದರ ಜತೆಗೆ 'ಶೀಲು'ವಿನ ಭಾವಚಿತ್ರ ಕ್ಲಬ್ಬಿಗೆ ತೂಗಿದುದನ್ನು ಕೇಳಿ ಅವಳ ಚಿತ್ರವೇ ಕಣ್ಮುಂದೆ ನಿಂತಿತು. ಏಕೆ ಅವಳ ಸ್ಮರಣೆಯನ್ನು ಇನ್ನಷ್ಟು ಚಿರಸ್ಥಾಯಿಯಾಗಿ ಮಾಡಬಾರದೆಂಬ ಪ್ರಶ್ನೆಯೂ ಮನದಲ್ಲಿ ಮೂಡಿತು. ಕುಸುಮೆಯ ಸೂಚನೆಯು ಆ ಪ್ರಶ್ನೆಯನ್ನುತ್ತರಿಸುವಂತೆ ಕಂಡಿತು. "ಏನು, ಅವಳ ಹೆಸರಿನಲ್ಲೊಂದು ಮಂದಿರವೇ!" ಎಂದು ನೆನೆದ. ಗಾಬರಿಯಾಯಿತು. ಮಂದಿರ ಕಟ್ಟಬಹುದು—ಆದರೆ ಯೋಗ್ಯತೆಯೆಲ್ಲಿದೆ? ಹತ್ತೆಂಟು ಸಾವಿರಗಳನ್ನು ವ್ಯಯಿಸಿ ದಾನಮಾಡಲು ತನ್ನ ಯೋಗ್ಯತೆಯೇನು? ವರಮಾನವೇನು? ಆಯಕ್ಕೂ ವ್ಯಯಕ್ಕೂ ಅಲ್ಲಿಂದಲ್ಲಿಗಾಗಿ—ದಿನ ಸರಿಯುತ್ತದೆಂಬಷ್ಟೇ ಮಿತದ ಬಾಳ್ವೆ ತನ್ನದಲ್ಲವೇ—ಎಂಬ ಕಠಿಣ ಸತ್ಯವೂ ಎದುರಿಗೆ ಮಿಂಚಿತು.

ರಾತ್ರಿಯೆಲ್ಲ ಅದೇ ಯೋಚನೆ. ಕನಸಿನಲ್ಲೂ 'ತಾಜಮಹಾಲ್' ನಿರ್ಮಾಣ ನಡೆಯುತ್ತಿತ್ತು. 'ಹೋಗಲಿ, ಇಡಿಯ ಕಟ್ಟಡವನ್ನು ಕಟ್ಟಿಸಿ ಕೊಡಲಾರೆ. ಆದರೆ ಉಪಾಯದಿಂದ ಒಂದು ಸ್ಥಳವನ್ನಾದರೂ ದೊರಕಿಸಿ ಕೊಡಬಲ್ಲೆನಾದರೆ—ಅಷ್ಟೇ ಸಾಕು.' ಎಂದು ತೀರ್ಮಾನಿಸಿದನು. ಅಂದಿಂದ ಮನೆಗೆ ಬಂದ ಊರಿನ ಕಕ್ಷಿಗಾರರಲ್ಲಿ ಸ್ಥಳಕ್ಕಾಗಿ ಗಾಳ ಹಾಕತೊಡಗಿದನು.

ಕುಸುಮೆಯಂತು ನವಮಂದಿರದ ಉಲ್ಲಾಸದ ಕನಸಿನಲ್ಲಿ ನೆಲವನ್ನೇ ಮೆಟ್ಟುತ್ತಿರಲಿಲ್ಲ. ಅದಕ್ಕಾಗಿ ಕ್ಲಬ್ಬಿನ ಹಲವು ಸಭೆಗಳು ಕರೆಯಲ್ಪಟ್ಟುವು. ಯಾರಲ್ಲಿಗೆಲ್ಲಾ ಹೋಗಬೇಕು? ಯಾರು ವಂತಿಗೆಪಟ್ಟಿ ಹಿಡಿಯುವವರು, ಮಂದಿರದಲ್ಲಿ ಏನೇನು ಸೌಕರ್ಯಬೇಕು -- ಎಂದು ಚರ್ಚಿಸಿದರು. ಅವರ ಬಯಕೆಗಳೆಲ್ಲ ಬಸಿರಾಗುವುದಾದರೆ ೧೦,೦೦೦ ವಲ್ಲ ೫೦,೦೦೦ವೂ ಕಡಮೆಯೇ. ಆದರೂ ಸವಿಗನಸುಗಳಿಗೇಕೆ ತಡೆ? ಒಂದು ತಿಂಗಳಕಾಲ ಇದರಂತೆಯೇ ಸುಖಸ್ವಪ್ನಗಳಲ್ಲಿ ಕಳೆಯಿತು. 'ಅಯ್ಯೋ, ಇನ್ನೈದು ತಿಂಗಳೊಳಗೆ ಆಗಿದ್ದರೆ ಲೇಸಿತ್ತು' ಎಂದು ಅನಿಸುವಂತಾಯಿತು. ಗಂಡನನ್ನು—ಕಟ್ಟಡದ ಪಾಯಮಾಡಿಸಿ ಕೊಡಿರೆಂದು ಕಾಡತೊಡಗಿದಳು. 'ನೋಡುವ, ವೆಂಕಪ್ಪನ ಹತ್ತಿರ ಕಟ್ಟಡದ ವಿಷಯ ಹೇಳಿದ್ದೀಯಲ್ಲ. ಅದು ಆಗಲಿ, ಮೊದಲೇ ಪ್ಲೇನು, ಪಾಯಗಳೆಂದರೆ

—ಮೇಜಿನ ಮೇಲೆ ಕಟ್ಟಡವನ್ನು ಬೆಳೆಯಿಸುವುದೇ?' ಎಂದು ಆತ ವಾಯಿದೆ ಮುಂದುವರಿಸಿದನು.

ಇತ್ತೀಚೆಗೆ ಕೆಲವು ದಿವಸಗಳಿಂದ ವೆಂಕಪ್ಪಣ್ಣನು ಮನೆಯ ಕಡೆಗೆ ಬಾರದಿದ್ದುದಕ್ಕಾಗಿ ಕುಸುಮೆ ಚಡಪಡಿಸಿದಳು. 'ಈ ಗಂಡಸರಿಗೆ ನಾವೆಲ್ಲ ಹೇಳಿದುದು ನಾಲ್ಕು ನಿಮಿಷ ಕಿವಿಯಲ್ಲಿ ಉಳಿಯುತ್ತದೆಯೋ ಇಲ್ಲವೋ' ಎಂದಳು. ಆ ದಿನ ತಾನೇ ಅವರ ಮನೆಗೆ ಹೋಗಿ ಎಚ್ಚರಿಸಿ ಬರುತ್ತೇನೆ ಎಂದು ಹವಣಿಸುವಾಗಲೇ ಆತ ಬಂದನು. 'ಸ್ಥಳವೊಂದು ಕಂಡಿದ್ದೇನೆ, ಸಿಗುವ ಏರ್ಪಾಟು ಮಾಡಿದ್ದೇನೆ. ಆದರೆ ನಿಮ್ಮ ಕಣ್ಣಿಗೆ ಪಸಂದವಾಗಬೇಕಲ್ಲ'-ಎಂದು ಹೇಳುತ್ತಲೇ, ಕುಸುಮೆ ಜಿಗಿದು ಹಾರಿದಳು.'ಎಲ್ಲಿ,ಏನು, ಬನ್ನಿ ಹೋಗುವ' ಎಂದು ಎದ್ದು ನಿಂತಾಯಿತು. ಮನೆಯ ಆಳನ್ನು ಕ್ಲಬ್ಬಿಗೂ ಕಳುಹಿಸಿ, ತನ್ನ ಕೆಫ್ತಾನ ನಾರಾಯಣಿಯನ್ನು ಕರೆಯಿಸಿಕೊಂಡು ಹೊರಟೇಬಿಟ್ಟಳು. ಸ್ಥಳವೇನೂ ದೂರವಾಗಿರಲಿಲ್ಲ. ಅವರ ಬಯಕೆಗಳನ್ನು ಕೈಗೂಡಿಸುವಂತಿತ್ತು; ಪ್ರಮುಖ ರಸ್ತೆಗೆ ಎದುರಾಗಿತ್ತು. ಮೆಚ್ಚಿ ನಿಂತರು. 'ಕಟ್ಟಡ ಎಲ್ಲಿ ಹಾಕಿದರೆ ಚಂದ' ಎಂದು ಗೋಪುರ ನಿರ್ಮಾಣಕ್ಕೆ ತೊಡಗಿಯೂ ಆಯಿತು.

ಸುಬ್ಬಯ್ಯ "ಇದಕ್ಕೆ ಎರಡು ಸಾವಿರವಾದರೂ ಹೇಳಲಾರರೆ....?" ಎಂದ. 'ಎರಡು ಸಾವಿರವಲ್ಲ ಮೂರಾದರೂ ತೆಗೆದುಕೊಳ್ಳುವುದೇ' ಎಂದಳು ಕುಸುಮೆ. 'ತೆಗೆದುಕೊಳ್ಳುವವರ ಕೈಯಲ್ಲಿ ಮೊದಲು ಎಷ್ಟಿದೆಯೆಂದು ನೋಡಬೇಡವೇ' ಎಂದ ಸುಬ್ಬಯ್ಯ. "ಅದೇಕೆ? ನೀವು ನನಗೆಂದು ಹಣ ಸಾಲಕೊಡಿ" ಎಂದು ಕುಸುಮೆಯ ವಾದ. ಅಂತು ಸಂತೃಪ್ತಿಯ ಕುದುರೆಯೇರಿ ಮನೆಗೆ ಮರಳಿದರು. ಮರಳುತ್ತ ವೆಂಕಪ್ಪಣ್ಣ "ಎರಡು ಸಾವಿರವೇನು ಬೇಕಿಲ್ಲ. ಇದು ಅದಕ್ಕೂ ಕಡಿಮೆ ಸಿಗಬಹುದು. ಯಾವುದಕ್ಕೂ ಮಾತು ಮುಗಿದಿಲ್ಲ. ನೋಡುವ............ನನಗೆ ನಮ್ಮ ಶೀಲುವಿನ ನೆನಪಿಗೇನೆ ಜಾಗ ತೆಗೆಯಿಸಿಕೊಡುವ ಎಂದಿದೆ....." ಎನ್ನುತ್ತಲೇ 'Ideal' ಎಂದಳು ಕುಸುಮೆ. ಮನೆಗೆ ಹೋದ ಮೇಲಂತು "ನೋಡಿ ನಿಮ್ಮ ಪುರಿಕಂಟಣನಕ್ಕೂ, ವೆಂಕಪ್ಪಣ್ಣನ ಧಾರಾಳ ಬುದ್ಧಿಗೂ ಔದಾರ್ಯಕ್ಕೂ!" ಎಂದು ಹಂಗಿಸಿ "ಇನ್ನಾದರೂ ಒಂದು ಹತ್ತು ಸಾವಿರದ ಅಂದಾಜಿನ ಕಟ್ಟಡದ ಪಾಯ ತಯಾರಿಸಿಕೊಡಿ" ಎಂದಳು.

ಮಾರುದಿನ ದುಂದುಭಿಯಲ್ಲಿ ಕುಸುಮಪ್ರೇರಿತ ಅಗ್ರಲೇಖವೇ ಬಂದಿತ್ತು. ಅದನ್ನು ಅವಳು ಗಂಡನ ಕೈಗೆ ಓದಲು ಕೊಟ್ಟಳು. ಆತ ಅದನ್ನು ತನ್ನ ರಿಕಾರ್ಡಿನ ಪಾರಾಯಣದ ಎಡೆಯಲ್ಲಿ, ಮಗ್ಗುಲಿರಿಸಿದ. ಆ ಮೇಲೆ, ಸಂಜೆ ಓದುವೆನೆಂದು ರಾತ್ರಿಯೂ ಓದಲಿಲ್ಲ. ಬೆಳಗೂ ಆಯಿತು. ಬೆಳಿಗ್ಗೆ ಕಾರ್ಯ ನಿಮಿತ್ತ ವೆಂಕಪ್ಪ ಮನೆಗೆ ಬಂದಿದ್ದವನು-ಕುಸುಮೆಯನ್ನು ಕಂಡು "ನಿಮ್ಮ ದುಂದುಭಿ ಪೇಪರಿನವನು ಬಿಗುವಾಗಿ ಬರೆದು ಬಿಟ್ಟಿದ್ದಾನಲ್ಲ—ನಿಮ್ಮ ಕ್ಲಬ್ಬಿನ ವಿಷಯ" ಎಂದನು. ಸುಬ್ಬಯ್ಯ ಅರ್ಧ ಉದಾಸೀನತೆಯಿಂದ 'ಯಾವುದು — ಏನು' ಎಂದನು. ಕುಸುಮೆ ಹುಲಿಯಂತೆ ಎಗರಿಬಿದ್ದಳು: "ನಿನ್ನೆಯಿಂದ. ನಿಮ್ಮ ಕೈಮೇಲೆ ಹಾಕಿ, ಓದಿ ದಮ್ಮಯ್ಯ ಅನ್ನಲಿಲ್ಲ" ಎಂದಳು. 'ಹೋ-ಅದೇ, ನಿನ್ನೆ ಕೊಟ್ಟದ್ದೇ! ನನಗೆ ನಿನ್ನೆ ನಾಲ್ಕು ಪೇಪರು ಮುನಿಸಿಫರದ್ದೇ ಇತ್ತು. ಇವತ್ತೂ ಅಷ್ಟೇ ಇದೆ. ಅವನ್ನು ಓದದೆ ಹೋದರೆ,ಅವರ ಮಂಗಳಾರತಿ ಕೇಳಬೇಡವೇ?' —ಎಂದು ಉದಾಸೀನವಾಗಿ ಉತ್ತರವಿತ್ತ.

'ಅಹುದು ನಿಮಗೊಬ್ಬರಿಗೇನೇ-ದಾವೆ-ಕೋರ್ಟು ಇರುವುದು. ವೆಂಕಪ್ಪಣ್ಣನಿಗೆ ಯಾವುದೂ ಇಲ್ಲ,ಎಂದು ಕಾಣುತ್ತದೆ' ಎಂದಳು.

ಆ ರಾತ್ರಿ ಪ್ರಯತ್ನಪಟ್ಟು ಲೇಖವನ್ನು ಓದುವೆನೆಂದು 'ಎಲ್ಲಿದೆ ಕೊಡೇ, ಅದನ್ನು ಓದಿಬಿಡುತ್ತೇನೆ'—ಎಂದರೆ ಆಕೆ 'ಬೇಡ ನೀವು ಓದಬೇಕೆಂದಿಲ್ಲ,ಅದು ನಿಮ್ಮ O.S.123 ಅಲ್ಲ.ಅದನ್ನು ಕ್ಲಬ್ಬಿಗೆ ಕಳುಹಿಸಿಯಾಯಿತು'-ಎಂದು ಮುಯ್ಯಿ ತೀರಿಸಿಕೊಂಡಳು. ಒಂದು ವಾರದ ವರೆಗೆ ಸುಬ್ಬಯ್ಯನ ಕಿವಿಯ ಮೇಲೆ ಕ್ಲಬ್ಬಿನ ಪ್ರಸ್ತಾಪವೇ ಬೀಳಲಿಲ್ಲ. ಒಂದು ದಿವಸ ತಾನಾಗಿ ತಡೆಯಲಾರದ ಉಮೇದಿನಿಂದ 'ನಿಮ್ಮ ಹಾಗಲ್ಲ ವೆಂಕಪ್ಪಣ್ಣ; ನೋಡಿ, ಕೆಲಸ ಸಾಧಿಸಿಯೇ ಬಿಟ್ಟರು. ಸಾವಿರಕ್ಕೆ ಅವೇ ಜಾಗ ಕೊಂಡು ಹೆಂಡತಿಯ ಹೆಸರಲ್ಲಿ ದಾನಮಾಡಿದ್ದಾರೆ' —ಎಂದು ಹಿಗ್ಗಿನುಡಿದಳು. "ಹೂಂ— ನೀವು ಅದೃಷ್ಟಶಾಲಿಗಳು! ಅವನೊಬ್ಬ ಬೆಪ್ಪ" ಎಂದ ಚೇಷ್ಟೆಗೆ ಸುಬ್ಬಯ್ಯ. ಕುಸುಮೆ ರೇಗುವಂತಾಯಿತು. "ಅವರಿಗೆ ನಾಲ್ಕು ಸುತ್ತಲಿನ ಪ್ರಪಂಚ ಬೇಕು. ನಿಮಗೆ ರಿಕಾರ್ಡು, ಕೇಸು, ಕಾಸು—ಇವುಗಳದೇ ಧ್ಯಾನ" ಎಂದಳು. "ಕೇಸು, ಕಾಸು ಇದ್ದರೇನೆ ಮುಂದಿನದು. ಈಗ ದುಡಿದು ಒಂದು ನೆಲೆಗೆ ಬಾರದೆ

ಹೋದರೆ ನಾಳೆಯಾರೂ ನಮ್ಮನ್ನು ಮೂಸುವವರಿಲ್ಲ; ನಿನಗೆ ಗೊತ್ತೇ" ಎಂದು ಸುಬ್ಬಯ್ಯ ಪುರಾಣ ತೆಗೆದನು.

ಯಾವ ವಿಧದಿಂದಲೂ ಸುಬ್ಬಯ್ಯ ಉತ್ಸಾಹಿತನಲ್ಲ ಎಂದೇ ಅವಳಿಗೆ ಅನಿಸಿ, ಆಯಕ್ಕೂ ಅಂದಾಜಿಗೂ ವೆಂಕಪ್ಪಣ್ಣನ ಹಿಂದೆಯೇ ಓಡಾಡ ತೊಡಗಿದಳು. ಇವಳ ವರಾತಕ್ಕೆ ಹೆದರಿ, ಆತ ಹತ್ತು ಬಾರಿ ಸ್ಥಳಕ್ಕೂ, ಕ್ಲಬ್ಬಿಗೂ, ಓವರ್ಸಿಯರ ಮನೆಗೂ ಓಡಾಡತೊಡಗಿದನು. ನಕಾಸೆಯೂ ಬಂದಿತು. ಹಣದ ಅಂದಾಜೂ ತಿಳಿಯಿತು. ಮಹಿಳೆಯರೆಲ್ಲ ಪ್ರತಿ ಶನಿವಾರ ಆದಿತ್ಯವಾರಗಳೆಂದು 'ಶ್ರಾವಣಿ' ಭಿಕ್ಷೆಗೆ ಹೊರಟರು. ಹೆಂಗಳೆಯರು ಭಿಕ್ಷಾಪಾತ್ರೆ ಹಿಡಿದರೆ ವಿಜಯ ಸುಲಭಸಾಧ್ಯ. 'ಇಲ್ಲೆ'ನ್ನಲು ಕಡಮೆಯಷ್ಟೆ! ದಾಕ್ಷಿಣ್ಯದಿಂದ ಹಣವೂ ಜಮಾಯಿಸಿತು. ಕಂಟ್ರಾಕ್ಟರನಿಗಂತು 'ಮಳೆ ಬೀಳುವುದರಲ್ಲಿ ಕಟ್ಟಡ ಪೂರ್ಣವಾಗಿ ಬಿಡಬೇಕು' ಎಂದು ತಾಕೀತುಮಾಡಿದರು. ನಾರಾಯಣಿಯ ವಿವಿಧ ವಿನೋದಾವಳಿಯಿಂದಾಗಿ ಅವರ ಕ್ಲಬ್ಬಿನ ಮಂದಿರವೂ, ಸುಬ್ಬಯನ ಮನೆ ಜಗಲಿಯೂ-ಕೂಡಿಯೇ ಸಂಗೀತ ನೃತ್ಯ ಶಾಲೆಗಳಾದುವು. ಎಪ್ರಿಲು ಕೊನೆಯಲ್ಲಿ ಅವರ ಅಮೋಘ ವಿನೋದಾವಳಿಯ ಕಹಳೆ ಮನೆಮನೆಗೂ ಕೇಳಿಸುವಂತಾಯಿತು. ಅದಕ್ಕಾಗಿ ತಿರುಗಿ ಟಿಕೇಟು ವಿಕ್ರಯಕ್ಕೆ ಅಲೆದಾಟ.

ವಿನೋದಾವಳಿಯ ದಿವಸ ವೆಂಕಪ್ಪ ಸುಬ್ಬಯ್ಯರು ಮಹಿಳೆಯರಂತೆ ದುಡಿದು, ಬೆಂಚುಹೊತ್ತು ಬೆಂಬಲವೀಯಬೇಕಾಯಿತು. ಆದರೆ ಸಾವಿರಕ್ಕೆ ಸಮೀಪದ ವರಮಾನ ಬಂದರೆ ಯಾರಿಗೆ ಉತ್ಸಾಹ ಬರಲಾರದು?

ಬೇಸಗೆಯ ರಜೆ ಕಾಲಿರಿಸುತ್ತಲೇ ವೆಂಕಪ್ಪ ತನ್ನ ಕಿರಿಗೂಸುಗಳ ಸಂದರ್ಶನಕ್ಕೆ ಅತ್ತೆಯ ಮನೆಯ ಹಾದಿಯನ್ನು ಹಿಡಿದನು. ಮನೆಯ ಮಕ್ಕಳನ್ನು ರಜೆಗೆ ಅಲ್ಲಿ ಮುಟ್ಟಿಸಿ ಬರಬೇಕು. ಹಾಗೆ ಹೋಗಿ ಬರುವುದಕ್ಕೂ ಅವನಿಗೆ ಅನುಮಾನ. ಹೋಗದೆ ಮನಸ್ಸೂ ನಿಲ್ಲದು. ಹಾಗೆ ಹೋಗುವೆನೆಂದರೆ ಅತ್ತೆ ಮರುಮದುವೆಗೆ ಒತ್ತಾಯಿಸುವಳೆಂಬ ಬೆದರಿಕೆ. ಶೀಲುವಿನ ಕಿರಿಯ ತಂಗಿಯೊಬ್ಬಳಿದ್ದಾಳೆ. ಪ್ರಾಯ ಹದಿನಾಲ್ಕು ಹದಿನೈದು ಪೂರಾ ಇಲ್ಲ. ಅವಳನ್ನೇ ಲಗ್ನವಾಗಲಿ— ಎಂಬ ಮಾತು

ಒಸಗೆಗಳನ್ನು ಕಳುಹತೊಡಗಿದ್ದಾರೆ. ಅಂಥವರ ಬಾಯಿಗೇ ಬೀಳಬೇಕಲ್ಲ-ಎಂಬ ಭೀತಿ. ಆದರೂ ಬೇರೆ ದಾರಿಗಾಣದೆ ಕೆಲಸವನ್ನು ಅರ್ಧದಲ್ಲಿರಿಸಿ ಊರಿಗೆ ಹೋಗಬೇಕಾಯಿತು. ಒಂದು ವಾರದಲ್ಲಿ ಬರುವೆನೆಂದರೆ, ನಾಲ್ಕೇ ದಿವಸದಲ್ಲಿ ಬನ್ನಿ—ಎಂದು ಕುಸುಮೆಯ ಆಗ್ರಹ. 'ಯಾಕೆ, ಹಾಗೆ ಅವನನ್ನು ಪೇಚಿಗೆ ಹಾಕುತ್ತೀ? ಹತ್ತು ದಿವಸ ಅವನು ತಾಯಿಯಿಲ್ಲದ ಮಕ್ಕಳೊಡನೆ ಕಳೆಯಬಾರದೇ' ಎಂದು ಸುಬ್ಬಯ್ಯ ಹಿತನುಡಿದ. 'ನಾನಿಲ್ಲವೇ ಇಲ್ಲಿ. ಕೋರ್ಟು ಮುಗಿಯಿತು; ಒಂದು ಸಾರಿ ಕಟ್ಟಡವನ್ನು ಸುತ್ತಿ ಬರುವುದು ನನಗೆ ಮಹಾ ಕೆಲಸವೇ' ಎಂದ 'ಹೂಂ—ನಿಮ್ಮ ಮರ್ಜಿ ಕಾದರೆ ಕಟ್ಟಡ ಮುಂದಿನ ವರ್ಷಕ್ಕೂ ಆಗಲಾರದು' ಎಂದು ಬಿಟ್ಟಳು ಕುಸುಮೆ.

ಸುಬ್ಬಯ್ಯಗೆ ಕುಸುಮೆಯ ಮಾತಿನ ರೀತಿ ದಿನದಿನ ಬಿರುಸಾಗುತ್ತ ಬರುವುದು ಕಾಣುತ್ತಿದೆ. ವೆಂಕಪ್ಪನೊಡನೆ ಮಾತನಾಡುವಾಗ ಕಾಣುವ ನಯ, ತನ್ನೊಡನೆ ಬರಲಾರದಲ್ಲ-ಎಂದೆನಿಸ ಹತ್ತಿದೆ. ಆದರೆ ಅವಳ ತಾಳಕ್ಕೆ ಸಮನಾಗಿ ಕುಣಿಯುವ ವಿರಾಮ ತನಗೆ ಇಲ್ಲವೆಂಬುದನ್ನೂ ಆತ ಬಲ್ಲ. ಇಷ್ಟಿದ್ದರೂ ಮಾತುಕೊಟ್ಟಂತೆ ದಿನಕ್ಕೆರಡು ಬಾರಿ ಹೊಸ ಮಂದಿರದ ಬಳಿಗೆ ಹೋಗಿ ಬಂದು—'ಏನಾಗಿದೆ' ಎಂದು ವಿಚಾರಿಸುತ್ತಿದ್ದ. ಸಂಜೆ ಆ ಕೆಲಸ ಮುಗಿಸಿಕೊಂಡು, ತನ್ನ ಕ್ಲಬ್ಬಿನ ಹಾಜರಿಯನ್ನು ಸಲಿಸಿ ಬರುತ್ತಿದ್ದ. ಅದರಲ್ಲಿ ಅವನ ವಿರಾಮ ಕಳೆಯುವುದು. ರಜೆಯೆಂಬುದರಿಂದ ಕಕ್ಷಿಗಾರರು ಬಾರದೆಯಿರುತ್ತಾರೆಯೇ? ಇನ್ನೂ ಹುಟ್ಟಲಿರುವ ದಾವೆಗಳನ್ನು ಚರ್ಚಿಸುವದಕ್ಕಾದರೂ ಬರುತ್ತಾರೆ. ವೇಳೆಯಲ್ಲದ ವೇಳೆಗೆ ಬಂದು, ನೂರನೇ ಬಾರಿಗೆ ಕೇಳಿದ್ದನ್ನೇ ಕೇಳಿ ಹೋಗುತ್ತಾರೆ. ಜಿಗುಟಾದ ನರವುಳ್ಳವರಿಗೆ ಮಾತ್ರ ಅವರಿಂದ ಪಾರಾಗಿ ಉಳಿಯುವುದು ಸಾಧ್ಯ. ಅದರಿಂದ ಒಮ್ಮೊಮ್ಮೆ ಎಲ್ಲಾದರೂ ಕಕ್ಷಿಗಾರರ ಕಾಟ ತಪ್ಪಿಸಿಕೊಳ್ಳುವ ಸಲುವಾಗಿಯಾದರೂ ಊರು ಬಿಟ್ಟಿರುವ-ಎಂದು ಯೋಚಿಸಿದ್ದ. ಈ ರಜೆಯಲ್ಲಿ ಮದ್ರಾಸು ಬೆಂಗಳೂರಿನ ಸಂಚಾರ ಜರಗಿಸುವ ಎಂಬ ಸವಿಗನಸು ಕಂಡಿದ್ದ. ಆದರೆ ಕುಸುಮೆಗೆ ಹಿಡಿದ ಕಟ್ಟಡದ ಪಿಶಾಚವನ್ನು ಬಿಡಿಸಲು ಬಂದೀತೆ?

ವೆಂಕಪ್ಪ ಹೇಳಿದಂತೆ ವಾರದೊಳಗೆ ಬರಲಿಲ್ಲ. ಹದಿನೈದು ದಿವಸ

ಗಳೇ ಹೋದುವು. ಅದಕ್ಕಾಗಿ ಕುಸುಮೆ ರೋಷಾವೇಶ ತಾಳದಿದ್ದುದೇ ಆಶ್ಚರ್ಯ. ಅವರ ಮಂದಿರಕ್ಕೇನೋ ಮಾಡು ಬಿದ್ದಿತು. ಇನ್ನು ಕಿಟಕಿ, ಬಾಗಿಲು, ಸಾರಣೆ ಕಾರಣೆಗಳು--ಎಂಬ ಹಲವಾರು ಸಂಸ್ಕಾರಗಳಾಗಬೇಕಲ್ಲ. ಕುಸುಮೆಯ ಅಪ್ಪಣೆಯಂತೆ "ಸುಶೀಲವತಿ ಸ್ಮಾರಕವಾಗಿ ಈ ಸ್ಥಳವು ದಾನವಾಗಿದೆ" ಎಂದು ಚಂದ್ರಕಾಂತ ಶಿಲೆಯಲ್ಲಿ ಬರೆಯಿಸಿ ತರಲು ಹೇಳಿದ್ದಳು. 'ಏಕೆ ಅದೆಲ್ಲ?' ಎಂದರೂ, ಕುಸುಮೆ "ಮಂಗಳೂರಲ್ಲಿ ಚಿಕ್ಕ ಪುಟ್ಟ ದಾನಕ್ಕೆ ಮಾರ್ಬಲ್‌ಸ್ಲೇಬ್ ನಡುವಾಗ, ಇದು ಸಾವಿರ ರೂಪಾಯಿಯ ದಾನ, ಯಾಕೆ ಹೆಸರು ಹಾಕದೆ ಬಿಡಬೇಕು" ಎಂದು ಹಟಹಿಡಿದಳು.

ವೆಂಕಪ್ಪ ತಿರುಗಿ ಮಂಗಳೂರಿಗೆ ಬಂದು ಈ ಬಿಟ್ಟಿಯಲ್ಲಿ ನಿಂತಾದುದು ಒಂದು ರೀತಿಯಿಂದ ಮನಸ್ಸಿಗೆ ಹಿತವನ್ನೇ ತರುತ್ತಿತ್ತು. ಅವನಿಗೆ ಈ ಬಾರಿಯ ಅತ್ತೆಮನೆಯ ವಾಸವು ಮುಳ್ಳಿನ ಮೇಲೆ ನಡೆದಂತಾಗಿತ್ತು. ಕಿರಿಗೂಸುಗಳಾದ ಮಾಧವಿ, ಮದನ, ರಂಜನರನ್ನು ಕಾಣಲು ಮಾತ್ರ ಮನಸ್ಸು ಹಾತೊರೆಯುತ್ತಿತ್ತು. ಆದರೆ ಹೋದ ಒಂದೆರಡು ದಿವಸಗಳಲ್ಲಿ ಧಾರಾಪ್ರವಾಹವಾಗಿ ಬರುತ್ತಿದ್ದ ಅತ್ತೆಮಾವಂದಿರ ಉಪದೇಶಗಳನ್ನು ಕೇಳಬೇಕಲ್ಲ. ಏನೇ ಆಗಲಿ, ನೀನು 'ರತ್ನೆಯನ್ನು ಮದುವೆಯಾಗಬೇಕು' ಎಂದು ಅವರ ಆಗ್ರಹ. ರತ್ನೆಗೆ ಹದಿನಾಲ್ಕು ವರ್ಷ ತುಂಬಿತ್ತು. ದೇಹವೇನೋ ವಯಸ್ಸನ್ನೂ ಮೀರಿಸಿತ್ತು. ಆಕೆಗೂ ಅಕ್ಕನ ಮಕ್ಕಳಲ್ಲಿ ತುಂಬ ಪ್ರೀತಿಯಿತ್ತು. ಮಾಧವಿಯು ರತ್ನೆಗೆ ಅಂಟಿಕೊಂಡೇ ಸಮಯ ಕಳೆಯುತ್ತಿದ್ದಳು. ರತ್ನೆ ವೆಂಕಪ್ಪನಿಗೆ ತಿಳಿಯದವಳೂ ಅಲ್ಲ. ಆದರೆ ತನ್ನ ವಯಸ್ಸಿಗೆ, ಆಕೆ ಸಮನಾದವಳಲ್ಲವೆಂಬ ದೃಢ ನಂಬಿಕೆ. ಅದರಿಂದ 'ಬೇಗನೆ ಮಕ್ಕಳನ್ನು ಊರಿಗೆ ಕರೆನುಕೊಂಡು ಹೋಗಲು ಬರುತ್ತೇನಲ್ಲ; ಆಗ ಉತ್ತರ ಹೇಳುತ್ತೇನೆ'— ಎಂದು ಒಮ್ಮೆಗೆ ನುಡಿದು ಪಾರಾಗಿ ಬಂದನು.

ಇಲ್ಲಿ, ಅದಕ್ಕೆ ಪ್ರತಿಯಾಗಿ, ಕುಸುಮೆಯ ಉಬ್ಬುನುಡಿಗಳು ಅವನ ಕಿವಿಗೆ ವಿಶ್ರಾಂತಿ ಕೊಡುತ್ತಿದ್ದುವು. ಹೊಗಳಿಸಿಕೊಳ್ಳುವ ಮತ್ತು ಹೊಗಳುವ ಸುಖಕ್ಕಿಂತ ಬೇರೆ ಸುಖವೇನು?

ವೆಂಕಪ್ಪ ತನ್ನಮಾತಿನಂತೆ ತಿರುಗಿ ಅತ್ತೆಯ ಮನೆಗೆ ಹೋಗಲಿಲ್ಲ.

ಬದಲು ಸುಬ್ಬಯ್ಯನಿಗೆ ಸಲಾಮುಹಾಕಿ ತನ್ನ ಬದಲಿಗೆ ಕಳುಹಿಸಿಕೊಟ್ಟ. ಅದರ ಕಾರಣವನ್ನು ಹೇಳಿದ್ದಾಯಿತು. ಇವನ ಬದಲು ಸುಬ್ಬಯ್ಯ ಬಂದುದಕ್ಕೆ ಅವರಿಗೆ ತುಂಬ ಬೇಸರವಾಯಿತು. 'ನೀವಾದರೂ ಅವನಿಗೆ ಬುದ್ಧಿ ಹೇಳಿ. ಬೇರೆಯ ನೆಂಟಸ್ತಿಕೆಯಾದರೆ-ಮಲತಾಯಿ, ಏನು ಮಾಡಿಯಾಳೋ ಎಂದು ಅಂಜಿಕೆ'. ಆದುದರಿಂದ ಅವನು ರತ್ನೆಯೊಡನೆ ವಿವಾಹವಾಗಲು, ವೆಂಕಪ್ಪನಿಗೆ ಉಪದೇಶ ಮಾಡುವಂತೆ, ಈತನಿಗೆ ಉಪದೇಶವಾಯಿತು. ಆತನು ಮಂಗಳೂರಿಗೆ ಮರಳಿ, ಸಂದೇಶವನ್ನೇನೋ ಅರುಹಿದನು. ಸುಬ್ಬಯ್ಯನೂ ಮರುಮದುವೆಯನ್ನು ಭೋಧಿಸುವವನೇ. ಆದರೆ 'ರತ್ನೆಯು' ತೀರ ಚಿಕ್ಕವಳಾದಳೆಂದು ಅವನಿಗೂ ತೋರುತ್ತಿತ್ತು. ಅಷ್ಟು ಜನರ ಸಂಸಾರವನ್ನು ತಿಳಿದುಕೊಂಡು ನಡೆಯಿಸಬಲ್ಲ ಜಾಣೆಯು ಆವಶ್ಯಕವೆಂದು ಅರಿತಿದ್ದ. ಅಲ್ಲದೆ ಅವರ ಪಂಗಡದಲ್ಲಿ ವಯಸ್ಸು ಬೆಳೆದ ಕನ್ಯೆಯರನ್ನು ದೊರಕಿಸುವುದೂ ಕಷ್ಟವಿದ್ದಿಲ್ಲ. ಆಯ್ಕೆ ಮಾತ್ರ ಚೆನ್ನಾದುದಾಗಬೇಕು — ಎಂದಿಷ್ಟೇ ಇತ್ತು. 'ಯಾವುದಕ್ಕೂ, ನಮ್ಮ ಕುಸುಮೆಯ ಕಟ್ಟಡದ ಕೆಲಸ ತೀರಿಸಿಕೊಳ್ಳುವ' ಎಂದು ಮದುವೆಯ ವಿಷಯವನ್ನು ಅವರಿಬ್ಬರೂ ಮುಂದುವರಿಸಿದರು.

ಮಳೆಗಾಲ ಆರಂಭವಾಯಿತು. ಕೆಲಸಗಾರರು ಒಬ್ಬೊಬ್ಬರೇ ಕಣ್ಮರೆಯಾಗುವ ಕಾಲವಾದುದರಿಂದ, ಇಂದಿಗೋ ನಾಳೆಗೋ ಮುಗಿಯುವ ಕೆಲಸ, ಮುಂದೆ ಸಾಗುತ್ತಿತ್ತು. ಜುಲಾಯಿಯಲ್ಲಿ ಅದರ ಆರಂಭೋತ್ಸವವಾಗಬೇಕೆಂದು ಕುಸುಮೆಯ ಮನಸ್ಸು. ಆದರೆ ವೆಂಕಪ್ಪ "ಇಲ್ಲ — ಅದರೊಳಗೇ ಈ ಜನರನ್ನು ನಂಬಿ ಕೆಲಸವಾಗದು. ಅಲ್ಲದೆ ಮಳೆಗಾಲ ಬಿರುಸಾಗಿರುವಾಗಲೇ ಪ್ರಾರಂಭೋತ್ಸವ ಇಟ್ಟರೆ ಚೆನ್ನಲ್ಲ. ವಿಜಯದಶಮಿ ಈ ಬಾರಿ ಸಪ್ಟಂಬರದಲ್ಲಿ ಬರುತ್ತದೆ. ಆಗಲೇ ಒಳಿತಲ್ಲವೇ"—ಎಂದನು. ಅದರಿಂದ ಆಕೆ ಆಸೆಯನ್ನು ಬಿಗಿಹಿಡಿಯಬೇಕಾಯಿತು.

ಕುಸುಮೆಗೆ ದಿನಕಳೆಯುವುದೆಂದರೆ ಯುಗ ಕಳೆದಂತೆ. ತಮ್ಮ ಕಟ್ಟಡವಿದ್ದೂ, ಯಾರ್ಯಾರ ಸ್ಥಳದಲ್ಲಿ ಇರಬೇಕೆಂದರೆ ಉದಾಸೀನ. ಮೇಲೆ ಗಂಡನಿಂದ ಒಂದು ಬಲವಾದ ಸಂಖ್ಯೆ ಹಾಕಿಸಿ, ಅದರ ಶಾಸನವನ್ನು ಗೋಡೆಯ ಮೇಲೆ ನಡುವ ತನಕ ಆತುರ. ಇತ್ತ ಈ ಆತುರ

ಜತೆಗೆ ಬೇರೆ ಯೋಚನೆಯೂ ಮನೆಮಾಡಿತ್ತು; ಆಕೆ ತಿರುಗಿ ಬಸಿರಿಯಾಗಿದ್ದಾಳೆ. 'ಕುಸುಮಾ, ಸುಮ್ಮನೆ ಮಿತಿಯಿಲ್ಲದೆ ತಿರುಗಾಡಿ ದಣಿಯಬೇಡ' ಎಂದು ಸುಬ್ಬಯ್ಯ ಉಪದೇಶಿಸುತ್ತಿದ್ದಾನೆ. 'ಮುಖ್ಯ ವೇಳೆಯಲ್ಲಿ ಏನಾದರೂ ಸಂಕಟ ಪ್ರಾಪ್ತವಾಗಿ ಕಳೆದ ಬಾರಿಯಂತಾದರೆ?' ಎಂಬ ಭೀತಿ ಕುಸುಮೆಗೆ. ಕಟ್ಟಡದ ಆರಂಭೋತ್ಸವದ ಬಳಿಕ ತಾನು ಬಸಿರಿಯಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಅಸಮಾಧಾನ.

ಅಂತು ಕಾಲವನ್ನು ಅವಳು ಪತಿಮೇಲಿನ ದಿಗ್ವಿಜಯದ ಸಲುವಾಗಿ ಕಳೆದಳು, "ಕೊನೆಗೂ ನೀವು ಎಷ್ಟು ಕೊಡುತ್ತೀರೆಂದು ಹೇಳಲೇ ಇಲ್ಲ. ಶೀಲುವಿನ ಹೆಸರಿಗೆ ಸಾವಿರ ರೂಪಾಯಿ ಕೊಟ್ಟಿರುವಾಗ......" ಎಂದಳು. ಹೆಂಡತಿಯು ಉಲ್ಲಾಸವಾಗಿರಬೇಕಾದ ಸಮಯದಲ್ಲಿ ತಾನು, ಸಣ್ಣತನ ತೋರಬಾರದೆಂದು ಸುಬ್ಬಯ್ಯ "ನೀನೇ ಹೇಳು, ನಿನ್ನ ಹೆಸರಿಗೆ ತೋಚಿದ್ದನ್ನು ಕೊಡುತ್ತೇನೆ" ಎಂದ.

"ನೀವು—ನೂರು ಎಂದಿದ್ದರಿ!" ಎಂದು ಅವಳು ಅನುಮಾನ ತೆಗೆದಳು.

"ನೀನೇ ಹೇಳಿಬಿಡು; ನಮ್ಮ ಶಕ್ತಿಯನ್ನು ತಿಳಿದು ಹೇಳಿಬಿಡು. ನನ್ನ ದುಡ್ಡೇನು? ನಿನ್ನದೇನು?"—ಎಂದ ಆತ.

ಕೈಬೆರಳನ್ನು ನೀಡಿ 'ಐದೆ'ಂದಳು ಆಕೆ. ಸುಬ್ಬಯ್ಯನು ಒಪ್ಪಿದ; ಕೊಟ್ಟು ಕುಳಿತ.

ವಿಜಯ ದಶಮಿಯ ದಿವಸವು ಉದಯಿಸಿತು. ಕುಸುಮೆ ಆರಂಭೋತ್ಸವದಲ್ಲಿ, ವಿಶ್ರಾಂತಿ ಗದ್ದುಗೆಯಲ್ಲೇ ಇದ್ದಳು. ಆದರೆ ಅವಳ ಮನಸ್ಸು ತುಂಬ ತೃಪ್ತವಾಗಿತ್ತು. ಸಬ್ ಜಡ್ಜಿಗಳ ಪತ್ನಿ ತ್ರಿಪುರ ಸುಂದರಿ ಐಯರ್‌ರವರ ಮಗ್ಗುಲಲ್ಲಿ ಕುಳಿತು, ಎದುರಿಗೆ 'ಕುಸುಮಾದೇವಿ-ದಾನ ರೂ. ೫೦೦'ಎಂಬ ಶಾಸನ ನೋಡುತ್ತಿರಲು ಎಷ್ಟು ಆನಂದವಾಗಬೇಡ. ನಾರಾಯಣಿಯಂತು ಆ ದಿನ, ಕೃತಜ್ಞತೆಯಿಂದ, ಕುಸುಮೆಯ ಚಿತ್ರವೊಂದಕ್ಕೆ ಹಾರ ಸಿಕ್ಕಿಸಿ, ಮಂದಿರದಲ್ಲಿ ತೂಗಿದ್ದಳು. ಕುಸುಮೆಯಂತು ಆ ದಿನದ, ಅಮರಲೋಕವನ್ನೇ ಸಂಚರಿಸಿ ಬಂದಳು.

೬ನೆಯ ಅಧ್ಯಾಯ

ಕೂಸು ಹಡೆದುದಕ್ಕಿಂತ ಹೆಚ್ಚಿನ ಹರ್ಷ, ಹೊಸ ಕಟ್ಟಡದಿಂದಾಗಿ ಕುಸುಮೆಗೆ ಉಂಟಾಗಿತ್ತು. ಅದರ ಆರಂಭೋತ್ಸವದ ಗಲಭೆಯಲ್ಲಿ, ಪತಿ ಬೇಡವೆಂದರೂ ಅವಳು ಮಾಡಿದ ಓಡಾಟ ಸ್ವಲ್ಪವಾಗಿರಲಿಲ್ಲ. ಅದರಿಂದ ಮುಂದಿನ ಏಳೆಂಟು ದಿನ, ಅವಳು ತುಂಬ ಸಂಕಟಕ್ಕೀಡಾ ದಳು. ಸುಬ್ಬಯ್ಯ 'ನಾನು ಬೇಡೆಂದರೆ ಕೇಳಲೇ ಇಲ್ಲ' ಎಂದುಬಿಟ್ಟರೆ, ಅವಳ ಕೋಪ ಜ್ವಾಲಾಮುಖಿಯಾಗುತ್ತದೆ. ನಿಜಕ್ಕೂ ಹಿಂದಿನ ಪ್ರಕ ರಣ ಮರುಕಳಿಸಬಹುದೇ ಎಂದು ಆತ ಭೀತನಾಗಿದ್ದ. ಈಕೆಗೂ ಆ ಬೆದರಿಕೆಯಿಲ್ಲವೆಂದಲ್ಲ. ಆದರೆ ತನ್ನಿಷ್ಟದಂತೆ ನಡೆಯುವ ಸ್ವಭಾವದ ವಳಿಗೆ, ಗಂಡನ ಮಾತಾದರೂ ಹಿತವೆನಿಸುವುದುಂಟೇ? ಅಂತು ತುಸು ದಿವಸಗಳಲ್ಲಿ ಅವಳ ಪ್ರಕೃತಿ ಸುಧಾರಿಸಿತು. ತಿಂಗಳಿಗೆ ಮುಂಚೆಯೇ ಶಾಂತಿ ಗೃಹದಲ್ಲಿರುವುದು ಲೇಸೆಂದು ಸುಬ್ಬಯ್ಯ ಬಲವಂತ ಮಾಡಿ ದನು. ವೆಂಕಪ್ಪನೂ ಅಂತೆಯೇ ಉಪದೇಶಿಸಿದ. ಇದರಿಂದ ಆಕೆಯು ಅಲ್ಲಿಗೆ ಹೋದಳು. ಆದರೂ ಅವಳ ಮನಸ್ಸು ಹೊಸ ಮಂದಿರದ ಕಡೆ ಗೇನೆ ಆಗಾಗ ಹೊರಳುವುದು. ಅದರೊಳಗೂ ಒಂದು ಅತೃಪ್ತಿ. ಸುಶೀ ಲೆಯ ಹೆಸರಿನಲ್ಲಿ ಸಾವಿರ ರೂಪಾಯಿಗಳ ದಾನವಿರುತ್ತ, ತಮ್ಮದು ಬರಿಯ ಐನೂರೆಂಬ ವಿಚಾರ ಅವಳಿಗೆ ಅಸಮಾಧಾನವನ್ನುಂಟುಮಾ ಡಿದೆ. ವೆಂಕಪ್ಪ ಸಾಲಮಾಡಿ ದಾನಿಯಾದುದು, ತಾವು ಇದ್ದುದರಿಂದ ಕೊಟ್ಟುದು-ಎಂಬುದು ಅವಳ ಗಣನೆಗೆ ಬರುವ ವಿಷಯವಲ್ಲ.

ಆದರೂ ಮನದಲ್ಲಿ ತಾನು ಸಾವಿರ ರೂಪಾಯಿಯ ದಾನಿಯಾ ಗುವ ಬಯಕೆ. ಮಗುವಿನ ಜನನವಾದರೆ ಅದೇ ಹರಕೆಯೆಂದು ಹೇಳಿ, ಸುಬ್ಬಯ್ಯನಿಂದ ಹಣ ಕಕ್ಕಿಸುವ ಮನಸ್ಸು. ಆಸ್ಪತ್ರೆಯಲ್ಲಿ ವಿಶ್ರಾಂತಿ ಕಾಲವೆಂಬುದು ಬರಿಯ ಕಾಯದ ವಿಶ್ರಾಂತಿಯಾಯಿತು ವಿನಾ, ಇಂತಹ ಕಾರಣಗಳಿಂದಾಗಿ ಮನಸ್ಸಿನ ನೆಮ್ಮದಿಯಾಗಲೇ ಇಲ್ಲ. ಇತ್ತ ಅವಳನ್ನು ಸಂತೋಷವಾಗಿರಿಸಲು, ಪ್ರತಿ ಸಂಜೆಯೂ ಸುಬ್ಬಯ್ಯ ಅವ ಳಿರುವಲ್ಲಿಗೆ ಬಂದು ಹೋಗುತ್ತಿದ್ದ. ಒಮ್ಮೊಮ್ಮೆ ವೆಂಕಪ್ಪನ ಸವಾರಿ ಚಿತ್ತೈಸುವುದೂ ಉಂಟು. ಅವನು ಬಂದರೆ "ಇನ್ನು ಕಂಪೌಂಡ್‌ವಾಲ್

ಆಗಬೇಡವೇ, ಬೆಡ್ ಮಿಂಟನ್ ಕೋರ್ಟು ಸರಿಪಡಿಸಬೇಡವೇ" ಎಂದು ಹೊಸ ಖರ್ಚಿನ ಬಾಬುಗಳನ್ನು ಕುರಿತು ಚರ್ಚಿಸುತ್ತಿದ್ದಳು. ವೆಂಕಪ್ಪ ಅಲ್ಲಿಗೆ ಬರುವಾಗ ಕಿರಿಯ ಮಾಧವಿಯನ್ನು ಕರೆತರುತ್ತಿದ್ದ. 'ಸಣ್ಣಮ್ಮ, ಇಲ್ಲಿಯೇಕೆ ಮಲಗಿದ್ದೀ? ನಮ್ಮ ಮನೆಗೆ ನೀನೆಂದು ಬರುತ್ತೀ' ಎಂದು ಮಾತಿನ ಎಡೆಯಲ್ಲಿ ಅವಳು ಕೇಳುತ್ತಿದ್ದಳು. ಕುಸುಮೆ "ಬರುತ್ತೇನೆ, ನಿನಗೆ ಆಟವಾಡಲು ಒಂದು ಸಣ್ಣ ಪಾಪನನ್ನು ತರುತ್ತೇನೆ" ಎಂದು ಪರಿಹಾಸ್ಯಮಾಡಿಬಿಡುತ್ತಿದ್ದಳು.

ಕಾಯ್ದು ಕಾಯ್ದು ಕೊನೆಗೆ ಪ್ರಸವದ ದಿನವೇ ಕಾಲಿರಿಸಿತು. ಒಂದು ಸಂಜೆಯೆಲ್ಲವೂ ಆಕೆ ತುಂಬ ನೋವಿಂದ ನರಳುವಂತಾಯಿತು. ಆ ಸಂಜೆ ಸುಬ್ಬಯ್ಯ ಬಂದು ಬಲುಹೊತ್ತು ಕಾದುಕುಳಿತು ಅಂತೆಯೇ ಮರಳಿದನು. ರಾತ್ರಿ ಡಾಕ್ಟರರೂ, ದಾದಿಯರೂ ಸೇರಿ ಅಮಲುಣಿಸಿ ಹೆರಿಗೆ ಮಾಡಿಸಬೇಕಾಯಿತು. ಬೆಳಗಾಗುವಾಗ ಕುಸುಮೆ ಗಾಢವಾದ ತೂಕಡಿಕೆಯಲ್ಲಿದ್ದಳು. ಅವಳಿಗೆ ಹಿಂದಲ ರಾತ್ರಿಯ ಕತೆ ತಿಳಿದಿರಲಿಲ್ಲ. ಜಗಕ್ಕೆ ಬಂದುದು ಚೇತನವಿಲ್ಲದ ಗೊಂಬೆಯೆಂದು ಯಾರೂ ತಿಳಿಸಿರಲಿಲ್ಲ. ಬೆಳಗ್ಗೆ ನೋಡ ಬಂದ ಸುಬ್ಬಯ್ಯ ಹೊರಜಗುಲಿಯಲ್ಲಿ ಕಾದು ಕುಳಿತಿದ್ದ. ಅವನ ಕಿವಿಗೆ ಆ ಸುದ್ದಿ ಮುಟ್ಟಿತು. ಜೋಲು ಮುಖಮಾಡಿ, ಹೆಂಡತಿಗೆ ಎಚ್ಚರವಾದರೆ ಸಮಾಧಾನಪಡಿಸುವೆನೆಂದು ಬಯಸಿ ಕುಳಿತಿದ್ದ. ಆದರೆ ಕೋರ್ಟಿನ ತಾಪತ್ರಯಗಳ ನೆನಪಾಗಿ, ಡಾಕ್ಟರರ ಮೇಲೆ ಭಾರವನ್ನು ಹಾಕಿ ಅಲ್ಲಿಂದಲೇ ತೆರಳಿದನು.

ಕುಸುಮೆಗೆ ಎಚ್ಚರವಾಯಿತು. ಕಣ್ಣು ತೆರೆದಳು. ತಾನು ಅಲ್ಲಿರುವೆನೇಕೆಂಬ ನೆನಪಾಯಿತು. ಆಚೀಚೆ ಕಣ್ಣು ಹೊರಳಿಸಿದಳು. ಮಗ್ಗುಲಿಗೆ ತೊಟ್ಟಿಲನ್ನೂ ಕಾಣದೆ 'ಕೂಸು' ಅಂದುಕೊಂಡಳು. ಶರೀರವೇನೋ ಭಾರಹೀನವಾಗಿತ್ತು. 'ಕೂಸು?' ಎಂದು ತಿರುಗಿ ವಿಚಾರಿಸಲು, ದಾದಿಯೊಬ್ಬಳು, 'ಈಗ ನೀವು ತುಸು ನಿದ್ರೆಮಾಡಿರಿ' ಎಂದು ಉಪದೇಶಿಸಿ ಹೋದಳು. ಆಚೀಚೆ, ಹೆರಿಗೆಯ ಆಸ್ಪತ್ರೆಯಾದುದರಿಂದ, ಬೇರೆ ಒಂದೆರಡು ಶಿಶುಗಳ ಪ್ರಲಾಪ ಕೇಳಿಸುತಿತ್ತು. ಈಕೆಗೆ ನಿದ್ರೆ ಬರಲಿಲ್ಲ. ನಿಜವನ್ನು ತಿಳಿಯುವ ತನಕ ಕಣ್ದೆರೆದು ಕಾದಳು. ದಾದಿಯನ್ನು ಕಾಡಿ ಬೇಡಿದಳು. ಡಾಕ್ಟರರು ಬಳಿಗೆ ಬಂದು 'ನೀವು ಉಳಿದುದೇ ದೊಡ್ಡದು

ಎಂದು ವ್ಯರ್ಥ ಸಮಾಧಾನ ಹೇಳಿದರು. ಆಕೆ ಭ್ರಮಿಷ್ಠಳಂತೆ—'ನನ್ನ ಮಗುವನ್ನು ಕೊಂದಿರಾ? ಯಾರಿಗೆ ಕೊಟ್ಟಿರಿ ಹೇಳಿ' ಎಂದು ರೋದಿಸಿದಳು. ಆ ದಿನವೆಲ್ಲ ಅದೇ ತೆರನ ಮಾನಸಿಕ ಉನ್ಮತ್ತತೆಯಿಂದ ಅವಳು ಅಶಾಂತಳಾಗಿದ್ದಳು. ಅವಳನ್ನು ಬಲವಂತವಾಗಿ ಹಾಸುಗೆಗೆ ಅಂಟಿಸುವುದೇ ದಾದಿಯರಿಗೆ ಸಾಹಸದ ಕೆಲಸವಾಗಿತ್ತು. ಸಂಜೆ—ಮಾಧವಿ, ವೆಂಕಪ್ಪ, ಸುಬ್ಬಯ್ಯರು ಕೂಡಿ ಬಂದರು. ಅವರ ಮುಂದೆ ಆಕೆ ಕೂಸಿಗಿಂತ ಕಿರಿದಾಗಿ ಹಲುಬಿದಳು. ನಡುವೆ ಕಿಚ್ಚಿಗೆ ತುಪ್ಪ ಸುರಿದಂತೆ ಮಾಧವಿ, 'ಪಾಪನನ್ನು ತರಲಿಲ್ಲವೆ? ಎಂದು ತರುತ್ತೀ' ಎಂದು ಕೇಳಿದಳು. ಅವಳನ್ನು ವೆಂಕಪ್ಪ ಕರೆದೊಯ್ಯಬೇಕಾಯಿತು. ಸುಬ್ಬಯ್ಯನೊಬ್ಬನೇ ರಾತ್ರಿ ಒಂಬತ್ತರ ತನಕ ಅಲ್ಲಿ ಕುಳಿತಿದ್ದು ಬಲುವಾಗಿ ಹೆಂಡತಿಗೆ ಸಮಾಧಾನ ಹೇಳಿದನು.

ಆ ರಾತ್ರಿ ಅವನು ಮನೆಗೆ ಹೋಗುವಾಗ, ಅವನ ಅತ್ತೆಯೂ ತನ್ನ ಹಳ್ಳಿಯಿಂದ ಬಂದಿದ್ದಳು. ತಿರುಗಿ ಅಳುವಿನ ಪ್ರಕರಣ ಅಲ್ಲಿಯೂ ಮುಂದುವರಿಯಿತು. ಬೆಳಗ್ಗೆ ಸುಬ್ಬಯ್ಯ ಅವಳನ್ನು ಕರೆದುಕೊಂಡು ಆಸ್ಪತ್ರೆಗೆ ಬಂದರೆ, ತಾಯಿಯ ಮುಖನೋಡಿ ದುಃಖ ಒಂದಕ್ಕೆರಡಾಯಿತು. "ನಾನಿನ್ನು ಮನೆಗೆ ಬರುವುದಿಲ್ಲ. ಯಾವ ಮುಖದಿಂದ ಬರುವುದು? ಇಲ್ಲಿಂದಲೇ ಎಲ್ಲಿಗಾದರೂ ಹೋಗಿಬಿಡುತ್ತೇನೆ'ಎಂದು ಹುಚ್ಚಿಯಂತೆ ರೋದಿಸಿದಳು. ಸುಬ್ಬಯ್ಯ ತನ್ನಿಂದಾಗದ ಕೆಲಸವು, ಅವಳ ಗೆಳತಿ ನಾರಾಯಣಿಯಿಂದಾಗಬಹುದೇ ಎಂದು ಊಹಿಸಿ, ಅವಳನ್ನು ಕರೆಯಿಸಿದನು. ನಾಲ್ಕಾರು ದಿವಸ ನಾರಾಯಣಿಗೆ ಈಕೆಯ ಬಳಿಯಿದ್ದು ಉಪಚರಿಸುವುದೇ ಕೆಲಸವಾಯಿತು. ಅಂತು ಉನ್ಮತ್ತತೆಯು ಕುಂದಿ, ಸ್ತಬ್ಧ ವ್ಯಥೆಯಲ್ಲಿ ಪರಿಣಮಿಸಿತು. ಅವಳೊಡನೆ—"ಆ ಕೈ ನೋಡಿದವನು ಹೇಳಿದುದು ಸುಳ್ಳೇ? ನನಗೆ ಮೂರಾದರೂ ಮಕ್ಕಳು ಆಗುತ್ತವೆ ಎಂದಿದ್ದನಲ್ಲ" ಎಂದು ವಾದ ಮಾಡಿದಳು.

ಕ್ರಮೇಣ, ಹೊರಗಿನ ತೋರಿಕೆಯ ಶಾಂತಿ ಒದಗಿತು. ಆಕೆಯು ಶಾಂತಳಾಗಿರುವುದನ್ನು ಕಂಡು ಸುಬ್ಬಯ್ಯಗೆ ಧೈರ್ಯವಾಯಿತು.ಆದರೆ ಶಾಂತಿಯ ಜತೆಗೆ ತನ್ನೊಡನೆ ಮೌನ ತಾಳುವುದನ್ನು ಕಂಡು ಬೇಸರವಾಯಿತು. ಆರಾರು ಬಾರಿ ಕರೆದರೆ ಒಮ್ಮೆಯೂ ಉತ್ತರವಿಲ್ಲ. ಅದು

ಅವನ ಮೇಲೆ ಆಕೆಗೆ ಬಂದ ಹೊಸ ರೋಷದ ಪರಿಣಾಮ- ಜಾತಕ, ಸಾಮುದ್ರಿಕೆಗಳ ಪರಿಣಾಮ. ಕುಸುಮೆಯ ಮನದಲ್ಲಿ-'ತಾನು ಖಂಡಿತವಾಗಿ ಸಂತಾನ ಯೋಗವುಳ್ಳವಳು; ಗಂಡನ ದುರ್ದೈವದಿಂದಾಗಿ ತಾನು ನರಳುವಂತಾಗಿದೆ. ಗಂಡನಿಗೆ ಮಕ್ಕಳ ಯೋಗ ಅಷ್ಟು ಚೆನ್ನಾಗಿಲ್ಲ ಎಂದು ಕೈನೋಡಿದವನೆಂದಿಲ್ಲವೇ,ಎಂಬ ಅತೃಪ್ತಿಯು,ಅಂಬಾಗಿ, ಸುಬ್ಬಯ್ಯನ ಕಡೆಗೆ ಗುರಿಯಾಗಿ ನಿಂತಿತ್ತು. ಆದರೆ ಮತಿಯಿಲ್ಲದ ದ್ವೇಷಕ್ಕೆ ಅವನೇನು ಪರಿಹಾರ ಮಾಡಬಲ್ಲ?

ತಿಂಗಳು ಕಳೆಯುತ್ತಲೇ ಕುಸುಮೆ ಸ್ವಗೃಹಕ್ಕೆ ಬಂದಳು. ಅಲ್ಲಿ ಅವಳದು ಮಿತಭಾಷೆಯ ಜೀವನವಾಯಿತು. ಎಲ್ಲಾದರೂ ಎರಡು ಮಾತನ್ನಾಡಿದರೆ ತಾಯಿಯೊಡನೆಯೋ, ಇಲ್ಲವೆ ನಾರಾಯಣಿಯೊಡನೆಯೋ ಹೊರತು ಇನ್ನಾರೊಡನೆಯೂ ಆಡುತ್ತಿರಲಿಲ್ಲ. ಹೀಗಿರುವಾಗಲೊಮ್ಮೆ ಇವಳ ಮನೆಗೆ ಮಾಧವಿಯ ಆಗಮನವಾಯಿತು. ಮಾಧವಿಯನ್ನು ಆ ಮೇಲೆ ವೆಂಕಪ್ಪ ಆಸ್ಪತ್ರೆಗೂ ಒಯ್ದಿರಲಿಲ್ಲ; ಅವರ ಮನೆಗೂ ಕರೆದು ತರಲಿಲ್ಲ. ಏಕೋ ತನ್ನನ್ನು ಕುಸುಮ ಸಣ್ಣಮ್ಮನ ಮನೆಗೆ ಕಳುಹಿಸದೆ ತಡೆಯುತ್ತಿದ್ದಾರೆಂದು ಆ ಮಗುವಿಗೆ ತೋರಿತ್ತು. ಒಂದು ದಿವಸ ಅವಳ ಆಸೆಯು ಬಲವತ್ತರವಾಗಿ, ಪುಟಪುಟಕಾಲಿಡುತ್ತ; ಕಣ್ಣುತಪ್ಪಿಸಿ ಅವರ ಮನೆಗೆ ಓಡಿಬಂದಳು. ಆಗ ಕುಸುಮೆ ವರಂಡಾದಲ್ಲಿ ಒಂದು ವಿರಾಮ ಕುರ್ಚಿಯಲ್ಲಿ ಕುಳಿತು ಏನನ್ನೋ ಓದುತ್ತಿದ್ದಳು. ನಾರಾಯಣಿಯು ಅಲ್ಲಿಗೆ ಬಂದಿದ್ದಳು. ಅವಳು ಬಂದಳೆಂದು ಓದುತ್ತಿದ್ದ ಪುಸ್ತಕವನ್ನು ತೊಡಯ ಮೇಲಿರಿಸಿ ಬೇರೆ ಮಾತುಗಳನ್ನಾಡುತ್ತಿರುವಾಗಲೇ ಮಾಧವಿಯು ಹೊಂಗಾಡುತ್ತ ಜಗುಲಿಯನ್ನೇರಿದಳು. ಎದುರಿಗೇನೆ ಕುಳಿತ ಕುಸುಮೆಯನ್ನು ಸಮೀಪಿಸಿ, ತನಗೆ ಆಕೆ ತಂದುಕೊಡುವೆನೆಂದ 'ಸಣ್ಣಪಾಪ'ನನ್ನು ಸ್ಮರಿಸಿ, "ಹೂಂ ಹೂಂ —ಸಣ್ಣಮ್ಮ ಸುಳ್ಳೇ ಹೇಳಿದೆಯಲ್ಲವೆ? ಸಣ್ಣಪಾಪನನ್ನು ನನಗೆ ಆಟವಾಡಲು ತರುತ್ತೇನೆಂದು ಹೇಳಿ" ಎಂದು ಅವಳ ಮೈಮೇಲೆ ಬಿದ್ದಳು. ಕುಸುಮೆಗೆ ಏನಾಯಿತೋ ಏನೋ. ಒಮ್ಮೆಗೇ ರೇಗಿದಳು. ಸಣ್ಣ ಕೂಸಿನ ನೆನಪಾಗಿಯೋ, ಮಾತಿನ ಸರಣಿ ಕಡಿದ ಸಿಟ್ಟಿಗೋ, ಅವಳು ಮೈಮೇಲೆ ಮುದ್ದಿನಿಂದ ಬಂದೆರಗಿದ ಕೂಸನ್ನು ಆವೇಗದಿಂದ ಹಿಡಿದು

ನೂಕಿಬಿಟ್ಟಳು. ಮಗು ಗೋಡೆಗೆ ಅಪ್ಪಳಿಸಿ ಬಿದ್ದಿತು. ಕುಸುಮೆ—ಏನಾಯಿತೆಂದೂ ನೋಡಲಾರದೆ, ಅಲ್ಲಿಂದೆದ್ದು ತನ್ನ ಕೊಟಡಿಗೆ ಹೋಗಿ ಕುಳಿತುಬಿಟ್ಟಳು.

ನಾರಾಯಣಿಯು ಈ ವಿಚಿತ್ರ ದೃಶ್ಯನೋಡಿ ಚೀರಿಯೇ ಬಿಟ್ಟಳು. ಒಳಗಿಂದ ನಾಗಮ್ಮ ಓಡಿಬಂದು—ಮಗುವನ್ನು ಕಂಡು ಗಾಬರಿಯಾದಳು. ನಾರಾಯಣಿ ಅವಸರವಾಗಿ ಮನೆಯೊಳಕ್ಕೆ ನುಗ್ಗಿ ಒಂದಿಷ್ಟು ನೀರು ತಂದು ಕೂಸಿನ ಹಣೆ, ಕಣ್ಣುಗಳಿಗೆ ಸವರಿ ಗಾಳಿ ಬೀಸಿದಳು. ಮಗುವಿನ ತುಟಿಯೊಡೆದು ಬಾತು, ನೆತ್ತರು ಸರಿಯುತ್ತಿತ್ತು. ಆಕೆ ಸೆರಗಿಂದ ಅದನ್ನು ಅಚ್ಚಡಿಸಿ, 'ಏನಾಯಿತು! ಯಾರು ಮಗುವನ್ನು ಹೊಡೆದರು' ಎಂಬಾಕೆಯ ಮಾತಿಗೆ ಮೆಲ್ಲಗೆ—'ಏನಿಲ್ಲ, ಮಗು ಓಡಿ ಬಂದು ಗೋಡೆಗೆ ತಗುಲಿ ಬಿದ್ದಿತು' ಎಂದು ತಪ್ಪಿಸಿ ಉತ್ತರವಿತ್ತಳು. ಮಗುವು ಮೆಲ್ಲನೆ ಕಣ್ಣುಬಿಟ್ಟಿತು. ತುಟಿನೋವೆಂದು ಅದು ಅಳುತಿತ್ತು! ಏನಾಯಿತೆಂಬುದನ್ನು ನೆನೆದು ಬಿಕ್ಕಿ ಬಿಕ್ಕಿ ಅಳತೊಡಗಿತು. ನಾರಾಯಣಿಯು, ಅದನ್ನೆತ್ತಿಕೊಂಡು ಆಚೀಚೆ ಅಲೆದಾಡಿ ಸಮಾಧಾನಪಡಿಸುತ್ತಿರುವಾಗಲೇ, ಸುಬ್ಬಯ್ಯನೂ ಮನೆಗೆ ಬಂದನು. ಚೆಲ್ಲಿದ ರಕ್ತ, ನೀರು, ರೋದಿಸುತ್ತಿರುವ ಮಾಧವಿ--ಇವನ್ನು ಕಂಡು ಅವನಿಗೆ ಏನೂ ತಿಳಿಯದಾಯಿತು. 'ಏನಾಯಿತು' ಎಂದು ನಾರಾಯಣಿಯನ್ನೇ ಕೇಳಲು, "ನೀವು ಮೊದಲಿಷ್ಟು ಐಯೊಡಿನ್ ಇಲ್ಲವೆ ಬೋರಿಕ ಏಸಿಡ್ ಈ ಗಾಯಕ್ಕೆ ತಾಗಿಸಿರಿ" ಎಂದಳು. ಸುಬ್ಬಯ್ಯ ಮಗುವನ್ನು ಎತ್ತಿಕೊಂಡು, ಒಳಕ್ಕೆ ಔಷಧವಿರುವಲ್ಲಿಗೆ ಕೊಂಡುಹೋದ. 'ಕುಸುಮಾ ಐಯೊಡಿನ್—ಎಲ್ಲಿ' ಎಂದು ಕೇಳುವಾಗಲೇ ಸಣ್ಣಮ್ಮ ದೂಡಿದಳು" ಎಂಬ ದೂರು ಬಂದಿತು. ಸುಬ್ಬಯ್ಯ ಮಗುವನ್ನು ಔಷಧದಿಂದ ಉಪಚರಿಸಿ, ನಾರಾಯಣಿಯೊಡನೆ ನಡೆದ ಸಂಗತಿಯನ್ನು ಪೂರ್ಣವಾಗಿ ಕೇಳಿ ತಿಳಿದ.

ಅವನ ಮನಸ್ಸಿಗೆ ಅಸ್ಪಷ್ಟವಾದ ಚಿತ್ರವೊಂದು ಕಾಣಿಸಿತು. ಆಸ್ಪತ್ರೆಯಿಂದ ಮರಳಿದ ತನ್ನ ಮಡದಿಗೆ ಇನ್ನೂ ಚಿತ್ತ ಸ್ವಾಸ್ಥ್ಯ ಉಂಟಾಗಿಲ್ಲ—ಎಂದು ತಿಳಿದರೂ, ಮಗುವಿನ ಮೇಲೇಕೆ ರೇಗಿದಳೆಂದು ತಿಳಿಯದಾಯಿತು. ಮಾಧವಿಯನ್ನೇ ಮಾತನಾಡಿಸುತ್ತ-"ನಿನಗೇನು ಬೇಕಮ್ಮ, ನಾನು ತಂದು ಕೊಡುವೆ" ಎನ್ನುತ್ತಲೇ ಆಕೆ, 'ಸಣ್ಣಮ್ಮ ಪಾಪ

ನನ್ನು ಕೇಳಿದ್ದಕ್ಕೆ ನೂಕಿಬಿಟ್ಟಳು" ಎನ್ನುತ್ತಲೇ ಕಾರಣ ಸ್ಪಷ್ಟವಾಯಿತು. "ನಾನು ಚಂದದ ಪಾಪ ಕೊಡಿಸುವೆ"ನೆಂದು ಪೇಟೆಗೆ ಹೋಗಲು ಅನುವಾದ. ಮಗುವಿನ ದೂರು ಅವರ ಮನೆಯ ತನಕ ಹೋದರೇನು ಗತಿ ಎಂದು ಆತ ಚಿಂತಿಸಿದ. ನಾರಾಯಣಿಯೊಡನೆ "ಯಾರಿಗೂ ಈ ಸುದ್ದಿ ಬೇಡ" ಎಂದು ಎಚ್ಚರ ನುಡಿದು, ಒಂದು ಟಾಂಗಾದಲ್ಲಿ ಕುಳಿತು ಮಗುವನ್ನು ಕರೆದುಕೊಂಡು ಪೇಟೆಗೆ ಹೋದ.

ಅಲ್ಲಿ ಸುಂದರವಾದೊಂದು ಸೆಲುಲಾಯಿಡು ಗೊಂಬೆ ಸಿಗುತ್ತಲೇ ಎಲ್ಲ ನೋವೂ, ದುಃಖವೂ ಮಗುವಿಗೆ ಮರವೆಯಾಯಿತು. 'ಇನ್ನೂ ನನಗೆ ಸಣ್ಣಮ್ಮನ ಗೊಂಬೆ ಬೇಡಪ್ಪ. ಇದೇ ಚಂದದ ಗೊಂಬೆ....... ಅವಳೆಂಥವಳು? ಸುಳ್ಳೇ ಹೇಳುವುದು" ಎಂದು ಸಮಾಧಾನ ತಾಳಿದಳು. ಬರುತ್ತ, ಮಾಧವಿಯ ಬಾಯಿಂದ ನಡೆದ ಘಟನೆಯ ಸುದ್ದಿ ಹೊರಬೀಳದಂತೆ, ಉಪಾಯ ಹೂಡಬೇಕಾಯಿತು. ಅವನು ಕೂಸನ್ನು ಹಿಡಿದುಕೊಂಡು ಮನೆಗೆ ಮರಳುವಾಗ ಮನೆಯಲ್ಲಿ ಕಾಣೆಯಾದ ಮಗುವನ್ನು ಅರಸಿ, ಅವಳ ಹಿರಿಯಕ್ಕ ಜಮುನೆ ಅಲ್ಲಿಯ ತನಕ ಬಂದಿದ್ದಳು. ಕುಸುಮೆಯ ಬಳಿಗೆ ಬಂದು "ಮಗು ಬಂತೇ ಇಲ್ಲಿಗೆ?" ಎಂದು ವಿಚಾರಿಸಿದರೆ ಕುಸುಮೆ 'ಯಾರಿಗೆ ಗೊತ್ತು?' ಎಂದಳು. ನಾಗಕ್ಕ, 'ಬಂದಿದ್ದಳು; ಸುಬ್ಬಯ್ಯ ತಿರುಗಾಟಕ್ಕೆ ಅವಳನ್ನು ಕರೆದುಕೊಂಡು ಹೋಗಿದ್ದಾನೆ' ಎಂದು ತಿಳಿಸಬೇಕಾಯಿತು. ಸರಿ, ಮನೆಯಿಂದಿಳಿಯುವಾಗ ತಂಗಿಯ ಭೇಟಿಯಾಗಿ, ಜಮುನೆ ಸಂತೋಷದಿಂದ ಮನೆಗೆ ಹಿಂದಿರುಗುವಂತಾಯಿತು. "ತುಟಿಗೇನಾಯಿತು?" ಎಂದು ಕೇಳಿದಳು. 'ನಾನು ಬಿದ್ದೆ... ಸುಬ್ಬಯ್ಯ ಎಷ್ಟು ಚಂದದ ಪಾಪ ತಂದು ಕೊಟ್ಟರು ನೋಡಿದೆಯಾ' ಎಂದು ನಗುತ್ತ ಅಕ್ಕನ ಭುಜವನ್ನೇರಿ ಮಾಧವಿ ಮನೆಗೆ ತೆರಳಿದಳು.

ಆ ದಿನ ಕುಸುಮೆಗೆ ಯಾರೊಡನೆಯೂ ಮಾತಿಲ್ಲ. ಸುಬ್ಬಯ್ಯ 'ಈ ರೀತಿ ನೀನು ಸಿಟ್ಟಾದರೆ ಏನು ಗತಿ?'ಯೆಂದು ಎರಡು ಮಾತು ಹೇಳದೆ ಉಳಿಯಲಿಲ್ಲ. 'ಹೌದು, ನಾನು ಮಗುವನ್ನು ಕೊಂದು ಪಾಕಲು ಹುಟ್ಟಿದವಳು' ಎಂದು ಪ್ರತ್ಯುತ್ತರ ಸಂದಿತು. ನಡುವೆ ಬಾಯಿ ಹಾಕಿದ ನಾಗಮ್ಮಗೂ ಆ ದಿನ ಹೆಚ್ಚಿನ ಮರ್ಯಾದೆ ದೊರೆಯಲಿಲ್ಲ. ಸುಬ್ಬಯ್ಯ, ತನ್ನ ಮಡದಿಗೆ ನಿಶ್ಚಯವಾಗಿ ಬುದ್ಧಿ ಭ್ರಮಣೆಯೇ ಆಗಿದೆ

—ಎಂದು ತಿಳಿದುಕೊಳ್ಳಬೇಕಾಯಿತು.

ಆ ದಿವಸ ಅವನ ಮನಸ್ಸಿನ ಬೇಸರ ಹೇಳಿತೀರದು. ನಾರಾಯಣಿಯೂ, ಕೂಸೂ ಸೇರಿ ನಡೆದ ಸಂಗತಿಯನ್ನು ತಿಳಿಸಿದ್ದರು. "ಕೂಸು ಬದುಕಿದುದೇ ದೊಡ್ಡದು ಎಂದು ಆಕೆ ಹೇಳಿದ ಮಾತನ್ನು ಕಂಡು, 'ಇಂಥ ಉಗ್ರರೂಪವನ್ನು ಇವಳ ಕೋಪ ತಾಳಿದರೆ ನಾವೆಲ್ಲ ಒಂದು ದಿವಸ ಜೈಲು ಸೇರುವಂತಾಗದೇ?" ಎಂದು ಕಳವಳಪಡಬೇಕಾಯಿತು. ಇದರ ಎಡೆಯಲ್ಲಿ ಊಟವನ್ನು ಮಾಡದೆ ಧರಣ ಹಿಡಿದ ಅವಳಿಗೆ, ಉಪದೇಶ ಮಾಡಲು ಹೋಗಬೇಕು. ಆಡಿದ ಮಾತಿಗೇನೆ ಉರಿಯಾಗಿದ್ದಳು ಅವಳು. ಉಪದೇಶದ ನುಡಿಗಳು ಹಿಡಿಸುವ ಗಳಿಗೆ ಅದಲ್ಲ. 'ಹೂಂ, ಸಾಕು, ಆದುದು ಆಗಿಹೋಯಿತು. ನಿನ್ನ ತಾಯಿಯೂ ಊಟಮಾಡಲಿಲ್ಲ. ಹೋಗು ಸ್ವಲ್ಪ ಊಟಮಾಡಿ ಮಲಗಿಕೊ'—ಎಂದು ಹೇಳಿದರೆ; "ನನ್ನ ಊಟಕ್ಕೆ ನೀವು ಹೇಳಬೇಕಾಗಿಲ್ಲ"-ಎಂದುಬಿಟ್ಟಳು. ತಾಯಿಯ ಆಗ್ರಹವೂ ವ್ಯರ್ಥವಾಯಿತು. "ಅತ್ತೆ, ನೀವು ಊಟಮಾಡಿ ಮಲಗಿಕೊಳ್ಳಿ. ಹಸಿವಿಲ್ಲದವರಿಗೆ ಏಕೆ ಉಪಚಾರ?" ಎಂದು ಆತನೂ ಕನಿಕರ ಶೂನ್ಯವಾಗಿಯೇ ಮಾತನಾಡಿದನು.

ಕುಸುಮೆಯ ಮನಸ್ಸು ಏನಾಗಿತ್ತೆಂದು ಅವಳೇ ಅಳೆಯುವ ಸ್ಥಿತಿಯಲ್ಲಿರಲಿಲ್ಲ. ಕೂಸನ್ನು ಕಂಡು ಕ್ಷಣಕ್ಕೆ ಅವಳು ಮೈಮರೆತು ವರ್ತಿಸಿದುದೇನೋ ನಿಜ! ಆದರೆ ಮುಂದಿನ ಘಟನೆಗಳನ್ನು ಅವಳು ಬಲ್ಲಳು. ನಾರಾಯಣಿಯಿದ್ದುದು, ಎಲ್ಲರೂ ಅದನ್ನು ಉಪಚರಿಸಿದುದು, ಅದು ದೂರಿಟ್ಟುದು— ಎಲ್ಲ ಕಿವಿಗೆ ಬಿದ್ದಿದ್ದುವು. ನಾರಾಯಣಿಯಂತಹ ಗೆಳತಿಯ ಮುಂದೆ ಈ ನಾಟಕವಾದುದಕ್ಕೆ ತುಂಬ ನಾಚುಗೆಯಾಯಿತು. ತನ್ನನ್ನು ಕೊಲೆಗಾರ್ತಿಯೆಂದು ಇವರು ತಿಳಿಯುತ್ತಿದ್ದಾರಲ್ಲ—ಎಂದು ಮತ್ತಷ್ಟು ರೋಷ ಕುದಿಯಿತು. ಅಂತು, ಊಟ ನಿರಾಕರಿಸಿದರೂ ನೆಮ್ಮದಿಯಿಲ್ಲ. ತನ್ನ ನಡತೆ ಇವರಿಂದಾಗಿ ಪ್ರಚಾರವಾಗುತ್ತದೆಯೇ ಎಂಬ ಅಳುಕು ಬೇರೆ. ಆದರೆ ತನ್ನದು ತಪ್ಪು, ಕೂಸಿನ ಮುಂದೆ ತಾನು ಆ ರೀತಿ ತಾಳ್ಮೆಗೆಟ್ಟು ವರ್ತಿಸಿದುದು ಸಮವಲ್ಲ ಎಂಬ ಭಾವನೆ ಮಾತ್ರ ಬರಲೊಲ್ಲದು. ತನ್ನ ಸ್ಥಿತಿಯಲ್ಲಿ ಇನ್ನೊಬ್ಬರಿದ್ದಿದ್ದರೆ ಮಗುವಿನ ಕತ್ತು ಹಿಸುಕುತಿದ್ದರು-ಎಂದು ತನ್ನ ನಡತೆಯನ್ನು ತಾನೇ ಸಮರ್ಥಿಸಿ ಸಮಾ

ಥಾನ ತಂದುಕೊಳ್ಳುತ್ತಿದ್ದಳು.

ರಾತ್ರಿ ಆಕೆ ಹಾಸುಗೆಯಲ್ಲಿ ದೀರ್ಘ ನಿಟ್ಟುಸಿರುಗಳನ್ನು ಬಿಡುತ್ತ ನಿದ್ರೆಹೋದಳು. ಆಕೆಗೇನೋ ದಣಿವಿನಿಂದ ನಿದ್ದೆ ಬಂದರೂ, ಪತ್ನಿಯ ತಪ್ಪಿತವನ್ನು ತನ್ನ ತಲೆಗೇರಿಸಿಕೊಂಡು ಕೊರಗುತ್ತಿದ್ದ ಸುಬ್ಬಯ್ಯಗೆ ಮಾತ್ರ ಇಷ್ಟಿಷ್ಟು ಶಾಂತಿ ದೊರೆಯಲಿಲ್ಲ.

ಬೆಳಿಗ್ಗೆ ಎದ್ದೊಡನೆ 'ಕುಸುಮಾ' ಎಂದು ಹೆಂಡತಿಯನ್ನು ಎಚ್ಚ ರಿಸುವುದು ಅವನ ವಾಡಿಕೆ. ಅದರಂತೆ ಬಾಯಿತೆರೆದು, ಅರ್ಧ ನುಡಿ ಯಲ್ಲೆ ಮೌನತಾಳಿ, ಆತ ಮುಖಮಜ್ಜನ ಮುಗಿಸಲು ಹೋದನು. ಆ ಬೆಳಗಾಗಲಿ, ಸಂಜೆಯಾಗಲಿ ಅವನಿಗೆ ಕುಸುಮೆಯನ್ನು ಮುಖವೆತ್ತಿ ನೋಡಲು ಇಷ್ಟವಾಗಲಿಲ್ಲ. ಕುಸುಮೆಯೂ ತಗ್ಗಿ ನಡೆಯಲಿಲ್ಲ. ತಾಯೊ ಡನೆ ಮಾತನಾಡುವುದಕ್ಕೇನೆ ಮೂರು ದಿನ ಸಂದಿತು. ನಾರಾಯಣಿಯು ಮರುದಿವಸವೂ ಬಂದಿದ್ದಳು. ಏನಾದರೂ ಕ್ಲಬ್ಬಿನ ಕೆಲಸಗಳನ್ನು ತರ್ಕಿ ಸುವುದು ಅವಳ ಪದ್ಧತಿ. ಮೊದಲದಿವಸ ಅವಳು ಬಂದಾಗ, ತಲೆ ನೋವು ನಟಿಸಿ ಕಳುಹಿಸಿಕೊಟ್ಟಳು. ಮುಂದೆ ಮೂರು ನಾಲ್ಕು ದಿನಗ ಳಲ್ಲಿ ಅವಳೊಬ್ಬಳಲ್ಲೇ ತನ್ನ ಮರುಕವನ್ನು ತೋಡಿಕೊಂಡಳು. ತನ್ನ ದುಡುಕಿನ ವರ್ತನೆಯ ಹಿನ್ನೆಲೆಯನ್ನು ಬಣ್ಣಿಸಿ, ಅವಳ ಕನಿಕರವನ್ನು ಗಳಿಸುವೆನೆಂಬ ಯತ್ನ. ನಾರಾಯಣಿಯು ಆಕೆಯ ವಿಷಯ ಅಭಿಮಾ ನವುಳ್ಳವಳೂ ನಿಜ. ಆದುದರಿಂದ ಅವಳ ವಿಶ್ವಾಸ ಗಳಿಸುವುದು ಕಷ್ಟ ವಾಗಿರಲಿಲ್ಲ. ಅವಳೊಡನೆ ಕುಸುಮ "ನಾರಾಯಣಿ, ನನಗೆ ಈ ಪ್ರಪಂ ಚದಲ್ಲಿ ನನ್ನವರೆಂದು ಯಾರೂ ಕಾಣಿಸುವುದಿಲ್ಲ! ನನಗೆ ಯಾವುದೂ ಬೇಡವಾಗಿದೆ. ನೀನೇನೋ ಹಿಂದಣ ಜನ್ಮದ ಅಕ್ಕತಂಗಿಯಾಗಿದ್ದಿರ ಬೇಕು; ಬಂದು ಮಾತನಾಡಿಸುತ್ತೀ"— ಎಂದು ಅವಳನ್ನು ಹೊಗಳಿ ಅನುತಾಪ ಗಳಿಸುತಿದ್ದಳು.

ಒಂದು ವಾರದ ವರೆಗೂ ಸುಬ್ಬಯ್ಯ ಚಂದವಾಗಿ ಕುಸುಮೆಯೊ ಡನೆ ಮಾತನಾಡಲಿಲ್ಲ. ಸಾಲದುದಕ್ಕೆ ಆತ, ಎರಡು ಮೂರು ಬಾರಿ ವೆಂಕಪ್ಪನ ಮನೆಯಿಂದ ಮಾಧವಿಯನ್ನು ಎತ್ತಿಕೊಂಡು ಮನೆಗೆ ತಂದಿದ್ದ. ಅವಳೊಡನೆ, ತಾನೇ ಅಪರಾಧಿಯೆನ್ನುವಷ್ಟು ವಿನಯದಿಂದ ಮಾತನಾಡುತ್ತಿದ್ದ. 'ಇದೆಲ್ಲ ವರ್ತನೆ ನನ್ನನ್ನು ಕೆಟ್ಟವಳನ್ನಾಗಿ ತೋರಿಸಿ

ತಾವು ಒಳ್ಳೆಯರೆನಿಸುವ ಕ್ರಮು'—ಎಂದೇ ಆಕೆ ತಿಳಿದಳು. ಎರಡು ದಿವಸ ಸಣ್ಣಮ್ಮನ ಬಳಿ ಮಾಧವಿ ಹೋಗದೆ ಉಳಿರದೂ, ಅವಳಿಗೆಲ್ಲಿಯು ಜಿದ್ದು ಉಳಿಯಬೇಕು? ತಾನಾಗಿಯೇ 'ಸಣ್ಣಮ್ಮ ನಾನು ಬಂದಿದ್ದೇನೆ. ನನ್ನ ಮಗುವಿಗೆ ಒಂದು ಅಂಗಿ ಮಾಡಿ ಕೊಡುತ್ತೀಯಾ? ಅಕ್ಕಗೆ ಶಾಲೆಯಿದೆಯಂತೆ; ಪುರುಸೊತ್ತೇ ಇಲ್ಲವಂತೆ. ನೀನು ಶಾಲೆಗೆ ಹೋಗುವುದಿಲ್ಲ, ಮಾಡಿಕೊಡು—ದಮ್ಮಯ್ಯ'—ಎಂದು ಬೇಡುವಳು. ಆದರೂ ಕುಸಮೆ ಮೂಕಿಯೇ. ನಾರಾಯಣಿಯು 'ಅದಕ್ಕೆ ಅಂಗಿಯೇ! ನಾನು ಮಾಡಿಕೊಡುತ್ತೇನೆ. ಸಣ್ಣಮ್ಮನಿಗೆ ತೊಂದರೆಕೊಡಬಾರದು ಮಗು; ಅವರಿಗೆ ಹುಷಾರಿಲ್ಲ. ನಿನಗೆ ಗೊತ್ತಿಲ್ಲ' ಎನ್ನುವಳು.

"ಏನಾಗಿದೆ?"

"ನಿನಗೆ ಹೇಳಿದರೆ ತಿಳಿಯುತ್ತದೆಯೇ?"

"ನನಗೆ ತಿಳಿಯುತ್ತದೆ. ನನಗೆ ಹೇಳು. ನಾನು ಸುಬ್ಬಯಣ್ಣನಿಗೆ ಹೇಳಿ ಸಿಹಿಸಿಹಿ ಮದ್ದು ತರಿಸಿಕೊಡುತ್ತೇನೆ. ಸಣ್ಣಮ್ಮ ಹುಶಾರಾಗುತ್ತಾಳೆ" ಎನ್ನುವಳು. ನಾರಾಯಣಿಗೆ ನಗು ಬರುವುದು. ಅಷ್ಟೇನೆ ಪರಿಣಾಮ. ತಿರುಗಿ ಸುಬ್ಬಯ್ಯನ ತನಕ ದೂರು ಮುಟ್ಟುವುದು. ಅಂತು 'ಮಾಧವಿಯನ್ನು ಕಂಡರೆ ಕುಸುಮೆಗೆ ಆಗುತ್ತಲಿಲ್ಲ' ಎಂದೇ ತೋರಿತು. ತಾನಿಲ್ಲದಾಗ ಆ ಮಗು ಬಂದರೆ ಇನ್ನೇನಾದರೂ ಅಪಾಯವಾದೀತೇ —ಎಂಬ ಭಯವೂ ಉಂಟಾಯಿತು.

ಕುಸುಮೆಯ ಅತೃಪ್ತಿಯೆಲ್ಲವೂ ಪತಿಯ ಮೇಲೆ ಕ್ರೋಡೀಕರಿಸಿತು. ಅವನು ಮಾತನಾಡಲಿ, ಆಡದಿರಲಿ—ಎಲ್ಲದರ ತಪ್ಪೂ ಆತನ ಮೇಲೆಯೇ. ಎಲ್ಲಾದರೂ ತಾಯಿ ನಾಲ್ಕು ಬುದ್ಧಿವಚನದ ಮಾತು ಹೇಳಿದರೂ ಅವಳ ಮೇಲೆಯೇ ಕೋಪ. ಹೀಗೆಲ್ಲ ನಡೆದುದನ್ನು ಕಂಡು 'ಮಗಳ ಜಾತಕದಲ್ಲಿ ಬಹಳ ಕಠಿಣ ಸಂಧಿಕಾಲ ಬಂದಿರಬೇಕೆಂ'ಬ ಊಹೆಗೆ ಗುರಿಯಾದಳು. 'ಇಲ್ಲ, ಕುಸುಮೆಯ ಜಾತಕ ಯಾರಿಗಾದರೂ ತೋರಿಸಬೇಕು. ಏನಾದರೂ ಸಮಾಧಾನ ಶಾಂತಿ ಮಾಡಬೇಕು' ಎಂದು ಬಯಸುವಾಗಲೇ, ಒಬ್ಬ ಅನುಕೂಲದ ಕಕ್ಷಿಗಾರ ಸಿಗಬೇಕೇ? ಸುಬ್ಬಯ್ಯ ಮನೆಯಲ್ಲಿಲ್ಲದವೇಳೆ ಒಬ್ಬ ಬಾಯಿಬಡಿಕ ಜೋಯಿಸರ ಸವಾರಿ ಅವರ ಮನೆಗೆ ಬಂದಿತು. ಅವನ ಮುಂದೆ ನಾಗಮ್ಮ ಮಗಳ

ಮತ್ತು ಅಳಿಯನ ಜಾತಕವನ್ನು ಇರಿಸಿದಳು. ಜಾತಕ ನೋಡದೇನೇ ಆದುದನ್ನು, ಆಗುವುದನ್ನು ಹೇಳಬಲ್ಲ ವಾಚಾಳಿ ಅವನು. ಜಾತಕ ತೋರಿಸಿದ ಮೇಲೆ ಕೇಳಬೇಕೆ? 'ಈಕೆಗೆ ಈಗ ಬಹಳ ಕಠಿಣಕಾಲ; ಗಂಡನ ಮನಸ್ಸು ಚಂಚಲ' — ಎಂದು ತೆರೆದ ಬಾಯಿಗೇ ಹರಸಿ ಕುಸುಮೆಯ ವಿಶ್ವಾಸವನ್ನು ಗಳಿಸಿಕೊಂಡು, ಹಿಂದಾದುದನ್ನು ಹೇಳುವ ವಿಷಯದಲ್ಲಿ ವರ್ತಮಾನ ಪತ್ರಿಕೆಗಳನ್ನು ಮೀರಿಸಿಬಿಟ್ಟ. ನಾಗಮ್ಮ ಒತ್ತಿ ಒತ್ತಿ ಕೇಳಿದ, ಸಂತಾನಫಲದ ವಿಷಯವಾಗಿ ಅವನು ಖಂಡುತುಂಡವಾದಿ. 'ನಿಮ್ಮ, ಈ ಜಾತಕದ ಗಳಿಗೆ ಬರೆದುದು ನಿಜವಾದರೆ, ಐವರು ಮಕ್ಕಳಾಗಲೇ ಬೇಕು. ಒಂದೆರಡು ಹೊಟ್ಟಾದರೂ ಎರಡು ಮಕ್ಕಳು ಖಂಡಿತ. ಅಂದರೆ ನೋಡಿ—ಗಂಡನ ಕಡೆಯಲ್ಲಿ ಅಂಥ ಯೋಗವಿಲ್ಲ. ನಿಮ್ಮ ಅದೃಷ್ಟ ಚೆನ್ನಾದದ್ದು. ಅವರೇನು? ದುಡಿಯುವುದಕ್ಕೆ ತರುವುದಕ್ಕೆ ಮಾತ್ರ. ಆದರೆ ನಿಮಗೆ ನಿಮ್ಮ ಮಕ್ಕಳಿಂದ ಅಪ್ರತಿಮ ಕೀರ್ತಿ, ಸುಖ, ಸಂಪತ್ತು — ಎಲ್ಲ ದೊರೆಯುತ್ತದೆ' ಎಂದು ಹೇಳಿದ.

ಯಾವಾಗಲೂ ಬಯಸುವ ವಸ್ತುಗಳನ್ನು ಹರಸಿದರೆ ಯಾರಿಗೆ ಹಿಗ್ಗು ಉಂಟಾಗಲಾರದು. ಕುಸುಮೆ ತಾನಾಗಿ—'ಗಂಡೆಷ್ಟು ಹೆಣ್ಣೆಷ್ಟು ....ಈಗ ಹೇಗೂ ಎರಡಾಯಿತು. ಉಳಿದ ಮೂರರ ಕತೆ ಹೇಳಿ' ಎಂದು ವಿಚಾರಿಸಲು 'ಮುಂದಿನದು ಗಂಡು, ಅನಂತರ ಹೆಣ್ಣು, ತಿರುಗಿ ಗಂಡು' — ಎಂದನು. ಹಾಗಾದರೆ ಇನ್ನು ಮೂರು ಮಕ್ಕಳೋ?'

'ಸಂತಾನ ಮೂರಕ್ಕೆ ಮೂರೇ. ಒಂದು ಮಾತ್ರ ಅಲ್ಪಾಯುಷಿ ಎಂಬ ಅನುಮಾನ' — ಎಂದು, ಆಧಾರಕ್ಕೆ ಕ್ರಮಗತವಾಗಿ ಗ್ರಹಸ್ಥಾನಗಳನ್ನು ವಿವರಿಸಿ, ಆಧಾರಭೂತವಾದ ಶ್ಲೋಕಗಳನ್ನು ಉಧ್ಧರಿಸಿ ತನ್ನ ದಿನದ ವೆಚ್ಚಕ್ಕೆ ದಾರಿಮಾಡಿಕೊಂಡು ಹಿಂತೆರಳಿದನು.

ಕುಸುಮೆಗೆ ತುಂಬ ತೃಪ್ತಿಯಾಯಿತು. ತಾನು ತಿಳಿದಂತೆ 'ತನ್ನ ಅದೃಷ್ಟವೇ ಹಿರಿದು. ಕೈಹಿಡಿದ ಮಹಾನುಭಾವನದು ಅಷ್ಟು ಪ್ರಶಸ್ತವಲ್ಲ' ಎಂದುದನ್ನು ಕೇಳಿ ಇನ್ನೇನೋ ಒಂದು ತೃಪ್ತಿಯಾಯಿತು. ಆ ದಿನ ತಾನಾಗಿಯೇ ಮನೆಗೆ ಕೋರ್ಟು ಮುಗಿಸಿ ಬಂದ ಸುಬ್ಬಯ್ಯನನ್ನು ಉಲ್ಲಾಸದಿಂದ ಸ್ವಾಗತಿಸಿದಳು. ಅವನಿಗೇ ಆಶ್ಚರ್ಯವಾಗುವಂತಾಯಿತು; ಕಾರಣವೂ ತಿಳಿಯದು. ನಾಗಮ್ಮ ತನ್ನ ಹೆಡ್ಡುಭಾಷೆಯಲ್ಲಿ

ಜೋಯಿಸನ ಭವಿಷ್ಯವಾಣಿಯನ್ನು ವಿವರಿಸಿದಳು. ಸುಬ್ಬಯ್ಯ ಕಾಫಿ ಕುಡಿಯುತ್ತ, ಉಪಹಾರ ಮೆಲ್ಲುತ್ತ—"ಹೂಂ,! ಆಯಿತಲ್ಲ, ಮುಂದೆ ಒಳ್ಳೆದಿರುವುದಾದರೆ ಸರಿ. ನನಗೆ ಮಾತ್ರ ಇದೊಂದರಲ್ಲೂ ವಿಶ್ವಾಸ ವಿಲ್ಲ. ಬಹುಬಾರಿ, ಇದು ನಾಳೆ ಹಾಗಿದೆ, ಹೀಗಿದೆ ಎಂದು, ಇರುವ ಅಲ್ಪ ಸುಖವನ್ನು ಇದರಿಂದ ಕೆಡಿಸಿಕೊಳ್ಳಲು ಬಂದೀತೇಹೊರತು ಮತ್ತೇ ನಿಲ್ಲ"—ಎಂದನು.

"ಹೌದು, ಹಾಗಾದರೆ ಹಿಂದಿನವರಿಗೆಲ್ಲಾ ಅಷ್ಟು ತಿಳಿಯದೆ ದೊಡ್ಡದಾದರು. ನಿಮಗೆ ನಿಮ್ಮ Law Journal ನಲ್ಲಿ ಹೇಳಿದ್ದು ಮಾತ್ರ ಶಾಸ್ತ್ರ. ಋಷಿಗಳು ಹೇಳಿದುದು ಹೇಗೆ ಶಾಸ್ತ್ರವಾದೀತು?"—ಎಂದು ಕುಸುಮೆ ಅಣಕಿಸಿದಳು. ಸುಬ್ಬಯ್ಯ ವಾದವನ್ನು ಮುಂದುವರಿಸಲಿಲ್ಲ —"ಆಗಲಿ, ಒಳ್ಳೆಯದೇ ಆಗಲಿ. ಒಬ್ಬೊಬ್ಬರ ನಂಬಿಕೆ ಒಂದೊಂದು ತೆರ" ಎಂದು ಮಾತು ತೇಲಿಸಿ ಹೊರಟುಹೋದನು.

ಅದೇ ದಿನವೇ, ಬಹು ದಿವಸದ ಬಳಿಕ ಕುಸುಮೆ, ತನ್ನ ನವೀನ ಕ್ಲಬ್ ಮಂದಿರಕ್ಕೆ ಕಾಲಿರಿಸಿದಳು. ಅಂದಿನಿಂದ ಪ್ರತಿದಿನ ಕ್ಲಬ್ಬಿನ ಸರ್ಕೀಟು ನಡೆಯುತ್ತಿತ್ತು. ದಿನ ಹೋದಂತೆ ಆಕೆಯೂ ಉಲ್ಲಾಸ ತಾಳುತ್ತ ಬಂದುದನ್ನು ಕಂಡು ಪತಿಯ ಯೋಚನೆಯು ದೂರವಾಗುತ್ತ ಬಂದಿತು. ಬರಿಯ ಯೋಚನೆಯಲ್ಲೇ ಹೊತ್ತು ಕಳೆಯುವ ವಿರಾಮವೂ ಅವನಿಗಿರಲಿಲ್ಲ. ಅವನ ವೃತ್ತಿಯು ಬೆಳೆಯುತ್ತಿದ್ದುದರಿಂದ ಹಾಳುಹ ರಟೆಗೆ ಅವಕಾಶ ಕಡಮೆ.

ತನ್ನ ಸದನದ ಅನೇಕ ಅಪೂರ್ಣವಾದ ಕೆಲಸಗಳ ಸಲುವಾಗಿ ಕುಸುಮೆ ಓಡಾಡ ತೊಡಗಿದಳು. ಕುರ್ಚಿ, ಮೇಜು, ಬೀರು, ಪುಸ್ತಕ ಗಳೆಂದು-ನಿಲಯವನ್ನು ಸೊಬಗಿನಲ್ಲಿಡುವ ಆತುರವಾಯಿತು. ಅದನ್ನು ದೊರಕಿಸಿಕೊಡುವಂತೆ ವೆಂಕಪ್ಪನಲ್ಲಿಗೆ ತಿರುಗಿ ಓಡಾಡಿದಳು. ಅದ ರಿಂದ ಇನ್ನೊಮ್ಮೆ ಶೀಲಕ್ಕನ ಮಕ್ಕಳೊಡನೆ ಬಳಕೆ ಒದಗಿತು. ಮಾಧ ವಿಯನ್ನು ಅವನ ಮುಂದೆ ಎತ್ತಿ ಮುದ್ದಾಡಿಸ ತೊಡಗಿದಳು. ಅಂತ ರಂಗದಲ್ಲಿ ಮಾಧವಿಯನ್ನು ಕುರಿತೇಕೋ ತುಂಬ ಅಸಮಾಧಾನ ಸೇರಿ ದ್ದರೂ, ತೋರಿಕೆಯ ನಾಟಕದಲ್ಲಿ ಹಾಗಿರಲಿಲ್ಲ. ಒಂದೆರಡು ಬಾರಿ ಅವಳನ್ನೆತ್ತಿಕೊಂಡು ಸುಬ್ಬಯ್ಯನ ಮುಂದೆಯೂ ತಂದು ನಿಲ್ಲಿಸಿದ್ದಳು.

'ನೀವೊಬ್ಬರೇ ತಾಯಿಯಿಲ್ಲದ ಮಕ್ಕಳನ್ನು ಪ್ರೀತಿಸಬಲ್ಲವರಲ್ಲ' ಎಂದು ತೋರಿಸುವುದು ಅವಳ ಹವಣಿಕೆ. ಅಂತು ಅದರಿಂದ ಸುಬ್ಬಯ್ಯಗೆ ಮಡದಿಯ ವಿಷಯದಲ್ಲಿ ಪ್ರಸನ್ನತೆಯುಂಟಾದುದು ನಿಜ.

ನಿತ್ಯ ವೆಂಕಪ್ಪನ ಮನೆಗೆ ಹೋಗುವುದರ ಜತೆಗೆ, ಅವನ ಮಕ್ಕಳನ್ನು ಸಿನೆಮಾಕ್ಕೂ ಒಯ್ಯತೊಡಗಿದಳು. 'ಮನೆಯಲ್ಲಿ ಬಹಳ ಬೇಸರವಾಗುತ್ತದೆ, ಬರುತ್ತೀರಾ ಯಾರಾದರೂ' ಎಂದು ಅವಳೇ ಆಮಂತ್ರಿಸುವಳು. ಎಷ್ಟೋ ಬಾರಿ ಗಂಡನನ್ನು ಬಲವಂತಪಡಿಸಿ, ಅವನ ಮನೆಯವರನ್ನು ಕೂಡಿಕೊಂಡು ಸಿನೆಮಾಕ್ಕೆ ಹೋಗಲು ಕರೆದುದುಂಟು. "ನಿನಗೆ ಕರಿಕರಿಯಾಗದೇ?" ಎಂದರೆ, 'ಪಾಪ, ತಾಯಿಯಿಲ್ಲದ ಕೂಸುಗಳಲ್ಲವೇ? ಬರಿಯ ನಮ್ಮ ಸುಖವೊಂದನ್ನು ನೋಡಿದರೆ ಆದೀತೇ?' ಎಂದು ಪಾರಮಾರ್ಥಕ್ಕೆ ಮಾತು ತಿರುಗಿಸುವಳು. ಸುಬ್ಬಯ್ಯನಿಗೆ ಈ ತೆರನ ಮಾರ್ಪಾಟನಿಂದ ಸೋಜಿಗವೇ ಆಯಿತು. ಕೆಲವೊಮ್ಮೆ ಕೈ ತುಂಬ ಕೆಲಸವಿರುವಾಗ ಈಕೆ "ಸಿನೆಮಾ," ಎಂದರೆ "ನೀನು ಹೋಗು; ಅವರ ಮನೆಗೆ ಹೋಗಿ ಮಕ್ಕಳನ್ನು ಕರೆದುಕೊಂಡು ಹೋಗು" ಎಂದು ಹೇಳುವುದುಂಟು.

ಅದರಿಂದ ವೆಂಕಪ್ಪಣ್ಣ, ಅವನ ಮಕ್ಕಳು ಎಲ್ಲರು ಸಾಲಾಗಿ ಸಿನೆಮಾಕ್ಕೆ ಹೋಗುವರು. ಆಗಲೆಲ್ಲ ಮಾಧವಿಯು ಕುಸುಮೆಯ ತೊಡೆಯಲ್ಲಿ ಕುಳಿತರೇನೆ ಇಬ್ಬರಿಗೂ ಸಮಾಧಾನ. ಎಲ್ಲರೂ ಜತೆಯಲ್ಲಿ ಕುಳಿತಿರುತಿದ್ದರು. ಸಿನೆಮಾ ನೋಡುವಾಗಲೆಲ್ಲ ಮಕ್ಕಳಜೊತೆಗೆ ಇವಳು ಮಾತನಾಡುತ್ತಿದ್ದಳು. ಹಿಂದೆ ಈ ಯಾವ ಕರಿಕರಿಯನ್ನೂ ಮೆಚ್ಚದ ಕುಸುಮೆ, ಈಗ ಚಿತ್ರವನ್ನು ಮರೆತು ಮಾತಿನಲ್ಲಿ ಲೀನಳಾಗುತಿದ್ದಳು. ಈ ಎಡೆಯಲ್ಲಿ — ಮಾಧವಿಯು ತಂದೆಯ ಕುರ್ಚಿಯಿಂದ ಕುಸುಮೆಯ ಬಳಿಗೆ ಹಾರಾಡಬೇಕು. ಇಬ್ಬರೂ ಸಮೀಪವಾಗಿಯೇ ಕುಳಿತಿರುವುದರಿಂದ ಹಲವು ಬಾರಿ ಕುಸುಮೆಯ ಕರಗಳು ವೆಂಕಪ್ಪನ ಕೈಗಳ ಮೇಲೆ ವಿರಮಿಸುವುದುಂಟು. ಅದನ್ನು ವೆಂಕಪ್ಪ ಅನಾದರಿಸುತ್ತಿರಲಿಲ್ಲ.

ಕುಸುಮೆಯ ನಡಿಗೆ, ರೀತಿಗಳೆಲ್ಲ ಬೇರೆಯೇ ನಲಿವನ್ನು ತಾಳತೊಡಗಿದುವು. ಆಕೆ ಶೀಲಕ್ಕನ ಮಕ್ಕಳ ವಿಷಯದಲ್ಲಿ ತುಂಬ ಆತುರ

ವಹಿಸತೊಡಗಿದಳು. ಅವರ ಮನೆಗೆ ಹೋಗದ ದಿನವಿಲ್ಲ; ಮಾಧವಿಯನ್ನು ತಮ್ಮಲ್ಲಿಗೂ ಕ್ಲಬ್ಬಿಗೂ ಒಯ್ಯದ ದಿನವಿಲ್ಲದಾಯಿತು.

೭ನೆಯ ಅಧ್ಯಾಯ.

ಕುಸುಮೆಗೆ ಈಗ ಇಪ್ಪತ್ತೈದು ವರ್ಷ ತುಂಬಿದೆ. ರೂಪದಲ್ಲಿ ಆಕೆ ಸುಂದರ ಮೂರ್ತಿಯೇ ಆಗಿದ್ದಾಳೆ. ಗಾತ್ರದಲ್ಲಿ ಸುಬ್ಬಯ್ಯನ ಇಮ್ಮಡಿಯೆಂದರೂ ಚಿಂತೆಯಿಲ್ಲ. ಸುಬ್ಬಯ್ಯಗೆ ಉಡಿಗೆತೊಡಿಗೆಗಳಲ್ಲೆಷ್ಟು ಮಿತದೃಷ್ಟಿಯೋ, ಅಷ್ಟೇ ವಿಶಾಲ ನೋಟ ಅವಳದು. ದಿನಕ್ಕೊಂದು ಹೊಸ ಸೀರೆ ಮನೆಗೆ ಬಂದರೂ ತೃಪ್ತಿಯಿಲ್ಲ. ಒಡವೆಗಳನ್ನು ಮಾಡಿಸುವುದು, ಕರಗಿಸುವುದು, ಬದಲಿಸುವುದು—ಇವೆಲ್ಲ ಆಗಾಗ ನಡಿಯುವ ಕೆಲಸ. ಅವಳ ತಾಳಕ್ಕೆ ಸಮನಾಗಿ ಕುಣಿಯುತ್ತಿದ್ದ ಮಿಸ್ ನಾರಾಯಣಿಯು "ನಿಮಗೆ ಈ ಬೆಂಡೋಲೆ ತುಂಬ ಒಪ್ಪುತ್ತದೆ; ಈ ಸೀರೆ ಉಟ್ಟರೆ ಅವರಿಗಿಂತಲೂ ಚೆನ್ನಾಗಿ ಕಾಣಿಸುತ್ತೀರಿ. ನಿಮ್ಮ ಅಭಿರುಚಿ ಬಲು ಹೆಚ್ಚಿನದಮ್ಮ" — ಎಂದು ಅವಳನ್ನು ಹೊಗಳಿ ಹೊಗಳಿ ಅಟ್ಟಕ್ಕೇರಿಸುತ್ತಾಳೆ.

ಈಗ ಕುಸುಮೆ ಮೂರನೆಯ ಕನಸು ಕಾಣತೊಡಗಿದ್ದಾಳೆ. ತಿರುಗಿ ಬಸುರಿಯಾಗಿದ್ದಾಳೆ. ಹಡೆಯಲು ಬಹು ದಿವಸಗಳು ಬೇಕಾದರೂ ಮನಸ್ಸು ತಿರುಗಿ ವಿಚಾರಮಗ್ನವಾಗಿದೆ. ಆದರೂ ಹಿಂದಣ ಭೀತಿಯಿಲ್ಲ. ಮನದಲ್ಲೊಂದು ದೃಢವುಂಟಾಗಿದೆ. ತನ್ನದೇ ಸಪ್ನಗನಸನ್ನು ಕಾಣುತ್ತಾಳೆ. ಈ ಬಾರಿ ಯಶೋವಂತಕುಮಾರನ ತಾಯಿಯಾಗುತ್ತೇನೆ-ಎಂದು ಸನ್ನೋ ಒಳದನಿ ನುಡಿಯುವಂತೆ ಕಾಣುತ್ತದೆ. ಸುಬ್ಬಯ್ಯ ಅವಳು ಬಯಸಿದ್ದನ್ನೆಲ್ಲ ತಂದು ಕೊಡುತ್ತಾನೆ. ಅವಳನ್ನು ಉತ್ಸಾಹವಾಗಿರಿಸಲು ಯತ್ನಿಸುತ್ತಿದ್ದಾನೆ. 'ಈ ಬಾರಿ ಚೆನ್ನಾಗಿ ಹಾಲು, ಹಣ್ಣು. ಟಾನಿಕ್ ಕೊಂಡು ಎಚ್ಚರವಾಗಿರಬೇಕು. ತುಂಬ ವಿಶ್ರಾಂತಿ ತೆಗೆದುಕೊಳ್ಳಬೇಕು' ಎಂದು ಉಪದೇಶಿಸುತ್ತಾನೆ. ಅವಳಿಗೆ ಶ್ರಮವಾಗಬಾರದೆಂದು ಮನೆಯ ಹಳೆಯ

ಆಳಿನೊಂದಿಗೆ, ಇನ್ನೊಬ್ಬ ಕಿರಿಯನನ್ನು ಸೇರಿಸಿಬಿಟ್ಟಿದ್ದಾನೆ.'ನೀನೇನೂ ಮಾಡಬೇಡ; ಅವರಿಗೆ ಹೀಗಲ್ಲ, ಹೀಗೆಂದರೆ ಸಾಕು' ಎನ್ನುತ್ತಾನೆ. ಅವನ ಅಂತರಂಗದಭೀತಿಯೇಅವಳಿಗೆ ಅವನು ಹೇಳುತ್ತಿರುವಎಚ್ಚರ, ಧೈರ್ಯಗಳ ರೂಪುತಾಳಿದೆ. ಆದರೇನು?ಅವಳ ರೀತಿ ಅವನೊಡನೆ ಭಿನ್ನ ವಾಗಿದೆ.ಅವನೊಡನೆ ಅವಳು ಸಮನಾಗಿ ಮಾತನಾಡಳು.ಪ್ರೀತಿಗೆಪ್ರೀತಿ ಒಡ್ಡಳು. ದುಡುಕು ವ್ಯಂಗ್ಯಗಳಲ್ಲಿ ಉತ್ತರವೀಯುವಳು. ಎಷ್ಟೋ ಬಾರಿ ಸುಬ್ಬಯ್ಯಗೆಳೆಯ ವೆಂಕಪ್ಪನೊಡನೆ, ನೊಂದು 'ಹೀಗೇಕೆ ದಿನೇ ದಿನೇ ಅವಳು ಚಂಡಿಯಾಗುತ್ತಾಳೋ ತಿಳಿಯೆ' ಎಂದುದುಂಟು. ಅದರಿಂದ ವೆಂಕಪ್ಪ ಅವಳಿಗೆಬುದ್ಧಿ ಹೇಳುವುದುಂಟು. ಆ ಮಾತುಗಳಿಗೆ ಅವಳು ನಕ್ಕುಬಿಡುವಳು. ಪರಿಣಾಮ ಏನೂ ಇಲ್ಲ. ಇದರಿಂದಾಗಿ ಸುಬ್ಬಯ್ಯನ ಮನಸ್ಸಿನಲ್ಲಿ,ಬಸಿರಿಕಾಲದಲ್ಲಿ ಸ್ತ್ರೀಯರ ಶರೀರ ಮನಸ್ಸುಗಳೆರಡರಲ್ಲೂ ಅಧಿಕ ವಿಪ್ಲವವಾಗುತ್ತದೆಂದು ಊಹಿಸುತ್ತ ಸುಮ್ಮನಾಗುವ. ಅಲ್ಲದೆ ಮನೆಯ ನೋವುಗಳನ್ನೆಲ್ಲ ಬಲುವಾಗಿ ಮೈಮೇಲೆ ಯೇರಿಸಿಕೊಂಡರೆ ಅವನಉದ್ಯೋಗಗಳು ಸಾಗಲಾರವು.

ಅವನೀಗ ವಕೀಲ ವೃತ್ತಿಗೆ ಕಾಲಿರಿಸಿ ಹತ್ತು ವರ್ಷಗಳಾದುವು. ಅವನು 'ಜ್ಯೂನಿಯರ್, ಪಂಕ್ತಿಯನ್ನು ದಾಟಿ ಹಿರಿಯ ವಕೀಲನಾಗುತಿದ್ದಾನೆ. ಜನರಲ್ಲೂ ಗೆಳೆಯರಲ್ಲೂ ತುಂಬ ಮನ್ನಣೆ ದೊರಕಿಸಿಕೊಂಡಿದ್ದಾನೆ. ಉತ್ಪನ್ನವೂ ಹೆಚ್ಚಿದೆ. ಬಂದುದೆಲ್ಲ ಮನೆಯಲ್ಲಿ ವಾಯಕವಾಗುತ್ತಿದೆಯಾದರೂ ವೆಚ್ಚಕ್ಕೆಂದು ಅಳುಕಬೇಕಾಗಿರಲಿಲ್ಲ. ಆದರೆ ಇವನ ಅಭಿವೃದ್ಧಿಯು ವೆಂಕಪ್ಪನಿಗೆ ಬರಲಿಲ್ಲ. ಇವನಿಗಿಂತಲೂ ವೆಂಕಪ್ಪ ಹಿರಿಯ. ಆದರೆ ಸುಬ್ಬಯ್ಯನ ಬಾಯಿಚುರುಕು ಅವನಿಗಿಲ್ಲ. ಏನೋ, ಅಳತೆಗೆ ಸರಿಯಷ್ಟೆ—ಎಂಬ ರೀತಿಯಲ್ಲಿ ಅವನ ಆಯವಿತ್ತು. ಆದರೆ ಬೆಳೆಯುತ್ತಿರುವ ಸಂಸಾರ. ಮನೆ ತುಂಬ ಮಕ್ಕಳು; ಇದರಿಂದ ಎಷ್ಟು ತಂದು ಸುರಿದರೂ ಸಾಲದಾದ ಮನೆ ಅವನದು. ಅಲ್ಲಿ, ಇಲ್ಲಿ ಕಿರುಕುಳಸಾಲಗಳು ಬಹಳ.ಆಗಾಗಸುಬ್ಬಯ್ಯನಲ್ಲಿಗೆಬಂದು'ಸುಬ್ಬಯ್ಯ ಒಂದು ಹತ್ತು ಕೊಡು, ಮೂವತ್ತು ಕೊಡು—ಎನ್ನುವುದು ರೂಢಿ. ಸುಬ್ಬಯ್ಯ 'ಒಳಗೆ ಕೇಳು' ಅನ್ನುತ್ತಾನೆ. ಒಳಗಿಂದ ಕೊಡುವ ಕೈ ಅವನ ಮಟ್ಟಿಗೆ ಧಾರಾಳವಾದುದೇ. ಸುಬ್ಬಯ್ಯ ನೆನಪಾದುದನ್ನು ಬರೆ

ದಿರಿಸುತ್ತಾನೆ. ಆದರೆ ಆಗಾಗ "ಕುಸುಮೆ-- ಎಷ್ಟು ಕೊಟ್ಟೆಯೆಂದು ಬರೆಯುತ್ತಿದ್ದೀಯಲ್ಲ. ನೀರಿಗೆ ಹಾಕುವುದಾದರೂ ಒಂದು ಲೆಕ್ಕಬೇಕು" —ಎನ್ನುವ. ಅಂಥ ಮಾತು ಕೇಳಿದರೆ ಕುಸುಮೆಗೆ ಕೋಪ. "ಏನು ನಿಮ್ಮ ದುಡ್ಡು ಅವರು ಮುಳುಗಿಸಿ ಬಿಡುತ್ತಾರೆಯೇ!" ಎಂದು ಟೀಕಿಸುತ್ತಾಳೆ.

ಈಚೆಗೆ ಶೀಲಕ್ಕ ತೀರಿದಂದಿನಿಂದ ಅವನ ವೆಚ್ಚಕ್ಕೆ ತಡೆಯಿಲ್ಲ. ಕೈಸಾಲಗಳು ಸಾಕಷ್ಟು ಹೆಚ್ಚಿವೆ. ಶೀಲುವಿನ ಹೆಸರಿನಲ್ಲಿ ಮಾಡಿದ ದಾನವೂ ಸಾಲವೇ. ಸುಬ್ಬಯ್ಯನೊಬ್ಬನಿಗೇ ಸಾವಿರಕ್ಕೂ ಮಿಕ್ಕಿ ಸಲುವುದಾಗಬಹುದು. ಒಮ್ಮೊಮ್ಮೆ ಅವನಿಗೂ ಯೋಚನೆ ಬರುತ್ತದೆ 'ವೆಂಕಪ್ಪನಿಂದ ಬರುವುದಾದರೂ ಎಷ್ಟೆಂದು ಲೆಕ್ಕಮಾಡಿಬಿಡುವ' ಎಂದು. ತನ್ನ ಬರಹದ ಸ್ಥೂಲ ಅಂದಾಜು ಅವನು ಬಲ್ಲ. ಆದರೆ ಸಮನಾದ ಲೆಕ್ಕವನ್ನು ಕುಸುಮೆಯನ್ನು ಕೇಳಿ ಮಾಡಬೇಕು. ಅವಳಿಗೆ ಈ ವಿಷಯ ಕೇಳಿದರೇನೆ ಕೋಪ.

ಇತ್ತ ಸುಬ್ಬಯ್ಯನಿಗೂ ಆಶ್ಚರ್ಯ. 'ತಿಗಂಳಿಗೆ ಮುನ್ನೂರಕ್ಕೂ ಮಿಕ್ಕಿ ಹಣದುಡಿದು ತರುತ್ತಿದ್ದೇನೆ. ಯಾವಾಗಲೂ ಕಿಸೆಬರಿದಾಗಿ ಇರುವುದಲ್ಲ' ಎಂದು ಒಮ್ಮೊಮ್ಮೆ ಹೆಂಡತಿಯೊಡನೆ 'ಬಿಡಾರದ ಖರ್ಚಿಗೇನೆ ಎಷ್ಟು ಹಿಡಿಯುತ್ತದೆ ಈಗ?" ಎಂದು ಕೇಳವನು. ಈ ಪ್ರಶ್ನೆಗಳು ಅತೃಪ್ತಿಯನ್ನು ಕೆದರುವುವು. "ನಮ್ಮಿಬ್ಬರ ಸಂಸಾರಕ್ಕೇನೆ ಇಷ್ಟು ಖರ್ಚು ಹಿಡಿದರೆ ಹೇಗೆ"—ಎಂದರೆ ಕೇಳುವುದೇ ಬೇಡ. "ಇಲ್ಲ— ಈ ಬಾರಿ ಹೆರಿಗೆಗೆ ನಾನು ಊರಿಗೆ ಹೋಗುತ್ತೇನೆ, ನೀವೊಬ್ಬರಿರುವಾಗ ಲೆಕ್ಕನೋಡಿಬಿಡಿ. ಎಷ್ಟು ಅಗ್ಗವಾಗಿ ಮನೆಯ ಖರ್ಚು ನಡೆದರೂ ಒಳ್ಳೆಯದೇ ಅಲ್ಲವೇ"—ಎಂದು ಬಿಡುತ್ತಾಳೆ. ಸುಬ್ಬಯ್ಯ ಇಂತಹ ಮಾತುಗಳನ್ನು ಬಹುವಾಗಿ ಬೆಳೆಯಿಸಲು ಅವಕಾಶವಿಲ್ಲ.

ಕಾರಣವಿಷ್ಟೆ: ಕುಸುಮೆ ದುಂದುಗಾರ್ತಿಯಲ್ಲ; ಅಂತು ಅನ್ಯರ ವಿಷಯದಲ್ಲಿ ಹಣ ವ್ಯಯಿಸುವವಳಲ್ಲ. ವೆಂಕಪ್ಪಣ್ಣ ಕೇಳಿದಾಗ, ಪತಿಗೆ ತಿಳಿಯದೇನೆ ಅವಳು ಸಾಲ ತೆರುವುದುಂಟು. ಇದಲ್ಲದೆ ಆಗಾಗ, ತವರಿಗೆ ಹಣವನ್ನು ಕಳುಹಿಸುವಳು. ತಂದೆ, ಮಗಳ ಹೆಸರಲ್ಲಿ, ಬಡ್ಡಿ ವ್ಯವಹಾರ ಮಾಡಿ ಹಣಬೆಳೆಯಿಸುತ್ತಾನೆ. ಇದಾವುವೂ ಪತಿಯನದರಿಗೆ ಬಂದ ವಿಷ

ಯಂಗಳಲ್ಲ. ಇವನ್ನು ತಿಳಿಯಿಸುವಷ್ಟು ಕುಸುಮೆಗೆ ಇರುತ್ತಿರಲಿಲ್ಲವಾದು ದರಿಂದ ಹಣದ ವಿಷಯ ಗಂಡ ಯಾವ ಮಾತನಾಡುವುದೂ ಅವಳಿಗೆ ಸರಿಬೀಳದು. 'ನಾಳೆಯಿಂದ ನಿಮ್ಮ ಖಜಾನೆ ನಿಮ್ಮ ಹತ್ತಿರವೇ ಇರಲಿ, ಎಂದು ಮೂಗುಮುರಿಯುವವಳೊಡನೆ, ಆತನಾದರೂ ಏನು ಮಾಡಬಹುದು? ಪತಿಯ ಮೇಲಣ ಅತೃಪ್ತಿ ಈ ಹಣದ ದೆಸೆಯಿಂದ ಮತ್ತಷ್ಟು ಹೆಚ್ಚಿತು. ಕೆಲವು ಸಮಯ ತಾನು ಊರಲ್ಲಿ ಸುಖವಾಗಿ ಯಾರ ಕರಕರೆಯೂ ಇಲ್ಲದೆ ಇರಬೇಕೆಂದು ಅವಳಿಗೆ ಅನಿಸತೊಡಗಿತು. ವೆಂಕಪ್ಪನ ದರುಶನವಿಲ್ಲದೆ ಇರಬೇಕಾಗುವುದು ಎಂಬುದೊಂದೇ ಅದಕ್ಕೆ ಅಡಚಣಿ.

ಆರು ತಿಂಗಳು ಸುಮಾರು ಕಳೆಯುವುದರಲ್ಲಿ ಕುಸುಮೆ--'ಊರಿಗೇನೆ ಹೋಗುತ್ತೇನೆ'-ಎಂದು ನಿರ್ಧರಿಸಿ ಗಂಡನಿಗೆ ತಿಳಿಸಿದಳು. ಗಂಡ ಬಲುವಾಗಿ ಹೇಳಬೇಕಾಯಿತು. 'ಇಲ್ಲಿ ಡಾಕ್ಟರರು ಸಮೀಪವಿರುತಿದ್ದೇ ಹೀಗಾಯಿತು' ಎಂದರೆ, "ಅದೃಷ್ಟವಿಲ್ಲ" ಆದದ್ದಾಗುತ್ತದೆ. ಡಾಕ್ಟರರು ಏನು ಮಾಡುತ್ತಾರೆಂದು ತಿಳಿದಾಯಿತಲ್ಲ. ಸಂತೆಯಲ್ಲಿ ಕುಳಿತು ಹೆರಿಗೆ ಮಾಡುವ ಸುಖ ನನಗೆ ಬೇಡ. ನನ್ನ ಮಗು ಹೋದಾಗ ಇತರರ ಮಕ್ಕಳ ಕೂಗನ್ನು ಕೇಳಿಕೊಂಡು ನನ್ನ ಕರುಳು ಹೇಗೆ ಸಹಿಸೀತು-" ಎಂದು ಕಣ್ಣೀರನ್ನು ಕರೆದಳು.

ಸುಬ್ಬಯ್ಯ ಆ ದಿನವನ್ನು ನೆನೆದುಕೊಂಡ. "ನಿಜ, ಹಳೆಯ ನೋವುಗಳು ಕೆರಳುವಾಗ ಹೀಗೆ ಮನಸ್ಸಿಗೆ ತೋರುವುದು ಸಹಜ. ಅದೃಷ್ಟವಿದ್ದಂತೆ ಆಗುತ್ತದೆ. ಅವಳಿಗೆ ಎಲ್ಲಿ ತೃಪ್ತಿಯೋ ಅಲ್ಲಿಗೇನೆ ಹೋಗಲಿ—" ಎಂದು ತೀರ್ಮಾನಿಸಿದನು. ಕುಸುಮೆ ವಿಜಯಿಯೆನಿಸಿದಳು. ಆದರೆ ಈ ಸುದ್ದಿ ವೆಂಕಪ್ಪನ ಕಿವಿಗೆ ಮುಟ್ಟುತ್ತಲೇ-"ಏನು ಮರುಳು, ಹಳ್ಳಿಯವರು ಹೆದರಿ ಆಸ್ಪತ್ರೆಗೆ ಬಂದರೆ ನೀನು ಊರಿಲ್ಲದ ಕಗ್ಗಾಡಿಗೆ ಬಾಣಂತಿತನಕ್ಕೆ ಹೋಗುವುದೇ? ಈ ಬಾರಿಯೂ ತಾಯನ್ನು ಇಲ್ಲಿಗೇ ಕರೆಯಿಸಿಕೊಳ್ಳಬಾರದೇ?" ಎಂದು ಉಪದೇಶ ಮಾಡಿದ.

"ಈ ಬಾರಿ ನನಗೇನೂ ಕೇಡಾಗದೆಂದು ಧೈರ್ಯವಿದೆ"-ಎಂದು ಅವಳು ನಕ್ಕಳು. ವೆಂಕಪ್ಪನು ಅದರ ಅರ್ಥ ಅರಿತವನಂತೆ ನಕ್ಕು ಸುಮ್ಮಗಾದ. ಆದರೆ ತನ್ನ ವಿನಂತಿಯನ್ನು ಅವಳು ಮೀರಲಾರಳೆಂದು ಆತ ವಿಶ್ವಾಸಗೊಂಡಿದ್ದ.

ಇಷ್ಟೆಲ್ಲ ನಡೆದ ಬಳಿಕ, ಒಂದಲ್ಲ ಒಂದು ದಿನ ಕುಸುಮೆ ತನ್ನನ್ನು ತವರಿಗೆ ಕಳುಹಿಸಿಕೊಡಲು ಹೇಳುವಳೆಂದು ಸುಬ್ಬಯ್ಯ ತಿಳಿದಿದ್ದರೆ ಆಕೆಯಿಂದ ಅಂತಹ ಒಂದೇ ಒಂದು ಸೊಲ್ಲು ಬರಲಿಲ್ಲ. ಇವನಾಗಿ ಅದನ್ನು ಎತ್ತುವುದರಲ್ಲಿ ಹೇಗೂ, ಉತ್ಸಾಹಿತನಾಗಿರಲಿಲ್ಲ. ಅವನ ಜೀವ ವೆಲ್ಲಕಕ್ಷಿಗಾರರ ಸಲುವಾಗಿ ಕುಣಿದು ದಣಿಯುವುದರಲ್ಲಿ ಲೀನವಾಗಿತ್ತು. ಇದನ್ನು ಬಿಟ್ಟು ತನ್ನದೇ ಆದ ಅವನ ಯೋಚನೆಗಳು ಕಡಮೆ. ಈಗೀಗ ಅಂಥದೊಂದು ಬಯಕೆಯು ಅವನಲ್ಲಿಯೂ ಉದಯಿಸುತ್ತ ಬಂದಿದೆ. ಕೈಯೊಳಗಿನ ದುಡ್ಡು ಸುಮ್ಮನೆ ಕರಗಿ ನೀರಾಗುವ ಬದಲು ಯಾವುದಾ ದರೊಂದು ಸಾರ್ಥಕದ ಕೆಲಸಕ್ಕೇ ಅರ್ಪಿತವಾಗ ಬೇಕೆಂಬ ಆಸೆ. ಅದಕ್ಕಾಗಿ ಒಂದು ಬಯಕೆ ರೂಪವೆತ್ತಿದೆ. ಕುಸುಮೆ ತಾಯಾಗಿಮನೆಗೆ ಬರುವ ವೇಳೆಗೆ, ಅವಳ ಮನಸ್ಸಿಗೆ ತುಂಬ ಸಂತಸವನ್ನು ಕೊಡಬಹು ದಾದ ಒಂದು ಚೆಲುವಿನ ಮನೆಯನ್ನು ಕೊಳ್ಳಬೇಕೆಂದು. ಈಗಿರುವ ಮನೆ ತುಂಬ ಮುಗ್ಗಟ್ಟಿನದು. ಜಾಗ ಸಮನಾಗಿದ್ದರೂ ಗಾಳಿ ಬೆಳಕು ಗಳಿಲ್ಲದೆ ಸದಾ ಮುಸ್ಸಂಜೆ ಕವಿದಂತಿರುವ ಮನೆ. ಆದರೆ ಆ ಬಯಕೆ ಯನ್ನುಕುರಿತು ಅವನು ಹೆಂಡತಿಯೊಡನೆ ಚರ್ಚಿಸಲಿಲ್ಲ. ಕೊಂಡಮೇಲೆ ತನ್ನಂತೆಯೇ ಇಷ್ಟಪಟ್ಟಾಳು. ಕೊಳ್ಳುವಾಗ ಮಾತ್ರ ಉತ್ತಮ ವಸ್ತು ವನ್ನು ಆರಿಸಬೇಕು ಎಂದಿಷ್ಟೇ ಅವನ ನಿರ್ಧಾರ.

ಅವರ ಮನೆಯಿಂದ ಪೂರ್ವಕ್ಕೆ ಅರ್ಧ ಮೈಲು ದೂರದಲ್ಲೇ ಕದ್ರಿಯ ವಿಸ್ತರಣವಿರುವುದು. ಅಲ್ಲೊಂದು ಮನೆ ಬಿಕರಿಗಿದೆಯೆಂಬ ವಾರ್ತೆಯನ್ನು ಕೇಳಿದ ಒಂದೆರಡು ದಿವಸಗಳಲ್ಲೇ ಹೋಗಿ ನೋಡಿದ. ಎತ್ತರವಾದ ತಾವು-ಕದಿರೆ. ಇವನು ನೋಡಿದ ಮನೆಯಾದರೂ ಚೆನ್ನಾ ಗಿತ್ತು. ಗಾಳಿಗೆ ಮುಖವಾಗಿತ್ತು. ರಸ್ತೆಗೂ ಸಮೀಪ. ಅದೇ ತಕ್ಕುದು ಎಂದು ಮನಸ್ಸಿಗೆ ಅನಿಸಿತು. ಆದರೆ ತನ್ನ ಕಕ್ಷಿಗಾರರಿಗೆ ದೂರವಾಗದೇ —ಎಂಬ ಭೀತಿ. ಅಷ್ಟೇನು ಆಗಲಾರದು. ಇತರ ವಕೀಲರೂ ಇರುವ ಊರದು. ಈಗ ತಾನು ತುಸು ಚೆನ್ನಾಗಿ ನೆಲೆಯೂರಿದವನಾದುದರಿಂದ, ಕಕ್ಷಿಗಾರರು ತಾನಿರುವಲ್ಲಿಗೆ ಬಂದೇ ಬಂದಾರು. ಎಲ್ಲ ಯೋಚನೆಗ ಳಿಂದಲೂ ಅದೇ ಮನೆ ಪ್ರಶಸ್ತ ಎನಿಸಿತು. ಕೊಳ್ಳುವುದನ್ನು ನಿಶ್ಚಯಿಸಿ, ಆ ಸಂಗತಿಯನ್ನು ಮಾತ್ರ ಯಾರಿಗೂ ತಿಳಿಯದಂತೆ ಮರೆಯಾಗಿರಿಸ

ಬೇಕೆಂದು ಅಪೇಕ್ಷಿಸಿದನು. ಈ ಬಾರಿ, ಕುಸುಮೆ ಕೂಸನ್ನೆತ್ತಿ ಹೊಸ ಮನೆಗೆ ತರುವಂತಾಗಬೇಕು. ಹಳೆಯ ಕೊರಗನ್ನೆಲ್ಲ ಮರೆಯುವಂತಾಗಬೇಕು-ಎಂದು ಹಂಚಿಕೆ ಮಾಡುತ್ತಿದ್ದ.

ಮನೆಗೆ ಐದು ಸಾವಿರ ರೂಪಾಯಿ ಬೆಲೆ ಕೊಡಬೇಕೆಂದಾಯಿತು. ಬೆಲೆಯೇನೋ ಹೆಚ್ಚಲ್ಲ. ಆದರೆ ತನ್ನ ಕೈಯ್ಯಲ್ಲಿ ಒಮ್ಮೆಗೇ ಅಷ್ಟು ಅವ ತರಿಸುವುದು ಸಾಧ್ಯವೇ? ಆದರೂ, ಪರಿಚಿತರೊಬ್ಬರ ಕಿವಿಗೂ ಸುದ್ದಿ ಹಾಕದೆ, ಅರೆವಾಸಿ ಮೊಬಲಗನ್ನು ತೆತ್ತು, ಉಳಿದ ಅಂಶ ವರ್ಷಾಂತ್ಯ ದೊಳಗೆ ಸಲ್ಲಿಸುವ ನಿಶ್ಚಯದಿಂದ ಮನೆಯನ್ನು ಕೊಂಡುಕೊಂಡ. ಪೂರ್ತಿ ಹಣ ಸಲ್ಲಿಸಿ ಬಿಟ್ಟಿದ್ದರೆ ಚೆನ್ನಾಗಿತ್ತೆಂಬ ಆಸೆ. ಹಣದ ತಗಾದೆ ಬಂದಾಗ ಸುಮ್ಮನೆ ಲೆಕ್ಕದ ಪುಸ್ತಕ ಮಗುಚುವುದು ಸ್ವಭಾವ. ಅದ ರಿಂದ ಹಳೆಯ ಡಯರಿಗಳನ್ನು ಆರಿಸಿ, ತಿರುವ ತೊಡಗಿದ. ವೆಂಕಪ್ಪ ನಿಗೆ ಕೊಟ್ಟುದು ಎಷ್ಟಾಗಿರಬಹುದು, ಕುಸುಮೆಯು ಸ್ವಲ್ಪವಾದರೂ ತನ್ನದೆಂದು ಹಣವನ್ನು ತೆಗೆದಿರಿಸಲಾರಳೇ-ಎಂದೆಲ್ಲ ಯೋಚನೆಗಳು ಬರುತ್ತಿದ್ದುವು. ಆ ವಿಷಯವಾಗಿ ಅವಳೊಡನೆ ಮಾತುಗಳನ್ನಾಡಲು ಅವನಿಗೆ ಆತುರ.

ಮನೆ ಕೊಂಡುದೇ ಮಹಾಸಾಹಸಮಾಡಿದಂತೆ ಹಿಗ್ಗನ್ನು ತಂದಿತ್ತು. ಯಾರಿಗೂ ಹಾಗಾಗುತ್ತದೆ. ಅದರಿಂದ ಸುಬ್ಬಯ್ಯ ಬಲು ಉಬ್ಬು ಮನಸ್ಸಿಂದ ನಿತ್ಯ ಉದಾಸೀನವೃತ್ತಿಯ ಕುಸುಮೆಯೊಡನೆ ಮಾತನಾಡುತ್ತಿದ್ದ. ಅವನ ರಾಜ್ಯ ಈಗ ಕನಸುಗಳಿಂದ ತುಂಬಿದೆ. ಹೊಸ ಮನೆ, ಹೊಸ ಕೂಸು; ಅವೆಲ್ಲವುಗಳಿಂದ ಹೊಸ ನಲಿವು ಒಲು ಮೆಯಿಂದ ಕೂಡಿದ ಕುಸುಮೆಯೂ ಅವನ ಸ್ವಪ್ನರಾಜ್ಯದ ಪಾಲು ಗಾರ್ತಿ. ಹಿಂದೆ ಕುಸುಮೆ ಬಂದಾಗ ತೋರಿದ ಸ್ನೇಹ, ಲಜ್ಜೆ ಸೇರಿದ ಚಲನವಲನ ಅವನ ಮುಂದೆ ನಿಲ್ಲುವುವು; ಹೇಗೆ ಅವೆಲ್ಲ ಬಳಕೆಯಿಂದ ಮಾಯವಾದುವು; ಮಾಯವಾದರೂ — ಇನ್ನೊಮ್ಮೆ ಆ ಸವಿದಿನಗಳು ಬರಲಾರವೇ — ಎಂಬ ಅನುಮಾನದ ತೆರೆಗಳನ್ನು ಉರುಳಿಸುವುವು. ತಿರುಗಿ ಆಸೆ ಕೊನರುವುದು.

ಅವನ ಆಸೆಯೇ ಪ್ರತಿಬಿಂಬವೊಡೆದಂತೆ, ಕುಸುಮೆಯೂ ನಗು ಮೊಗದವಳಾಗುವಳು. ಮೊದಲಿಗಿಂತ ನಾಲಗೆ ಸಡಿಲಾದೀತು.

ಬಿನ್ನಾಣ ಬಿರಿದೀತು--ಎಂದು ಬಯಸುವುದು ಮಾತ್ರ; ಅವಳ ನಡತೆ ಒಂದೇ ತೆರ. ಅದರಿಂದ ಆಕೆಯು ತಿರುಗಿ ಹಳೆಯ ನಿಷ್ಫಲ ಹೆರಿಗೆಗಳನ್ನು, ನೆನೆದು, ನೊಂದು, ಬದುಕಿನ ಇದ್ದ ಸೊಗಸನ್ನು ಕಳೆದುಕೊಂಡಿರುತ್ತಾಳೆ ಅನ್ನುವ. ಅದನ್ನು ಕೆಡಿಸಲು ಸಾಮುದ್ರಿಕರ, ಜೋಯಿಸರ ಉಪದೇಶಗಳು ಬೇರೆ ಸೇರಿವೆ. ಇವಳು ಪೇಟೆಗೆ ಬಂದು ಬಿದ್ದರೂ, ಸ್ತ್ರೀಯರ ಮುಂದಾಳೆನಿಸಿದರೂ ಇನ್ನೂ ಹಳ್ಳಿಯ ಚಂಚಲ ನಂಬಿಕೆ ಹೋಗದಲ್ಲಾ ಎಂದೆನಿಸುವುದು. ಎಲ್ಲಾದರೊಮ್ಮೆ ಪರ್ಯಾಯವಾಗಿ ಆತ ಆಕೆಯೊಡನೆ ಇತರರ ಅಂಧಶ್ರದ್ಧೆಗಳನ್ನು ನೆಪಮಾಡಿ ಖಂಡಿಸಿದರೆ, 'ಹೂಂ ಶಾಸ್ತ್ರ ಗೀಸ್ತ್ರ-ಎನ್ನುವುದು ನಿನ್ನೆ ಮೊನ್ನಿನವಲ್ಲ. ಅವುಗಳು ಹಿಂದಿನ ಋಷಿಗಳು ಮಾಡಿದುವು. ಹೈಕೋರ್ಟಿನ ವಕೀಲರುಗಳ ಹೇರಿಂಗುಗಳು ಅವಕ್ಕೆ ನಾಟಲಾರವು" ಎಂದುಬಿಡುವಳು. ಇವನ ಶಿಕ್ಷಣ ಬಾಣಗಳು ಮೊದಲ ಅಂಕದಲ್ಲೇ ಮೊನೆಮುರಿದು ಬೀಳುವುವು.

"ಇಲ್ಲ, ಕುಸುಮ ಇಷ್ಟು ವಕ್ರವಾಗಲು ಕಾರಣವಿರುತ್ತಿರಲಿಲ್ಲ. ಎಲ್ಲಕ್ಕೂ ಅವಳ ಸಂತಾನನಾಶದ ಕತೆಯೇ ಕಾರಣ. ಬಯಸಿ ಬಯಸಿ, ಬೇಡಿದ ಕೂಸುಗಳು ಹುಟ್ಟುವ ಮೊದಲು, ಹುಟ್ಟಿದ ಬಳಿಕ, ಎಂದು ಮಾಯವಾದರೆ ಯಾವ ತಾಯಿಯು ಕರುಳು ತಾಳೀತು? ಅದರಿಂದ ಮನಸ್ಸು ನಿರ್ದಯವಾಗಿ ಬಿಟ್ಟಿದೆ. ತನ್ನ ನೋವಿಗೆ ನೆರವಾಗದ ಜಗತ್ತಿನ ವಿಷಯ ಮನಸ್ಸಿಗೆ ಯಾವ ಔದಾರ್ಯ ಹುಟ್ಟೀತು? ಆದರೆ ಈ ನಿರ್ದಯೆಗೆ ತಾನು ಪಾತ್ರನಾಗಬೇಕೆ! ನನ್ನಿಂದಾಗಿ ತಾನು ನಿರ್ಗತಿಕೆ-ಎನ್ನುವ ತೀರ್ಮಾನ ಬರುವುದು ಸಮನಲ್ಲ. ಅದಕ್ಕೆ ಅವಳ ಅಜ್ಞಾನ ಅಂಧಶ್ರದ್ಧೆಗಳು ಕಾರಣ" ಎಂದು ತಿಳಿಯುವನು.

* * * * *

ಇನ್ನೆರಡೇ ತಿಂಗಳು-ಅವರ ಮುಂದಿನ ಭವಿಷ್ಯ ನಿಂತಿದೆ. ಮುಂದೆ ಕುಸುಮೆ ತೀರಕಟುವಾದರೂ ಆಗಬಹುದು, ಮಧುರಳೂ ಆಗಬಹುದು. ಅವೆಲ್ಲ ಈ ಎರಡು ತಿಂಗಳುಗಳ ಕೊನೆಗೆ ತೀರ್ಮಾನವಾಗುವ ವಿಷಯಗಳು. ಅದರಿಂದ ಅವಳ ವಿಷಯ ಸಾಕಷ್ಟು ಎಚ್ಚರ ವಹಿಸುವೆನೆಂದು ಸುಬ್ಬಯ್ಯ ಮನಸ್ಸಿಲ್ಲದ ಮನಸ್ಸಿನಿಂದ "ಕುಸುಮಾ— ನೀನು ತಿಳಿದ ಹಾಗೆ ಮಾಡು, ಹೀಗೆಮಾಡು ಎಂದು ನಾನು ಹೇಳುವುದಿಲ್ಲ, ನೀನು

ಊರಿಗೆ ಹೋಗುವುದು ಸುಖವೆಂದು ಕಂಡರೆ, ಹೋಗು. ಆದರೆ ಮೋಟರು ಪ್ರಯಾಣ ಮಾಡಬೇಕಲ್ಲವೆ? ಅದರಿಂದ ಎರಡು ತಿಂಗಳು ಮೊದಲೇನೆ ಹೋಗುವುದು ಒಳಿತು. ಇಲ್ಲೇ ಇರುವುದಾದರೆ ಯಾವ ಯೋಚನೆಯೂ ಇಲ್ಲ" ಎಂದನು.

'ನಾನು ಹೋಗಬೇಕೆಂದೇನು ನಿಮ್ಮ ಹಟ! ನನಗೆ ಈ ಬಾರಿ ಏನೂ ಅಂಜಿಕೆಯಿಲ್ಲ. ಅಮ್ಮ, ಸುಬ್ರಮಣ್ಯ ದೇವರಿಗೆ ಹರಕೆ ಹೇಳಿ ಕೊಂಡಿದ್ದಾಳೆ. ಅಮ್ಮನಿಗೆ ಈ ಬಾರಿ ಇಲ್ಲಿಗೆ ಬರುವುದಕ್ಕೇನು ಆಗು ವಂತಿಲ್ಲ. ಅಪ್ಪನ ಕಣ್ಣು ಮಂಜುಮುಸುಕಿದೆ-ಎಂದು ತಿಳಿಸಿದ್ದಾಳಲ್ಲ. ನಾನೂ ಈಗ ಅಲ್ಲಿಗೆ ಹೋದರೆ ನನ್ನನ್ನೂ ಅವರನ್ನೂ ಅವಳೇ ನೋಡಿ ಕೊಂಡಿರುವುದು ಕಷ್ಟವಲ್ಲವೇ....ನಿಮಗೆ ನಾನಿಲ್ಲಿ ನಿಲ್ಲುವುದು ಕಷ್ಟ ವಾಗಿ ಕಂಡರೆ ಹೋಗಬೇಕಷ್ಟೆ," ಎಂದು ಉತ್ತರ ಬಂದಿತು. ಸುಬ್ಬಯ್ಯ ನಕ್ಕುಬಿಟ್ಟ" ಏನು? ಇದು ಬರಿಯ ನನ್ನ ಮನೆ ಮಾತ್ರ, ನಿನ್ನದಲ್ಲ— ಎಂದು ತಿಳಿದಿದ್ದೀಯಾ" ಎಂದು ನುಡಿದು ಹೊರಟುಹೋದ. ಅಲ್ಲಿಯೇ ನಿಂತರೆ ಮಾತು ವಕ್ರಕ್ಕಿಟ್ಟೀತೆಂದು ಅವನಿಗನಿಸಿತು.

* * * * *

ಈ ನಡುವೆ ವೆಂಕಪ್ಪಣ್ಣನ ಲೋಕದಲ್ಲಿ ಹೊಸ ಗ್ರಹ ಬಲಗಳು ಕಾಣಿಸತೊಡಗಿದುವು. ಅವನು ಕೆಲವು ದಿವಸಗಳಿಂದ ಸುಬ್ಬಯ್ಯನ ಮನೆಗೂ ಬಂದಿರಲಿಲ್ಲ. ಅವನ ಮನೆಯಲ್ಲಿ ಅತ್ತೆ ಮಾವಂದಿರು ಬಂದು ಬಲವಾಗಿ ಬೇರೂರಿಬಿಟ್ಟರು. "ಮೊಮ್ಮಕ್ಕಳು ಆರೈಕೆಯಿಲ್ಲದೆ ತೀರ ಸೊರಗಿ ಬೆಂಡಾಗಿವೆ"ಯೆಂಬುದು ಮೊದಲ ಆರೋಪ. ಸರಿಯಾಗಿ ಬಾಚುವವರಿಲ್ಲದೆ ಕಿರಿಯ ಮಾಧವಿಯ ಕೂದಲು ತಲೆ ಹೇನಿನ ತವರು ಮನೆಯಾಗಿದೆ. ಮಕ್ಕಳಲ್ಲಿ ಒಂದಕ್ಕಿಂತ ಒಂದಕ್ಕೆ ಹೆಚ್ಚಾಗಿ ಕಜ್ಜಿ, ನವೆ ಗಳು ತೊಡಗಿವೆ. ಇವಕ್ಕೆ ಚಿಕಿತ್ಸೆ ನಡೆಯಿಸುವುದೇ ಅವರ ಕೆಲಸ. ಕೃತಿಗಿಂತ ನೂರು ಮಡಿ ಮಾತನಾಡುವುದು. ಮಾತುಗಳಿಂದ ವಿಷ ಯವನ್ನು—'ಈ ಮನೆ ನೋಡಿಕೊಳ್ಳಲು ಒಂದು ಹೆಂಗಸು ಅವಶ್ಯ' ವೆಂದು ತಿರುಗಿಸುವುದು ಎರಡನೆಯ ಕೆಲಸ. ಆ ಮುದುಕಿ, ಮುದುಕ ರು ಮನೆಯಲ್ಲಿ ಮೂಡಿದಂದಿನಿಂದ ಕುಸುಮೆಯೂ ಅಲ್ಲಿಗೆ ಹೋಗಿ ಬರುತ್ತಿರಲಿಲ್ಲ. ಒಂದೆರಡು ದಿವಸಗಳಲ್ಲೇ ಅವರದು ಪೋಲೀಸು—

ಕಣ್ಣು ಎಂದು ಅನುಭವವಾಗಿ 'ಒಂದಕ್ಕೊಂದು ತಿಳಿದಾರಪ್ಪಾ— ಎಂದು ದೂರವಾದಳು. ಬಂದ ಕೆಲವೊಮ್ಮೆ, ವೆಂಕಪ್ಪನೊಡನೆ ವಿರಾಮವಾಗಿ ಮಾತನಾಡುವುದನ್ನು ಕಾಣುತ್ತಲೇ, ಅತ್ತೆ ನಡುವೆ ಬಾಯಿ ಹಾಕಿ 'ಬಂದೆಯಾ ಕುಸುಮ, ಹೇಗಿದ್ದೀ ಈಗ?' ಎಂದು ಎಲ್ಲರ ಮುಂದೆ ತನ್ನ ಮಾತನ್ನು ಮೆರೆಯಿಸಿಬಿಡುತ್ತಾಳೆ.

ವೆಂಕಪ್ಪಣ್ಣನ ಅತ್ತೆಯ ಹೆಸರು ಮಂಜಮ್ಮ. ಮಂಜಮ್ಮ, ವೆಂಕಪ್ಪನ ನಡಿಗೆ, ಮಾತುಗಳಲ್ಲಿ ಏನು ಪರಿಶೋಧ ನಡೆಯಿಸಿದಳೋ! ಬಂದೊಂದು ತಿಂಗಳೊಳಗಾಗಿ ತನ್ನ ಗಂಡನೊಡನೆ "ಅವನು ನಮ್ಮ ರತ್ನೆಯನ್ನು ಮದುವೆಯಾಗದಿದ್ದರೆ ಹೋಗಲಿ.....ಬೇರೆಯೊಂದು ಮದುವೆಯಾಗಬಾರದೇ? ಎಷ್ಟೆಂದರೂ ನಡುಪ್ರಾಯದಲ್ಲಿ, ಮದುವೆಯಿಲ್ಲದೆ ಸುಮ್ಮನಿದ್ದಾನೆಯೇ— ಎಂದು ತನ್ನ ದೂರದ ತಂಗಿಯ ಮಗಳೊಬ್ಬಳನ್ನು ನೆನೆದು, ಅವಳನ್ನು ಅಲ್ಲಿಗೆ ಕರೆಯಿಸಿಕೊಂಡು, ಅವನು ಮರಮದುವೆಗೆ ಒಪ್ಪಿಸುವಂತೆ ಹೊಂತಮಾಡಿದಳು. ತಂಗಿ ರುಕ್ಮಿಣಿ ಉಡುಪಿ ಊರವಳು. ಅವಳನ್ನು ತುಂಬ ಅನುಕೂಲವಂತರ ಮನೆಗೆ ಕೊಟ್ಟುದರಿಂದಲೂ, ಅವರೊಳಗಣ ಭೇಟಿ ಕಡಿಮೆಯಿದ್ದುದರಿಂದಲೂ ಮಂಜಮ್ಮಗೆ ರುಕ್ಮಿಣಿಯ ಮೇಲೆ ತುಂಬ ಅಭಿಮಾನವಿತ್ತು. ಅವಳ ಒಬ್ಬಳೇ ಮಗಳು ವಿಮಲೆ. ಆ ವಿಮಲೆಯನ್ನು ಅವಳು ನೋಡದೇನೆ ಕೆಲವು ವರ್ಷಗಳಾಗಿದ್ದುವು. ಆದರೆ ಎಲ್ಲಿಯೂ ಸಂಬಂಧವಾಗಿಲ್ಲ. ತಾವಾಗಿ ಪ್ರಸ್ತಾಪ ಹೂಡಿದರೆ ಕೈಗೂಡುವ ನಂಟುತನ- ಎಂಬುದರಿಂದ ಒಮ್ಮೆಗೇ ತಮ್ಮ ಅಳಿಯನ ಮುಂದೆ, ಬಡಗು ಮನೆಯ ರುಕ್ಮಿಣಿಯ ಗುಣ ಗಾನವನ್ನು ಮಾಡತೊಡಗಿದಳು. ಅಲ್ಲಿಗೂ ತನ್ನ ಯಜಮಾನರಿಂದ ಪತ್ರ ಬರೆಯಿಸಿದಳು. ಅವರಾದರೂ ನೆರೆದ ಹುಡುಗಿಯನ್ನು ಮನೆಯಿಂದ ಸಾಗಿಸಿದರೆ ಸಾಕೆಂದು ಕುಳಿತಿದ್ದರು. ಬಹುದಿವಸ 'ಇದು ಕುಲದಲ್ಲಿ ಕಡಮೆ; ಇದು ಯೋಗ್ಯತೆಯಲ್ಲಿ; ಇವರಿಗೆ ಆಸ್ತಿ ಇಲ್ಲ- ಎಂದು ಬಂದುದನ್ನೆಲ್ಲಾ ಹಳಿದು, ಹೆಣ್ಣು ಹೆಚ್ಚಿರುವ ಬಳಗದಲ್ಲಿ, ಬಂದ ನಂಟನ್ನೂ ಕಳೆದುಕೊಂಡಿದ್ದರು. ಈಗ ಅವರ ಮನೆಗೆ ಕನ್ಯೆ ಅರಸಿ ಬರುವವರಿದ್ದಿಲ್ಲ. ಹಿಂದಣ ದಿನವಾಗಿದ್ದರೆ, ಎರಡನೆಯ ಸಂಬಂಧಕ್ಕೆ ಹೆಣ್ಣು—ತೆರುವಂತಿರಲಿಲ್ಲ. ಆದರೆ ಕುಳಿತಲ್ಲಿ ವಿಮಲೆಯ ಕೂದಲು ನರೆಯುವ ಕಾಲ

ಬಂತೆಂದು ಅಂಜಿ, ಎಲ್ಲಿ ಅವಕಾಶವಾದೀತೆಂದು ಕಾಯುವಾಗ, ಅಕ್ಕನ ಕರೆಯು ಬಂದು, ಅವಳಿಗೆ ಹರ್ಷವನ್ನುಂಟುಮಾಡಿತು. ರುಕ್ಮಿಣಿಯು ಮನೆಯಲ್ಲಿ ಹೆಸರಿಗೊಬ್ಬ ಗಂಡ. ಆತಗೆ ತುಂಬ ವಯಸ್ಸು. ಮೊದಲಿನಿಂದಲೂ ಮನೆಯಲ್ಲಿ ಇವಳದೇ ಕಾರುಭಾರು. ಅದರಿಂದ ಅವಳ ಮಾತೇ ಮಾತು.

ಮಂಜಮ್ಮನ ಕಾಗದಕ್ಕೆ ಉತ್ತರವಾಗಿ—ರುಕ್ಮಿಣಿ ವಿಮಲೆಯರು ಒಂದು ಸಂಜೆ, ನೆಟ್ಟಗೆ ವೆಂಕಪ್ಪನ ಮನೆಯಲ್ಲಿ ಬಂದು ಎರಗಿದರು. ವಿಮಲೆಗೆ ಹುಡುಗಿತನ ಕಳೆದು ಹೋಗಿತ್ತು. ಅವಳೀಗ ತುಂಬಿದ ಹೆಂಗುಸು. ಹಿಂದೆ ಅವರ ಮನೆಯನ್ನು ವೆಂಕಪ್ಪ ಸಂದರ್ಶಿಸಿದವನೇ. ಆದರೆ ವಿಮಲೆಯನ್ನು ಕಂಡು ಯುಗಾಂತರವಾಗಿತ್ತು. ಇವರು ಬಂದಿಳಿಯುವಾಗ ಆತ ಕೋರ್ಟಿಗೆ ಹೋಗಿದ್ದ. ಕೋರ್ಟಿಂದ ಮರಳುವಾಗ ವಿಮಲೆ ಬಾಗಿಲು ತುಂಬಿ ನಿಂತಿದ್ದಳು. ದೂರದಲ್ಲಿ ಕುಸುಮೆಯಂತೆಯೇ ಕಾಣಿಸಿತು ಆತನ ಕಣ್ಣಿಗೆ. ಅದೇ ಸ್ಮರಣೆಯಿಂದ ಕಾಲಿಡುವಾಗ, ಇದು ಬೇರೆಯೇ ವ್ಯಕ್ತಿಯೆಂದು ಕಂಡು ಆಶ್ಚರ್ಯವಾಯಿತು. ಮನೆಯಲ್ಲಿ ಕಾಲಿರಿಸಿದ ಮೇಲೆ, ತನ್ನಂತೆಯೇ ವಿಷಯ ತಿಳಿಯಿತು.

ಬಂದ ದಿನವೇ ಎಲ್ಲರೂ ಸೇರಿ ಸಿನೆಮಾ ದರ್ಶನ ಮಾಡಿದರು. ನಂಟರಿದ್ದ ಎಂಟು ದಿವಸಗಳೂ ಮನೆಯಲ್ಲಿ ತುಂಬ ಕೋಲಾಹಲವೇ. ವಿಮಲೆಯು ಮನೆತನ್ನದೆಂದೇ ತಿಳಿದು ತೆರೆಗಣ್ಣಿಂದನೋಡುತ್ತಆಚೀಚೆ ಸಂಚರಿಸುತ್ತಿದ್ದಳು. ಅವಳ ಬೇಡುಗಣ್ಣುಗಳ ಮೋಹಕ್ಕೆ ವೆಂಕಪ್ಪನು ಸುಲಭವಾಗಿಯೇ ಬಲಿಯಾದ. ತನಗೆ ಎರಡನೆಯ ಲಗ್ನ ಬೇಡ—ಎನ್ನುತ್ತಿದ್ದ ಬಾಯಿ, ಯಾಕೋ ಏನೋ ಒಮ್ಮಿಂದೊಮ್ಮೆ ಮುಚ್ಚಿತು. ಒಂದು ವಾರದೊಳಗೆ ಮದುವೆಯ ದಿವಸವನ್ನು ಗೊತ್ತುಪಡಿಸಿ ನಂಟರು ಹೊರಟುಹೋದರು. ಅವರನ್ನು ಬಸ್ಸಿಗೆ ಕುಳ್ಳಿರಿಸಿ ಬರಲು ವೆಂಕಪ್ಪನೇ ಹೋಗಿದ್ದ. ಬಸ್ಸು ಅಲುಗುವಿಕೆಯ ಕಾಲದಲ್ಲಿ ವಿಮಲೆಯ ಕಣ್ಣುಗಳು 'ನಿನ್ನನ್ನಾಳಲು ಬರುವೆನೆಂದರೆ' ಇವನ ನಯನಗಳಲ್ಲಿ, ನಮ್ರ ಒಪ್ಪಿಗೆಯೂ ಕಾಣಿಸಿತು.

ಅವನು ಮನೆಗೆ ಹಿಂದಿರುಗುವಾಗ ಮಂಜಮ್ಮ, ಮೊಮ್ಮಗಳಾದ ಮಾಧವಿಗೆ ಹೆರಳು ಹಾಕುತ್ತಿದ್ದಳು, ಹಾಕುತ್ತ, ಬಾಯಿ ತೀಟೆ ತೀರಿಸು

ವವಳಂತೆ "ಮಾದಿ, ನಿನ್ನ ತಲೆ ಬಾಚಿಬಾಚಿ ನನಗೆ ದಣಿವಾಯಿತು... ಅದಕ್ಕಿನ್ನು ಬೇರೆಯೇ ಜನ ಮಾಡುತ್ತೇವೆ" ಎಂದಳು.

"ನನಗೆ ಬೇರೆ ಯಾರೂ ಹೆರಳು ಹಾಕಬಾರದು"

"ನಿನಗೊಂದು ಚಂದದ ಸಣ್ಣಮ್ಮನನ್ನು ತರುವ"

"ಸಣ್ಣಮ್ಮನೇ! ಸುಳ್ಳು, ಅವಳು ನಮ್ಮ ಮನೆಗೆ ಬಾರದೆ ತುಂಬ ದಿವಸವಾಯಿತು. ಸಿನೇಮಕ್ಕೆ ಕರೆದುಕೊಂಡು ಹೋಗಲೇ ಇಲ್ಲ....."

"ಹೋ — ವಿಮಲ ಸಣ್ಣಮ್ಮ ತಲೆಬಾಚಿದರೆ ಆಗದೇ" ಎಂದಳು.

"ಯಾರು ವಿಮಲಾ! ಅವಳು ಮತ್ತೇಕೆ ತಮ್ಮಮನೆಗೆ ಹೋದಳು? ಹೋಗುವಾಗ ಇನ್ನು ಇಲ್ಲಿಗೆ ಬರುವುದೇ ಇಲ್ಲ ಎಂದಿದ್ದಾಳೆ"

"ಅವಳನ್ನು ಹಿಡಿದು ತರಿಸುವ. ಏನು? ಅಲ್ಲವಾದರೆ, ನಮ್ಮ ಮಗುವಿಗೆ ನಿತ್ಯ ಚಂದವಾಗಿ ಹೂ ಮುಡಿಸುವವರು ಬೇಡವೆ?"

* * * * *

ಸರಿ, ಈ ಕೂಸುಗಳ ಬಾಯಿಂದ, ಮರುಮದುವೆಯ ನಿಶ್ಚಯ, ಕುಸುಮೆ ಸುಬ್ಬಯ್ಯನಿಗೂ ತಲುಪಿತು. ಸುಬ್ಬಯ್ಯ ಮುಂದಾಗಿ "ಕಾಂಗ್ರ್ಯಾಚುಲೇಶನ್ಸ್" ಕಳುಹಿದ. ಮಾತನಾಡುತ್ತ— "ಮಕ್ಕಳಿರುವ ಮನೆಯಲ್ಲಿ ಮಲತಾಯಿ ಎಂಬುದು ಹೆದರಿಕೆಯೇ. ಆದರೆ ಅವಳು ಕೆಟ್ಟವಳೇ ಆಗಬೇಕಿಂದಿಲ್ಲವಲ್ಲ. ನನಗೆ ಆ ಹೆದರಿಕೆಗಿಂತ, ಅವಳಲ್ಲಿ ಆರು, ಇವಳಲ್ಲಿ ಇನ್ನಷ್ಟು ಮಕ್ಕಳಾದರೆ ಈತ ಹೇಗೆ ನಿರ್ವಹಿಸಬೇಕು" ಎಂಬ ಭೀತಿಯನ್ನು ಸೂಚಿಸಿ, ಕುಸುಮೆಯೊಡನೆ ಸಲ್ಲಾಪಿಸಿದನು. ಕುಸುಮೆ ಇತ್ತಂಡವನ್ನೂ ಸೇರಲಿಲ್ಲ. "ಒಂದು ಬಾರಿಗೆ ಮದುವೆಯಾಗಲಿ..... ಅವಳು ಎಂಥವಳೆಂದು ನಾವು ಈಗಲೇ ಹೇಗೆ ತಿಳಿಯಬೇಕು. ಮಕ್ಕಳ ವಿಷಯ ಅನ್ನುತ್ತೀರಿ. ಒಬ್ಬೊಬ್ಬರಿಗೆ ಹತ್ತು—ಹದಿನೆಂಟು ಮಕ್ಕಳಿರುವುದಿಲ್ಲವೇ. ಎಲ್ಲವೂ ದೈವೇಚ್ಛೆ" ಎಂದು ವಾದಿಸಿದಳು.

ನಂಟರನ್ನು ಕಳುಹಿಸುವ ತನಕ ವೆಂಕಪ್ಪ ಅವರ ಮನೆಗೆ ಬಾರದಿದ್ದರೇನು? ಅವರನ್ನು ಕಳುಹಿಸಿದ ಮರುದಿನ ಹೋಗಿ ಸಂಗತಿ ತಿಳಿಸಿದನು. ಹೊಸ ಹೆಂಡತಿಗೆ ಏನೇನು ಒಡವೆಗಳನ್ನು ಮಾಡಿಸಲೆಂದು ಕುಸುಮೆಯನ್ನೇ ಕೇಳಿದನು. 'ಅತ್ತೆ ಹೀಗೆನ್ನುತ್ತಾರೆ' ಎಂದು ಬಿನ್ನವಿಸಿದನು. ಅದಕ್ಕೆ ವಿರುದ್ಧವಾಗಿದ್ದ ಕುಸುಮೆಯ ತೀರ್ಮಾನಗಳಿಗೆ ಕಿವಿ

ಗೊಟ್ಟನು. ಅಂತು ಶೀಲಕ್ಕನ ಒಡವೆಗಳನ್ನು ಮುಟ್ಟದೆ, ಅವಳ ಮಕ್ಕಳಿಗಿರಿಸಬೇಕೆಂದು ಕುಸುಮೆ ಒತ್ತಿ ಹೇಳಿದ್ದರಿಂದ, ಹೊಸ ನಗಗಳಿಗೆ ಹಣ ದೊರಕಿಸುವ, ಮದುವೆಯ ವೆಚ್ಚಕ್ಕೆ ಪಾಯಹಾಕುವ ಕೆಲಸ ಆತನಿಗೆ ಬಂದಿತು. ಅದಕ್ಕೆ ಮೊದಲನೆಯ ಬಲಿಯಾಗಿ, ಸುಬ್ಬಯ್ಯನೇ ಬಿದ್ದನು. "ಸುಬ್ಬಯ್ಯ, ಚಿನ್ನ, ಸೀರೆ, ಖರ್ಚು ಒಂದು ಸಾವಿರ, ಎರಡು ಸಾವಿರಗಳಷ್ಟಾಗುತ್ತದಲ್ಲ. ನಾನು ಅದಕ್ಕೇನೆ ಬೇಡ ಈ ಮದುವೆಯ ಯೋಚನೆ ಎಂದದ್ದು. ಯಾರನ್ನು ಈಗ ಬೇಡುವುದು" ಎಂದು ಪ್ರಸ್ತಾಪಿಸಿ, "ನೀನು ಒಂದು ಸಾವಿರವನ್ನಾದರೂ ಸಾಲ ಒದಗಿಸಿಕೊಡಬೇಕು. ಹಿಂದಿನದನ್ನು ನಾನು ಮರೆತಿದ್ದೇನೆ ಎಂದು ತಿಳಿಯಬೇಡ. ಇನ್ನು ಎರಡು ವರ್ಷಗಳಲ್ಲಿ ನನ್ನದೊಂದು ವಿಮೆಯು ಫಲಕ್ಕೆ ಬರುತ್ತದೆ. ಆಗ ಥಟ್ಟನೆ ತೀರಿಸಿದರಾಯಿತಲ್ಲ"-ಎಂದು ವರಾತ ಹಿಡಿದನು. ಸುಬ್ಬಯ್ಯ ತಟಸ್ಥನಾದ. ಹಿಂದಿನ ಹಣವನ್ನೇ ಕೇಳಬೇಕೆಂದು ಹಂಬಲಿಸಿದ ಅವನಿಗೆ, ಹೊಸ ಸಾಲಕೊಡುವ ಧೋರಣೆ ಒಪ್ಪಿಗೆಯಾಗಲಿಲ್ಲ. ಆದರೆ ಇಂಥ ಸಂದರ್ಭದಲ್ಲಿ—ಇಲ್ಲವೆನ್ನಲು ಬಾಯಿಯಿಲ್ಲ. ಉಂಟೆಂದರೆ ಎಲ್ಲಿಂದ ತಂದುಕೊಡಬೇಕು? ತನ್ನ ಮನೆಯ ಸಾಲವನ್ನು ಹೇಗೆ ಸಲಿಸಬೇಕು — ಎಂಬ ಅವನವೇ ಚಿಂತೆಗಳಿಲ್ಲವೇ?

ಅದರಿಂದ ಕುಸುಮೆಯೊಡನೆ ಆ ರಾತ್ರಿ ಪ್ರಸ್ತಾಪವನ್ನು ಎತ್ತಿದನು. 'ಎಲ್ಲಿಂದ ಕೊಡಲಿ?' ಎಂದು ಅನುಮಾನದ ರಾಗ ತೊಡಗಿದರೆ, "ಈ ಸಮಯದಲ್ಲಿ ಅವರಿಗೆ ಕೊಡದೆ ಇದ್ದರೆ, ಇನ್ನಾವಾಗ ಕೊಡಬೇಕು?" ಎಂದುಬಿಟ್ಟಳು ಕುಸುಮೆ.

'ಏನಿಲ್ಲ ಬಳಿಯಲ್ಲಿ' ಎಂದರೆ "ಬ್ಯಾಂಕಿನಲ್ಲಿ ಇರಿಸುತ್ತಿದ್ದಿರಲ್ಲ—ಏನಾಯಿತು" ಎಂದಳು. "ಅಲ್ಲೇನಾದರೂ ನೂರಿನ್ನೂರು ಇರಬಹುದು. ನಾಳೆ ನಿನ್ನ ಬಾಣಂತಿತನಕ್ಕೆ ಹಣಬೇಕು. ಕಳೆದಾವೃತ್ತಿ-ಸ್ವಲ್ಪ ಖರ್ಚಾಯಿತೇ? ಆ ಗಳಿಗೆಯಲ್ಲಿ ಬೇರೆಯವರನ್ನು ಬೇಡುವುದು ಸಮವೇ? ಮುಂದೆ ಬೇಸಗೆಯ 'ಉಪವಾಸ'ಕ್ಕೆ ಏನಾದರೂ ಆಗಬೇಡವೇ" — ಎಂದನು.

ಆ ಮರುದಿನವಾಗಲಿ, ಬೇರೊಂದು ದಿವಸವಾಗಲಿ ವೆಂಕಪ್ಪ ತಿರುಗಿ ಸುಬ್ಬಯ್ಯನೊಡನೆ ಮಾತನಾಡಲು ಬರಲೇ ಇಲ್ಲ. ಹಿಂದಲ

ದಿವಸ 'ಊಹೂಂ' ಎಂದುದೇ ಅವನಿಗೆ ಹೆಚ್ಚಿನ ವ್ಯಥೆಗೆ ಕಾರಣವಾಗಿತ್ತು. 'ಈತ ಹಣದ ಮುಖ ನೋಡುವವನೇ ಹೊರತು ಮನುಷ್ಯರ ಮುಖವನ್ನಲ್ಲ' ಎಂದು ಆತ ತೀರ್ಮಾನಿಸಿದನು. ತಿರುಗಿ ಬಂದಿದ್ದರೆ, ಸುಬ್ಬಯ್ಯ ಸಾಲವಾದರೂ ಮಾಡಿ ಸಹಾಯಮಾಡದೆ ಇರುತ್ತಿರಲಿಲ್ಲ. ಇತ್ತ ಕುಸುಮೆ ತನ್ನ ಮುಡುಪಿಂದ ಐನೂರನ್ನು ಆತನಿಗೆ ಗುಟ್ಟಾಗಿ ಕೊಟ್ಟು, 'ಪತಿಗಿಂತ ತಾನು ಅಪರಂಜಿ' ಎನಿಸಿಕೊಂಡಾಗಿತ್ತು.

ವೆಂಕಪ್ಪನ ಮದುವೆಗೆ ಇನ್ನು ಹದಿನೈದು ದಿವಸ-ಎನ್ನುವ ದಿನ ಬಂತು. ಇನ್ನು ಆಸ್ಪತ್ರೆಯನ್ನು ತಾನು ಸೇರುವುದು ಒಳಿತೆನ್ನುವ ದಿವಸಗಳೂ ಕುಸುಮೆಗೆ ಒದಗಿದ್ದುವು. ಆಗಲೇ -- ಸುಬ್ಬಯ್ಯನ ಮೇಲೆ ಒಂದು ಆರ್ಥಿಕ ವಿಪತ್ತು ಬಂದೆರಗಿತು. ಅವನು ತನ್ನೊಬ್ಬ ಗೆಳೆಯನಿಗೆ ಬೇಂಕಿನಲ್ಲಿ ಹೊಣೆ ಹೊತ್ತಿದ್ದನು. ಆತನ ವ್ಯವಹಾರಗಳು ಕುಸಿದು, ಜಾಮೀನು ಹಾಕಿದ ಸುಬ್ಬಯ್ಯನೇ ಎಲ್ಲವನ್ನೂ ತುಂಬುವ ಪ್ರಸಂಗವೊದಗಿತು. ಒಮ್ಮೆಗೇ ಎರಡು ಸಾವಿರ ರೂಪಾಯಿಗಳನ್ನು ತೆರುವ ಕಾಲ ಬಂದಿತು. ಒಮ್ಮೆ 'ಕೊಂಡ ಮನೆಯನ್ನು ಮಾರಲೇ! ಹೆಂಡತಿಯಲ್ಲಿ ಸಾಲಕೇಳಲೇ' ಎಂದು ಯೋಚಿಸಿದನು. 'ನಿಮ್ಮ ಬುದ್ಧಿವಂತಿಕೆಗೆ ತಕ್ಕ ದಂಡವಾಯಿತು' ಎಂದು ಕುಸುಮೆಯ ಅನುತಾಪರಹಿತ ಟೀಕೆಗೆ ಗುರಿಯಾಗಬೇಕಾಯಿತು. ಆದರೂ ಆಕೆ 'ತನ್ನಲ್ಲಿ ಬಿಡಿಗಾಸಾದರೂ ಇದೆ' ಎನ್ನಲಿಲ್ಲ. ಮನಸ್ಸಿದ್ದರೆ ತನ್ನೊಡವೆ ತೆತ್ತು, ಪತಿಯ ಮಾನ ಕಾಯಬಹುದಿತ್ತು. ಕೇಳುವ ಬಾಯಿ ಸುಬ್ಬಯ್ಯಗೆ ಬರಲಾರದು. ಆತ 'ಸುಖ ದುಃಖಕ್ಕೆ ಸಂಸಾರದಲ್ಲಿ ತನಗೆ ತಾನೊಬ್ಬನೇ ಗತಿ'ಯೆಂದುಕೊಂಡನು. ನಾಲ್ವರು ಮಿತ್ರರಲ್ಲಿ ಆತನು ಮೊದಲಬಾರಿಗೆ ತಿರುಪೆಗೆ ಹೊರಡುವಂತಾಯಿತು.

೮ನೆಯ ಅಧ್ಯಾಯ

ಸುಬ್ಬಯ್ಯನ ಮನಸ್ಸು ಸುಮಾರು ಮೂರು ಕಡೆಗಳಿಗೆ ಓಡುತ್ತಲಿದೆ. ಆತನಿಗೇನೋ ಬೇಸಗೆಯ ರಜೆಯು ಬಂದೊದಗಿದುದು ನಿಜ. ಆದರೆ ದಿನಕ್ಕೆ ಇಪ್ಪತ್ತೈದು ತಾಸುಗಳೇನು ಇಲ್ಲವಷ್ಟೆ. ಒಂದು ಕಡೆ—ಅವನ ಗಮನ ಕುಸುಮೆಯ ಬಳಿಗೆ ಓಡಬೇಕು. ಅವಳನ್ನು ತಿರುಗಿ ಹೆರಿಗೆಯ ಆಸ್ಪತ್ರೆಗೆ ಕಳುಹಿಸಿ ಬಂದಿದ್ದಾನೆ. ಇಷ್ಟೇ ವ್ಯತ್ಯಾಸ: ಹಳೆಯ ನೆನಹು ಮರುಕಳಿಸಬಾರದೆಂದು ಬೇರೊಂದು ಆಸ್ಪತ್ರೆಯನ್ನು ಈ ಬಾರಿ ಆರಿಸಿದನು. ಅದು ಮನೆಯಿಂದ ತುಸು ದೂರದಲ್ಲಿದ್ದುದರಿಂದ ಓಡಾಟಕ್ಕೇ ಸಾಕಷ್ಟು ವೇಳೆ ಹಿಡಿಯುತ್ತಿತ್ತು. ಅವನ-ಎರಡನೆಯ ಕೆಲಸಗೆಳೆಯನದು. ವೆಂಕಪ್ಪನಿಗೆ ಮದುವೆಯಾದರೆ ಇವನು ಕೈಕಟ್ಟಿ ಕುಳಿತಿರಲು ಬರುತ್ತದೆಯೇ? ತನ್ನ ಮದುವೆಗೆ ಮುಂದಾಳಾದವನು ಆತ; ಅವನ ಹಿಂದೆ ತಾನೂ ಓಡಾಡಲೇಬೇಕು. ಅದರ ನಡುವೆ ಸ್ವಾರ್ಥದ ಬೇರೊಂದು ಹಂಬಲ-ಮೂರನೆಯದು. ಹೊಸ ಮನೆಯನ್ನು ಅಲಂಕರಿಸಿ, ಕುಸುಮೆಯನ್ನು ಈ ಬಾರಿ ಅಲ್ಲಿಗೇನೆ ತರಬೇಕೆಂಬುದು. ಅದೂ ಮುಖ್ಯವಾದ ಕೆಲಸವೇ. ಈ ಮನೆ,ಆವರಣಗಳಿಂದ ಆಕೆಯ ಮನಸ್ಸು ಸ್ವಲ್ಪವಾದರೂ ಉಲ್ಲಸಿತವಾದೀತು—ಎನ್ನುತ್ತದೆ ಮನಸ್ಸು. ಅವಳ ರೀತಿಯು ಎಷ್ಟೇ ಒರಟಾಗಿದ್ದರೂ, ತನ್ನ ರೀತಿಯು ಮೀರಿದಪ್ಪಬಾರದೆಂದೇ ಅವನ ನಿರ್ಧಾರ. ಅದರಿಂದ ತುಂಬ ಕರ್ತವ್ಯ ಪರಾಯಣನಂತೆ, ದಿನಕ್ಕೆರಡು ಬಾರಿ, ಪತ್ನಿಯಿರುವಲ್ಲಿಗೆ ಹೋಗಿ ಹೊತ್ತು ಕಳೆಯುವ. ಅವಳ ವಿಶ್ರಾಂತಿಕಾಲವನ್ನು ಸುರಸವಾಗುವಂತೆ ಮಾತನಾಡಿಕೊಂಡು ಬರುವ. ಅವನ ಪಾಲಿನ ಉಭಯ ಸಂಕಟವೆಂದರೆ, ಆಕೆಯು ಹಡೆಯುವ ದಿನವೂ, ವೆಂಕಪ್ಪನ ಲಗ್ನಕಾಲವೂ-ಸಮಸಮ ಆಗಬಹುದಾದ ಸಂದರ್ಭ. ಇದರಿಂದ ಯಾವ ದೋಣಿಯಲ್ಲಿ ಕಾಲಿರಿಸುವುದಕ್ಕೂ ಅವನಿಗೆ ಅನುಮಾನವಾಗಿಬಿಟ್ಟಿದೆ.

“ಹೋಗಬೇಕೆಂದು ಕಂಡರೆ ಹೋಗಿ ಬನ್ನಿ. ಇಲ್ಲಿ ದಾದಿಯರಿಲ್ಲವೇ? ನೀವಿದ್ದು ಮಾಡುವದೇನಿದೆ? ನನ್ನ ಯೋಚನೆಯೇನೂ ಬೇಡ. ಈ ಬಾರಿ ದೇವರು ನಡೆಯಿಸಿಯಾನೆಂದು ಭರವಸೆ. ತಾಯಿ ಸುಬ್ರ

ಮಣ್ಯ ದೇವರಿಗೆ ಹರಕೆ ಹೊತ್ತಿದ್ದಾಳಂತೆ. ಇಷ್ಟರ ಮೇಲೂ ನನ್ನ ಗ್ರಹಚಾರ ವಕ್ರವಾಗಿದ್ದರೆ ಯಾರು ಏನುಮಾಡುವುದಕ್ಕೂ ಬರಲಿಕ್ಕಿಲ್ಲ"–ಎಂದು ಕುಸುಮೆ ಅವನಿಗೆ ಅನುಮತಿಯಿತ್ತಳು.

"ಆಗಲಿ ನೋಡುವ. ನೀನು ಯೋಚನೆ ಮಾಡಬೇಡ. ಉಡುಪಿಗೆ ಲಗ್ನಕ್ಕೆ ಹೋಗುವುದಾದರೆ ಆ ದಿನ ಬೆಳಗ್ಗೆ ಹೋಗಿ, ಮರುದಿನ ಬರುತ್ತೇನೆ. ಅಲ್ಲಿಯ ತನಕ ನನಗೂ ಅವಕಾಶವಿದೆಯಲ್ಲ" ಎಂದು ಸಮಾಧಾನ ತಾಳಿ ಅವನು ಮನೆಗೆ ಬಂದನು. ಹಾಗೆ ಮರಳಿದವನೇ, ವೆಂಕಪ್ಪನ ನೆನಪು ಉಂಟಾಗಿ ಅವರ ಮನೆಯ ಕಡೆಗೆ ಹೊರಳಿದನು. ಅವರೆಲ್ಲರು ಆ ಸಂಜೆ ತಮ್ಮ ಊರಿಗೆ ಹೊರಡುವವರಿದ್ದರು. ಸುಬ್ಬಯ್ಯನೊಡನೆ ಆತ "ಸುಬ್ಬಯ್ಯ, ನಿನಗೆ ನಾನು ಒತ್ತಾಯ ಮಾಡುವುದಿಲ್ಲ. ನಿನಗೆ ಹೇಗೆ ಅನುಕೂಲವೋ ಹಾಗೆ ಮಾಡು. ನಾವು ಇವತ್ತು ಕಾರ್ಕಳಕ್ಕೆ ಹೋಗಿ ಮದುವೆಯ ಮುಂಚಿನ ಸಂಜೆ ಉಡುಪಿ ಸೇರುತ್ತೇವೆ. ನೀನು ಲಗ್ನದ ಬೆಳಗಿಗೆ ಬಂದರೂ ಸಾಕು"–ಎಂದು ಅನುಮತಿಯನ್ನು ಸೂಚಿಸಿದ.

* * * * *

ಸಂಜೆ ಕ್ಲಬ್ಬನ್ನು ಸಂದರ್ಶಿಸಿದ್ದಾಯಿತು. ರಾತ್ರಿ ಮನೆಗೆ ಬಂದು ಊಟ ಮುಗಿಸಿ ಆಳು–ನಾರಾಯಣನೊಡನೆ, ಹೊಸಮನೆಗೆ ಸಾಗಿಸಬೇಕಾದ ಒಡವೆಗಳನ್ನು ಆಯ್ದು, ಜಾಡಿಸಿ, ಗಂಟುಕಟ್ಟ ತೊಡಗಿದನು. ಕುಸುಮೆಯ ಅರಿವೆಗಳು, ಪುಸ್ತಕ, ಕಾಗದ, ಒಡವೆಗಳನ್ನೆಲ್ಲಾ ಕೂಡಿಸಿ ತುಂಬಿಸಿಡುವುದೇ ಒಂದು ಮಹಾ ಕೆಲಸವಾಯಿತು. ಹಾಗೆಯೇ ತನ್ನ ರಿಕಾರ್ಡುಗಳು, ಮನೆಯ ಸಾಮಾನು–ಎಂದು ಮಾಡಿದಷ್ಟು ಮುಗಿಯದ ಕೆಲಸಗಳಿರಲು ದಣಿವಾಗದಿದ್ದೀತೇ? "ಸಾಕು–ಇಂದಿಗೆ" ಎಂದು ರಾತ್ರಿ ಹನ್ನೆರಡು ಘಂಟೆ ಬಾರಿಸಿದುದನ್ನು ಕೇಳಿ, ಹಾಸುಗೆಯಲ್ಲಿ ಮೈನೀಡಿದ್ದಾಯಿತು. ನಿದ್ರೆ ಪ್ರೇರಿಸಲೆಂದು,ಬಳಿಯಿದ್ದ ಒಂದೆರಡು ಕರಡು ಬೂಕುಗಳನ್ನು ತಿರುವುತ್ತ ಮಲಗಿದನು. ಕೆಲಸಕ್ಕೆ ಬಾರದ ಅನೇಕ ಹಳೆಯ ಕಾಗದಪತ್ರಗಳನ್ನೆಲ್ಲ ನೋಡಿ, ನಕ್ಕು, ಬದಿಗಿರಿಸುತ್ತಿರುವಾಗಲೇ, ಕುಸುಮೆಯ ಕಿರಿಯ ಕೈಪಿಡಿಯೊಂದು ಸಿಕ್ಕಿತು. ಅದು ಅವಳ ಸ್ವಂತ ಬರವಣಿಗೆಯ ಲೆಕ್ಕದ ಪುಸ್ತಕ. ಹಾಲಿನ ಲೆಕ್ಕಕ್ಕೂ ಅಲ್ಲಿ

ಗುರುತ್ತಿತ್ತು; ಹರಿವೆ ಸೊಪ್ಪಿಗೂ ಅಂಕಿತವಿತ್ತು. ನೋಡಿ ನಗು ಬಂತು. ಮೇಲಿಂದ ಮೇಲೆ ಅದರದೇ ಹಾಳೆಗಳನ್ನು ತಿರುವುತ್ತಿದ್ದಂತೆ-ಕೆಲವೊಂದು ಖಾತೆಗಳನ್ನು ಕಂಡು ಅವನ ಕುತೂಹಲವೂ ಅರಳಿತು. ವೆಂಕಪ್ಪನಿಗೆ ಕೊಟ್ಟ ಹಣದ ಅಂಕೆಗಳು ಅಲ್ಲಿದ್ದುವು. ತವರಿಗೆ ಕಳುಹಿಸಿದ ಮೊಬಲಗಿನ ಅಂಕಿತವೂ ಇತ್ತು. ಅವನ್ನು ಕೂಡಿಸಿಕೂಡಿಸಿ ಎಣಿಕೆಹಾಕಲು ಮನಸ್ಸಾಯಿತು. ಕಣ್ಣು ಬಾಡುತ್ತಿದ್ದರೂ, ಕುತೂಹಲಕ್ಕೆ ಬಲಿಯಾಗಿ ಒರಗಿದವನು, ಅರ್ಧ ಒರಗಿ, ಕುಳಿತು, ಪೂರ್ಣ ನೋಡುವ ತನಕವೂ ಸರಿಯೆ! ನೋಡಹೋದರೆ ವೆಂಕಪ್ಪನಿಗೆ ಸಂದುದು, ತಾನೆಣಿಸಿದ್ದುದರ ಇಮ್ಮಡಿ. ಒಂದೇ ೭೫೦-೫೦೦. ಅದೂ ಈಚಿನದು. ತಾನು "ಇಲ್ಲ" ಎಂದು ಗೋಣು ತಿರುವಿದ ಬಳಿಕ ಕೊಟ್ಟ ಸಾಲ! ಅದರಂತೆ ತವರಿಗೆ ಕಳುಹಿದ ಹಣವೂ ಕಡಮೆಯಾಗಿರಲಿಲ್ಲ. ಸುಬ್ಬಯ್ಯ ಹಾಗೆಯೇ ಕಣ್ಣು ಮುಚ್ಚಿ ಕುಳಿತ. ಅವನ ತಲೆಯೊಳಗೆ ಏನೇನೋ ಯೋಚನೆಗಳು ಉದಯಿಸಿದುವು. ತನ್ನ ಕೈಯಲ್ಲಿದ್ದ ಹಣವೂ ಇಂದು ಇಲ್ಲದಂತಾಯಿತಲ್ಲ. ತಾನು ಯಾರಾರ ಮುಖ ನೋಡಿ ಬೇಡುವಂತಾಯಿತಲ್ಲ-ಎಂದೆನಿಸಿತು. ತನ್ನ ಮೇಲೆ ವಿಶ್ವಾಸವಿಲ್ಲದ ಮಡದಿಗಾಗಿ, ತಾನೇಕೆ ವಿಶ್ವಾಸ ಸಲಿಸಬೇಕು-ಎಂದು ಅವನ ಅಂತರಂಗ ಹೇಳತೊಡಗಿತು.

ನಿದ್ರೆಯು ಯೋಚನೆಗಳಿಂದ ನಾಶವಾಯಿತು. ಆ ಕಿರಿ ಹೊತ್ತಿಗೆಯನ್ನು ಹಿಡಿದುಕೊಂಡು, ದೀಪದೊಡ್ಡದುಮಾಡಿ, ತನ್ನ ಮೇಜಿನ ಬಳಿಯಲ್ಲಿ ಸ್ಥಾಪಿತನಾದ. ತನ್ನ ಡಯರಿಯನ್ನು ತೆಗೆದು, ವೆಂಕಪ್ಪನ ಖಾತೆಯನ್ನು ಪರಾಮರ್ಶಿಸತೊಡಗಿದ. ತಾನು ಬರೆದಿದ್ದ ಲೆಕ್ಕವೂ ತುಂಬ; ತನ್ನನ್ನು ಕೇಳದೇನೆ ಸಲಿಸಿದ ಸಾಲವೂ ತುಂಬ-ಎಂದು ಕಂಡಿತು. ಅದರಲ್ಲೂ ಆ ಐನೂರು ರೂಪಾಯಿಗಳ ಒಂದೇ ಗಂಟು! ತನಗೆ ತೀರ ಅವಶ್ಯವಾಗಿರುವಾಗಲೇ ಸಲಿಸಿದ ಮೊಬಲಗು. ತಿರುತಿರುಗಿ ಕುಸುಮ, ಸಾಲ, ಹಣಗಳು ಬಿಂಬಬಿಂಬವಾಗಿ ಮನಸ್ಸಿನೆದುರು ಸುಳಿದು ತಲೆಯನ್ನು ಕರಡುಮಾಡಿದುವು. ಅವನು ನಿದ್ದೆ ಹೋಗುವಾಗ—ಬೆಳಗಿನ ಜಾವವಾಗಿತ್ತು. ಏಳುವಾಗ, ಬರ ಹೇಳಿದ ಗಾಡಿಯವನು ಬಾಗಿಲ ಬಳಿ ಕಾದಿದ್ದ. "ರಾಯರೇ-ಯಾವಾವುದನ್ನು ಸಾಗಿಸಬೇಕು,ಹೇಳಿ" ಎಂದು ಒದರಿ ಕೇಳುತ್ತಿದ್ದ ಆತ.

ಬೇಗಬೇಗನೆ ಮುಖ ತೊಳೆದು, ಕಾಫಿಯನ್ನು ಮುಗಿಸಿ, ಗಾಡಿಯವನಿಗೆ ಸಾಮಾನುಗಳನ್ನು ತೋರಿಸಿದ್ದಾಯಿತು. ತಿರುಗಿ ಗಾಡಿಯ ಜತೆಗೇನೆ ಹೋಗಿ ಅವನ್ನು ಹೊಸ ಮನೆಯಲ್ಲಿ ತೆಗೆದಿರಿಸಲು ಸಹಾಯ ಮಾಡಿದ್ದಾಯಿತು. ಹೀಗೆ ಓಡಾಟ, ಸಾಮಾನುಗಳೆಂದು ನಾಲ್ಕಾರು ಬಾರಿ ಪಯಣ ಸಾಗಿಸಿ ಬರುವುದರೊಳಗೆ ಮಧ್ಯಾಹ್ನ ಹೊತ್ತು ತಿರುಗಿತ್ತು. ಊಟ ಮುಗಿಯುವಾಗ ನಾಲ್ಕು ಘಂಟೆಯಾಯಿತು. 'ನಾರಾಯಣ, ನಾನು ಈಗಲೇ ಆಸ್ಪತ್ರೆಗೆ ಹೋಗುವುದಿಲ್ಲ. ನೀನು ಅಮ್ಮನಿದ್ದಲ್ಲಿಗೆ ಹೋಗಿ ಏನು ಹಣ್ಣು ಹಂಪಲು ಬೇಕೆಂದು ವಿಚಾರಿಸಿ, ಮಾರ್ಕೆಟಿನಿಂದ ತಂದುಕೊಡು. ನಾನು ಕ್ಲಬ್ಬಿನಿಂದ ಅಲ್ಲಿಗೆ ಬರುತ್ತೇನೆಂದು ಹೇಳು" ಎಂದು ವಾರ್ತೆ ತಿಳಿಸಿ, ತಾನು ಕ್ಲಬ್ಬಿನ ಕಡೆಗೆ ಹೊರಟ. ನಡೆಯುವಾಗಲೂ ಅವನಿಗೆ ತೂಕಡಿಕೆಯೇ. ಅಲ್ಲಿಗೆ ಹೋಗಿ ಇಸ್ಪೀಟಿಗೆ ಸನ್ನದ್ಧನಾದರೂ ಜೋಂಪೇ! ಅವನ ಗೆಳೆಯರು ಅವನ ಇಳಿದ ಮುಖವನ್ನು ಕಂಡು "ಏನು, ರಾತ್ರಿ ನಿದ್ರೆಯಿರಲಿಲ್ಲವೇ" ಎಂದು ಕನಿಕರಿಸುವ ವೇಳೆಗೇನೇ ನಾರಾಯಣನ ಸವಾರಿ ಅಲ್ಲಿಗೆ ಬಂದಿತು. ಅವನನ್ನು ದೂರಕ್ಕೆ ಕರೆದು 'ಅಮ್ಮಗೆ ವೇದನೆ ಶುರುವಾಗಿದೆ. ಇಂದೇ ಬಾಣಂತಿಯಾಗಬಹುದು ಎಂದಳು ನರ್ಸ್' ಎಂದು ತಿಳಿಸಿದನು. ಅವನಲ್ಲಿ ಆತುರ ಉದಯಿಸಿತು. ಹಳೆಯ ನೆನಪಿನ ಬೇತಾಳ ಅವನನ್ನು ಗಾಬರಿಪಡಿಸಿತು. 'ಹೂಂ, ಇರಲಿ ನೀನು ಮನೆಗೆಹೋಗಿ ಅಡುಗೆಮಾಡು. ನಾನು ಆಸ್ಪತ್ರೆಗೆ ಹೋಗುತ್ತೇನೆ. ಬರುವಾಗ ಹೊತ್ತಾಗಲಿಕ್ಕೂ ಸಾಕು" — ಎಂದುಸುರಿ, ತಾನು ಜಟಕಾ ಬಂಡಿಯನ್ನು ತರಿಸಿ, ವಾಹನಾರೂಢನಾಗಿ ಹೆರಿಗೆ ಆಸ್ಪತ್ರೆಯ ಕಡೆಗೆ ಚಿತ್ತೈಸಿದನು.

ಅವನು ಆಸ್ಪತ್ರೆಯ ಬಳಿ ಇಳಿಯುವಾಗ, ಒಳಗಿಂದ ಹೊಸ ಜೀವದ ಧ್ವನಿಯೊಂದು ಆರ್ಭಟಿಸುತ್ತಿತ್ತು. ಆದರೆ ಅದು ತಮ್ಮದೆಂದೇನು ನಿಜ? ಆತ ಬಂದು ಆಸ್ಪತ್ರೆಯ ಹೊರ ಜಗುಲಿಯಲ್ಲಿ ಹಾಕಿದ್ದ ಕುರ್ಚಿಯೊಂದರಲ್ಲಿ ಕುಳಿತುಕೊಂಡನು. ಬಹು ಹೊತ್ತಿನ ವರೆಗೂ ಅವನು ಒಳಕ್ಕೆ ಹೋಗಲಿಲ್ಲ. ಒಳಗಿಂದ ಹೊರಕ್ಕೆ ಯಾರೂ ಬರಲಿಲ್ಲ. ಅವನ ಆತುರ, ಆತುರವಾಗಿಯೇ ಉಳಿಯಿತು. ಹೊತ್ತು ಹೋಗದ್ದಕ್ಕೆ ಬಳಿಯ ಮೇಜಿನ ಮೇಲಿದ್ದ ಒಂದು ವೈದ್ಯಕೀಯ ಪತ್ರಿಕೆಯ ಹಾಳೆಗಳನ್ನು

ಮುಗುಚುತ್ತ ಇರುವಷ್ಟರಲ್ಲಿ, ಡಾಕ್ಟರರ ಸವಾರಿ ಹೊಸ ಉಡುಗೆ ಉಟ್ಟು, ಮುಖವನ್ನು ಟವೆಲನಿಂದ ಉಜ್ಜುತ್ತ, ಹೊರಗೆ ಬಂತು. ಸುಬ್ಬಯ್ಯನ ದರ್ಶನವಾಯಿತು. "ಹೋ—ನೀವು ಇಲ್ಲೇ ಇದ್ದೀರಾ? ಒಳ್ಳೇ ಸಮಾಚಾರ!—a prince ಎಂದರು" "ಅಹುದೇ! ನೀವು ಹೆರಿಗೆ ಒಂದೆರಡು ರಡು ದಿವಸ ತಡವಾದೀತೆಂದಿರಲ್ಲ." "ನಾನೇನು ಮಾಡಲಿ? ನಿಮ್ಮ ರಾಜಕುಮಾರನಿಗೆ ಪ್ರಪಂಚ ನೋಡುವ ಆತುರ ಹೆಚ್ಚಾದರೆ!"

"ನೀವು ಕಳೆದ ಬಾರಿಯೇ ಇಲ್ಲಿಗೆ ಬರಬೇಕಿತ್ತು. ನೋಡಿ ಈ ನಮ್ಮ ಆಸ್ಪತ್ರೆಯ ರಿಕಾರ್ಡಿನಲ್ಲಿ ಸಾವು, ಸೋಲು ಒಂದೇ ಒಂದು ಆಗಿಲ್ಲ ಈ ತನಕ brilliant record" ಎಂದು ಸಲ್ಪ ಆತ್ಮಗಾನ ನಡೆಯಿಸಿದರು. ಅನಂತರ ತಂದೆತನವನ್ನು ಅದೀಗ ಪಡೆದ ಸುಬ್ಬಯ್ಯನನ್ನು ಕುರಿತು "ಈಗ ಹೇಗೂ ಅವರನ್ನು ನೋಡುವುದಕ್ಕಾಗುವುದಿಲ್ಲ: ಬೆಳಗ್ಗೆ ಬನ್ನಿ... ರಾಜಕುಮಾರರ ಮುಖ ನೋಡಬಹುದು" ಎಂದರು.

ಆಸ್ಪತ್ರೆಯಿಂದ ಮನೆಗೆ ಹೋಗುವಾಗ, ಸುಬ್ಬಯ್ಯ, ಹಾಯಿ ದೋಣಿಯಂತೆ ತೇಲಿತೇಲಿಯೇ ಹೋದನು ಹಿಗ್ಗಿಂದ. ಅವನ ಕಾಲು ಮೊದಲು ಹೋದುದೇ ಹೊಸ ಮನೆಗೆ. ತಾನೇ ಬೀಗವಿಕ್ಕಿದ ಮನೆಯ ಗೇಟನ್ನು ಕಂಡು, 'ಇಲ್ಲಿಗೇಕೆ ಬಂದೆ? ಎಂದು ನಕ್ಕು, ತನ್ನ ಹಳೆಯ ಮನೆಗೆ ಹೋದನು. ಹೋದವನೇ 'ಗಂಡು ಮಗುವಂತೆ ನಾರಾಯಣ' —ಎಂದು ಕೂಗಿ ಹೇಳಿದ. ಆ ಬೆಪ್ಪ—"ನೋಡಲಿಕ್ಕೆ ಹೇಗಿದೆ?" ಎಂದು ಕೇಳಲು "ಈಗೆಲ್ಲಿ ನೋಡುವುದಾಗುತ್ತದೆ? ನಾಳೆ ತಿರುಗಿ ಹೋಗಬೇಕು" —ಎಂದ.

'ಹೆಣ್ಣಲ್ಲ; ಗಂಡೇ! ಅಮ್ಮ ಹೆಣ್ಣಾಗುತ್ತದೆಯೋ—ಎಂದು ಹೇಳುತ್ತಿದ್ದರು"

"ಅಮ್ಮ ಗಳಿಗೆಗೆ ಒಂದು ಹೇಳುತ್ತಿರಲಿಲ್ಲವೇ...........ಹೂಂ, ಊಟಕ್ಕೆ ಆಯಿತೇ ಹೇಗೆ? ನಿದ್ರೆ ಬರುತ್ತಿದೆ ಈಗಲೇ. ನಿನ್ನೆ ರಾತ್ರಿ ಬಲು ಹೊತ್ತಿನ ವರೆಗೂ ನಿದ್ರೆ ಬರಲೇ ಇಲ್ಲ."

"ಹೌದು—ನೀವು ಎರಡು ಗಂಟೆಗೂ ಕುಳಿತ ಹಾಗಿತ್ತು, ಏನೋ ಲೆಕ್ಕ ಮಾಡುತ್ತ."

"ಹೂಂ—ನೀನೂ ಕಂಡುಬಿಟ್ಟೆಯಾ? ಅಮ್ಮನ ವರೆಗೆ ಹೋಗದೆ

ಆ ಪಂಚಾತಿಕೆ." ಎಂದು ಯೋಚನೆಯಿಂದ ನುಡಿದನು.

"ಅಯ್ಯೋ ನೀವೇನುಮಾಡುತ್ತಿದ್ದಿರೆಂದು ನನಗೇನು ಗೊತ್ತು? ಅಲ್ಲದೆ, ಅದೆಲ್ಲ ಅಮ್ಮನಿಗೆ ಹೇಳಲು ನಾನು ಅಮಟಾಡಿ ಗಜೇಟೇ?'

ನಾರಾಯಣನ ರಸಿಕವಾಣಿಯಿಂದ ಪ್ರೇರಿತನಾಗಿ, ಸುಬ್ಬಯ್ಯ ಊಟವನ್ನು ಮುಗಿಸಿದ. 'ನಾರಾಯಣ, ಇವತ್ತು ಸಾಮಾನು ಕಟ್ಟುತ್ತ ಕುಳಿತಿರುವುದು ಬೇಡ. ಗಾಡಿ ಬಂದರೆ ನಾಡಿದ್ದು ಬರಲಿ ಅನ್ನುವ" ಎಂದು, ಹೋಗಿ ಹಾಸುಗೆಯ ಮೇಲೆ ಹಾಯಾಗಿ ಮಲಗಿಕೊಂಡು ಬಿಟ್ಟನು. ಕನಸಿನ ಗಗನಾಂಗಣದಲ್ಲಿ ಕುಮಾರ ಚಂದ್ರನು ಉದಯಿಸಿ ರಾತ್ರಿಯಲ್ಲಿ ನಗುವಿನ ಬೆಳದಿಂಗಳನ್ನು ಚೆಲ್ಲುತ್ತಿದ್ದನು. ಮುಂಚಿನ ದಿನ ರಾತ್ರೆಗೆ ಇಪ್ಪತ್ತು ತಾಸೆನಿಸಿದ್ದರೆ, ಆ ರಾತ್ರಿಗೆ ಬರಿಯ ಎರಡೇ ತಾಸುಗಳೆನ್ನುವಂತೆ ಸರಿದು ಬೆಳಗಾಯಿತು. ತನ್ನ ಉಲ್ಲಾಸವನ್ನು ಅಡ್ಡಿಪಡಿಸಲು ಬಂದ ಗಾಡಿಯವನಿಗೆ "ಹೋ -- ಇವನೇ — ಇವತ್ತು ಬೇಡ. ಬೇರೆ ಒಂದು ರಾಶಿ ಕೆಲಸವಿದೆ. ನಾಳೆ ಆದೀತು. ಬೇಡಾ, ಯಾವಾಗ ಬರಬೇಕೆಂದು ಹೇಳಿ ಈ ನಾರಾಯಣನನ್ನು ಕಳುಹಿಸುತ್ತೇನೆ" ಎಂದು ಹೇಗೋ ಬಂದವನನ್ನು ನಿವಾರಿಸಿಕೊಂಡನು.

ಇನ್ನು ಕಾಫಿಕುಡಿಯುವುದಕ್ಕೂ ಆತುರವೇ! ಬೇಗಬೇಗನೆ ಜಟ್ಕಾ ಬಂಡಿಯೇರಿ ಆಸ್ಪತ್ರೆಯ ಕಡೆಗೆ ಧಾವಿಸಿದ ಅವನು, ಒಳಕ್ಕೆ ಹೋಗಿ ನೋಡುವಾಗ, ಕುಸುಮೆ ಕಣ್ಮುಚ್ಚಿಯೇ ಇದ್ದಳು. ಮಗ್ಗುಲಿನ ತೊಟ್ಟಿಲಲ್ಲಿ ಕೂಸು ಮಲಗಿತ್ತು. ಅದಕ್ಕೂ ನಿದ್ರೆಯೇ. ಅವರೇನು ಕನಸುಗಳನ್ನು ಕಾಣುತ್ತಿದ್ದರೋ ಯಾರು ಬಲ್ಲರು? ಸುಬ್ಬಯ್ಯ ಮಡದಿಯ ಮಂಚದ ಬಳಿಯಲ್ಲಿ ಒಂದು ಸ್ಟೂಲು ಎಳೆದುಕೊಂಡು ಕುಳಿತ. ಅವನ ನೋಟವೆಲ್ಲ ಕುಮಾರನ ಕಡೆಗೇನೇ ನಟ್ಟಿತ್ತು. ಜಗತ್ತೇ ತನ್ನದೆಂಬ ಮೊದ್ದುತೃಪ್ತಿಯಿಂದ ಅದಾದರೂ ಮಲಗಿತ್ತು. ಅವನ ಮನೆಯನ್ನು ಬೆಳಗುವ ದೀಪವಲ್ಲವೇ! ಸುಮ್ಮನೆ ಕುಳಿತಿರಲು ಚಪಲ ಸಾಲದೆ, ಮಗುವಿನ ಗಲ್ಲವನ್ನೂ, ತುಟಿಗಳನ್ನೂ ಬೆರಳುಗಳಿಂದ ಸವರಿದನು. ಕೂಸಿಗೆ ನಿದ್ರಾಭಂಗವಾಯಿತೋ — ಏನೋ; ಅದು ಕಣ್ಣು ತೆರೆಯಿತು. ಮರುಕ್ಷಣಕ್ಕೆ ತನ್ನ ಬಾಯಿ ದುಂದುಭಿಯನ್ನು ಊದಿಬಿಟ್ಟಿತು. ಅಲ್ಲಿಂದ ಕುಸುಮೆಗೆ ಬೆಳಗಾಯಿತು. ಕೈ, ತೊಟ್ಟಿಲಿನ ಕಡೆಗೆ ಹಾಯುವ ಮೊದಲು

ದೃಷ್ಟಿ ಗಂಡನ ಕಡೆಗೆ ಹರಿಯಿತು. ನಗು-ಬಂದಿತು. ಮನಸ್ಸು ತುಂಬ ತೃಪ್ತವಾಗಿದ್ದುದರಿಂದ, ಆ ನಗು ಎಲ್ಲ ದಿನಗಳ ನಗುವಿನಂತಿರಲಿಲ್ಲ.

"ಮಗುವನ್ನು ನೋಡಿದಿರಾ" ಎಂದು ಕೇಳಿದಳು.

"ಹೂಂ, ಅದೇ ನಡೆಯಿಸಿದ ಕೆಲಸ. ಕೂಗುತ್ತ ಇದೆಯಲ್ಲ.... ನಾನು ನಿನ್ನೆ ಬಂದು ಹೋದೆ, ಸಂಜೆಗೆ. 'ಡಾಕ್ಟರರು ಬೆಳಿಗ್ಗೆ ನೋಡಲು ಬನ್ನಿ' ಎಂದುದರಿಂದ ಹಾಗೆಯೇ ಹೋದೆ."

"ನಿನ್ನೆ ಬೆಳಗ್ಗೂ ಬರಲಿಲ್ಲ ನೀವು."

"ಹೌದು — ಹೊಸ ಮನೆಗೆ ಸಾಮಾನು ಸಾಗಿಸಬೇಕಲ್ಲ" ಎಂದು ನುಡಿದಮೇಲೆ, ತನ್ನ ರಹಸ್ಯವನ್ನು ತಾನೇ ಒಡೆದೆನಲ್ಲಾ ಎಂದು ತುಟಿ ಕಚ್ಚಿಕೊಂಡನು. ಅದಕ್ಕೂ ನಗು ಬಂದಿತು.

ಆಕೆ "ಹೊಸ ಮನೆಯೇ?"

"ಹೌದು — ಹೇಳುತ್ತೇನೆ. ಮೊದಲು ಮಗುವನ್ನು ಸಮಾಧಾನ ಪಡಿಸು— ಎತ್ತಿ ಕೊಡಲೇ, ತೆಗೆದುಕೊಳ್ಳುತ್ತೀಯಾ" ಎಂದು ತಾನೇ ಕೈಹಾಕ ಹೋದನು. ಅವನ ಕೈಯ್ಯು ನಡುಗುವಂತಾಯಿತು. ಮುಟ್ಟಿದರೆ ತೆವಳಿ ತೆವಳಿ ಬಿದ್ದೀತೆಂದು ಅನಿಸಿತು. ಅದಕ್ಕೂ ಮುಂಚೆಯೇ 'ನರ್ಸ' ಎಂದು ಆಕೆ ಕರೆದಳು. ದಾದಿಯು ಬಂದು, ಸುಬ್ಬಯ್ಯನನ್ನು ಅಂಥ ಸಾಹಸ ಕಾರ್ಯದಿಂದ ಪರಾವೃತ್ತನನ್ನಾಗಿಮಾಡಿದಳು.

ಕೂಸು ತಾಯ ಮಡಿಲ ಬಳಿ ಮಲಗಿ ಚೀರಿತು. ಮೊಲೆ ಕುಡಿಯುವ ಆತುರ! ಹಾಲೂಡುತ್ತಲೇ ದುಂದುಭಿ ಶಾಂತವಾಗಿ, ತಾಯಿ "ಏನದು, ಹೊಸಮನೆಯೆಂದಿರಿ?" ಎಂದು ಕೇಳಿದಳು. ಸುಬ್ಬಯ್ಯ ಮನೆಕೊಂಡ ಕತೆ, ಅದನ್ನು ಮಗು ಮನೆಗೆ ಬರುವ ತನಕ ಗುಟ್ಟಾಗಿರಿಸಬೇಕೆಂದಿದ್ದ ಸಂಗತಿ, ಮನೆಯ ದೆಸೆಯಿಂದ ಬಂದ ಅಡಚಣೆ— ಎಲ್ಲವನ್ನು ವಿವರಿಸಿದನು. ಕುಸುಮೆಯ ಮನಸ್ಸು ಮಗುವಿನ ಕಡೆಗೂ ಲೀನವಾಗಿತ್ತು. ಅದರಿಂದ ಅವಳು ಬರಿದೆ ಕೇಳುತ್ತಿದ್ದಳು. ಹಾಲೂಡಿಸಿ ಮುಗಿಯಿತು. ಮಗುವು ತಿರುಗಿ ಕಹಳೆಯೂದಿತು. "ಏನು, ಹಾಲು ಸಾಕಾಗಲಿಲ್ಲವೇ" ಎಂದು ಕೇಳಿದ ಸುಬ್ಬಯ್ಯ. "ಇಲ್ಲ, ಹಾಗೆ ಗಂಟಲು ಸರಿಪಡಿಸಿಕೊಳ್ಳುವುದಂತೆ" ಎಂದು ಆಕೆ ನಕ್ಕು ನುಡಿದಳು. ತಿರುಗಿ ನರ್ಸನ್ನು ಕರೆದು ಮಗುವಿಗೆ ತೇಗು ಬರಿಸಲು ಒಪ್ಪಿಸಿ, ತಾನು ಸಂಭಾ

ಷಣೆಗೆ ಅನುವಾದಳು- "ಹೂಂ – ನೀವು ಪರವಾ ಇಲ್ಲ. ನನಗೆ ಚಾಚೂ ಹೇಳದೆ ಮನೆ ಕೊಂಡುಬಿಟ್ಟಿರಿ. ಕದ್ರಿಯಲ್ಲಿ ಮನೆಯೆನ್ನುತ್ತೀರಿ. ತುಂಬ ದೂರವಾಗಲಿಲ್ಲವೇ ಕೋರ್ಟಿಗೆ. ನನಗೆ ಕ್ಲಬ್ಬಿಗೂ, ವೆಂಕಪ್ಪಣ್ಣನ ಮನೆಗೂ ದೂರವಾದೀತು" ಎಂದಳು.

"ದೂರವೆಲ್ಲಿನದು? ಎಲ್ಲ ಅರ್ಧ ಮೈಲಿನೊಳಗೇನೆ ಇದ್ದೀತು. ಅಲ್ಲದೆ ತುಂಬ ಒಳ್ಳೆಯ ವಟಾರ. ಗಾಳಿ ತುಂಬ ಬೀಸುವ ಸ್ಥಳ. ಸೊಳ್ಳೆಗಳ ಉಪದ್ರ ಇಲ್ಲವೇ ಇಲ್ಲ ಎನ್ನುತ್ತಿದ್ದಾರೆ. ಸಣ್ಣ ತೋಟವೂ ಇದೆ. ಮನೆ, ತೋಟ ಎರಡೂ ತುಂಬ ಚೆನ್ನಾಗಿವೆ. ರೂ ೫೦೦೦ ಹೆಚ್ಚಾದೀತೇ —ಎಂದು ತೋರಿತು. ಆದರೆ ಪ್ರತಿಯೊಬ್ಬರೂ ಆ ಮನೆ ಅಷ್ಟಕ್ಕೆ ಅಗ್ಗವೆ ಅನ್ನುತ್ತಾರೆ. ಬಾವಿಯೂ ಅನುಕೂಲವಾಗಿದೆ. ಕರಿ ಬೇಸಗೆಗೂ ನೀರು ಬತ್ತುವುದಿಲ್ಲವಂತೆ" ಎಂದು 'ಹೇರಂಗ್' ಮಾಡಿದನು. ಅವಳು "ಯಾವುದಕ್ಕೂ ನಾನು ನೋಡಿ ಒಪ್ಪಬೇಕು" ಎಂದು ತನ್ನ ತೀರ್ಪನ್ನು ಮುಂದೆ ತಳ್ಳಿದಳು.

ಸುಬ್ಬಯ್ಯನ ಬಾಯಿ, ಮನೆಯ ತಾಪತ್ರಯ ಕಥನಕ್ಕೆ ಇಳಿಯಿತು. "ಅಂದರೆ ಮೊನ್ನಿನ ಪೆಟ್ಟು ಒಂದಲ್ಲವಾದರೆ ಚೂರು ಹೆದರಿಕೆಯಿರುತ್ತಿರಲಿಲ್ಲ. ಅದೊಂದು ದಂಡಕ್ಕೇನೆ ಎರಡು ಸಾವಿರ ತೆರುವಂತಾಯಿತು. ಕೊಡುವವರೆಲ್ಲರೂ ಕೊಟ್ಟರೆ ಸುಧಾರಿಸಬಹುದು; ಅಲ್ಲದೆ ದೇವರ ದಯೆಯಿಂದ ಪ್ರಾಕ್ಟೀಸು ಚೆನ್ನಾಗಿ ನಡೆದಿದೆಯಲ್ಲ.... ನೀನು ಮುನಸೀಫಿಕೆ ಎನ್ನುತ್ತಿದ್ದೆ. ಆಗ ಈಗಿನ ಸ್ವಾತಂತ್ರ್ಯವಿರುತ್ತಿತ್ತೇ. ಈಗಲಾದರೆ ನಮ್ಮ ಅರಸರು ನಾವೇನೆ. ಬೇಡ ಎಂದು ತೋರಿದರೆ, ಒಂದು ವಾರ ಚಾಪೆ ಬಿಡಿಸಿ ಮಲಗಿಕೊಂಡಿರಬಹುದು."

"ಹೂಂ, ಕೋರ್ಟು ಬಿಟ್ಟು ಕುಳಿತಿರುವವರು ನೀವು! ನಿಮಗೆ ಮನೆಗಿಂತ ಹೆಚ್ಚು ಕೋರ್ಟು; ಮನೆಯವರಿಗಿಂತ ಹೆಚ್ಚು ಕಕ್ಷಿಗಾರರು."

"ಹೌದು, ಮೊದಲು, ಹಾಗೆ ಬಂದವರಲ್ಲಿ ಆಸಕ್ತಿ ತೋರಿಸದೆ ಹೋಗಿದ್ದರೆ, ಈ ಸ್ಥಿತಿಗೆ ಬರುವುದು ಸಾಧ್ಯವೇ?"

ಕುಸುಮೆಯ ಮಾತನ್ನು ಬದಲು ಮಾಡಿ, "ಹೋಗಲಿ, ನಾಳೆಗಲ್ಲವೆ ವೆಂಕಪ್ಪನ ಲಗ್ನ. ಉಡುಪಿಗೆ ಹೋಗುವುದಿಲ್ಲವೇ? ಈ ಸಂಜೆ ಹೋಗಿ ನಾಡಿದ್ದು ಬನ್ನಿ. ನಂಟರಂತೆ ಲಗ್ನದ ವೇಳೆಗೇ ಹೋಗುವುದು

ಚೆಂದವಲ್ಲ ಏನು ಮಾಡುತ್ತೀರಿ."

"ಹೂಂ — ಸಂಜೆಯ ಬಸ್ಸಿಗೆ ಹೋದರಾಯಿತು. ನಿಮ್ಮ ಮನೆಗೆ ಒಂದು ಕಾಗದ ಬರೆದು ಹಾಕಬೇಕು. ಅತ್ತೆ ಮಾವಂದಿರಿಗೆ ಎಷ್ಟು ಸಂತೋಷವಾಗಬಹುದೋ-ನೀನು ಸುಖವಾಗಿ ಹಡೆದುದನ್ನು ಕೇಳಿ. ಅತ್ತೆ ಇಲ್ಲಿಗೆ ಬಂದರೂ ಬರಬಹುದು. ಬಂದಿದ್ದರೆ ನಿನಗೂ ಅನುಕೂಲ ವಾಗುತ್ತಿತ್ತು."

ಆ ಸಮಯಕ್ಕೆ ಮಿಸ್ ನಾರಾಯಣಿಯ ಸವಾರಿ ಆಗಮಿಸಿತು. ಅವಳು ಸುಬ್ಬಯ್ಯ ಕುಸುಮೆಯರನ್ನು ಬಾಯಿ ತುಂಬ ಅಭಿನಂದಿಸಿ ದಳು. ಸುಬ್ಬಯ್ಯ ಅವಳಿಗಾಗಿ ಸ್ಟೂಲನ್ನು ಬಿಟ್ಟು "ಹಾಗಾದರೆ ಇವತ್ತು ಸಂಜೆ ಬರುವುದಿಲ್ಲ" ಎಂದು ಹೊರಟುಹೋದ. ಹೊರಡುವ ಮುಂ ದೊಮ್ಮೆ 'ಕೂಸನ್ನು ನೋಡಲು ಮನಸ್ಸಾಯಿತು. ಆದರೆ ದಾದಿಯು ಅದನ್ನಿನ್ನೂ ತಂದಿರಲಿಲ್ಲ. ನಾರಾಯಣಿಯ ಜತೆಯಲ್ಲಿ ಸಂಭಾಷಣೆ ಮಾಡುತ್ತಿರುವಾಗ ಕೂಸನ್ನು ತಂದಿರಿಸಿದಳು. "ತಂದೆಯಂತೆಯೇ ಇದೆಯಲ್ಲವೆ" ಅಂದಳು ಆಕೆ. ಕುಸುಮೆ ತುಟಿನಿಡಿದು ಅವಳನ್ನು ನೋಡು ತ್ತಿದ್ದಳು. ತುಸು ತಪ್ಪಿದೆನೋ, ಎಂಬ ಅನುಮಾನದಿಂದ "ಮೂಗು- ಕಣ್ಣುಗಳು ಮಾತ್ರ ನಿಮ್ಮಂತಿವೆ" ಅಂದಳು ನಾರಾಯಣಿ.

ಮುಂದೆ ಅವರ ಮಾತುಗಳು ಹೊಸ ಮನೆಯ ವಿಚಾರವಾಗಿ ಸಾಗಿದುವು. "ಬೇಷ್ ಆಯಿತು" ಎಂದಳು ನಾರಾಯಣಿ. ವಿವರಗಳನ್ನು ಕೇಳಿದ ಬಳಿಕ "ಆ ಮನೆಯಿರಬೇಕು ಮಂಜುನಾಥ ಕಿಣಿಯರದ್ದು. ಅಲ್ಲಿ ನಮ್ಮ ಭಾವ ಸ್ವಲ್ಪ ಸಮಯವಿದ್ದರು. ಅವರದಕ್ಕೆ ಇಪ್ಪತ್ತು ರೂಪಾಯಿ ಬಾಡಿಗೆ ಕೊಡುತ್ತಿದ್ದರು. ಕ್ರಯ ಆರು ಸಾವಿರವೆಂದರೆ ಅಗ್ಗವೇ" ಎಂದಳು. ಕುಸುಮೆ, ಸಾವಿರದಷ್ಟು ಮೌಲ್ಯ ಹೆಚ್ಚಿಸಿದುದು ಅವಳಿಗೆ ತಿಳಿಯದು. ನಾರಾಯಣಿಯ ಬಾಯಿಂದ ಮನೆಯ ಪ್ರಶಂಸೆ ಕೇಳಿ ಅವ ಳಿಗೆ ತುಸು ಸಮಾಧಾನವಾಯಿತು. ಆದರೂ ತಾನು ನೋಡದೆ ಒಪ್ಪು ವಂತಿಲ್ಲ,-ಎಂದು ಮನಸ್ಸು ಹೇಳುತ್ತಿತ್ತು. "ನಿಮಗೆ ತಿಳಿಸಲೇ ಇಲ್ಲ ಅಲ್ಲವೆ? ಕೊಳ್ಳುವ ಮೊದಲು?" ಎಂದಾಕೆ ಆಶ್ಚರ್ಯ ನಟಿಸಲು "ಹೂಂ — ಹೆಂಗಸರನ್ನು ಯಾರು ಕೇಳುತ್ತಾರೆ. ನಾವು ಮಾತ್ರ ನಮ್ಮ ಮನೆ, ನಮ್ಮ ಮಾರು--ಎಂದು ಹೇಳಿಕೊಳ್ಳುವುದು. ಈ ಗಂಡುಸರ ಜಾತಿಯೇ

ಹಾಗೆ. ಎಲ್ಲರೂ ತಮಗೆ ತೋರಿದ್ದನ್ನು ಮಾಡುವವರು."

"ಈಗೇನಾಯಿತು! ಒಳ್ಳೆಯದನ್ನೇ ಮಾಡಿದ್ದಾರಲ್ಲ. ಬಾಡಿಗೆ ಮನೆಯೆಂದರೆ ಯಾರಾರ ಮರ್ಜಿಯ ಮೇಲೆ ಹೊಂದಿದೆ. ಇದಾದರೆ ಹಾಗೆಯೇ? ದೊರೆಯ ಹಾಗೆ ಇರಬಹುದಲ್ಲ."

ಹೀಗೆನ್ನುತ್ತಿರುವಾಗಲೂ ಸುಬ್ಬಯ್ಯನ ದನಿ ಹೊರಗಿಂದ ಕೇಳಿಸುತ್ತಿತ್ತು. ಆತ ಹೊರಗೆ ಭೇಟಿಯಾದ ಡಾಕ್ಟರರೊಡನೆ ಸಂಭಾಷಿಸುತ್ತಿದ್ದ. ಅನಂತರ ಅವರಿಗೆ ವಂದಿಸಿ, ಮನೆಯ ಕಡೆಗೆ ಹೊರಟುಹೋದ.

ಅವನೀಗ ಪುಷ್ಪಕದಲ್ಲಿ ಸಂಚರಿಸುತ್ತಿದ್ದಾನೆ. ಅದರಲ್ಲಿ ಕುಸುಮೆ, ಕುಮಾರರು ಕುಳಿತಿದ್ದಾರೆ. ಎಷ್ಟು ಕಾಲವಾಯಿತೋ—ಅವನ ಮನಸ್ಸಿನಲ್ಲಿ ಆ ಬಗೆಯ ಚೆಲುವುನಲಿವುಗಳು ತುಂಬಿಕೊಳ್ಳದೆ. ಅದನ್ನು ನೆನೆಯುತ್ತ ಅವನ ಮನ ಮನೆತುಂಬ ಮಕ್ಕಳುಳ್ಳ ವೆಂಕಪ್ಪನ ಕಡೆಗೆ ಹರಿಯಿತು. ಶೀಲಕ್ಕ ಬದುಕಿದ್ದರೆ ಎಷ್ಟು ಸೊಗಸಿತ್ತು—ಎಂದೆನಿಸಿತು.

* * * * * * *

ಸುಬ್ಬಯ್ಯನು ಉಡುಪಿಗೆ ಹೋಗಿ ಗೆಳೆಯನ ವಿವಾಹಕ್ಕೆ ಸಾಕ್ಷಿಯಾಗಿ, ಮರಳುವಾಗ ಎರಡು ದಿವಸ ಹೆಚ್ಚಿಗೇನೆ ಸಂದುವು. ಮದುವೆಯ ಗದ್ದಲದಲ್ಲಿ ಆತ ಸಿಲುಕಿಕೊಂಡರೆ ಬಿಡುಗಡೆ ಸುಲಭವೇ? ವೆಂಕಪ್ಪ, ಅವನ ಅತ್ತೆಮಾವಂದಿರು—ಎಲ್ಲರೂ ಬಲವಂತ ಪಡಿಸುವವರೇ. ಅವರಿಂದ "ಆತುರವೇನು, ಕೊನೆಗೆ ತಂದೆಯೆಂದು ಕೀರ್ತಿ ಬಂದಿತು!" ಎಂದು ಹಾಸ್ಯಮಾಡಿ ನಗಿಸಿಕೊಂಡ. ಮುಂದೆ ದಿಬ್ಬಣಿಗರ ಜತೆಗೆ ಕಾರ್ಕಳಕ್ಕೂ ಹೋಗುವುದಾಯಿತು. ಅವನ ಮನಸ್ಸು ಮಂಗಳೂರಲ್ಲಿ; ಕಾಯ ಕಾರ್ಕಳದಲ್ಲಿ, ಗೆಳೆಯನ ಸ್ವಂತ ಮನೆಯಲ್ಲಿ. ಅಲ್ಲಿದಲೂ ಬಿಡುಗಡೆ ಸುಲಭವಲ್ಲ. ಎರಡೇ ದಿವಸಗಳಲ್ಲಿ ಮರಳುವೆನೆಂದು ಮಾತುಕೊಟ್ಟು ಬರಬೇಕಾಯಿತು.

ಮಂಗಳೂರಿಗೆ ಬಂದಿಳಿದವನೇ, ಕುಸುಮೆ ಕುಸುಮಾಕರರ ದರ್ಶನಕ್ಕೆ ಓಡಿದ್ದಾಯಿತು. ಕೂಸನ್ನು ಕಂಡು ಉತ್ಸಾಹಿತನಾಗಿ ಮುದ್ದಿಡುವೆನೆಂದು ಮುಂದುವರಿದಾಗಲೇ ಹಾಳು ದಾದಿಯ ಆಗಮನವಾಗಿ ಕತ್ತು ಹಿಂದಿರುಗಿತು. ಕುಸುಮೆ, ಕಂಡು ನಕ್ಕು "ಹೆದರಬೇಡಿ ಮನೆಗೆ ಬರುತ್ತಾನೆ! ಆದರೆ ನಾಳೆ ಕೋರ್ಟಿನ ಕೆಲಸಕ್ಕೆ ತೊಂದರೆಯೆಂದು

ಏನು ಮಾಡುತ್ತೀರೋ...." ಎಂದಳು.

"ಹೂಂ, ಮುಂದೆ ಏನಾಗುತ್ತದೆಯೋ ನೋಡಬಹುದಲ್ಲ. ನಿನ್ನ ಪ್ರೀತಿಗಿಂತ ಕಡಮೆಯಾಗಲಾರದು – ಎಂಬಾಗ ಕುಸುಮೆಯ ಊಟ ಬಂದಿತು. ತನಗೂ ಊಟವಾಗಿಲ್ಲವೆಂದು ನೆನಪಾಯಿತು. "ನಾನಿನ್ನೂ ಮನೆಗೆ ಹೋಗಿಲ್ಲ. ಹೋದರೆ ಅಲ್ಲಿ ನಿನ್ನಂತೆ ನನಗೂ ಪಥ್ಯವೋ ಏನೋ" ಎಂದು ಎದ್ದು ಬಿಟ್ಟನು. "ಹೊರಟಾಯಿತೇ? ಮದುವೆಯ ಸುದ್ದಿಯನ್ನೊಂದು ಹೇಳಲೇ ಇಲ್ಲ"-ಎಂದು ಆಕ್ಷೇಪಿಸಿದಳು ಕುಸುಮೆ.

ಕುಸುಮೆ ಹಾಲು, ರೊಟ್ಟಿಗಳನ್ನು ತಿನ್ನುತ್ತಿರುವಾಗ, ಗಂಡನ ಬಾಯಿಂದ ಮದುವೆಯ ಪುರಾಣ ಕೇಳಿದಳು. ಬಹುವಿಜೃಂಭಣೆಯ ಕಥೆ ಕೇಳಿ—"ಹೂಂ ನನಗೆ ನೋಡುವ ಅದೃಷ್ಟವಿಲ್ಲದೆ ಹೋಯಿತಲ್ಲ" ಎಂದು ನುಡಿದಳು.

"ಅಷ್ಟೇನು ಗಾಬರಿ? ಕಾರ್ಕಳದಿಂದ ಒಂದು ವಾರದೊಳಗೇನೇ ಮಂಗಳೂರಿಗೆ ಬರಬಹುದು."

"ಹೇಗೆ ಬಂದಾರು? ಶೀಲಕ್ಕನ ತಾಯಿತಂದೆಯರ ಬಲವಂತ ದಿಂದಾದ ಲಗ್ನ. ಮೇಲೆ ಹೆಣ್ಣಿನ ಕಡೆಯವರು ಅವರಿಗೂ ಸಂಬಂಧ. ಅಲ್ಲಿಗೆ ಹೋಗದೆ ಬಂದಾರೆಯೇ?"

"ಅದಿರಲಿ; ಹುಡುಗಿ ಹೇಗಿದ್ದಾಳೆ? ಅವಳು ನಾನು ಬಂದಾಗ ಅವರ ಮನೆಗೆ ನೋಡಲು ಹೋಗುವ ಎಂದೆನಿಸಿತ್ತು....ಆದರೆ ಹೋಗ ಲಿಲ್ಲ. ಹುಡುಗಿ ಚೆನ್ನಾಗಿದ್ದಾಳೆಯೇ?"

"ಅವನ ವಯಸ್ಸಿಗೆ ಸಮನಾದವಳು. ಹುಡುಗಿಯೇನಲ್ಲ; ಹೆಂ ಗುಸೇ ಅವಳು. ನಿನಗಾಗಿರುವಷ್ಟೇ ವಯಸ್ಸು ಇರಬಹುದು. ಹೇಳು ವುದಕ್ಕೆ ಇಪ್ಪತ್ತು ಅನ್ನುತ್ತಾರೆ. ಅದಕ್ಕೆ ಆರೆಂಟು ವರ್ಷಗಳಾದರೂ ಸೇರಬೇಕು. ಆದರೆ, ಇವನೂ ಪ್ರಾಯ ಸಂದವನಲ್ಲವೇ! ನೋಡಲು, ಬಲು ದಷ್ಟಪುಷ್ಟವಾಗಿದ್ದಾಳೆ. ಮೈತುಂಬ ಚಿನ್ನ ಹಾಕಿದ್ದಾರೆ. ಇವನೂ ಸುಮಾರು ಒಯ್ದಿರಬೇಕು ನಗನಾಣ್ಯವೆಂದು. ಅಲ್ಲದೆ ವೆಂಕಪ್ಪನಿಗೆ ಕೈತುಂಬ ವರದಕ್ಷಿಣೆಯೂ ಬಿದ್ದಹಾಗಿದೆ. ನಾನು ಅದೆಲ್ಲ ವಿವರಗಳನ್ನು ಕೇಳಲಿಲ್ಲ. ಅದರೂ ಮರುಮದುವೆಗೆ ಅಷ್ಟು ಸಂಭ್ರಮ ಮಾಡುವುದು ಹೆಚ್ಚೇನೆ."

ತಿರುಗಿ ಹೊಟ್ಟೆಯು ಅವನನ್ನು ಎಚ್ಚರಿಸಿತು. ಈಗ ನಿಜವಾಗಿಯೂ ಹೊರಟುಬಿಟ್ಟ. ಮಗುವಿನ ಕವುಳನ್ನು ಬೆರಳಿಂದ ಮೃದುವಾಗಿ ಚಿವುಟಿ, "ಇನ್ನು, ಸಂಜೆಗೆ" ಎಂದು ಹೇಳಿ ಸರಿದನು.

ಅವನು ಮನೆಗೆ ಬರುವಾಗ ಎರಡು ಘಂಟೆಯಾಗಿತ್ತು. ಅನಂತರ ಅಡುಗೆಯನ್ನು ಮಾಡಿಸಿ, ಉಣ್ಣುವ ಪಾಡು ಬಂದಿತು. ಒಮ್ಮೆ ಉಂಡು ಮಲಗಿದರೆ ಸಾಕೆನಿಸಿತ್ತು.

*   *   *   *   *

ಮುಂದಲ ನಾಲ್ಕಾರು ದಿವಸಗಳ ಕಾಲ, ಸುಬ್ಬಯ್ಯನಿಗೆ ತುಂಬ ಕೆಲಸ. ಹೊಸ ಮನೆಯನ್ನು ವಾಸಕ್ಕೆ ಅನುಕೂಲಿಸಿಕೊಳ್ಳಬೇಕು. ಮುಂದೆ ಬರುವುದು ಮಳೆಗಾಲವಾದುದರಿಂದ, ಕಟ್ಟಿಗೆ ಮೊದಲಾದುವನ್ನು ಒದಗಿಸಬೇಕು. ಮನೆಯ ಚಾರ್ಜನ್ನು ಕುಸುಮೆ ವಹಿಸಿಕೊಳ್ಳುವಾಗ ಇನ್ನೂ ಸಮಯ ಹೋದೀತಲ್ಲ. ಜತೆಗೆ ಕೂಸಿನ ಆರೈಕೆಗೊಂದು 'ಆಯಾ' ಹುಡುಕಲು, ಕುಸುಮೆಯ ಆಜ್ಞೆಯಾಗಿತ್ತು. 'ಅವಳು ಎಳೆಯವಳೂ ಆಗಿರಬಾರದು, ಈಗೋ ಇನ್ನೊಂದು ಗಳಿಗೆಗೋ ಎನ್ನುವ ಮುದುಕಿಯೂ ಆಗಿರಬಾರದ'ಂತೆ. ಮಗುವನ್ನು ಮುಷ್ಟಿಯಲ್ಲಿ ಹಿಂಡುವ ಶೂರ್ಪನಖಿಯೂ ಆಗಿರಬಾರದು; ಚೊಕ್ಕಕ್ಕೆ ಚೊಕ್ಕವೂ ಆಗಿರಬೇಕು. ಈ ಆರ್ಡರಿಗೆ ತಕ್ಕ ಮಾಲನ್ನು ಅವನು ದೊರಕಿಸಬೇಕೆಂದು ಅವಳ ಅಪ್ಪಣೆಯಾಗಿತ್ತು.

ಆಸ್ಪತ್ರೆಗೆ ಹೋದಾಗಲೆಲ್ಲ-'ಆಯಾ ಯಾರು ಸಿಕ್ಕಿದರು?' ಎಂದು ಕೇಳಿಯೇ ಕೇಳುತ್ತಾಳೆ. ಪ್ರತಿ ಬಾರಿಯೂ 'ಇನ್ನೂ ಹುಡುಕಿ ಆಗಿಲ್ಲ" ಎಂದು ಇವನು ಅಂದೇ ಅನ್ನುತ್ತಾನೆ. ಅದೇನು ಕೋರ್ಟುಮುಂದಕ್ಕೆ ಹರಾಜಾಗುವ ಆಸ್ತಿಯಾಗಿದ್ದರೆ, ಅವನಿಗೆ ತಿಳಿಯಬೇಕು. ಕೊನೆಗೆ ಉಪಾಯವಿಲ್ಲದೆ 'ನೋಡು, ನಿನ್ನ ನಾರಾಯಣಿಗೆ ಹೇಳಿದರೆ ಏನಾದರೂ ತಿಳಿದೀತು' ಎಂದನು. ಅವನ ಹೊರೆತಪ್ಪಿ ಆ ಹೊರೆಯು ಗೆಳತಿಯ ಹೆಗಲಿಗೆ ಹೋಗಿ ಕುಳಿತಿತು.

ಒಂದು ತಾಪ ತಪ್ಪಿತು — ಎಂದು ಉಸ್ಸೆನ್ನುವಾಗ 'ಮಗುವಿನ ತೊಟ್ಟಿಲಿಗೇನು ಮಾಡಿದಿರಿ?' ಎಂಬ ಪ್ರಶ್ನೆ ಬಂದಿತು.

"ಈಗ ತೊಟ್ಟಿಲೊಂದು ಆಗಬೇಕಲ್ಲವೇ?"

"ನೀವು ಸಣ್ಣವರಾಗಿ ಇದ್ದಿರಲಿಲ್ಲವೆಂದು ಕಾಣುತ್ತದೆ".... ಎಂದು ನಕಲಿಮಾಡಿ, ತುಸು ಸಮಯ ಸರಿಯಲು "ಹೂಂ-ನಿಮ್ಮ ಹೊಸ ಮನೆಯಲ್ಲಿ ತೊಟ್ಟಿಲು ತೂಗಲು ಸಮನಾದ ಜಂತಿ ಇದ್ದರೂ ಆಯಿತು, ಇಲ್ಲದಿದ್ದರೂ ಆಯಿತು........ಇದೆಯೆಂದು ನೋಡಿದ್ದೀರಾ?"

"ಮನೆಗೆಷ್ಟು ಜಂತಿಗಳಿವೆಯೆಂದು ನಾನೆಲ್ಲಿ ಲೆಕ್ಕಮಾಡಿದ್ದೇನೆ, ಮಹಾರಾಯಿತಿ" ಎಂದುತ್ತರ.

"ಮಗುವಿನ ಅಪ್ಪನಾದ ಮೇಲೆ ಅದನ್ನೂ ಎಣಿಸಬೇಕು. ಕಿಟಿಕಿ ಸರಳಿಗೆ ಉಯ್ಯಾಲೆ ತೂಗಿಸಲಿಕ್ಕೆ ಬರುವುದಿಲ್ಲ."

"ಅಂಥ ಉಯ್ಯಾಲೆ ಉಂಟಲ್ಲ, ಸಿಂಗಾರಪಾಟಿನವರ ಹತ್ತರ."

"ಹೂಂ-ಅದೆಲ್ಲ ವಾದ ಸಾಕು. ವರ್ಕ್‌ಶಾಪಿಗೆ ಹೋಗಿ ಇಂಥದೇ, ಒಳ್ಳೆಯ ತೊಟ್ಟಿಲು, ಚೆನ್ನಾಗಿ ಪೆಯಿಂಟ್ ಮಾಡಿದ್ದು, ಮಾಡಿಸಿದರೂ ಸರಿಯೇ, ಸಿದ್ಧವಾಗಿದ್ದುದೂ ಸರಿಯೇ – ತರಿಸಿ ಇಡಿ. ಮಗು ಮನೆಗೆ ಬಂದ ಮೇಲೆಯೇ ತೊಟ್ಟಿಲು ಹುಡುಕುವುದಲ್ಲ. ಕೋರ್ಟಿಗೆ ಹೊರಟು, ಜಗುಲಿ ಇಳಿದ ಮೇಲೆ ರುಮಾಲೆಲ್ಲಿ-ಎನ್ನುವ ಹಾಗೆ!" ಮಾತಿಗೊಂದು ಟೀಕೆ ಸಲಿಸುವ ಮಡದಿಯನ್ನು ಒಲಿಸುವ ಕೆಲಸ ಈಗಲೂ ಕಷ್ಟವಾಗಿತ್ತು ಅವನಿಗೆ. ಅಂದೇನೆ ಊರಿನ ವರ್ಕ್‌ಶಾಪುಗಳನ್ನೆಲ್ಲಾ ಅಲೆದಾಡಿಕೊಂಡು ಬಂದ. 'ಅಂಥದೇ'ತೊಟ್ಟಿಲು ಸಿಕ್ಕದೆ, ಹೊಸತನ್ನು ಮಾಡುವಂತೆ ಹೇಳಿದ್ದಾಯಿತು. ಕುಸುಮೆಯು ಒಂದೊಂದು ಬಾರಿಯು ಎಚ್ಚರಿಕೆಗೆ ಸಮನಾಗಿ, ಕವ್ಮಾರನ ಮನೆಗೆ ಒಂದೊಂದು ಓಟಹೊಡೆದ.

ಹೀಗೆ ಅಲೆದಾಟ, ಮನೆಯ ವ್ಯವಸ್ಥೆಗಳ ಗಲಿಬಿಲಿಯಲ್ಲೊಂದು ದಿನ, ಹೊಸಮನೆಗೆ ಕುಸುಮೆಯ ಉಡುಗೆಯ ಟ್ರಂಕು-ಬರಲೇ ಇಲ್ಲವೆಂದು ತಿಳಿಯಿತು. ಹಳೆ ಮನೆಯಲ್ಲೂ ಅದು ಉಳಿದಿರಲಿಲ್ಲ. ಗಾಬರಿಯಾಯಿತು. ಕೊನೆಗೆ ತಾನು ವಿವಾಹಕ್ಕೆ ಉಡುಪಿಗೆ ಹೋದಾಗಲೇ, ಹೊಸ ಮನೆಗೆ ಕಳ್ಳರು ಭೇಟಿಕೊಟ್ಟಿದ್ದರೆಂಬುದು ಖಾತ್ರಿಯಾಯಿತು. ಸುದ್ದಿಯನ್ನು ನಾರಾಯಣನಾಗಲಿ, ಅವನಾಗಲಿ ಕುಸುಮೆಗೆ ತಿಳಿಸುವಂತಿಲ್ಲ. ಆಕೆಯು, ಹೊಸಹೊಸ ಬೆಲೆಬಾಳುವ ಅರಿವೆಗಳನ್ನು ತುಂಬಿಸಿದ ಪೆಟ್ಟಿಗೆ ಅದು. ಪುಣ್ಯಕ್ಕೆ, ಚಿನ್ನಾಭರಣವಿರಿಸಿದ ಪೆಟ್ಟಿಗೆಯನ್ನು ಒಯ್ದಿರಲಿಲ್ಲ. ಆದರೆ-ಎಷ್ಟುದಿವಸ ಸುಮ್ಮನಿರಲು ಬಂದೀತು? ಅವನು

ಮೂಕನಾಗಿ ಉಳಿದರೂ, ಯಾವಾವುದೋ ಮನೆ ತನಖಿಯ ವೇಳೆಗೆ, ನಾರಾಯಣನಿಂದ ಟ್ರಂಕು ಕಾಣೆಯಾದುದು ತಿಳಿಯಿತು. ಸುಬ್ಬಯ್ಯ ನನ್ನು ಕಂಡಾಕ್ಷಣವೇ 'ಹೊಸಮನೆಯ ಲಕ್ಷಣ ಒಳ್ಳೆಯದೇ!'-ಎಂದು ಬಿಟ್ಟಳು. ಸುಬ್ಬಯ್ಯ ಮಾತನಾಡಲಿಲ್ಲ.

ಆಸ್ಪತ್ರೆಯ ಅವಧಿಯು ಮುಗಿಯಿತು. ಮನೆಗೆ ಹೊರಡುವ ಮುಹೂರ್ತವನ್ನು ಜೋಯಿಸರಿಂದ ತಿಳಿದು ಬರಲು, ಕುಸುಮೆಯ ಆಜ್ಞೆ ಯಾಗಿತ್ತು. ಆಜ್ಞಾಬದ್ಧನಾದ ಪತಿರಾಯ ತನ್ನ ವಿಶ್ವಾಸ, ಅವಿಶ್ವಾಸ ಗಳನ್ನು ಬದಿಗಿರಿಸಿ-ವಾರ, ತಿಥಿ, ಗಳಿಗೆಗಳನ್ನು ಬರೆದು ತಂದು ಒಪ್ಪಿ ಸಿದ. ಅದಾಗುವಾಗಲೇ 'ದಾದಿ?' ಎಂದು ಕೇಳಿಯಾಯಿತು. 'ನಾರಾ ಯಣಿ ಸಿಗಲಿಲ್ಲವೇ ನಿನಗೆ' ಎಂದು ಕೇಳಲು, 'ಅವಳಿಗೆ ನಾನು ಹೇಳಿ ದ್ದೇನೆ. ಯಾರೋ ಇದ್ದಾರೆ ಎಂದೂ ಅಂದಿದ್ದಾಳೆ. ನೀವೂ ಅದರ ತಲಾ ಸಿಯಲ್ಲಿರಬಹುದಲ್ಲ-ಎಂದು ಕೇಳಿದೆ' ಎಂದು ಹೇಳಿದಳು.

ಸಂಜೆಯಾದುದರಿಂದ ನಾರಾಯಣಿ, ಬೇಗ ಬರುವವಳಿದ್ದಳು. ಅವಳನ್ನರಸಿ ಖಾತ್ರಿಮಾಡಿ ಬರಲು ಸುಬ್ಬಯ್ಯ ತೆರಳಿದನು. ಅವನು ಹೋದ ಮರುಕ್ಷಣ ಆಸ್ಪತ್ರೆಗೇನೆ ಆಕೆ ಬಂದಳು. ಅವಳು ದಾದಿ ಯೊಬ್ಬಳನ್ನು ಕರೆದೂ ತಂದಿದ್ದಳು. ಅವಳು ತನ್ನ ದೂರದ ಸಂಬಂಧಿ ಯೆಂದು, ಅವಳ ಗುಣಾತಿಶಯವನ್ನು ಹೊಗಳಿ, "ಏನಾದರೂ ನೂರು-- ಸಾವಿರ ಮಕ್ಕಳನ್ನು ಸಾಕಿದವಳು" ಎಂದು ಶಿಫಾರಸಿ ಮಾಡಿದಳು. ತಿರುಗಿ ಹತಾಶನಾದ ಸುಬ್ಬಯ್ಯ 'ಕ್ಲಬ್ಬಿಗೂ ಬಂದಿರಲಿಲ್ಲ' ಎನ್ನುವಾಗ ಅವಳನ್ನು ಕಂಡು ಒಮ್ಮೆಗೇ 'ಬಚಾವಾದೆ' ಎಂದುಕೊಂಡ.

ಸರಿ, ಮುಂದಿನ ಬೆಳಗಿನ ಜಾವ ಹೊತ್ತಿಗೆ ತಾಯಿಮಕ್ಕಳು ಹೊರ ಡುವುದೆಂದೂ, ದಾದಿಯೊಡನೆಯೇ ಕೂಡಿ ಹೊರಡಬೇಕೆಂದೂ ನಿಶ್ಚ ಯವಾಯಿತು. ಮೋಟರು ಬರಹೇಳುವ ಕೆಲಸ ಮುಂಚಿತವಾಗಿ ನಡೆ ದಿತ್ತು. ಇಲ್ಲವಾದರೆ ತಕ್ಷಣವೇ ಗಂಡನನ್ನು ಓಡಿಸುತ್ತಿದ್ದಳು. ಆದರೂ 'ತೊಟ್ಟಿಲು ಮನೆಗೆ ಬಂದಿದೆ'ಯೇ ಎಂಬ ಅನುಮಾನದಿಂದ ಅಲ್ಲಿಗೆ ಹೋಗಿ ಬಂದನು. ಇವನ ಓಡಾಟಕ್ಕೆ ಬೆದರಿದ ಕೆಲಸಗಾರ, ಅದನ್ನು ತಂದು ಮನೆಗೆ ಮುಟ್ಟಿಸಿದ್ದನು. ರಾತ್ರಿಯೆಲ್ಲಾ ನಾರಾಯಣ, ಸುಬ್ಬಯ್ಯ ಸೇರಿ ಅಮ್ಮನವರ ವಿಶ್ರಾಂತಿಗೃಹ ಸಜ್ಜಾಗಿರಿಸಿದರು. ತೊಟ್ಟಿಲನ್ನು

ಸ್ಥಳದಲ್ಲಿರಿಸಿದರು. ಆ ಕೊಟಡಿಯಲ್ಲಿ ಜಂತಿಯೂ ಇದ್ದಿತು. ಹಿಂದೆ ಮಕ್ಕಳನ್ನು ತೊಟ್ಟಿಲಲ್ಲಿ ಹಾಕಿ ತೂಗಿದ ಕುರುಹೂ ಇತ್ತು.

ಆ ರಾತ್ರಿಯೋ? ಅದು ವಿಮಾನವೇಗದಲ್ಲಿ ಸರಿಯಿತು. ಬೆಳಗಿನ ಹೊಂಬೆಳಕು ಆಸ್ಪತ್ರೆಯ ಜಗುಲಿಗೆ ಬೀಳುವಾಗ, ಮೋಟರಿನವನೂ ಬಂದು ನಿಂತಿದ್ದನು. ಭರತಿ ಮೋಟರು ಗಾಡಿ! ವೇಳೆಗೆ ಸಮನಾಗಿ ದಾದಿಯೂ ಬಂದಳು. ಜತೆಗಾರ್ತಿ ನಾರಾಯಣಿಯೂ ಬರಲು ಸಿದ್ಧಳೇ. ಬಾಣಂತಿಗೃಹದ ದಾದಿಯರಿಗೆ ಪುರಸ್ಕಾರವಿತ್ತ ಬಳಿಕ, ಬಾಣಂತಿಯ ಪರಿವಾರ ಮೋಟರನ್ನು ಏರಿತು. ಮನೆಯನ್ನು ಸೇರಲು ಕೆಲವು ನಿಮಿಷ ಕೂಡ ಹಿಡಿಯಲಿಲ್ಲ. ಸುಬ್ಬಯ್ಯ ಹೆಂಡತಿಯ ಕೈಯ್ಯನ್ನು ಹಿಡಿದು ಅಪೂರ್ವ ಸೌಜನ್ಯದಿಂದ ಹೊಸಮನೆಯನ್ನು ಹೊಗಿಸಿದ. ದಾದಿಯ ಕೈಯಲ್ಲಿ ಕುಳಿತುಕೊಂಡು ಕುಮಾರಸಿಂಹನೂ ಹೊಕ್ಕನು. ಕುಸುಮೆಯ ಕಣ್ಣುಗಳು ಮಂಚವನ್ನು ಸೇರುವ ತನಕ—ಮನೆ, ಗಂಡನ ಏರ್ಪಾಡುಗಳನ್ನು ಉಸಿರಿಲ್ಲದೆ ನೋಡುತ್ತಿದುವು. ಒರಗಿಕೊಳ್ಳುವಾಗ —ಗಂಡ ತೀರ ಹೆಡ್ಡನಲ್ಲ, ಎಂಬ ಭರವಸೆಯುಂಟಾಯಿತು.

೧೧ನೆಯ ಅಧ್ಯಾಯ

ಕುಸುಮೆಯ ವಿಶ್ರಾಂತಿಕಾಲವು ಚೆಲುವಿನಲ್ಲಿಯೇ ಸಾಗಿತು. ಹೊಸಮನೆಯ ವಿಚಾರ ಬಂದಾಗ, ವಿಶೇಷ ಸಂತೋಷವನ್ನುಂಟುಮಾಡದೆ ಹೋಗಿದ್ದರೂ, ಈಗೀಗ ಸ್ಥಳ, ಆವರಣ—ಮನೆಗಳೆಲ್ಲವೂ ಒಪ್ಪುತ್ತಿವೆ. 'ಸ್ವಂತ ಮನೆಯಿದೆ' ಎಂಬುದು ಅವಳ ಹೆಮ್ಮೆಗೂ ಮೆಚ್ಚಿದ ಸಂಗತಿ. ಮಗು ಮನೆಗೆ ಬರುವಾಗಲೇ ಸ್ವಂತ ಮನೆ ದೊರಕಿದ್ದು ಭವಿಷ್ಯದ ಹೆಗ್ಗುರುತೆಂದು ತಿಳಿದಳು. ಈ ಗೊಂದಲದಲ್ಲಿ ಪತಿಯು ಹಣದ ಮುಗ್ಗಟ್ಟಿಗೆ ಸಿಲುಕಿದ್ದಾನೆಂಬುದು ಕಾಣಿಸಲಿಲ್ಲ. ಆ ವಿಷಯವಾಗಿ ಸುಬ್ಬಯ್ಯ ನುಡಿಯುತ್ತಿದ್ದ ಮಾತುಗಳು ಗಾಳಿಗೇನೆ ತೂರಿಹೋಗುತ್ತಿದ್ದುವು.

ಕುಸುಮೆಯ ಕುಮಾರ ನಸು ಕಂದು ಬಣ್ಣದವ. ನೋಟಕ್ಕೆ ಮುದ್ದಾಗಿಯೇ ಇರುವವ. ಆದರೆ ತುಂಬ ಬಿಳಿದಾಗಿದ್ದರೆ ಸಂತೋಷ ವಾಗುತ್ತಲಿತ್ತು. ಬಂದವರ ಮುಂದೆ ಅದು ತುಂಬ ಬಿಳಿದೆಂದೇ ಅವಳು ವಾದಿಸುತ್ತಾಳೆ. ಇನ್ನು ಸಮಯ ಹೋದಂತೆ ಬೆಳ್ಳಂಬೆಳ್ಳಗೆ ಆಗುವುದು —ಎಂದು ಸಾರುತ್ತಾಳೆ. ಮಗು ಮನೆಗೆ ಬಂದಾಗ ಮುಸಲಿನ್ ಅಂಗಿ ಬಂದಿತು. ಈಗ ಮಳೆಗಾಲದಲ್ಲಿ ಅದಕ್ಕೆ ಫ್ಲೆನಲ್ ಅಂಗಿಬಂದಿದೆ. ದಿನ ಕ್ಕೊಂದು ಬಣ್ಣದ ಅರಿವೆಯು ಅದಕ್ಕಾಗಿ ಚೆಲ್ಲಾಡಿತು. ತಿಂಗಳು ಮೂರಾಗುವುದರೊಗೆ ಚಿನ್ನದ ಉಡಿದಾರ ಬರಲಿ ಎಂದಳು. ಅಂತು ಸುಬ್ಬಯ್ಯ, ಮಗುವಿಗೆ ಬಾನನ್ನೇ ಕಿತ್ತುಕೊಡುವ ಹುಮ್ಮಸದವನಾದು ದಕ್ಕಾಯಿತು. ತನಗೆ ಎಷ್ಟು ಕೆಲಸವಿದ್ದರೂ-ಕೂಷಿನ ಕಿರುಚಾಟ ಕೇಳಿ ದರೆ ಓಡಿಬರುತ್ತಾನೆ. ಕೈಯ್ಯಲ್ಲಿ ತೆವಳುವ ಆ ಮಾಂಸದ ಮುದ್ದೆಯನ್ನು ಹಿಡಿಯಲು ಅಂಜಿಕೆಯಾದರೂ, ಹೇಗೋ ಎತ್ತಿ ಎತ್ತಿ ಮುದ್ದಿಸುತ್ತಾನೆ. ತಿಂಗಳು ಕಳೆದು, ಆ ಮಗು, ಹಲ್ಲಿಲ್ಲದ ಅರಳುನಗೆಯನ್ನು ಬೀರುವಾಗ ಅವನಿಗೆ ಸ್ವರ್ಗ ದೊರೆತಂತಾಗುತ್ತಿತ್ತು.

ಇತ್ತ ಅವನ ಗೆಳೆಯನ ಆಗಮನವಾಯಿತು. ರಜೆ ಮುಗಿಯಲು ಹೊಸ ಹೆಂಡತಿಯೊಡನೆ ಅವರೆಲ್ಲರಿಗೆ ವೆಂಕಪ್ಪ ಭೇಟಿಯಿತ್ತನು. ಮಗುವಿನ ಕೈಯಲ್ಲಿ ಬೆಳ್ಳಿಯ ಬಟ್ಟಲನ್ನು ಕೊಟ್ಟನು; ಅದರೂ ಹೊಸ ಮನೆಯನ್ನು ತನಗೆ ತಿಳಿಯದೇನೇ ಖರೀದಿಮಾಡಿದುದಕ್ಕೂ, ದುಡ್ಡಿಲ್ಲ ವೆಂದವನೇ ಹೀಗೆ ವರ್ತಿಸಿದುದಕ್ಕೂ-ಒಳಗಿಂದೊಳಗೆ ಅಸಮಾಧಾನ ವಾಯಿತು. ಅದನ್ನು ಹೋಗಲಾಡಿಸಲು ಎಂಬಂತೆ ಸುಬ್ಬಯ್ಯ "ಏನು, ಮನೆ ಈಗಲೇ ನನ್ನ ಬಗಲಿಗೆ ಬಿತ್ತೆಂದು ತಿಳಿದೆಯಾ? ಇನ್ನು ಎರಡು ವರ್ಷಗಳಲ್ಲಿ ಉಳಿದ ಹಣ ತುಂಬಿಸಬೇಕು"—ಎಂದುದಲ್ಲದೆ, ಬ್ಯಾಂಕು ಹೊಣೆಗಾರಿಗೆಯಿಂದ ಅಂಟಿದ ಹೊರೆಯನ್ನೂ ವಿವರಿಸಿದ. ಆ ವಿಷ ಯವಾದ ಕರುಣೆ, ವೆಂಕಪ್ಪನ ಮನಕ್ಕಾಯಿತೋ ಇಲ್ಲವೋ. ಅಂತು ಮಾತಿನ ರೂಪದಿಂದ ವೆಂಕಪ್ಪ ಮನಸ್ಸನ್ನು ಬಿಚ್ಚಿತೋರಿಸಲಿಲ್ಲ.

ಕುಸುಮೆಗೆ ವಿಮಲೆ ಭೇಟಿಯಾದ ಬಗೆ ಇನ್ನೂ ಸೊಗಸಾಗಿತ್ತು. ಆ ದಿನ ವಿಮಲೆ, ತುಂಬ ಜರತಾರಿಯುಳ್ಳ ಸೀರೆಯುಟ್ಟು, ತಾನೊಂದು ನಗನಾಣ್ಯಗಳ ಹೇರೆತ್ತಾಗಿಯೇ ಬಂದಿದ್ದಳು. ಅವಳ ತುಂಬು ಕಪೋಲ

ಬೊಗಸೆ ಕಣ್ಣುಗಳು ಈ ಅಲಂಕಾರಕ್ಕೆ ತಕ್ಕುದಾಗಿದ್ದುವು. ಬಂದು, ಕುಸುಮೆಯ ಮಗ್ಗುಲಲ್ಲಿ ಕುಳಿತವಳು, ತನ್ನ ಪುರಾಣವನ್ನೆಲ್ಲ ಹೇಳಿದಳು. ಸೀರೆ ಆಭರಣಗಳ ಮುಗಿಲಲ್ಲೇ ಸವಾರಿ ಎಸಗಿದಳು. ಕುಸುಮೆ ಎತ್ತಿಹಿಡಿದ ಮಗುವನ್ನು ನೋಡುವುದರಲ್ಲಿ ಅವಳಿಗೆ ಆಸೆಯಿರಲಿಲ್ಲ. ಗಂಡ ಮನೆಯಲ್ಲಿ "ಮಗು ಹೇಗಿದೆ ನೋಡಿದೆಯಾ?" ಎಂದು ಕೇಳಿದರೆ, "ಏನು ನೋಡುವುದು? ಎಲ್ಲ ಮಕ್ಕಳ ಹಾಗಲ್ಲವೇ?" ಎಂದುಬಿಟ್ಟಳು. "ಆದರೆ ಕುಸುಮೆ ಎಲ್ಲರಂತಲ್ಲ" ಎಂದು ಆತ ಅಭಿಮಾನದ ನುಡಿಯನ್ನು ನುಡಿದನು. ಅವುಗಳಲ್ಲಿ ಎಷ್ಟು ಅವಳ ಕಿವಿಗೆ ನಾಟಿದುವೋ, ಎಷ್ಟು ನಾಟಲಿಲ್ಲವೋ!

ವಿಮಲೆ ಹೊರಟುಹೋದ ಮೇಲೆ, ಕುಸುಮೆಗೆ ನಾರಾಯಣನಿಂದ ತನ್ನ ಟ್ರಂಕನ್ನು ತರಿಸಿಕೊಂಡು ಜಡತಿ ನೋಡುವ ಮನಸ್ಸಾಯಿತು. ಒಂದೊಂದಾಗಿ ಕಳೆದ ರೇಶ್ಮೆ ಸೀರೆ ಕುಪ್ಪಸಗಳನ್ನು ನೆನೆದು ರೋಷಗೊಂಡಳು. ಕೆಲವು ದಿನ ಮರೆತ ಈ ಕೋಪವನ್ನು, ಪತಿ ಬಂದಾಗ, ಆತನ ಅಜಾಗರೂಕತೆಗಾಗಿ ತೋಡಿಕೊಂಡಳು. "ಮಹಾರಾಯತಿ, ಆಯಿತು, ಹೋಯಿತು. ರೇಗಿದರೆ ಕದ್ದವರು ಹಿಂದೆ ತರುತ್ತಾರೆಯೇ. ನನ್ನದೇ ಅಜಾಗ್ರತೆಯೆಂದು ತಿಳಿಯುವ. ನಾನು ಆ ಟ್ರಂಕಿನ ಮೇಲೆ ರಾತ್ರಿ ಮಲಗಿಕೊಂಡು ಕಾವಲು ಕುಳಿತಿರದ್ದು ತಪ್ಪು ನಿಜ. ಈಗೇನು? ನಿನಗೆ ಹೋದುದಕ್ಕೆ ಬದಲಿ ತಂದುಕೊಟ್ಟರಾಯಿತಲ್ಲ" ಎಂದನು.

ಆದರೂ ಅಸಮಾಧಾನವೇ. ಹೋದುವು ಯಾವಾಗಲೂ ಚಿನ್ನದಂಥವು. ಸತ್ತ ಎಮ್ಮೆಗೆ ಯಾವಾಗಲೂ ತುಂಬ ಹಾಲು! ಸುಬ್ಬಯ್ಯ ಮರುದಿನವೇ ಅಂಗಡಿಯಿಂದ ಹತ್ತೆಂಟು ಒಳ್ಳೆಯ ಸೀರೆಗಳನ್ನು ತರಿಸಿ ತೋರಿಸಿದ. "ಯಾವುದಾದೀತು" ಎಂದ. "ಹೇ-ಇವು ಕಳೆದುಹೋದವುಗಳಂತೆ ಇಲ್ಲ" ಎಂದು ಎಲ್ಲವನ್ನೂ ಸಪ್ಪೆ ಮುಖದಿಂದ ನೋಡಿ, "ಇರಲಿ" ಎಂದಳು. "ಅಷ್ಟೂ ಬೇಕೇ?" ಎಂದು ಗಾಬರಿಯಾದ ಆತ. "ಯಾವುದೂ ಬೇಡ" ಎಂದು ಉತ್ತರ ಬರಲು, ಸೋತು ಅಂಗಡಿಯ ಲೆಕ್ಕವನ್ನು ತೀರಿಸಿಬಿಟ್ಟ. ಆ ದಿನ ತಂದ ಸೀರೆಗಳು ಮುನ್ನೂರು ರೂಪಾಯಿಗಳನ್ನು ನುಂಗಿಬಿಟ್ಟುವು. ಉಳಿದ ಕಾಲವಾಗಿದ್ದರೆ, ಆತಗೆ ಅಷ್ಟು ಹೆಚ್ಚೆನಿಸುತ್ತಿರಲಿಲ್ಲ. ಅವನೀಗ ತಾನು ಕೊಡಬೇಕಾದ ಸಾಲಗಳನ್ನೂ

ದಂಡಗಳನ್ನೂ ನೆನೆದು ಗಾಬರಿಯಾಗುತ್ತಿದ್ದಾನೆ.

ಕುಸುಮೆಯು ವಿಶ್ರಾಂತಿ ದಿವಸಗಳಲ್ಲೂ, ಮನೆಯಲ್ಲಿ ಕುಳಿತಾದರೂ ಸೀರೆಗಳ ಪ್ರದರ್ಶನ ಮಾಡುತ್ತಿದ್ದಳು. ಅವಳನ್ನು ನೋಡಲು ಅಪೂರ್ವಕ್ಕೆ ಬರುವ ವಿಮಲೆಯು ಪ್ರತಿಸ್ಪರ್ಧಿಯಾಗಿ ಮೆರೆತ್ತಿದ್ದುದೇ ಅದಕ್ಕೆ ಕಾರಣ. ಅವಳ ಸಂಭ್ರಮವನ್ನು ನೋಡಿ, 'ವೆಂಕಪ್ಪಣ್ಣ' ಕೈಯಲ್ಲಿ ಕಾಸಿಲ್ಲವೆಂದರೂ, ಹೆಂಡತಿಯ ಮೇಲೆ ಈ ರೀತಿ ಸಿರಿವಂತಿಗೆ ಚೆಲ್ಲಿದ ಹೇಗೆ, ಎಂದು ವಿಸ್ಮಯ ಪಡುವಂತಾಯಿತು.

ಒಂದು ದಿನ ವಿಮಲೆ, ವಜ್ರದ ಕುಟುಕುಗಳನ್ನು ಧರಿಸಿಬಂದಳು. ಕುಸುಮೆಗೆ ಉಳಿದ ಆಭರಣಗಳೆಲ್ಲ ಇದ್ದುವು. ಆದರೆ ವಜ್ರದ ನಿಶಾನಿ ಇರಲಿಲ್ಲಿ. ಅದನ್ನು ನೆನೆನು ಅಸೂಯೆ ಕೆದರಿತು. "ಏನು ಈಕೆಯ ಜಂಬ!" ಎಂದುಕೊಂಡಳು. 'ಈ ವಿಮಲೆ ನಮ್ಮ ಮನೆಗೆ ಬರುವುದು ತನ್ನ ದೊಡ್ಡಸ್ತಿಕೆಯನ್ನು ತೋರಿಸಿ ಹಂಗಿಸುವುದಕ್ಕೇನೆ' ಎಂದೆನಿಸಿತು. ಮೇಲೆ, ತನ್ನ ಮಗುವನ್ನು ಕಂಡು ಅಂದ ಒಂದೆರಡು ಮಾತುಗಳು ಅವಳನ್ನು ಬೇಸರಿಸಿದ್ದುವು. "ಇದು ಅಪ್ಪನ ಹಾಗೂ ಇಲ್ಲ, ಅಮ್ಮನ ಹಾಗೂ ಇಲ್ಲ.......ನಿಮ್ಮ ತಂದೆ ಕಪ್ಪೇ? ಇದಕ್ಕೆ ಕಪ್ಪು ಬಣ್ಣ ಬರುತ್ತದೆ ಎಂದು ಕಾಣುತ್ತದೆ" ಎಂದು ಭವಿಷ್ಯವನ್ನು ಸಹ ನುಡಿದುಬಿಟ್ಟಿದ್ದಳು.

ಒಂದು ದಿವಸ ಕುಸುಮೆ, ತಾನಾಗಿ ಮಗುವನ್ನು ಅವಳ ಕೈಯಲ್ಲಿರಿಸಿದಳು. ದಾಕ್ಷಿಣ್ಯಕ್ಕೆ ಹಿಡಿದುಕೊಂಡ ವಿಮಲೆಯ ಮೇಲೆ ಅದು ಪಿಚಕಾರಿ ಚಿಮ್ಮಬೇಕೆ! ಆಕೆಯ ಮನಸ್ಸು ಏನೋ ಆಯಿತು. 'ಹೋಗಿ, ತೊಳೆದುಕೊಂಡು ಬನ್ನಿ' ಎಂದು ಕುಸುಮೆ ನುಡಿದಳು. ಮಗುವನ್ನು ತೆಗೆದು ತಕ್ಷಣ ತೊಟ್ಟಿಲಲ್ಲಿ ಇರಿಸಿ, ಇನ್ನೊಂದು ಸೀರೆಯನ್ನು, ಅವಳಿಗೆ ಬದಲಿಸಲು ಕೊಟ್ಟಳು. ಉತ್ತರ ಕೇಳಿದಿರಾ? "ಇಶ್ಶೀ! ನಾನು ಯಾರ್‍ಯಾರ ಸೀರೆ ಉಡುವುದಿಲ್ಲವಪ್ಪ" ಎಂದಳು ವಿಮಲೆ.

ನಿತ್ಯ ಎರಡು ಮನೆಗಳಲ್ಲೂ ವಾದವಿವಾದಗಳಿಗೆ ಅವಕಾಶವಾಯಿತು. ವೆಂಕಪ್ಪ ಕುಸುಮೆಯನ್ನು ವರ್ಣಿಸಿದಾಗಲೆಲ್ಲ, ವಿಮಲೆ ಕಿವಿಗೆ ಬೆರಳಿಟ್ಟುಕೊಳ್ಳುತಿದ್ದಳು, ಕುಸುಮೆಯು ವಿಮಲೆಯನ್ನು ದೂರಿದಾಗ ಸುಬ್ಬಯ್ಯ "ಹ್ಯಾಗೆ, ಈಗಲೇ ಅವಳನ್ನು ಕೆಟ್ಟವಳೆಂದು ತಿಳಿಯುವುದೇ" ಎನ್ನುತ್ತಾನೆ. ಅಂತು ಅವನೊಡನೆ ಆಗಾಗ ಕುಸುಮೆ, ವಿಮಲೆಯ

ಜಂಬವನ್ನು ಕುರಿತು ಟೀಕಿಸುತ್ತಲೇ ಇದ್ದಳು. "ಆಕೆ ಒಂದು ದಿವಸ ವಾದರೂ ನಮ್ಮ ಮಗುವನ್ನು ಹಿಡಿದು ತಾನಾಗಿ ಎತ್ತಿದುದುಂಟೇ? ಅದಕ್ಕೇನೆ ಮಗು ಅವಳಿಗೆ ಸ್ನಾನ ಮಾಡಿಸಿದ್ದು" ಎಂದು ನಗುವಳು. ಇನ್ನೊಂದು ದಿವಸ ಕುಸುಮೆ "ಆಕೆಗೆ ಸ್ವಲ್ಪವೂ ನಗ್ಗ ನಾಚಿಕೆಯಿಲ್ಲ" ಎನ್ನುವಳು.

"ಬಂದ, ತಿಂಗಳೆರಡು ತಿಂಗಳಲ್ಲಿಯೇ ನಾವು ಹಾಗೆ ಹೀಗೆನ್ನು ವುದು ಸಮನಲ್ಲ. ಒಬ್ಬರನ್ನು ಚೆನ್ನಾಗಿ ತಿಳಿದ ಮೇಲೆಯೇ ಮಾತನಾಡ ಬೇಕು" ಎನ್ನುವನು ಸುಬ್ಬಯ್ಯ.

"ಅಷ್ಟೇನು ತಿಳಿಯದ ಮೊದ್ದೇ ನಾನು? ಅವಳು ಗಂಡಸರನ್ನು ಕಣ್ಣಿಂದಲೇ ನುಂಗುವುದನ್ನು ಕಾಣುವುದಿಲ್ಲವೇ?"

ಸುಬ್ಬಯ್ಯ ನಕ್ಕ. "ನಿನಗೆ ಕುಸುಮಾ" ಪ್ರಪಂಚದಲ್ಲಿ ಒಳ್ಳೆಯವ ರಾಗಿ ತೋರುವವರೇ ಇರಲಾರರು. ಅಂತಹ ಶೀಲಕ್ಕನೂ ಒಂದೊಂದು ದಿವಸ ಬೇಡವಾಗುತ್ತಿದ್ದಳು; ಇನ್ನೊಂದು ದಿನ ಬೇಕಾಗುತ್ತಿದ್ದಳು. ಇವಳಂತು—ಪ್ರಪಂಚ ತಿಳಿಯದ ಹುಡುಗಿ. ತಾನು ತುಂಬ ಚೆನ್ನಾಗಿ ಮೆರೆಯಬೇಕೆಂದು ಅನಿಸುತ್ತಿರಬೇಕು. ಸಣ್ಣದರಲ್ಲಿ ಎಲ್ಲರಿಗೂ ಆ ಆಸೆ ಯಿರುತ್ತದೆ. ಅದನ್ನೆಲ್ಲವನ್ನು ನಾವು 'ಮಹಾ' ಎಂದು ತಿಳಿಯಬಾರದು ಕುಸುಮ."

"ನಿಮ್ಮದು-ರುಸುಂ ಕೊಟ್ಟವರಿಗೂ,ಕೊಡದೆ ಇದ್ದವರಿಗೂ-ಎಲ್ಲ ರಿಗೂ ವಕಾಲತೇ! ಸಣ್ಣ ಕೂಸನ್ನು ನೋಡಿದರೆ ಇಶ್ಶೀ ಅನ್ನುವವಳು. ಹೆಂಗುಸೇ ಅಲ್ಲ. ನೋಡಿ ನಾರಾಯಣಿಯನ್ನು. ಮಕ್ಕಳೆಂದರೆ ಎಷ್ಟು ಜೀವ. ಇವಳಿಗೆ ತನ್ನ ಹೊಟ್ಟೆಯಲ್ಲೂ ಮಗು ಹುಟ್ಟೀತು—ಎಂಬ ಜ್ಞಾನವೇ ಇಲ್ಲ."

"ಯಾರ್ಯಾರ ಸುದ್ದಿ ನಮಗೇಕೆ ಕುಸುಮ? ಒಬ್ಬರು ಇದ್ದಂತೆ ಇನ್ನೊಬ್ಬರು ಇರುತ್ತಾರೆಯೇ," ಎಂದು ಸುಬ್ಬಯ್ಯ ಮುಕ್ತಾಯಗೊಳಿ ಸಿದ. ಇದೆಲ್ಲ ಪರರ ಪಕ್ಷಪಾತವೆಂದು ಸದಾ ಗೆಲ್ಲಬೇಕೆಂಬ ಮನಸ್ಸುಳ್ಳ ಅವಳಿಗೆ ಕಾಣಿಸುತ್ತಿತ್ತು. ಅದರಿಂದ "ಅವಳು ಹೇಗಿದ್ದರೆ ನನಗೇನು; ವೆಂಕಪ್ಪಣ್ಣನ ಅದೃಷ್ಟ ನೆನೆದು ವ್ಯಥೆಯಾಗುತ್ತದೆ. ಇವಳು ಅವನ ಅಷ್ಟೆಲ್ಲ ಮಕ್ಕಳನ್ನು ಬೆಂಕಿಯಲ್ಲಿ ಬೇಯಿಸದೆ ಇರುತ್ತಾಳೆಯೇ"

ಎಂದಳು. ಸುಬ್ಬಯ್ಯ ಈ ಹಾಳು ಹರಟೆ ಸಹಿಸದೆ, ಹೆಂಡತಿಗೆ ಪ್ರತಿಯಾಗಿ ಉತ್ತರ ಕೊಡಲು ಮನಸ್ಸಿಲ್ಲದೆ, ಕೆಲಸದ ನೆಪದಿಂದ ಹೋಗಿಬಿಟ್ಟ.

ಇದಕ್ಕೆ ಪ್ರತಿ ಕಕ್ಷಿಯಾದ ವಿಮಲೆ ಗಂಡನೊಡನೆ "ಅಯ್ಯೋ ಅಯ್ಯೋ-ಅವಳು ತನ್ನ ಚೋಟುದ್ದ ಕರಿಕೂಸನ್ನು ಎತ್ತಿ ತಂದು ಬಂದವರ ಮೇಲೆ ಹೇರುವುದನ್ನುಕಂಡರೆ ಯಾರಿಗೂಬೇಸರವಾಗದೇ? ಒಂದಕ್ಕೇನೆ ಹೀಗೆ ಮಾಡಿದವಳು, ನಾಲ್ಕಾರು ಹಡೆದರೆ—ಪ್ರದರ್ಶನವನ್ನೇ ಮಾಡಿಯಾಳು" ಎನ್ನುವಳು. ವಿಮಲೆಯು ಸೀರೆ ಒಡವೆಗಳಿಂದಾಗಿ ಕುಸುಮೆಯ ಕರುಳು ಚುಚ್ಚಿದಂತಾಗುತ್ತಿದ್ದಂತೆಯೇ, ಅವರ ಹೊಸ ಮನೆಯಿಂದಾಗಿ, ವಿಮಲೆಯ ಮನಸ್ಸೂ ಅಸಮಾಧಾನಗೊಂಡಿತ್ತು. ಅದಕ್ಕೆ "ನೀವು, ಅವರಿಗಿಂತ ನಾಲ್ಕು ವರುಷ ಸರ್ವಿಸಾದವರೆನ್ನುತ್ತೀರಿ. ನೀವೇನು ಮನೆಯನ್ನು ಕೊಳ್ಳಲಿಲ್ಲ?" ಎಂದು ನಕ್ಕು ನುಡಿಯುವಳು. ಮನೆಗೆ ವರದಕ್ಷಿಣೆಯನ್ನು ತಂದವಳ ನುಡಿ ಬರಿದಾದೀತೇ? ವೆಂಕಪ್ಪ ಆಯಿತೆನ್ನುವಂತಾಯಿತು. "ಇಷ್ಟೆಲ್ಲ ಜನರು ತುಂಬಿರುವಾಗ ಈ ಸಣ್ಣ ಮನೆಯಲ್ಲಿರುವುದು ಹೇಗೆ? ನಿಮ್ಮ ನಿರಂಜನ ಕಾಲೇಜಿಗೆ ಹೋಗುವವ; ಏನು ಓದಿಯಾನು ಇಲ್ಲಿ?" ಎಂದು ಸ್ವಂತ ಮನೆಯ ಆವಶ್ಯಕತೆಯನ್ನು ದೊಡ್ಡದುಮಾಡಿ ಹೇಳುವಳು ಅವಳು.

ಆತನಿಗೆ ಮನೆಗೆ ಬಂದ ಹೊಸ ಹೆಂಡತಿಯ ತೂಕ ತಿಳಿಯಲು ಹೆಚ್ಚು ಸಮಯ ಹೋಗಲಿಲ್ಲ. ಶೀಲಕ್ಕನ ಮೆಲುನುಡಿ, ದಾಕ್ಷಿಣ್ಯ ಪರತೆಗೂ ಈಕೆಯ ಒಯ್ಯಾರ,ಬಿನ್ನಾಣ,ಬಿಂಕಗಳಿಗೂ ಸಂಬಂಧವೇ ಇರಲಿಲ್ಲ. ಆದರೆ ಈಕೆ ತನ್ನ ಹೆಣ್ತನದ ಬೆಡಗಿಂದ ಅವನನ್ನು ಸೆರೆಯಾಗಿಸಿದ್ದಾಳೆ. ಅವಳೆಂದುದಕ್ಕೆ ಈತ ಸೈಗುಡುತ್ತಾನೆ. ಆದರೂ ಒಮ್ಮೊಮ್ಮೆ ಕುಸುಮೆಯ ಪರವಾಗಿ ವಾದಿಸುತ್ತಾನೆ. 'ಅವಳು ತುಂಬಉದಾರಿ, ಗುಣಿ' ಎನ್ನುವ. ಉತ್ತರ ಥಟ್ಟನೆ ಬರುತ್ತದೆ: 'ನೀವೇನೂ ಅನ್ನಿ, ಅದು ಜಂಬದ ಕೋಳಿ! ತಾನು, ತನ್ನ ಮಗು, ತಮ್ಮ ಮನೆ ಎಂದು ದಿನವೆಲ್ಲ ಜಂಬವೇ ಆಯಿತು. ಮೇಲೆ ತಾವು ಶ್ರೀಮಂತರೆನಿಸಿಕೊಳ್ಳಬೇಕೆಂಬ ಚಪಲ. ಅವರ ಮನೆಯವರಿಗೇನಾದರೂ ಆಸ್ತಿಪಾಸ್ತಿಗಳಿವೆಯೇ? ಇಲ್ಲವೆ ಬರಿದೆ ಗಗನಕ್ಕೆ ಏಣಿ ಇಡುವವರೇ'—ಎನ್ನುವಳು. ಇನ್ನೂ

ಅವಳ ಪಕ್ಷ ವಹಿಸಿ ಮಾತನಾಡಿದರೆ ಕೋಪವೂ ಬರುತ್ತದೆ. "ನಿಮಗೆ ಕಂಡವರೆಲ್ಲ ದೇವತೆಗಳೇ" ಎಂದುಬಿಡುತ್ತಾಳೆ.

ಇನ್ನೊಂದು ಸಂದರ್ಭದಲ್ಲಿ "ಅದಿರಲಿ, ವಿಮಲಾ, ಆಕೆ ಬಾಣಂತಿಯಾಗಿ ನಮ್ಮ ಲಗ್ನಕ್ಕೆ ಬರಲಿಕ್ಕಾಗಲಿಲ್ಲ. ನೀನು ಈ ಮನೆಗೆ ಬಂದು ಬಹಳ ದಿವಸವಾಯಿತು. ಒಮ್ಮೆ ಅವರನ್ನು ನಮ್ಮ ಮನೆಗೆ ಊಟಕ್ಕೆ ಕರೆಯಬೇಡವೇ?" ಎಂದನು ವೆಂಕಪ್ಪ.

"ಹೋ ಒಳ್ಳೆಯ ಕ್ರಮ ನಿಮ್ಮದು! ನಾವು ಮದುವೆಯಾಗಿ ಬಂದವರು. ಮೊದಲು ಕರೆದು ಊಟಉಪಚಾರ ನಡೆಯಿಸಬೇಕಾದವರು ಅವರಲ್ಲವೇ? ಬರಿಯ ಹೆಸರಿಗಿಷ್ಟು ಕಾಫಿ ನೀರು ಕೊಡಿಸಿ ಸುಧಾರಿಸಿ ಬಿಟ್ಟರಲ್ಲ."

"ವಿಮಲಾ, ಅವಳು ಬಾಣಂತಿತನದಿಂದ ಇನ್ನೂ ಏಳುತ್ತಲಿದ್ದಾಳಷ್ಟೆ. ಅದರಿಂದ ಕರೆಯದಿರಬಹುದು. ನನಗೂ ಅವರಿಗೂ ತುಂಬ ಬಳಕೆ; ಎಷ್ಟೋ ವರ್ಷಗಳ ಪರಿಚಯ. ಅದನ್ನು ಮರೆತು ಮೊದಲು ಯಾರು, ಮೊದಲು ಯಾರು — ಎಂದು ಕಾದು ಕುಳಿತರೆ ಹೇಗೆ?"

"ಅಷ್ಟಿದ್ದೂ ಗಂಡಹೆಂಡಿರಲ್ಲಿ ಒಬ್ಬರಾದರೂ ನಮ್ಮ ಮನೆಗೆ ಔತಣಕ್ಕೆ ಬನ್ನಿ ಅಂದಿಲ್ಲ ಅಲ್ಲವೆ" ಎಂದು ಮಾತನ್ನು ಅವನಿಗೇ ಸಲ್ಲಿಸಿದಳು. ಆದರೆ ಒಂದು ದಿವಸ ವೆಂಕಪ್ಪ ಅವರ ಮನೆಗೆ ಹೋದಾಗ, ಸುಬ್ಬಯ್ಯ "ವೆಂಕಪ್ಪ, ಯಾಕೋ ಸುಮಾರು ದಿವಸಗಳಿಂದ ನಿನ್ನ ಹೆಂಡತಿ ಈ ಕಡೆ ಬಂದಹಾಗಿಲ್ಲ. ನಿಮ್ಮನ್ನು ಇಷ್ಟು ದಿನ ಊಟಕ್ಕೆ ಕರೆಯಲು ಅನುಕೂಲವಾಗಲಿಲ್ಲ. ಈಗ ಅವಳು ಎದ್ದಿದ್ದಾಳೆ. ನೋಡು ಮುಂದಿನ ಆದಿತ್ಯವಾರ ನೀನು ವಿಮಲಾ, ಮಕ್ಕಳು ಎಲ್ಲರೂ ತಪ್ಪದೆ ಬನ್ನಿ. ಮಧ್ಯಾಹ್ನಕ್ಕೇ; ನೆನಪಿರಲಿ" — ಎಂದು ಆಮಂತ್ರಿಸಿದನು. ಈ ಶುಭವಾರ್ತೆಯನ್ನು ಮಡದಿಗೆ ಆತ ಮುಟ್ಟಿಸಿದರೂ, ಅವಳು ಅಷ್ಟು ಉತ್ಸಾಹ ತಾಳಿದಂತೆ ಕಾಣಿಸಲಿಲ್ಲ. ಆದರೂ ಹೋಗದೆ ಕುಳಿತರೆ ಚೆನ್ನಾಗುತ್ತದೆಯೆ? ಇತ್ತ ಆತ ಎದ್ದು ಹೊರಟುಹೋದ ಬಳಿಕ, ಕುಸುಮೆಯ ಹತ್ತಿರ ತಾನಿತ್ತ ಆಮಂತ್ರಣದ ವಿಷಯವಾಗಿ ಹೇಳಿದರೆ, ಅಲ್ಲಿಯೂ ಅಸಮಾಧಾನವೇ! 'ಕರೆಯಬೇಕು, ಕರೆಯದಿದ್ದರೆ ಸಮನಲ್ಲ-ಅದೆಲ್ಲ ನಿಜ. ಆದರೆ ಇಲ್ಲಿ ಅವರಿಗೆ ಬೇಯಿಸಿ, ಬಡಿಸುವವರು ಯಾರಿದ್ದಾರೆ?

ನಾರಾಯಣನಿಂದ ಗಂಜಿ ಬೇಯಿಸಿ ಉಂಡರೆ ಸಾಕಾಗಿದೆ. ಬಂದಿದ್ದರೆ ಒಂದಿಲ್ಲ, ಅಡುಗೆಗೆ. ನೀವು ಅವರ ಮನೆಯ ಪಟಾಲಮನ್ನೇ ಬರಹೇಳಿದ್ದೀರಿ. ಶೀಲಕ್ಕನ ಮಕ್ಕಳು ಬಂದರೆ ನನಗೆ ಎಂದೂ ಸಂತೋಷವೇ. ಆದರೆ ಅವಳು ಇದ್ದಾಳಲ್ಲ—ನಾಳೆ ಬಂದು, ಉಂಡು ಮನೆಗೆ ಹೋಗಿ ತೆಗಳುವವಳು........" ಎಂದಾಯಿತು.

ಆದರೆ ಕೊಟ್ಟ ಆಮಂತ್ರಣವನ್ನು ಹಿಂದೆಗೆಯಲು ಬರುವಂತಿಲ್ಲ. ಕೊನೆಗೆ ಆ ದಿನಕ್ಕಾಗಿ ಒಬ್ಬ ವಿಶೇಷ ಅಡುಗೆಯವನನ್ನು ಅರಸಿ ತರುವುದೆಂದೂ, ಕುಸುಮೆಯು ಆಚೀಚೆ ಓಡಾಡಿ ದಣಿಯಬೇಕಿಲ್ಲವೆಂದೂ ತೀರ್ಮಾನಿಸಿಯಾಯಿತು. ಕುಸುಮೆ ಆಗಲೆಂದು ಒಪ್ಪಿಕೊಂಡಳು.

ಆಕೆಗೆ ಮೂರುತಿಂಗಳು ಕಳೆದಾಯಿತು. ಒಂದೆರಡು ಬಾರಿ ಕ್ಲಬ್ಬಿನ ಕಡೆಗೂ ಹೋಗಿ ಬಂದಿದ್ದಾಳೆ. ಹಾಗೆ ಶರೀರ ಶ್ರಮದಿಂದ ದಣಿಯುವ ಜೀವವೂ ಅವಳದಲ್ಲ. ಆದಿತ್ಯವಾರ ಬರುತ್ತಲೇ ಬೆಳಗಾಗಲು ಮನೆ ಚೊಕ್ಕ ಮಾಡಿಸಿದಳು. ಅತಿಥಿಗಳು ಕುಳಿತಿರುವ ತಾವನ್ನು ಸಮಮಾಡಿಸಿದಳು. ಅಲ್ಲಿ ಹೂದಾನಿಯಿಂದ ಮೇಜನ್ನು ಬೆಳಗಿದಳು. ಮನೆಗೆ ಬಂದ ಹೊಸ ಅಡುಗೆಯವನಿಗೆ—'ಅದು ಮಾಡು, ಇದು ಮಾಡು'— ಎಂದು ತಾಕೀತು ಮಾಡಿದಳು. ಮುಂಚಿನ ದಿವಸ ಅವನನ್ನು ಕರೆಯಿಸಿ, ಏನೇನು ಬೇಕೆಂದು ಕೇಳಿ, ಸಾಮಾನುಗಳನ್ನು ತರಿಸಿಯೂ ಇದ್ದಳು. ಅವಳ ಈ ಉತ್ಸಾಹಗಳಿಂದ ಸುಬ್ಬಯ್ಯನು ಸಂತೋಷ ತಾಳಿದ.

ಕುಸುಮೆ, ಎಲ್ಲ ಕೆಲಸ ಮುಗಿಯುತ್ತಲೇ ಸ್ನಾನಮಾಡಿ, ಎಳೆ ನೀಲ ರೇಷ್ಮೆಯ ಸೀರೆ ಉಟ್ಟಳು. ಥಳಿಸುವ ಅದರ ಮಿನುಗಿಗೆ ಒಪ್ಪುವಂತೆ ರವಕೆ, ಆಭರಣ ತೊಟ್ಟಳು. ತನ್ನ ಕೂಸಿಗೂ ಅದೇ ರೇಷ್ಮೆಯ ಅಂಗಿ ತೊಡಿಸಿ, ಅದೊಂದು ರೆಕ್ಕೆ ಬಡಿಯುವ ಮರಿದುಂಬಿಯಂತೆ ಸಿಂಗರಿಸಿದಳು. ಇನ್ನು ಬಿದ್ದಿನವರನ್ನು ಕ್ಷಣ ಕ್ಷಣ ಕಾಯುವ ಕೆಲಸ. 'ಬೇಗಬನ್ನಿ' ಎಂದು ಸುಬ್ಬಯ್ಯ ಮೊದಲ ದಿನ ಹೇಳಿದ್ದರೂ ಇಬ್ಬರಿಗೂ ಕಾದು ಕಾದು ಸಾಕಾಯಿತು. ಕೊನೆಗೆ, ಹನ್ನೆರಡು ಘಂಟೆ ಹೊಡೆದರೂ ಬಾರದುದನ್ನು ಕಂಡು ನಾರಾಯಣನನ್ನು ಕಳುಹಿಸಿದರು. ಅನಂತರವೇ ವೆಂಕಪ್ಪ ಸಕುಟುಂಬನಾಗಿ, ಎರಡು ಬಂಡಿಗಳಲ್ಲಿ ಅವರ ಮನೆಯ ಮುಂಗಡೆ ಬಂದಿಳಿದನು. ಸುಬ್ಬಯ್ಯ ಅವರನ್ನು ಸ್ವಾಗತಿಸಿದನು. ಕಾಲಿಗೆ

ನೀರಿನ ತಂಬಿಗೆಗಳನ್ನು ಒಪ್ಪಿಸಿದನು. ಆಗಲೇ ವೇಳೆಯಾಗಿದ್ದುದರಿಂದ "ಮೊದಲು ಊಟ, ಆ ಮೇಲೆ ಸಭೆ"ಯೆಂದು ತೀರ್ಮಾನವಾಯಿತು. ನವದಂಪತಿಗಳ ಸಲುವಾಗಿ ರಂಗವಲ್ಲಿ ಬರೆದು ಮಣೆ ಹಾಕಿದ್ದರು. ವೆಂಕಪ್ಪ ಒಂದರಲ್ಲಿ ಕುಳಿತನು. ವಿಮಲೆಯನ್ನು ಬಳಿಗೆ ಕರೆದರೆ, ಎಲ್ಲಿಲ್ಲದ ನಾಚಿಕೆ ಆಗಳಿಗೆಗೆ ಬಂದಿತೇನೋ! ಬರಲಿಲ್ಲ. ಹಿರಿಯ ಹುಡುಗಿ ಜಮುನಾ, ಕಿರಿಯಾಕೆ ಮಾಧವಿಯರನ್ನು ತನ್ನ ಮಗ್ಗುಲಿಗೆ ಕುಳ್ಳಿರಿಸಿಕೊಂಡು ಆಕೆ ಬೇರೆಯೇ ಕುಳಿತಳು.

ಇಬ್ಬಿಬ್ಬರು ಅಡುಗೆಯುವರಿದ್ದುದರಿಂದ ಕುಸುಮೆಯೂ ಎಲ್ಲರ ಜತೆಯಲ್ಲಿಯೇ ಕುಳಿತಳು. ಒಂದರ ಮೇಲೊಂದಾಗಿ ಮೇಲೋಗರ, ಅನ್ನ, ಕರಿದ ವಸ್ತುಗಳು, ಸಿಹಿತಿಂಡಿಗಳು-ಎಲ್ಲವೂ ಬಂದುವು. ಅಪೂರ್ವದ ಸಂಭ್ರಮವೆಂದು ಕಂಡವರೆಲ್ಲರಿಗೂ ತಿಳಿಯುವಂತಿತ್ತು. ಅಡುಗೆಯೂ ರುಚಿಕಟ್ಟಾಗಿತ್ತು. ವೆಂಕಪ್ಪನ ಮಕ್ಕಳು, ತಿಂಗಳುಪವಾಸವಿದ್ದವರಂತೆ ಎಲೆ ಬರಿದುಮಾಡಿದರು. ಬೇಕಷ್ಟು ಬಡಿಸಿಕೊಂಡು ಚೆನ್ನಾಗಿ ಉಂಡರು. ಅಂತು ಊಟದಲ್ಲಿ ಹಿಂದಾದವರು ಕಡಮೆ. ವಿಮಲೆ ಮಾತ್ರ ಎಲ್ಲಕ್ಕೂ ಕಹಿಯೂಡಿದ್ದಂತೆ, ಪ್ರತಿಯೊಂದನ್ನೂ ತುಟಿಗೆ ತಾಗಿಸಿ ಕೆಳಕ್ಕಿರಿಸಿದಳು. ಕುಸುಮೆ "ಏನಾಗಿದೆ, ಚೆನ್ನಾಗಿದೆಯಲ್ಲ. ಸ್ವಲ್ಪ ತಿಂದು ನೋಡಿ"-ಎಂದು ಒತ್ತಾಯಿಸಿದಳು. ಅವಳು ಬಾಯಿರುಚಿ ಕಟ್ಟಿಯೇ ಕುಳಿತಳು. "ಇಲ್ಲ, ಅವಳು ಊಟಕ್ಕೆ ಹಾಗೆಯೇ. ನೋಡಲಿಕ್ಕೆ ದಪ್ಪನಾಗಿದ್ದಾಳೆ ಮಾತ್ರ. ಊಟ ಏನೂ ಇಲ್ಲ" ಎಂದು ಗಂಡ ಪಕ್ಷ ವಹಿಸಿ ಮಾತನಾಡಿದನು. ಮರುಕ್ಷಣ ಅಷ್ಟನ್ನು ಒಪ್ಪದಂಥ ವಿಮಲೆ-"ನೀವು ಬಹಳ ಸಪುರ" ಅಂದಳು. 'ನೋಡಲಿಕ್ಕೆ ದಪ್ಪನಾಗಿದ್ದರೂ' ಎಂಬ ಮಾತೇ ಅವಳಿಗೆ ಹಿಡಿಯಲಿಲ್ಲ. ಅಂತು ಮಧ್ಯಾಹ್ನದ ಊಟ ಮುಗಿದು ಎಲ್ಲರು ಕೈತೊಳೆದರು. ನಿಜಕ್ಕೂ ಆ ದಿನ ವಿಮಲೆಗೆ ಹಸಿವು ಹಿಂಗಿರಲಾರದು.

ಊಟವಾದ ಬಳಿಕ ಎಲ್ಲರೂ ಮಗ್ಗುಲ ಕೋಣೆಗೆ ಬಂದರು. ಅಲ್ಲಿ ಕಂಬಳಿ, ದಿಂಬು, ಹೂದಾನಿ, ಊದುಬತ್ತಿಗಳನ್ನು ಸಜ್ಜಾಗಿಸಿದ್ದರು. ಮೂಲೆಯಲ್ಲಿರಿಸಿದ ಗ್ರಾಮೋಫೋನ್ ರಾಗಗಳನ್ನು ಒದರತೊಡಗಿತು. ಅದಕ್ಕೆ ಪ್ರತಿಕಕ್ಷಿಗಳಂತೆ ರಂಜನ, ಜಮುನೆ, ಮದನ, ಮೋಹನರೆಲ್ಲ

ಮಾತು, ಗೀತ, ಜಗಳತೊಡಗಿದರು. ಕೊನೆಗೆ ತಮ್ಮ ಚಟುವಟಿಕೆಗೆ ಕೋಣೆಯು ಹಿಡಿಸದೆಂದು ಆಚೀಚೆ ಓಡಾಡತೊಡಗಿದರು. ಜಮುನೆ ಮಾತ್ರ, ಸುಬ್ಬಯ್ಯನ ಚಿಕ್ಕ ಮಗುವನ್ನು ಹಿಡಿದು ಎತ್ತಿ, ಮುದ್ದಿಸ ತೊಡಗಿದಳು. ಆಗಾಗ ತನ್ನ ಮಲತಾಯಿಯ ಬಳಿಗೆ ಅದನ್ನೊಯ್ದು 'ನೋಡೇ, ಎಷ್ಟು ಚಂದ ಅದರ ಎಸಳುಮೂಗು"—ಎಂದು ಪ್ರಶಂಸಿದಳು. ಆದರೂ ವಿಮಲೆ ಹತ್ತಕ್ಕೊಂದರಂತೆ ಮಾತಾಡಿದಳು. ಕೊನೆಗೆ ಗಂಡನೊಡನೆ 'ಕಣ್ಣು ಬಾಡುತ್ತದೆ' ಎಂದು ಸಂಜ್ಞೆ ಮಾಡಿದಳು. ಅವನು ಜಟಕಾ ತರಿಸಿ ಹೊರಟೇ ಬಿಟ್ಟನು. 'ಏಕೆ, ನಿದ್ರೆ ಬಂದರೆ ಇಲ್ಲಿ ಮಲಗಲು ಜಾಗವಿಲ್ಲವೇ? ಸಂಜೆಯ ತನಕ ಇದ್ದು, ಅನಂತರ ಒಟ್ಟಾಗಿ ಸಿನೆಮಾ ನೋಡುವ ಎಂದು ನಿಶ್ಚಯಿದ್ದೆವು" ಎಂದು ಹೇಳಿದರೆ, "ನನಗೆ ಈ ಕರಕರೆಯಲ್ಲಿ ನಿದ್ದೆ ಬರಲಾರದು" ಎಂದಳು ವಿಮಲೆ. ಅವಳು ಮಾತನಾಡುವ ಧೋರಣೆಯನ್ನು ಕಂಡರೆ "ಮೋಹನ, ರಂಜನ, ಮಾಧವಿಯರು ತಮ್ಮ ಮನೆಯವರಲ್ಲವೆಂದೇ" ತಿಳಿಯಬೇಕು.

ಅವರು ಹೋದುದು ಜಮುನೆಗೆ ಮತ್ತಷ್ಟು ಸುಖವಾಯಿತು. ನಿರಂಜನ ಹೊರಕ್ಕೆ ಬಂದು, ಇಸಿಚೆಯರಿನಲ್ಲಿ ಕುಳಿತು ವಿರಾಮವಾಗಿ ಸುಬ್ಬಯ್ಯನೊಡನೆ ಮಾತನಾಡತೊಡಗಿದನು. ಜಮುನೆ "ಸಣ್ಣಮ್ಮ, ನನಗೆ ಕೊಡು ಈ ಮಗುವನ್ನು.... ಎಷ್ಟು ರೂಪಾಯಿ ಬೇಕೋ ಅಷ್ಟು ರೂಪಾಯಿ ಕೊಡುತ್ತೇನೆ" ಎಂದು ಹಾಸ್ಯ ಮಾಡಿದಳು. ಮಾಧವಿಯು ಸಿನೆಮಾ ಧಾಟಿ ಹಿಡಿದು, 'ಸಂಜೆ ಇಲ್ಲಿಂದಲೇ ಸಿನೆಮಾಕ್ಕೆ ಹೋಗುವುದಲ್ಲವೇ, ಎಂದು ಖಾತ್ರಿಪಡಿಸಿಕೊಂಡಳು.

ಸಂಜೆಯ ನಾಲ್ಕು ಘಂಟೆ ಬಡಿಯಿತು. ಉಪಹಾರಕ್ಕೆ ಏರ್ಪಾಟಾಯಿತು. ಅನಂತರ ನಿರಂಜನನು ತಮ್ಮ ತಂಗಿಯರನ್ನು ಕರೆದುಕೊಂಡು 'ಮನೆಗೆ ಹೋಗುವ' ಎಂದನು. ಸುಬ್ಬಯ್ಯ, "ಸಿನೆಮಾಕ್ಕೆ ಹೋಗುವ. ನಿಮ್ಮ ಅಪ್ಪನಿಗೆ ನಾನು ಹೇಳುತ್ತೇನೆ" ಎಂದ. ಯಾರೂ ಕೇಳಲಿಲ್ಲ. ಈಗ ಅವರ ಮನೆಯಲ್ಲಿ ಹೊಸ ತಾಯಿಯ ಹುಕುಮು ಇಲ್ಲದೆ ಮಕ್ಕಳು ಸಿಕ್ಕಿದಲ್ಲಿಗೆ ಹೋಗಕೂಡದೆಂದು ನಿರ್ಣಯವಾಗಿತ್ತು. ಆದರೆ ಮಾಧವಿ ಮಾತ್ರ ಸುಬ್ಬಯ್ಯನಿಗೆ ತೆಕ್ಕೆಬಿದ್ದು, ಕುಳಿತೇಬಿಟ್ಟಳು. ಅವಳನ್ನು ತಾವು ಮರಳುವಾಗ ತಂದು ಮನೆಗೆ ಬಿಡುತ್ತೇವೆಂದು ಹೇಳಿ

ಆತ ಅಲ್ಲಿಯೇ ನಿಲ್ಲಿಸಿಕೊಂಡನು.

ಸಂಜೆ ಮೂವರೂ ಸಿನೆಮಾ ಶಾಲೆಯನ್ನು ಸೇರಿದರು. ಎಳಗೂಸು ಮನೆಯಲ್ಲಿ, ದಾದಿಯ ವಶದಲ್ಲಿತ್ತು. ಕುಸುಮೆಯ ಮಗ್ಗುಲಿಗೆ ಮಾಧವಿ ಕುಳಿತಿದ್ದಳು. ಚಿತ್ರ ನೋಡುವಾಗಲೆಲ್ಲ ಆಕೆ, ಮಾಧವಿಗೆ ಪೂರ್ಣ ಕೇಳಿಸದಂತೆ ಗಂಡನೊಡನೆ ಮಾತನಾಡುತಿದ್ದಳು. "ಬರಿಯ ದೊಡ್ಡಸ್ತಿಕೆಯ ಜಂಬ, ಆ ಹೆಂಗುಸಿಗೆ" ಎಂದು ಪೀಠಿಕೆ ಹಾಕಿದಳು. ನಡುವೆ ವಿರಾಮ ಬಂದಾಗ ಹಿಂದಿರುಗಿ ನೋಡಿದರೆ, ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬಂದ ವಿಮಲೆಯೂ ಅವಳ ಗಂಡನೂ ಕಾಣಿಸಬೇಕೆ! "ನೋಡಿದಿರಾ-ಮಕ್ಕಳನ್ನು ಅವರು ಕರೆದು ತರಲೇ ಇಲ್ಲ" ಎಂದು ಕುಸುಮೆಯ ಬೇರೊಂದು ಟೀಕೆಗೆ ಎಡೆಯಾಯಿತು. ತಡೆಯಲಾರದ ಬಾಯಿತೀಟೆಯಿಂದ, ಮೆಲ್ಲನ ಧನಿಯಿಂದ, ಆಕೆ ತನ್ನ ಗೆಳತಿಯನ್ನು ಒಂದೇ ಸವನೆ ಹಳಿಯುತ್ತಿದ್ದಳು. ಮುಖ್ಯವಾಗಿ—ಆಕೆ ತಾವು ಅಷ್ಟೆಲ್ಲ ಸಂಭ್ರಮ ಇವರಿಗಾಗಿಯೇ ಮಾಡಿಸಿದ್ದರೂ, ಗಮನಿಸದೆ, ಒಂದೇ ಒಂದು ಚೆಲುನುಡಿ ನುಡಿಯದೆ, ಮನೆಗೆಹೋದುದರ ಕೋಪ ಕುಸುಮೆಗೆ ಮರೆಯುವಂತಿರಲಿಲ್ಲ. ಅವಳ ರೀತಿಯನ್ನು ಕಂಡು ಸುಬ್ಬಯ್ಯನು ಸಹ "ಹೂಂ-ಸ್ವಲ್ಪ ಅಹಂಕಾರ ಇದ್ದರೂ ಇರಬಹುದು" ಎಂದು ಅನುಮಾನ ಪಕ್ಷವಾಗಿಯಾದರೂ ನುಡಿಯುವಂತಾಯಿತು. ಆದರೆ ಅವನ ಅಂತರಂಗದಲ್ಲಿ ಈ ಅನುಮಾನವಿದ್ದಿರಲಿಲ್ಲ. ಅವನು ಊಟವಾದ ಬಳಿಕ ನಿರಂಜನನೊಡನೆ ಸಂಭಾಷಿಸುತ್ತಿರಲಿಲ್ಲವೇ? ಆಗ ಅವನ ಬಾಯಿಂದ "ಮಲತಾಯಿ"ಯ ವಿಚಾರ ಸ್ವಲ್ಪವಾದರೂ ಸಂಗತಿ ತಿಳಿಯಿತು. ಆದರೆ ಯಾರ ವಿಷಯದಲ್ಲೂ ಅವನು ಮುಂದುವರಿದು ಮಾತಾಡುನವನೇ ಅಲ್ಲ. ತಿಳಿದರೂ ತಿಳಿಯದವನಂತೆ ನಟಿಸುವವ. ಇತ್ತ ಕುಸುಮೆಯು ಸುದ್ದಿಗಾರ್ತಿ, ಆಗಾಗ ತಿಂಡಿಯ ಆಸೆಗಾಗಿ ಬರುವ ಮಾಧವಿ; ಆಕೆಗೆ ಹೆಚ್ಚು ಹೇಳಲು ಬಾರದಾದರೂ 'ಅಮ್ಮ, ಚಿವುಟುತ್ತಾಳೆ, ಗದರಿಸುತ್ತಾಳೆ, ತಿಂಡಿಕೊಡುವುದಿಲ್ಲ, ಕೆಟ್ಟವಳು' ಎಂದಿಷ್ಟನ್ನಾದರೂ ತಿಳಿಸಬಲ್ಲಳು. ಅವನ್ನೆಲ್ಲ ಸೇರಿಸಿ, ಕತೆಯು ಪೂರ್ಣವಾಗಿ ಮಾಡಿಕೊಳ್ಳುವ ಯೋಗ್ಯತೆ ಕುಸುಮೆಗುಂಟು.

ಆ ದಿನ ಸಿನೆಮಾ ಮುಗಿಯುತ್ತಲೇ, ಮಾಧವಿಯನ್ನು ಕರೆದು

ಕೊಂಡು ಇವರು ಹೊರಕ್ಕೆ ಬರುವಾಗಲೇ ವೆಂಕಪ್ಪ, ವಿಮಲೆಯುರು ಹೊರಟು ಹೋಗಿಯಾಗಿತ್ತು. "ಅರೇ, ಮಾಧವಿಯನ್ನು ಬಿಟ್ಟು ಹೋದರಲ್ಲ" ಎಂದುಕೊಂಡ ಸುಬ್ಬಯ್ಯ. 'ಕಂಡೂ ಬಿಟ್ಟು ಹೋಗುವವರಿದ್ದಾರೆಯೇ' ಎಂದಳು ಈಕೆ. 'ಕಂಡಿರಲಾರರು' ಎಂದ ಸುಬ್ಬಯ್ಯ. 'ಕಂಡರೂ ತೋರಿಸಿಕೊಳ್ಳುವವಳಲ್ಲವಪ್ಪ' ಎಂದಳು ಕುಸುಮೆ. ಕೊನೆಗೆ ಸುಬ್ಬಯ್ಯ ಗಾಡಿ ಮಾಡಿಕೊಂಡು, ಮಾಧವಿಯನ್ನು ಕುಳ್ಳಿರಿಸಿಕೊಂಡು ಅವರ ಮನೆಗೆ ಮುಟ್ಟಿಸಿ, ತನ್ನ ಮನೆಗೆ ಮರಳಿದನು. 'ಅರೇ, ನೀವೂ ಸಿನೆಮಾದಲ್ಲಿದ್ದಿರೆ! ನೋಡಲೇ ಇಲ್ಲವಲ್ಲ' ಎಂದು ನಟಿಸಿದಳು ಬಣ್ಣಗಾತಿ ವಿಮಲೆ.

ಇಂಥ ಹೊಸ ಹೆಂಡತಿಯನ್ನು ಗಳಿಸಿದ ವೆಂಕಪ್ಪನಿಗೆ, ಮೋಹಮಯವಾಗಿ ಕಾಲಸಂದರೂ, ಯೋಚನೆಗಳ ಗೊಂದಲದಿಂದ ತಪ್ಪಿಸಿಕೊಂಡಿರಲು ಬರಲಿಲ್ಲ. ಒತ್ತಟ್ಟು ಆಕೆ ತನ್ನ ಮಕ್ಕಳ ವಿಷಯವಾಗಿ ಆಗಾಗ ತರುತ್ತಿದ್ದ ದೂರುಗಳು! ಅವುಗಳಾದರೋ ಬಾಯಿಬಾರದಂತೆ ಇದ್ದುವು. ತೀರ ಕಿರಿಯ ರಂಜನ ಮಾಧವಿಯರು ಮಾತ್ರ ತಂದೆಯ ಬಳಿಯಲ್ಲಿ ದೂರಿಡುವುವು. ಆ ದೂರಿಗೆ ಸಮಾಧಾನ-ಜಬರಿಕೆ. ಇನ್ನು, ವಿಮಲೆಯ ಕಡೆಯಿಂದ ಹೊಸಮನೆ ಕೊಳ್ಳಬೇಕೆಂಬ ಹಟ ಅತ್ಯಧಿಕವಾಗಿತ್ತು. "ಸಾಮಾನ್ಯ ಮನೆ ಸಾಲದು; ಮಹಡಿಯಿರುವ ಭಾರಿ ಮನೆ ಬೇಕು" ಎನ್ನುತ್ತಿದ್ದಳು. ಹಾಗೂ ಹೀಗೂ ವೆಂಕಪ್ಪ ಪೆಂಟ್‌ಲೆಂಡ್ ಪೇಟೆಯಲ್ಲಿನ ಒಂದು ಮನೆಯನ್ನು ಗೊತ್ತುಪಡಿಸಿದ. ಅದರ ಬೆಲೆಯೇ ೯೦೦೦. ಅದನ್ನು ದೊರಕಿಸುವ ವಿಚಾರ ವೆಂಕಪ್ಪಗೆ ಚಿಂತೆಯಾಯಿತು. ಆದರೆ ಕುಸುಮೆಯ ಮನೆಗಿಂತ ದೊಡ್ಡ ಮನೆಯೆಂದು ವಿಮಲೆ ಹರ್ಷಿತಳಾದಳು. ಈ ಮನೆಯನ್ನು ಕೊಳ್ಳುವವರೆಂದು ಕುಸುಮೆ ಕೇಳಿದ್ದೇ ತಡ: ತಾನಾಗಿ ಗಂಡನೊಡನೆ—"ನೀವು ವೆಂಕಪ್ಪಣ್ಣನ ಸಾಲ ಕೇಳುವ ಯೋಚನೆಯಲ್ಲಿಲ್ಲ ಅಲ್ಲವೇ" ಎಂದು ಲೆಕ್ಕ ಮುಂದಕ್ಕಿರಿಸಿದಳು. "ನಾವು ಕಷ್ಟದಲ್ಲಿರುವಾಗ, ಅವರ ನಾಜೂಕು ನೋಡಿದರೆ ಫಲವಿದೆಯೇ?" ಎಂದಳು. ಸುಬ್ಬಯ್ಯನಿಗೆ ಹೆಂಡತಿಯಲ್ಲಾದ ಪರಿವರ್ತನೆ ತಿಳಿಯದೆ-ಹೋಗಲಿಲ್ಲ. ಅವನಿಗೂ ತುಂಬ ತಗಾದೆಯಲ್ಲವೇ? ಒಂದು ದಿವಸ ವೆಂಕಪ್ಪನೊಡನೆ ಲೆಕ್ಕದ ವಿವರ ತಿಳಿಸಿ 'ಹೇಗಾದರೂ ತೀರಿಸು'

ಎಂದು ಬರೆದು ಕಳುಹಿಸಿದನು. ಆ ಚೀಟಿಯು ವೆಂಕಪ್ಪನ ಕೈಯಿಂದ ವಿಮಲೆಯ ಕೈಸೇರಿತು. "ನಿಮಗೆ ಇಷ್ಟೂ ಬುದ್ಧಿಯಿಲ್ಲವೇ? ಅಂಥವು ಗಳ ಕೈಯಲ್ಲೂ ಸಾಲಮಾಡಿದ್ದೀರಾ" ಎಂದಳು.

ಆ ಅವಮಾನ ಬೇರೆ; ೨೦೦ಕ್ಕೂ ಮಿಕ್ಕಿದ ಸಾಲ ಎಂದು ಆಶ್ಚರ್ಯಬೇರೆ. ತಂದುದನ್ನು ತಂದಾಗ ಮರೆತರೆ ಸಾಲಸಣ್ಣದಾಗಿರುತ್ತದೆ! ಅದನ್ನು ನೆನಪು ಮಾಡಿ ತೋರಿಸುವಾಗ ತುಂಬ ದೊಡ್ಡದಾಗಿ ಕಂಡು ತಾಳ್ಮೆಕೆಡದಿರುತ್ತದೆಯೇ! "ಚಿಲ್ಲರೆ ಚಿಲ್ಲರೆ ಕೊಂಡದ್ದು....ಇಷ್ಟು ಆಗುತ್ತದೆಯೇ ಒಟ್ಟು!" ಎಂದು ಆತ ವಿಸ್ಮಯ ಸೂಚಿಸಿದರೆ, ವಿಮಲೆ "ಎಷ್ಟು ಸುಮ್ಮನೆ ಸೇರಿಸಿದ್ದುಂಟೋ? ಕೇಕದ ಅಂಗಡಿಯವರ ಲೆಕ್ಕದಂತೆ" ಎಂದಳು.

"ಹಾಗೆ ಸುಬ್ಬಯ್ಯ ಸುಳ್ಳು ಬರೆಯಲಾರ. ಅವನು ಮರೆತ ಲೆಕ್ಕವೇ ಇರಬಹುದು ಹೊರತು........ಇದೆಲ್ಲವೂ ಸರಿಯಾದದ್ದೇ ಇರಬೇಕು."

"ಹೂಂ-ನೀವೊಬ್ಬರು ಧರ್ಮರಾಯರು" ಎಂದಳು ಆಕೆ! "ಏನು ಮಾಡುತ್ತೀರಿ ಹೇಳಿ?"

"ಮೊದಲಿಗೆ ಅವನ ಸಾಲ ತೀರಿಸಿ ಮುಗಿಸಿಬಿಡಬೇಕು. ಅವನಿಗೆ ತೊಂದರೆ ಇರುವುದಂತು ಸುಳ್ಳಲ್ಲ.'

"ಹಾಗಾದರೆ ನಮ್ಮ ಹೊಸ ಮನೆಯು ಯಾವ ಸಂವತ್ಸರಕ್ಕೋ" ಅನ್ನುತ್ತಲೇ ಆತ ಪೇಚಿಗೆ ಗುರಿಯಾಗದೆ ಮಾರ್ಗವಿರಲಿಲ್ಲ.

ಕೆಲವು ದಿವಸಕಾಲ ಸುಬ್ಬಯ್ಯನ ಚೀಟಿಗೆ ಉತ್ತರ ಬಾರದೆ ಹೋಯಿತು. ಆದರೆ ಇನ್ನೊಂದು ದಿವಸ ಕುಸುಮೆ ಸ್ವಂತ ಬರಹದಲ್ಲಿ ತಿಳಿಸಿದಳು. "ಅವರಿಗೆ ದಾಕ್ಷಿಣ್ಯ, ಆದರೆ ಸಾಲಗಾರರ ಮುಂದೆ ದಾಕ್ಷಿಣ್ಯ ಪ್ರಯೋಜನವೇ" ಎಂದು ಬರೆದಿದ್ದಳು. "ಥೂತ್, ಅವರ ಹಣ ಅವರ ಮುಸುಡಿನ ಮೇಲೆ ಒಗೆದುಬಿಡಿ—ಒಂದು ಋಣ ಕಡಿಯಿತಲ್ಲ" ಎಂದು ವಿಮಲೆ ಉದ್ವಿಗ್ನಳಾಗಿ ನುಡಿದಳು. ವರದಕ್ಷಿಣೆಯಿಂದ ಬಂದ ಹಣವು ಆ ಸಾಲವನ್ನು ತುಂಬಿಸಲು ಹೋಗಬೇಕಾಯಿತು. ಅದು ನಷ್ಟವಾದಂತೆ, ಹೊಸಮನೆಯ ಕನಸು ವಿಮಲೆಗೆ ಅತೀವ ಹೆಚ್ಚತೊಡಗಿತು. ಅಂತು ಸಾಲ ಸಂದಾಯವಾಗುವಾಗ, ವೆಂಕಪ್ಪ ಸುಬ್ಬಯ್ಯರೊಳಗಣ ಹಿತವಾರಿಯೂ ವಿಶೇಷವಾಗಿ ಉಳಿಯಲಿಲ್ಲ.

ಪತ್ನಿಯ ಬಲವಂತಕ್ಕೆ ಆತ, ಕಕ್ಷಿಗಾರರ ಹಣದಿಂದ ಮನೆಕೊಳ್ಳುವ ಕೆಲಸವನ್ನು ಮಾಡಿದನು. ಎಲ್ಲ ತತ್ಕಾಲಿಕ ಏರ್ಪಾಟುಗಳು; ನಾಳಿನದು ನಾಳೆಯೇ! ಅಂತು ವಿಮಲೆಯನ್ನು ಪ್ರಸನ್ನಳಾಗಿ ಮಾಡಿಕೊಳ್ಳದೆ ಅವನಿಗೆ ಗತ್ಯಂತರವಿರಲಿಲ್ಲ.

'ಇನ್ನು ಅವರು ಹೊಸ ಮನೆಯನ್ನು ಕೊಳ್ಳಲಾರರು' ಎಂದು ಕುಸುಮೆ ತಿಳಿದುಕೊಂಡಿರುವಾಗಲೇ, ಒಂದು ದಿನ ಮಾಧವಿಯು ಮನೆಯಿಂದ ಓಡಿಬಂದಳು. 'ಸಣ್ಣಮ್ಮ ಇನ್ನು ನಾವು ಈ ಮನೆಬಿಡುವುದಂತೆ. ಅಪ್ಪ ಹೊಸ ಮನೆ ತೆಗೆದುಕೊಂಡಿದ್ದಾರೆ ಪೆಂಟಲೆಂಡಿನಲ್ಲಿ-ಎಂದು ಒಸಗೆ ಬೀರಿದಳು. ಅದು ನಿಶ್ಚಯವೆಂಬುದೂ ಅವರಿಗೆ ತಿಳಿಯಿತು. ಆ ವಾರ್ತೆ ದೊರೆತ ಒಂದು ವಾರದೊಳಗೆ ಅವರು ಮನೆಯನ್ನು ಬದಲಿಸಿಯೂ ಆಗಿತ್ತು.

೧೧ನೆಯ ಅಧ್ಯಾಯ

ಕುಸುಮೆಯ ಕುಮಾರ ಸುಬ್ರಮಣ್ಯಗೆ ವರ್ಷವು ತುಂಬಿತು. ಆ ಹೆಸರನ್ನು ಇರಿಸಲು ಮಗನ ಅಜ್ಜಿಯೇ ಕಾರಣ. ಅವಳ ಹರಕೆಯಿಂದಲೇ ಅವನು ಹುಟ್ಟಿದುದಂತೆ. ಸುಬ್ರಮಣ್ಯ ದೇವರ ಕೃಪೆಯ ನೆನಪಿಗಾಗಿ ಇರಿಸಿದುದು ಆ ಹೆಸರನ್ನು. ಆದರೆ ಮೊಮ್ಮಗನನ್ನು ಇನ್ನೂ ಅಜ್ಜಿ ಕಂಡಿರಲಿಲ್ಲ. ಇದರಿಂದ ಸುಬ್ಬಯ್ಯ ಸತಿ ಸುತ ಸಮೇತನಾಗಿ, ಅತ್ತೆ ಮಾವಂದಿರನ್ನು ಕಾಣಲು ಹೋಗಿದ್ದ. ಬೇಸಗೆಯ ರಜೆಯಲ್ಲಿ ಹದಿನೈದು ದಿವಸಗಳನ್ನು ಆ ಕಾರ್ಯಕ್ಕೆ ಮೀಸಲಾಗಿರಿಸಿದ್ದ. ಆದರೆ ಅದು ಮಾತ್ರ ತಿಂಗಳಿಗೇರಿತು. ಕೂಜಪ್ಪನಿಗೆ ವಯಸ್ಸಿನಿಂದ ದೃಷ್ಟಿದೋಷ ಬಂದಿತ್ತು. ನಾಲ್ಕು ಹೆಜ್ಜೆ ತಾನಾಗಿ ಕಾಲು ಹಾಕಲಾರ. ಸಾಲದುದಕ್ಕೆ ಶರೀರ ದೌರ್ಬಲ್ಯವಿತ್ತು. ಅದರಿಂದಲೇ ಆತ, ಈಚೆಗೆ ಅಳಿಯನ ಮನೆಗೆ ಹೋದುದೂ ಇಲ್ಲ, ತನ್ನ ಮಡದಿಯನ್ನು ಅಲ್ಲಿಗೆ ಕಳುಹಿಸಿದುದೂ ಇಲ್ಲ. ಅಳಿಯನು ಮನೆಗೆ ಬಂದಾಗ, ಅವನಿಗೆ ತುಂಬ ನೆಗಡಿ

ಯಿತ್ತು. ಇವರು ಬಂದ ಸಮಯಕ್ಕೆ ಸಮನಾಗಿಯೇ ಆತ ಹಾಸಿಗೆ ಹಿಡಿ ದನು. ಬೇನೆ, ನಿಮೋನಿಯಾ ರೂಪವನ್ನು ತಾಳಿತು. ಶೀತ ಜ್ವರವೆಂದು ಊರಿನ ಮದ್ದುಗಳನ್ನು ಮಾಡಿದರೂ ಗುಣವಾಗದೆ, ಸುಬ್ಬಯ್ಯ ಪುತ್ತೂರಿನಿಂದ ಇಂಗ್ಲಿಷ್ ವೈದ್ಯರನ್ನು ಕರೆಯಿಸುವಂತಾಯಿತು. ಮದ್ದು, ಉಪಹಾರ, ಪಥ್ಯಗಳಿಗೆ ಏನೊಂದು ತೊಡಕಾಗಲಿಲ್ಲವಾದರೂ --ವಿಧಿಯ ಕಟ್ಟು ಎಲ್ಲವನ್ನೂ ಮೀರಿಸಿತು. ಆತಗೂ ಯಮನ ಕರೆಯು ಸಮೀಪ ಬಂದಂತೆ ಕಾಣಿಸಿರಬೇಕು--ಕಾರಣ, ಸಾಯುವ ನಾಲ್ಕು ದಿನಗಳ ಮುಂಚೆ, ಸುಬ್ಬಯ್ಯನನ್ನು ಬಳಿಯಲ್ಲಿ ಕುಳ್ಳಿರಿಸಿ ತನ್ನ ಮನೆಯ ಸಾಲಜೇಡುಗಳನ್ನೆಲ್ಲ ತಿಳಿಸಿದನು. ಅಂಥ ಆವಶ್ಯವೇನಿರಲಾದೆಂದು ಸುಬ್ಬಯ್ಯ ತಿಳಿದಿದ್ದರೂ ಕೂಜಪ್ಪ ತನ್ನ ಕರ್ತವ್ಯವನ್ನು ನೆರವೇರಿಸಿಯೇ ಬಿಟ್ಟ. ಆಗಲೇ ಮೊಮ್ಮಗನನ್ನು ಮೈಸವರಿ, ಆಶೀರ್ವದಿಸಿ 'ಎಲ್ಲರನ್ನೂ ನಿನ್ನ ರಕ್ಷಣೆಗೆ ಬಿಟ್ಟುಹೋಗುತ್ತೇನೆ' ಎಂದು ತಿಳಿಸಿದನು. ಈ ಸಾಲ ಜೇಡುಗಳಲ್ಲಿ ಕುಸುಮೆ ತವರಿಗೆ ಕಳುಹಿಸಿದ ಸಾವಿರ ರೂಪಾಯಿಗಳೂ ಸೇರಿದ್ದುವು. ಅವನ್ನು ಕುಸುಮೆಯ ಹೆಸರಲ್ಲೇ ಯಾರಿಗೋ ಸಾಲ ವಾಗಿ ಕೊಟ್ಟಿದ್ದನು.

ಅಂತು ಕೂಜಪ್ಪ ವಿಧಿವಶನಾದುದರಿಂದ, ಸುಬ್ಬಯ್ಯನ ಹೊರೆ ಇಮ್ಮಡಿಸಿತು. ಅತ್ತೆಗೆ, ಹೆಂಡತಿಗೆ ಸಮಾಧಾನ ಹೇಳುವುದು, ಉತ್ತರ ಕ್ರಿಯೆಯನ್ನು ಮಾಡಿಸುವುದು, ಅಲ್ಲಿನ ವ್ಯವಹಾರಕ್ಕೊಂದು ರೂಪ ಕೊಟ್ಟು, ಭೂಮಿಯನ್ನು ಗೇಣಿಗೆ ಕೊಡಿಸಿ, ಎಲ್ಲರನ್ನೂ ಮಂಗಳೂರಿಗೆ ಸಾಗಿಸುವುದು—ಇವೇ ಹಲವಾರು ತೊಂದರೆಗಳಲ್ಲಿ ಅವನ ರಜೆಯ ಸಮಯವು ನೀರಿನಂತೆ ಇಂಗಿಬಿಟ್ಟಿತು.

ನಾಗಕ್ಕ ಮೊಮ್ಮಗನ ಮುಖ ಕಂಡಾದ ಸುಖ, ಪತಿವಿಯೋಗ ದಿಂದ ಮರೆಯುವಂತಾಯಿತು. ಬಹುಕಾಲ ದಾಂಪತ್ಯ ಜೀವನವು ಕಡಿದುದೂ, ಎಳೆತನದಿಂದ ನಲಿದಾಡಿದ ಹೊಲಮನೆಗಳನ್ನು ಬಿಟ್ಟು-ಮಂಗಳೂರಿಗೆ ಹೋಗಬೇಕಾಗಿ ಬಂದುದೂ, ತನ್ನ ಅಂತಿಮಕಾಲದ ದುರ್ದೈವವಲ್ಲದೆ ಬೇರೆಯಲ್ಲವೆಂದು ಅವಳಿಗೆ ತೋರಿತು. ಉಪಾಯ ವಿಲ್ಲದೆ ಆಕೆ ಅಳಿಯನ ಜತೆಗೆ ಮಂಗಳೂರನ್ನು ಸೇರಿದಳು. ಮಗಳ ಸುಖವನ್ನಾದರೂ ಕಾಣಲುಳಿದಿದೆಯಲ್ಲ ಎಂಬೊಂದೇ ಸುಖ ಅವಳಿಗೆ

ಉಳಿಯಿತು. ಏನೋ, ನೂರಕ್ಕೊಂದು ಮಾತನಾಡುವಳು. ತೀರ ಬೇಸರವಾದರೆ ಮೊಮ್ಮಗನೊಡನೆ ಏನೇನೋ ಗೊಣಗುವುದು ಅವಳ ನಿತ್ಯದ ಕೆಲಸವಾಯಿತು. ಬಾಯಿಯಿಲ್ಲದ ಅವಳ ಕೊರಗು, ಜೀವದ ಎಲುಬು ಮಾಂಸಗಳನ್ನು ತಿನ್ನುತ್ತಿದ್ದಿರಬೇಕು. ಅಲ್ಲವಾದರೆ ನಾಗಮ್ಮ 'ಇನ್ನು ಹತ್ತುಇಪ್ಪತ್ತು ವರ್ಷ ಬದುಕಲು ಮುಲಾಜಿಲ್ಲ'-ಎಂದಿದ್ದವಳು, ಆರು ತಿಂಗಳ ಕೊರಗಿನಲ್ಲಿ ಹಾಸಿಗೆಯನ್ನು ಹಿಡಿಯಬೇಕೇ? 'ನನಗೇನು ಆಗಬೇಕು, ನನಗೇನು ಆಸೆ-ಅವರ ದಾರಿಯನ್ನು ನಾನೂ ಹಿಡಿಯುತ್ತೇನೆ' ಎಂದು ಆ ದಾರಿಯನ್ನು ಒಂದು ದಿನ ಹಿಡಿದೇ ಬಿಟ್ಟಳು. ಸುಬ್ಬಯ್ಯ ತುಂಬ ನೊಂದುಕೊಂಡ. ಆಕೆಯ ಸಾವು, ಅವಳ ಅಗಾಧ ಪತಿಪ್ರೇಮವನ್ನು ಅವನ ನೆನಪಿಗೆ ತರುತ್ತಿತ್ತು. ಅವಳದೇ ಹೊಟ್ಟೆಕೂಸಾದ ಕುಸುಮೆಯ ಸಿಡುಕು ನುಡಿ, ನಡತೆಗಳನ್ನು ಆತನು ನೆನೆದುಕೊಂಡು 'ಬದುಕು ಎಷ್ಟು ವಿಚಿತ್ರ' ಎಂದು ತಿಳಿಯಬೇಕಾಯಿತು.

ಸುಬ್ಬಯ್ಯಗೆ ಮಗನು ಉದಯವಾದ ಬಳಿಕ ಸಂದ ಮೂರು ವರ್ಷಕಾಲ, ಬಂಧುಗಳ ವಿಯೋಗದಿಂದ ತುಂಬ ವ್ಯಥೆಯನ್ನು ಹುಟ್ಟಿಸಿತಾದರೂ ದ್ರವ್ಯಲಾಭಗಳಿಂದ ಹಿತಕರವಾಗಿಯೇ ಇತ್ತು. ಮಗುವಿನ ಜನನಕ್ಕೆ ಸಮನಾಗಿ ದೊರೆತ ಮನೆ, ವೆಂಕಪ್ಪನ ಸಾಲದ ಮರುಪಾವತಿ, ಇತ್ತ ಮಾವನ ಮನೆಯಿಂದ ಉಂಟಾದ ಲಾಭ—ಇವೆಲ್ಲವುಗಳಿಂದ ಅವನು ಪುಣ್ಯಶಾಲಿಯೇ ಅನ್ನಬೇಕು. ಅವನ್ನೆಲ್ಲ ಮಿಗಿಸುವ ವ್ಯವಸಾಯ ಲಾಭ ಅವನಿಗೆ ಬರತೊಡಗಿತು. ಹೀಗಾಗಿ ಮನೆಯ ಸಾಲ, ಬ್ಯಾಂಕಿನ ದಂಡಗಳೆಲ್ಲವನ್ನೂ ಸಕಾಲದಲ್ಲಿ ತೆತ್ತು, ಮನಸ್ಸನ್ನು ಹಗುರ ಮಾಡಿಕೊಳ್ಳಲು ಕಷ್ಟವಾಗಲಿಲ್ಲ.

ಕುಸುಮೆಗೆ, ತನ್ನ ಬೆಳೆಯುತ್ತಿರುವ ಶ್ರೀಮಂತಿಕೆಯ ಗಮನ ಚೆನ್ನಾಗಿತ್ತು. 'ಅನುಭವಿಸಲು ಇಲ್ಲದ ಸಂಪತ್ತು ಯಾವ ದೇವರಿಗೆ ಪ್ರೀತಿ' ಎಂಬುದೇ ಅವಳ ತರ್ಕಮಾರ್ಗ. ಇದರಿಂದ ನಿತ್ಯ ಮನೆಗೆ ತರುವ ವಸ್ತು ಒಡವೆಗಳ ಸಂಖ್ಯೆ ಹೆಚ್ಚಿತು. ತನ್ನ ಮಗುವಿಗೆ, ತನಗೆ ಎಂದು ಏನು ಕೊಂಡರೂ ಅವಳಿಗೆ ತೃಪ್ತಿಯೇ ಬರುತ್ತಿರಲಿಲ್ಲ. ಇಂಥ ವಿಷಯಗಳಲ್ಲಿ ಸುಬ್ಬಯ್ಯ ಮಾತನಾಡುತ್ತಿರಲಿಲ್ಲ. ಥಟ್ಟನೆ 'ನಿಮ್ಮ ಹಣದಿಂದ ತರಲಿಲ್ಲ, ನನ್ನಪ್ಪನ ಹಣ'ವೆಂದರೆ ಗತಿಯೇನು? ಆದರೆ ಈಗೀಗ

ಆತ ತನ್ನ ಉಳಿತಾಯವನ್ನೆಲ್ಲ ಮೊದಲಿನಂತೆ ವ್ಯಯಿಸುವುದು ವಾಡಿಕೆಯಾದರೂ, ಉಳಿದುದನ್ನು ಬ್ಯಾಂಕಿನಲ್ಲೋ, ವಿಮೆಯಲ್ಲೊ,ಇನ್ನಾವ ರೀತಿಯಲ್ಲೊ ಕಾಯುತ್ತಿದ್ದನು. ಅವನ ರೀತಿ ನೀತಿಗಳಲ್ಲಿ ಉಬ್ಬು ಡೌಲುಗಳು ಏನೂ ಇರಲಿಲ್ಲ. ಉದ್ಯೋಗ ತೊಡಗುವಾಗ ಯಾವ ರೀತಿಯ ಉಡುಗೆ ತೊಡಿಗೆಗಳೋ ಈಗಲೂ ಅವೇ. ಆಗ ಯಾವ ಆಸೆ ಅಭಿರುಚಿಗಳಿದ್ದುವೋ, ಈಗಲೂ ಅವೇನೆ!

ಅವಕ್ಕೆಪ್ರತಿಮೂರ್ತಿಯೆಂಬವಳೇ ಕುಸುಮೆ.ಅವಳಿಗೆ ಮೊದಲು ತನ್ನ ಮಗುವಿನ ಹಳ್ಳಿಯ ಹೆಸರಿನಲ್ಲಿಯೇ ಅಗೌರವ. ತಾಯಿಯ ದಾಕ್ಷಿಣ್ಯಕ್ಕಾಗಿ 'ಸುಬ್ರಹ್ಮಣ್ಯ' ಎಂದು ಹೆಸರಿಸಿದ ಅವಳು, ಈಗ— 'ಸುಧೀರ' ಎಂದು ನಾಮಕರಣ ಮಾಡಿದಳು. ಇಂಥ ಹೆಸರು ಊರಿನಲ್ಲೇ ಇಲ್ಲವೆಂಬುದು ಅವಳ ಹೆಮ್ಮೆ. ಹಾಗೆಂದು ತಾಯಿಯ ನೆನಪು ಅವಳಿಗೆ ಅಳಿದಿದೆಯೆಂದಲ್ಲ. ತಾಯಿಯ ಹೆಸರಲ್ಲಿ ಕ್ಲಬ್ಬಿಗೆ ೧೫೦೦ ರೂಪಾಯಿ ದಾನಮಾಡಿ—

In loving memory of
Srimathi Nagamma
by her
Loving Daughter Kusumavathi

ಎಂದು ಶಾಸನವನ್ನು ಕೆತ್ತಿಸಿದಳು. ಆ ಶಾಸನವನ್ನಿರಿಸಲು, ಸುಮಾರು ಅದಕ್ಕೂ ಮೀರಿ ವ್ಯಯಿಸಿ, ತಮ್ಮ ಕ್ಲಬ್ಬಿಗೆ ಒಂದು ಆಟದ ಮನೆಯನ್ನು ಕೂಡಿಸಿಕೊಟ್ಟಳು. ಈ ವಿಷಯಗಳಲ್ಲಿ ಪತಿಯ ತಕರಾರು ಬರಲೇ ಬಾರದಷ್ಟೆ. ಇತ್ತ ಅವಳಿಗೆ ತಾಯಿ ಮನೆಯಿಂದ ತುಂಬ ಹಣ ಸಿಕ್ಕಿದೆ ಯೆಂಬ ವಾರ್ತೆ ಊರಲ್ಲಿ ಹರಡಿತ್ತು. ಒಟ್ಟು ದೊರೆಯಬಹುದಾದುದು 6-8000ಗಳಾದರೂ, ಆಕೆ ಅದಕ್ಕೆ ಒಂದಾದರೂ ಸೊನ್ನೆ ಸೇರಿಸುವಷ್ಟು ಘನಗಂಭೀರವಾಗಿ ನಟಿಸತೊಡಗಿದಳು. ಈ ಶ್ರೀಮಂತಿಕೆಗೆ ಸಮನಾಗಿ ಗೆಳತಿಯರನ್ನು ಆರಿಸುವ ಮನವಾಯಿತು. ಸಮಾಜದ ಬಡ ಸದಸ್ಯೆಯರ ಮರವೆ ಹೆಚ್ಚುತ್ತ ಬಂತು, ಶ್ರೀಮಂತರನ್ನೇ ಕೂಡಿನಲಿಯ ತೊಡಗಿದಳು. ಹಳೆಯ ಗೆಳತಿಯರಲ್ಲಿ ನಾರಾಯಣಿಯೊಬ್ಬಳೇ ಅವಳ ನದರಿನಲ್ಲಿ ಉಳಿದವಳು. ಅವಳು ಬಡವೆಯಾದರೂ, ಚೆನ್ನಾಗಿ ಭಟ್ಟಂಗಿತನ ಕಲಿತವಳಾದುದರಿಂದ, ಕುಸುಮೆಯ ಕಾರ್ಯದರ್ಶಿನಿ

ಯಾಗಿ ಉಳಿದಳು. ಕ್ಲಬ್ಬಿನಲ್ಲಿ ಕುಸುಮೆ ಆಟವಾಡುತ್ತಿದ್ದರೆ, 'ಸುಧೀರ' ನನ್ನು ಆಡಿಸುತ್ತ, ಅವನಂಥ ಜಾಣ, ಅವನಂತಹ ಚೆಲುವರು ಜಗತ್ತಿನಲ್ಲೇ ಇಲ್ಲ—ಎಂದು ತೋರಿಸುವ ಆಟ ನಾರಾಯಣಿಗೆ. ಸುಧೀರ ಮೂರು ವರ್ಷದವನಾಗುವಾಗ, ಸಮಾಜಕ್ಕೆ ಬರುವ ಇತರ ತಾಯಂದಿರೊಡನೆ ಬರುತ್ತಿದ್ದ ಕೂಸುಗಳೊಡನೆ ಓಡಾಡಲು ಬಯಸುತ್ತಿದ್ದನು. ಆ ಸ್ವಾಭಾವಿಕ ನಡತೆಯು ಕುಸುಮೆಗೆ ಮಾತ್ರ ಒಪ್ಪುತ್ತಿರಲಿಲ್ಲ. ಅವನ ಆಟದ ಗೆಳತಿಯೂ ನಾರಾಯಣಿಯೇ ಆಗಬೇಕಿತ್ತು.

ಮನಸ್ಸಿಗೆ ತಕ್ಕಂತೆ ಮಾತನಾಡಬಲ್ಲ ನಾರಾಯಣಿಯು, ಒಮ್ಮೆ 'ಅಮ್ಮ ನೀವು ಈ ಕ್ಲಬ್ಬಿನ ಸಂಘಟನೆ ಬದಲಾಯಿಸದೆ ಹೋದರೆ, ಇದೊಂದು ಸಂತೆಯ ಮಾರ್ಕೆಟೇ ಆಗುತ್ತದೆ' ಎಂದಳು. ಕುಸುಮೆಗೂ ಅದು ಹೊಳೆದಿತ್ತು. ಆರಂಭದಿಂದಲೂ ಇಲ್ಲಿ ವರ್ಗಣಿ ಕಡಮೆಯಿರಿಸಿ ದುದರಿಂದಲೇ, ಇದು ಬಡಜನರ ಬೀಡಾಗಿತ್ತು. ಅವರ ಸ್ವಾಭಾವಿಕ ಬಡ ಉಡುಗೆ ತೊಡುಗೆಗಳು ಈಗ ಕುಸುಮೆಯ ಗೌರವಕ್ಕೆ ಒಗ್ಗದಂತಾಗಿವೆ. ಆದುದರಿಂದ ತನಗೆ ಸರಿಸಾಟಿ ಗೌರವಸ್ಥೆಯರು ಇಲ್ಲಿಗೆ ಬರಬೇಕೇ ಹೊರತು, ಹೀಗೆ 'ಕಚರಾ' ಜನರು ಬಂದು ಉಪಯೋಗವಿಲ್ಲವೆಂದು—ಅವಳೂ ತಿಳಿದಳು.

"ಅದಕ್ಕೆ ಉಪಾಯವಿಷ್ಟೆ. ನೀವು ವಂತಿಗೆಯನ್ನು ಹೆಚ್ಚಿಸಿಬಿಡಬೇಕು. ಈಗ ಇಲ್ಲಿಗೆ ಬಂದು-ಪೇಪರು, ಪುಸ್ತಕ ಇನ್ನೊಬ್ಬರಿಗೆ ಸಿಗದಂತೆ ಮಾಡುವವರಾರು? ಐದು ಘಂಟೆಗೆ ಮುಂಚಿತವಾಗಿಯೇ ಬಂದು ಆಟದ ಮೇಜು, ಕೇರಮ್ ಬೋರ್ಡು ತುಂಬುವರಾರು? ಕ್ಲಬ್ಬಿನ ಖರ್ಚು ದಿನೇದಿನೇ ಹೆಚ್ಚುತ್ತಿದೆ...ವರಮಾನ ನಿಮ್ಮಂಥವರು ಕೊಟ್ಟೇ ಬೆಳೆಯಬೇಕಲ್ಲದೆ, ಈ ನಾಲ್ಕಾಣೆ ಆರಾಣೆ ಮಂದಿಯಿಂದ ಹೆಚ್ಚುತ್ತದೆಯೇ? ಅವರು ನಾಲ್ಕಾಣೆ ಕೊಟ್ಟು ರೂಪಾಯಿಯ ಫಾಯಿದೆ ಕೊಳ್ಳುತ್ತಾರೆ" ಎಂದು, ತಾನೂ ಶ್ರೀಮಂತಳೆಂಬ ಭ್ರಮೆಯಿಂದ ನಾರಾಯಣಿಯು ಅಭಿಪ್ರಾಯ ಒಪ್ಪಿಸಿದಳು. ನಿಜ, ಕುಸುಮೆಗೆ ಗೆಳತಿಯಾಗಿರುವಷ್ಟು ಕಾಲ, ಅವಳ ವರ್ಗಣಿಯು ಕುಸುಮೆಯ ಖಜಾನೆಯಿಂದಲೇ ಬರುವುದಲ್ಲವೇ? ಅಂತು ಸುಲಭ ಶ್ರೀಮಂತಿಕೆಗಾಗಿ ಅವಳೂ ಬಾಯಿಬಿಟ್ಟಳು.

ಅವಳು ಹಾಕಿದ ಪೀಠಿಕೆಯು ಫಲಕಾರಿಯಾಯಿತು. ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ, ವರ್ಗಣಿ ಹೆಚ್ಚಿಸುವ ಸೂಚನೆ ಬಂದಿತು. ಅದಕ್ಕಾಗಿ ಒಂದು ಮಹಾಸಭೆಯನ್ನು ಕರೆಯಿಸುವಂತಾಯಿತು. ಮಹಾಸಭೆಯು ಒಂದು ಮಹಿಳಾಯುದ್ಧದಲ್ಲಿಯೇ ಕೊನೆಗೊಂಡಿತು. ನಾರಾಯಣಿಯು—ವಂತಿಗೆಯನ್ನು ನಾಲ್ಕಾಣೆಯಿಂದ ರೂಪಾಯಿ, ಎರಡು ರೂಪಾಯಿಗಳಿಗೂ ಏರಿಸಲು ಸಿದ್ಧಳಾದಳು. ಉಳಿದ ಹಲ ಕೆಲವು ಬಡ ಉಪಾಧ್ಯಾಯಿನಿಯರು ಅದನ್ನು ಬಲವಂತದಿಂದ ವಿರೋಧಿಸುವಂತಾಯಿತು. 'ಈ ದಿನದಲ್ಲಿ ಬದುಕುವುದೇ ಕಷ್ಟವಾಗಿರುವಾಗ ಕ್ಲಬ್ಬಿಗೆ ರೂಪಾಯಿ ತೆತ್ತರೆ—ಊಟಮಾಡಬೇಡವೇ' ಎಂದು ಅವರು ವಾದಿಸಿದರು.

"ಅಂಥವರು ಕ್ಲಬ್ಬು ಬಿಟ್ಟರೆ ಇನ್ನಷ್ಟು ಚೆನ್ನಾಗಿ ಊಟ ಮಾಡಬಹುದಲ್ಲ" ಎಂದಳು ನಾರಾಯಣಿ.

"ಇದು ಎಲ್ಲ ಜನರ ಸಂಸ್ಥೆ. ಈ ಹಲವು ವರ್ಷಗಳಿಂದ ಇದನ್ನು ನಡೆಯಿಸಲು ನಾವೂ ಕಾರಣರೇ. ಇದು ಹುಟ್ಟಿದುದು ಬಡವರ ಸಲುವಾಗಿಯೇ." ಎಂದು ಪ್ರತಿವಾದಿಗಳ ಮತ.

"ಹೋ—ಇಲ್ಲಿ ಕ್ರಾಂತಿಕಾರಕ ಮಾತುಗಳು ಬರುವುದಾದರೆ, ನಾನು ಕ್ಲಬ್ಬಿಗೆ ರಾಜಿನಾಮೆ ಕೊಡುತ್ತೇನೆ. ಬಡವರೇ ಇದನ್ನು ನಡೆಸಬಹುದು. ಕ್ಲಬ್ಬಿನ ಫಂಡ್ ಹೆಚ್ಚಾದರೆ, ಹೆಚ್ಚಿಗೆ ಚಟುವಟಿಕೆ ನಡೆಯಿಸಲು ಬಂದೀತೆಂದು—ವರ್ಗಣಿ ಹೆಚ್ಚಿಸಲು ಹೇಳಿದರೆ, ಇಲ್ಲಿ ರಾಜಕೀಯ ತರಬೇಕೆ?"-ಎಂದು ಕುಸುಮೆ ಕೋಪಿಸಿ, ಅಲ್ಲಿಂದ ಹೊರಟೇ ಹೋದಳು. ಒಮ್ಮೆ ಈ ನಾಟಕದಿಂದ ವಿಚಿತ್ರ ಪರಿಣಾಮವಾಯಿತು. ಕ್ಲಬ್ಬಿನ ಮೂಲಸ್ಥಾಪನೆಗೆ ಯಾರು ಕಾರಣರು? ಸಾಕಷ್ಟು ಉದಾರವಾಗಿ ಅದರ ರಚನೆಗೆ ದಂಡ ತೆತ್ತವರಾರೆಂಬುದನ್ನು ಬಲ್ಲ ಸದಸ್ಯೆಯರು ತಮ್ಮ ಮತವನ್ನು ಮುಂದೊತ್ತದೆ ಕುಳಿತರು.

ವಂತಿಗೆ ನಾಲ್ಕಾಣೆಯಿಂದ ರೂಪಾಯಿಗೆ ಏರಿತು. ಕುಸುಮೆಯ ಅಭಿಪ್ರಾಯವೇ ಗೆದ್ದಿತು. ಅದರ ಪರಿಣಾಮವೆಂದರೆ, ಅಷ್ಟು ತೆರಲಾರದ ಹಲವು ಬಡ ಜನರು, ಆ ಸ್ಥಳದಿಂದ ಅದೃಶ್ಯರಾಗಬೇಕಾದುದು. ಇತ್ತ ಅದೂ ಸುಖಕಾರಿಯಾಗಲಿಲ್ಲ. ಬರಿಯ ಹತ್ತೆಂಟು ಮಂದಿಯಿಂದ

ಕ್ಲಬ್ಬು ನಡೆದೀತೆ? ಉಳಿದ ಮಹಿಳೆಯರು ತಮ್ಮ ಗೌರವವನ್ನು ಕಾಯ್ದು ಕೊಳ್ಳುವ ಸಲುವಾಗಿ, ತಮ್ಮಿತರ ಗೆಳತಿಯರನ್ನು ಆಗ್ರಹಕ್ಕೆ ಬಲಿಪಡಿಸಿಯಾದರೂ ಸಮಾಜಕ್ಕೆ ಸೇರಿಸಿಕೊಂಡರು. ಈ ಚಳವಳದ ಪರಿಣಾಮವಾಗಿ, ವನಿತಾನಿಲಯದ ಹಲವಾರು ಮೋಟರುಗಾಡಿಗಳು ಸ್ತ್ರೀ ಸಮಾಜಕ್ಕೆ ತಿರುಗಿದುವು. ಕ್ಲಬ್ಬಿಗೆ ಸಮೀಪಸ್ಥರಾದ ಶ್ರೀಮಂತ ಮಹಿಳೆಯರು ಎರಡು ಕಡೆಯ ಸದಸ್ಯರಾದುದೂ ಉಂಟು.

ಅಂತಹ ಸುಧಾರಿತ ಜನರ ಎಡೆಯಲ್ಲಿ ಕುಸುಮೆಗೆ ಬೇರೊಂದೇ ಕೊರತೆ ಮನದೋರಿತು. ತಮ್ಮ ಸಮಾಜಕ್ಕೆ ಬಂದು ಹೋಗುವವರಲ್ಲಿ ಹಲವರಿಗೆ ಮೋಟರಿದೆ: ತಾನು—ಸಮಾಜದ ಅಧ್ಯಕ್ಷಿ. ಅದರ ಜೀವಾಳ. ಅಂಥವಳೇ ನಡೆದೋ, ಜಟ್ಕಾ ಬಂಡಿಯಲ್ಲೋ ಬರುತ್ತಿರುವುದು ಸಮನೇ? ಈ ಉದ್ದೇಶವನ್ನು ಪೂರೈಸಿಕೊಳ್ಳುವುದು ಸುಲಭವೇ? "ಹಣವೆಂದರೆ ಬ್ರಹ್ಮ"ವೆಂದು ತಿಳಿದಿದ್ದ ಪತಿರಾಯಗೆ ಗಾಳಿಹಾಕಬೇಕು. ಅವನು ಒಪ್ಪದೆ ಹೋದರೆ ತನ್ನ ಹಣದಿಂದಲಾದರೂ 'ಕಾರು ಕೊಂಡು ಬಿಡಿ' ಎಂದು ಉಪದೇಶಿಸಬೇಕು. ಈಗ ಕಾರು ಇರಿಸುವ ಯೋಗ್ಯತೆ ತನ್ನ ಪತಿಗೆ ಉಂಟಾಗಿದೆಯೆಂಬುದು ಅವಳಿಗೆ ತಿಳಿದಿಲ್ಲವೇ. ಅದರಂತೆ ಪತಿಯ ಮುಂದೆ, ಕಾರಿನ-ರಾಗವನ್ನು ಹಾಡತೊಡಗಿದಳು.

"ಏನು ಕುಸುಮಾ—ದುಡಿದುದನ್ನೆಲ್ಲ ಇಂದೇ ವ್ಯಯಿಸಿ ಮುಗಿಸಬೇಕೆ? ನಾಳೆ ದಿನ ವಕೀಲಿ ಬೇಡವೆಂದು ಕಂಡರೆ ಈ ಕಕ್ಷಿಗಾರರಿಗೆ ಸಲಾಮುಕೊಟ್ಟು, ತಣ್ಣಗೆ ಇರುವ ಯೋಗ್ಯತೆ ಗಳಿಸಬೇಕೆಂದು ನನ್ನ ಯೋಚನೆ. ನಿನ್ನ ಮನಸ್ಸು-ಬಂದದ್ದೆಲ್ಲ, ಈಗಲೇ ಧ್ವಂಸವಾಗಲಿ—ಎಂದು. ಅಲ್ಲವೆ!" ಎಂದು ಇದಿರಿಸಿದನು.

"ಈಗ ಕಾರು ಕೊಂಡು ಬಿಟ್ಟರೆ ನಿಮ್ಮ ಸಂಪಾದನೆ ಮುಗಿದು ಬಿಡುತ್ತದೆ. ನೀವೂ ನಾನೂ ಜಟಕಾ ಬಂಡಿಗೆ ಈವರೆಗೆ ಕೊಟ್ಟ ಹಣದಲ್ಲೇ ಒಂದು ಕಾರು ಕೊಳ್ಳಬಹುದಿತ್ತು" ಎಂದಳು ಆಕೆ.

ಬೇರೊಂದು ದಿನ "ಸುಧೀರಗೆ ಕಾರೆಂದರೆ ಜೀವ. ಸುಮ್ಮನೆ ಯಾರ್‍ಯಾರ ಕಾರಿನ ಮೇಲೆ ತಿರುಗಾಡಲು ಕಳುಹಿಸಬೇಕೆನ್ನುತ್ತಾನೆ. ನಾನು ಯಾರನ್ನು ಬೇಡಬೇಕು ಹೇಳಿ!"

"ಅದೇನು ವಿಶೇಷ! ಮಕ್ಕಳೆಲ್ಲವೂ ಕಾರೆಂದರೆ ಸವಾರಿ ಮಾಡ

ಬೇಕು ಅನ್ನುತ್ತವೆ. ಆದರೆ ಅವು ಬೇಡಿದುದನ್ನೆಲ್ಲಾ ಕೊಡಿಸಿಯೇ ಬಿಡುವುದು ಎಲ್ಲರಿಗೆ ಎಷ್ಟು ಸಾಧ್ಯ?"

ಹೀಗೆ ಪತಿರಾಯನ ನಿರಾಶೆಯ ನುಡಿಗಳನ್ನು ಇದಿರಿಸಿ ಅವಳು ನಿತ್ಯವೂ ಸಂಗರವಾಡಿದಳು. ಸಾಲದುದಕ್ಕೆ "ನೀವು ಮುನಿಸಿಪಲ್ ಮೆಂಬರಿಕೆಗೆ ಪ್ರಯತ್ನಮಾಡಿ. ಒಂದು ದಿವಸ ಚೆಯರ್‌ಮೆನ್ ಆಗಬಹುದು—ನಿಮಗೆ ಯಾವ ಎಂಬೀಶನೇ ಇಲ್ಲ" ಎಂದು ಪುಸಲಾಯಿಸಿದಳು; ಟೀಕಿಸಿದಳು; ಹಂಗಿಸಿದಳು. "ಇಷ್ಟೆಲ್ಲ ಹಣ ಇದ್ದು ಹೀಗೆ ನಡೆದೇ ಹೋಗುತ್ತೇನೆ—ಎನ್ನುವವರು ನಮ್ಮ ಅಪ್ಪನ ಹಾಗೆ ಮುಂಡೂರಿನಂಥ ಹಳ್ಳಿಯಲ್ಲಿರುವುದು ಒಳ್ಳೆಯದು." ಎಂದೂ ನುಡಿದಳು.

"ಏನಾಗಬೇಕು! ಪೆನಷನ್ ಕಾಲಕ್ಕೆ ನನಗೆ ಅದೇ ಆಸೆ. ಯಾವುದಾದರೂ ಹಳ್ಳಿಯ ಮೂಲೆ ಸೇರಿ, ನಾಲ್ಕು ತೆಂಗಿನ ಮರಗಳಿಗೆ ನೀರು ಹಾಕಿಕೊಂಡು ಕಾಲಕಳೆಯಬೇಕೆಂದು."

"ತೆಂಗಿನ ಮರ ಯಾಕೆ ಮತ್ತೆ!"

"ಟೆನ್ನಿಸು ಗಿನ್ನಿಸು ಆಟದ ಬದಲಿಗೆ. ವ್ಯಾಯಾಮಕ್ಕೆ ವ್ಯಾಯಾಮ; ಲಾಭಕ್ಕೆ ಲಾಭ"

"ಹೂಂ, ಮಾತನಾಡಿದರೆ ನೀವು ಹೀಗೆ ಗಾಂಧೀ ಲೆಕ್ಚರು ಮಾಡುತ್ತೀರಿ. ನಿಮಗೆ ಕಾರು ಬೇಡವಾದರೆ ನೀವು ಕೋರ್ಟಿಗೆ ನಡೆದೇ ಹೋಗಿ. ನನಗೂ ಮಗುವಿಗೂ ಬೇಕು. ನನ್ನ ಹಣದಿಂದಾದರೂ ಒಂದು ಕಾರು ತೆಗೆಯಿಸಿ ಕೊಡಬಹುದಲ್ಲವೆ?"

ಸರಿ, ಇದೇ ಕುಸುಮೆಯ ಕೊನೆಯ ರಾಮಬಾಣ. ಅದಕ್ಕೆ ಸುಬ್ಬಯ್ಯ ಗುರಿಯಾಗಲೇ ಬೇಕಾಯಿತು. ಎರಡು ಮೂರು ತಿಂಗಳೊಳಗಾಗಿ ಅವರ ಮನೆಗೆ ಮೂರು ಸಾವಿರ ರೂಪಾಯಿ ಬೆಲೆಯ ಒಂದು ಪುಟ್ಟ ಕಾರು ಬಂದಿತು. ಹತ್ತಾರು ಕಾರುಗಳನ್ನು ಕಂಡು, ಅವಳೇ ಇದನ್ನು ಶಿಫಾರಸಿ ಮಾಡಿದಳು. ಅದನ್ನೇ ಕೊಳ್ಳುವುದರಲ್ಲಿ ಅವಳದೂ ವಿಚಾರ ನಡೆಯಿತು. ಅಂದರೆ ಹತ್ತೆಂಟು ಮಂದಿಯನ್ನು ತುಂಬುವ ದೊಡ್ಡ ಡಬ್ಬಿಯನ್ನು ಕೊಂಡರೆ, ನೆರೆಮನೆಯವರ ಪಾಲಿಗೆ ಬಸ್ಸು ಸರ್ವೀಸು ನಡೆಸಬೇಕಾದೀತು—ಎಂಬ ಬೆದರಿಕೆ ಅವಳಿಗೂ ಇತ್ತು. ಇದಾದರೆ ತಮ್ಮ ಅಚ್ಚುಕಟ್ಟಿಗೆ ಸಮನಾಗಿದೆ. ಪೆಟ್ರೋಲಿನ ದಾಹವೂ

ಈ ಕಿರುಗಾರುಗಳಿಗೆ ಕಡಿಮೆ— ಎಂದುಕೊಂಡಳು. ಮುಂದೆ ಒಂದು ತಿಂಗಳ ಕಾಲ, ಕಾರಿನದೇ ನಾಮಸಂಕೀರ್ತನೆ ತನ್ನ ಗೆಳೆಯರ ಜತೆಯಲ್ಲಿ ಅವಳಿಗೆ.

ಆ ಕಾರಿನಲ್ಲಿ ಪರಕೀಯರೆಂದರೆ— ನಿರುಪಾಯನಾದ ಡ್ರೈವರು; ಭಟ್ಟಂಗಿಯಾದ ನಾರಾಯಣಿ. 'ನಾರಾಯಣಿ ಮಾತನಾಡುತ್ತ ಕುಳಿತರೆ ಅವರ ಕಾರಿಗೆ ಹಾರ್ನ್ ಬೇಕಾಗಿಲ್ಲ'— ಎನ್ನುತ್ತಾನೆ ಡ್ರೈವರ ಮಹಾಶಯ.

* * * * *

ಕುಸುಮೆಯ ಉಳಿದೆಲ್ಲ ಬಯಕೆಗಳು ಕೈಗೂಡಿದರೂ—ಸ್ವತಃ ಪತಿರಾಯನನ್ನು ಮುನಿಸಿಪಲ್ ಚುನಾವಣೆಗೆ ಓಡಿಸುವುದಾಗಲಿ, ಇತರ ರೀತಿಯ ಸಾರ್ವಜನಿಕ ಧುರೀಣತೆಗೆ ಹೂಡುವುದಾಗಲಿ ಆಗಲಿಲ್ಲ. ಅವಳು ತನ್ನ ಮಟ್ಟಿಗೆ ಯಾವ ಸೋಗನ್ನು ವಹಿಸುವುದಾದರೂ ಅವನು ಆಕ್ಷೇಪಿಸುವವನಿರಲಿಲ್ಲ. ಅವನಿಗೆ ಅವಳ ಅನೇಕ ಬಯಕೆಗಳು ಮನಸ್ಸಿಗೆ ಸರಿಯೆನಿಸದಾದುವು. ಆದರೂ ಅವನು ಒಂದೆರಡು ಬಾರಿ ಹೇಳಿನೋಡುತ್ತಾನೆ. ಒತ್ತಾಯಕ್ಕೆ ಹೋಗದೆ ಸುಮ್ಮನಿರುವ. ಈಗಾಗಲೇ ಅವಳ ಖರ್ಚುವೆಚ್ಚಗಳು ಅವನನ್ನು ಹೆದರಿಸುವಂತೆಯೇ ಇದ್ದುವು. ಆದರೆ ಹಣವನ್ನು ಚೆಲ್ಲಿ, ಮನಸ್ಸಿನ ನೆಮ್ಮದಿಯನ್ನು ದೊರಕಿಸುವುದು ಸಾಧ್ಯವಾದರೆ ಅವನು ಹಿಂಜರಿಯುತ್ತಿರಲಿಲ್ಲ.

ಅವನು ಏನೇ ಮಾಡಲಿ, ಅವನ ಜೀವನ ಕುಟುಂಬದಲ್ಲಿದ್ದೂ ಒಂಟಿಯೇ. ಹಿಂದೆ ಸಂಜೆ ವಿಹಾರಕ್ಕಾದರೂ ವೆಂಕಪ್ಪ ಬರುತ್ತಿದ್ದ. ಇಬ್ಬರೂಸೇರಿ ಕ್ಲಬ್ಬಿಗೆ ಹೋಗುತ್ತಿದ್ದರು. ಈಗಾತನ ಮನೆ ಯಾವುದೋ ಬೇರೊಂದು ಮೂಲೆಯಲ್ಲಿ, ಮಾತ್ರವಲ್ಲ, ಅವರಿವರೊಳಗಿನ ಸಂಬಂಧವೂ ಮಾಯವಾಗಿತ್ತು. ಕೊಟ್ಟ ಹಣವನ್ನು ತಿರುಗಿ ಕೇಳುವಷ್ಟು ನೀಚ, ಸುಬ್ಬಯ್ಯನಾದುದೇ ಅದಕ್ಕೆ ಕಾರಣ. ಹಿಂದಿನ ಕಾಲದಲ್ಲಿ ಅವರು ಸದಾ ಜತೆಯಲ್ಲಿ ಸಂಚರಿಸುತ್ತಿದ್ದ ನೋಟವನ್ನು ಕಂಡು 'ಅಶ್ವನಿದೇವತೆಗಳು' ಎಂದು ಇಬ್ಬರನ್ನೂ ಪರಿಹಾಸ್ಯಮಾಡಿ ನಕ್ಕ ಗೆಳೆಯರು, ಈಗ ಇವರಿಬ್ಬರೂ ದೂರವಾಗಿದ್ದಾರೆ- ಎಂದು ತಿಳಿದರು.

ಆದರೂ ಮೊದಲಿಂದ ಸುಬ್ಬಯ್ಯಗೆ ಆತನ ಮೇಲೊಂದು ಅಭಿ

ಮಾನವಿತ್ತು. ತಮ್ಮ ಸ್ನೇಹ ದೂರವಾಗಲು ಮನೆಯೊಳಗಿನ ರಾಣಿಯರೇ ಕಾರಣ—ಎಂದು ಸುಬ್ಬಯ್ಯ ತಿಳಿದುಕೊಂಡಿದ್ದ. ವಿಮಲೆಗೆ ಕುಸುಮೆಯ ಹೆಸರು, ಆಕೆಗೆ ಈಕೆಯ ಹೆಸರು ಸಹಿಸುತ್ತಿದ್ದಿಲ್ಲವಾದರೂ ಶೀಲಕ್ಕನ ಮಕ್ಕಳನ್ನು ಸುಬ್ಬಯ್ಯ ಮರೆಯಲಾರ. ಮಾಡುವುದೇನು? ಮೂರು ವರ್ಷ ಕಳೆದಾಯಿತು. ಈತ ಅವರೊಡನೆ ನಿಂತು ಮಾತನಾಡಿದ, ಹಾದಿಯಲ್ಲೂ ಭೇಟಿಯಾದ ನೆನಪಿಲ್ಲ. ಮಾಧವಿ, ರಂಜನ ಒಬ್ಬೊಬ್ಬರನ್ನು ಅವನು ನೆನೆದು 'ಈಗೆಷ್ಟು ವರ್ಷ ಅವರಿಗೆ? ಏನು ಮಾಡುತ್ತಿರಬಹುದು'-ಎಂದು ಚಿಂತಿಸುವುದುಂಟು. ಸ್ವತ: ಕಾರನ್ನು ಕೊಂಡಾದುದರಿಂದ, ವೆಂಕಪ್ಪನ ಮಕ್ಕಳನ್ನು ನೋಡುವ ಬಯಕೆಯು ಸುಲಭವಾಯಿತು.

ಒಂದು ಆದಿತ್ಯವಾರ ಬೆಳಿಗ್ಗೆ ಅವರನ್ನೆಲ್ಲ ನೋಡಿಕೊಂಡು ಬರುವೆನೆಂದು ಆಲೋಚಿಸಿ ಹೊರಟ. ಈತ ಕಾರಿನಲ್ಲಿ ಮುಹೂರ್ತಮಾಡಿದೊಡನೆ, ಕುಸುಮೆ "ದೂರ ಎಲ್ಲಿಗಿಲ್ಲವಲ್ಲ; ನಮ್ಮ ಜನರಲ್‌ಬಂಡಿ ಮೀಟಿಂಗಿದೆ" ಅಂದಳು. "ಹಾಗಾದರೆ ನೀನೂ ಬಂದುಬಿಡು. ನಿನ್ನನ್ನು ಕ್ಲಬ್ಬಿನಲ್ಲಿ ಬಿಟ್ಟುಹೋದರಾಯಿತಲ್ಲ. ನನಗೆ ಪೆಂಟಲೆಂಡಿನಲ್ಲೇನೋ ಕೆಲಸವಿದೆ" ಎಂದು ಆತ ತಿಳಿಸಿದ. 'ಇಂಥಲ್ಲಿಗೆ ಹೋಗಲು ಹೊರಟಿದ್ದೇನೆ' ಎಂದು ಆತ ಹೇಳಲಿಲ್ಲ. ಅದು ಅವಳಿಗೆ ಒಪ್ಪುಗೆಯಾಗದೆಂದು ತಿಳಿಯದೇ?

"ನನಗಿನ್ನು ಸ್ನಾನವಾಗಬೇಕು, ಎಲ್ಲ ಆಗಬೇಕು. ನೀವು ಅಲ್ಲಿಯತನಕ ಕಾದು ಕುಳಿತುಕೊಂಡರೆ ಆದೀತು". ಸುಬ್ಬಯ್ಯ ಮೆಲ್ಲಗೆ ಕಾರಿನಿಂದಿಳಿದ. 'ನಾನು ಬರುವುದಕ್ಕೆ ತಡವಾದೀತು-ಜಟಕದಲ್ಲೇ ಹೋಗುತ್ತೇನೆ'-ಎಂದು ಡ್ರೈವರನನ್ನು ಕಳುಹಿಸಿ ಒಂದು ಜಟಕಾವನ್ನು ತರಿಸಿ, ಪಯಣ ಹೊರಟ. ಸುಬ್ಬಯ್ಯ ಒಮ್ಮಿಂದೊಮ್ಮೆಗೆ ಪೆಂಟಲೆಂಡಿನ ವೆಂಕಪ್ಪಣ್ಣನ ಮನೆಯನ್ನು ಸೇರುವಾಗ ಆತನೇ ಅಲ್ಲಿರಲಿಲ್ಲ. ಒಳಿತೇ ಆಯಿತು; ಇವನೇನು ಅವನನ್ನು ನೋಡುವ ಸಲುವಾಗಿ ಹೋಗಲಿಲ್ಲವಷ್ಟೆ. ಅದು ರಜೆಯ ದಿವಸವಾದುದರಿಂದ ಹುಡುಗರೆಲ್ಲ ಅಂಗಳದಲ್ಲಿ ಓಡಾಡುತ್ತಿದ್ದರು. "ಸುಬ್ಬಯ್ಯಣ್ಣ, ಸುಬ್ಬಯ್ಯಣ್ಣ"-ಎಂದು ಹಾಹಾಕಾರವೇ ಎದ್ದಿತು. ಮೊದಲಿಂದಲೂ ಮಾಧವಿಗೆ ಅವನ ಮೇಲೆ ಅತಿಶಯ

ಪ್ರೇಮ. ಅವಳಂತು ಅವನ ಕೊರಳಿಗೇ ತೂಗಿಬಿದ್ದಳು. ಹಿರಿಯ ನಿರಂಜನನು, ಬಂದು ಈ ಕೋಲಾಹಲ ತಪ್ಪಿಸಿ, ಅವನನ್ನು ಮನೆಗೆ ಕೊಂಡುಹೋಗಿ ಕುಳ್ಳಿರಿಸಿದ. "ಅಪ್ಪ ಇಲ್ಲ, ಎಲ್ಲೋ ಕಮಿಶನಿಗೆ ಹೋಗಿದ್ದಾರೆ"-ಎಂದು ತಿಳಿಸಿದ. ಮನೆಯಲ್ಲಿ ವಿಮಲೆಯ ದರ್ಶನ ವಾಯಿತು. ಮನೆಗೆ ಬಂದ ಮೇಲೆ ಮಾತನಾಡಿಸದಿರುತ್ತಾಳೆಯೇ? ತುಸು ವೇಳೆ ಮಾಡಿ ದರ್ಶನವಿತ್ತಳು. 'ಚೆನ್ನಾಗಿದ್ದೀರಾ' ಎಂದು ರಾಗ ಮಾಡಿದಳು. ಈ ಮೂರು ವರ್ಷಗಳಲ್ಲಿ, ಆಕೆಗೆ ಪೆಂಟಲೆಂಡಿನ ಹವೆ ಬಲು ಚೆನ್ನಾಗಿ ಹಿಡಿದಿರಬೇಕು. ಹಿಗ್ಗಿ 'ಫುಟ್‌ಬಾಲೇ' ಆಗಿದ್ದಳು. ಆಕೆ ಬಂದು, ಮಕ್ಕಳನ್ನು ಗದ್ದಲಮಾಡದಿರುವಂತೆ ಜಬರಿಸಿ, 'ಈಗ ಕಾಫಿಯೇ, ಚಾವೇ' ಎಂದು ವಿಚಾರಿಸಿದಳು.

"ಏನೂ ಬೇಕಿಲ್ಲ."

"ಇರಲಿ-ಕಾಫಿ ಮಾಡಿಬಿಡುತ್ತೇನೆ" ಎಂದು ಆಚೆಗೆ ಹೋದಳು. ಹುಡುಗರು ತಿರುಗಿ ಅವನನ್ನು ಸುತ್ತುವರಿದು ಮಾತನಾಡಿಸಿದರು. ನಿರಂಜನನು ಅವನ ಬಳಿಗೆ ಬಂದು ಕುಳಿತ. "ಹೂಂ--ಸುಬ್ಬಯ್ಯಣ್ಣನಿಗೆ ಇನ್ನೂ ನೆನಪಿದೆ ನಮ್ಮದು" ಎಂದು ಚೇಷ್ಟೆಮಾಡಿ ನಕ್ಕ.

"ಅದೇನು ಹಾಗೆ ಹೇಳುತ್ತೀ?"

"ಇಲ್ಲ—ಸುಮ್ಮಗೇ ಅಂದುದು" ಎಂದ. ಆದರೂ ನುಡಿಯಲ್ಲೊಂದು ಕ್ಷಮಾಯಾಚನೆಯ ವಿನಯ ಕೂಡಿತ್ತು.

ಸುಬ್ಬಯ್ಯ ಅವನನ್ನೂ ಉಳಿದವರನ್ನೂ "ಯಾವ ಯಾವ ಕ್ಲಾಸಿನಲ್ಲಿ ಓದುತ್ತಿದ್ದೀರಾ" ಎಂದು ವಿಚಾರಿಸಿದ. ಅವರೆಲ್ಲರ ಎಡೆಯಲ್ಲಿ ಕುಳಿತಾಗ, ಹಿಂದೆ ಶೀಲಕ್ಕನಿದ್ದಾಗ, ಅವಳ ಸುತ್ತು, ತನ್ನ ಸುತ್ತು ಆ ಕೂಸುಗಳು ಎಷ್ಟು ಓಡಾಡುತ್ತಿದ್ದುವು-ಎಂಬುದರ ನೆನಪು ಅವನಿಗೆ ಉಂಟಾಯಿತು. ಅವರೆಲ್ಲರನ್ನು ನೋಡುತ್ತ ಹೋದಂತೆ-'ಈ ಕೂಸುಗಳ ಮುಖ ತುಂಬ ಬಾಡಿದಂತಿದೆ. ಎಷ್ಟೆಂದರೂ ಹಿಂದಿನ ಉತ್ಸಾಹ ಅವರಲ್ಲಿಲ್ಲವೇ ಇಲ್ಲ' ಎಂದು ತೋರಿತು. ಮನೆಯ ಸುತ್ತಲೂ ದೃಷ್ಟಿಯನ್ನು ತಿರುಗಿಸಿದ. ಎಲ್ಲಿಯೂ ವ್ಯವಸ್ಥೆ, ಚೆಲುವುಗಳ ಸುಳಿವು ಕಾಣಿಸಲಿಲ್ಲ. ವಿಮಲೆಯು ಬಂದು ಕಾಫಿ ಅರ್ಪಿಸುವಾಗ, ಆಮೂಲಾಗ್ರವಾಗಿ ನೋಡಿದ. ಆಗಲೇ ಬೇರೆ ಉಡುಗೆಯುಟ್ಟು ಅದನ್ನು ಪ್ರದರ್ಶಿಸುವ ಸಲುವಾಗಿ

ಆಕೆ ಬಂದಂತೆ ಕಂಡಿತು. ಆ ಬಲು ಪುಷ್ಟಕಾಯದಲ್ಲಿ ಆಕೆ ಬಸಿರಿ—ಎಂಬೊಂದು ಅನುಮಾನವೂ ಹೊಳೆಯಿತು.

ಈತ ಕಾಫಿ ಕುಡಿಯುತ್ತಿರುವಾಗ “ನಿಮ್ಮ ಮನೆಯಲ್ಲೆಲ್ಲ ಚೆನ್ನಾಗಿದ್ದಾರೆಯೇ. ಕುಸುಮಕ್ಕನನ್ನು ಕರೆದು ತರಬಹುದಿತ್ತಲ್ಲ” ಎಂದು ಒಣ ಉಪಚಾರ ನಡೆಯಿಸಿದಳು. “ನೀವೂ ಬನ್ನಿ, ಒಮ್ಮೆ ಮನೆಯ ಕಡೆಗೆ. ದೂರವಾದರೆ ದೂರವೇ ಆಗಬೇಕೆ?” ಎಂದ ಸುಬ್ಬಯ್ಯ.

“ಹೂಂ-ಕಾರು ಗೀರು ಇರಿಸಿಕೊಂಡ ನೀವು ಬರುವುದು ಸುಲಭವೇ, ಬಡವರಾದ ನಾವು ಅಲ್ಲಿಗೆ ಬರುವುದು ಸುಲಭವೇ” ಎಂದು ಮರು ಲತ್ತೆಯನ್ನು ಅವಳು ಸಲಿಸಿದಳು. ಸುಬ್ಬಯ್ಯ ಜಾಣ್ಮೆಯಿಂದ ವಿಷಯವನ್ನು ಬದಲಿಸಿದ. ಕೊನೆಗೆ ಕೆಲಸವಿದೆಯೆಂದು ಹೊರಟುಬಿಟ್ಟ. ಅವನ ಹಿಂದೆ ಮಾಧವಿ, ಮದನ, ರಂಜನ—ಎಲ್ಲರೂ ಸಾಲುಕಟ್ಟಿಕೊಂಡು ಹೊರಟರು. ಯಾಕೋ, ಅಲ್ಲಾಗ ಕಾಣಿಸದ ಮೂರ್ತಿಯೆಂದರೆ —ಜಮುನೆಯದು ಮಾತ್ರ.

ಸುಬ್ಬಯ್ಯ ಗೇಟಿನ ಕದ ತೆರೆದು ಹೊರಡುವಾಗ ಮಾಧವಿಯ ಮುಖ ಸಣ್ಣದಾಯಿತು. ತಾನೂ ಬರುವೆನೆಂಬಂತಿತ್ತು ಅವಳ ಮೂತಿ. ಅವಳ ಬೇಸರದ ಮುಖವನ್ನು ಕಂಡು ಸುಬ್ಬಯ್ಯ ಆ ಮಕ್ಕಳನ್ನು ಕುಡ್ರಿಸಿಕೊಂಡು, ಬಂಡಿಯಲ್ಲಿ ಬೋಳೂರಿನ ನದಿಕಿನಾರೆಯ ತನಕ ತಿರುಗಾಡಿಸಿಕೊಂಡು—ಮರಳಿ ತಂದುಬಿಟ್ಟ. ಆ ವೇಳೆಯಲ್ಲಿ ಮಾಧವಿಯಂತು ಮೂರು ವರ್ಷಗಳ ಆತ್ಮವೃತ್ತದ ಸೂತ್ರಗಳನ್ನು ಬಿಚ್ಚಿಬಿಟ್ಟಳು. ಅವರನ್ನು ತಿರುಗಿ ತಂದುಬಿಟ್ಟು, ತಾನು ಹೊರಡುವೆನೆನ್ನಲು, “ಇನ್ನು ಎಂದು ಬರುವುದು? ನಿಮ್ಮ ಮನೆಗೆ ನಾವು ಬರಬೇಡವೇ?”-ಎಂದು ಆ ಮಕ್ಕಳು ಪ್ರಶ್ನಿಸಿದುವು.

“ಇನ್ನೊಮ್ಮೆ ಬರುತ್ತೇನೆ.”

“ಖಂಡಿತ! ಬಂದು ಕರೆದುಕೊಂಡು ಹೋಗುತ್ತೀರಲ್ಲ, ಕುಸುಮ ಸಣ್ಣಮ್ಮನನ್ನು ನೋಡಬೇಡವೆ ನಾವು?”

‘ಸಣ್ಣಮ್ಮ’ ಎನ್ನುವಾಗ ತೀರ ಕಿರಿಯ ಮಾಧವಿ ಬಾಯಿಹಾಕಿ- “ನಮ್ಮ ಸಣ್ಣಮ್ಮ, ದೊಡ್ಡಮ್ಮ ಎಲ್ಲ ಸತ್ತುಹೋಗಿದ್ದಾರಂತಲ್ಲ! ನಮಗೆ ಅಮ್ಮನೇ ಇಲ್ಲವಂತೆ” ಎಂದಳು

ಸುಬ್ಬಯ್ಯ ಅಲ್ಲಿಂದ ಹೊರಟು ತನ್ನ ಮನೆಯನ್ನು ಸೇರುವಾಗ, "ಭೂತಾಕಾರ'ದ ವಿಮಲ ಮಲತಾಯಿಯ ಸ್ಮರಣೆ ಅವನಿಗಾಗುತ್ತಿತ್ತು.

೧೨ನೆಯ ಅಧ್ಯಾಯ

ವೆಂಕಪ್ಪ ಸ್ವಂತ ಮನೆಯನ್ನು ಕೊಂಡುಕೊಂಡು, ಪೆಂಟಲೆಂಡನ್ನು ಸೇರಿದಂದಿನಿಂದ ಅವನ ಮನೆಯಲ್ಲಿ ಏನಾಗುತ್ತಿದೆ ಎಂದು ಸುಬ್ಬಯ್ಯನಿಗೆ ತಿಳಿಸುವವರಾರು? ಇಬ್ಬರೊಳಗಿನ ಸಂಬಂಧ ಕಾಲದ ನೆಪದಿಂದ ದೂರವಾದರೆ, ಯಜಮಾನಿಯರೊಳಗಣ ಸಂಬಂಧ ಅಸೂಯೆಯಿಂದ ದೂರವಾಗಿತ್ತು. ನಾಲ್ಕು ವರ್ಷಗಳ ಅಂತರದಲ್ಲಿ ಮೊನ್ನೆಯಷ್ಟೆ ಸುಬ್ಬಯ್ಯ ಪ್ರಥಮ ಬಾರಿಗೆ ಅವರ ಮನೆಗೆ ಕಾಲಿರಿಸಿದುದು. ಆ ಮಕ್ಕಳನ್ನು ನೋಡಿ, ಎಲ್ಲವೂ 'ತಾಯಿಯಿಲ್ಲದ' ಮಕ್ಕಳಂತೆ ಸೊರಗಿರುವುದನ್ನು ಕಂಡು, ಮಲತಾಯಿಯಿಂದ ಹಾಗಾಗಿದೆ ಎಂದುಕೊಂಡ. ಮನಸ್ಸು ತಡೆಯದುದಕ್ಕೆ ಆತ ಹೋದುದೇನೋ ನಿಜ. ಅದರಿಂದ ಅಲ್ಲಿಗೆ ಇನ್ನೊಮ್ಮೆ ಹೋಗಬೇಕೆನಿಸಲಿಲ್ಲ. ಮಾಧವಿಯನ್ನು ಇನ್ನೊಮ್ಮೆ ನೋಡಲು, ತಮ್ಮ ಮನೆಗೆ ಕರೆದೊಯ್ಯಲು ಬರುವೆನೆಂದು ಮಾತುಕೊಟ್ಟಿದ್ದ, ನಿಜ; ಆದರೂ ಹೋಗಲು ಮನಸ್ಸಾಗಲಿಲ್ಲ. ಹಾಗೆ ಹೋಗಿದ್ದಲ್ಲಿ-ಅವರನ್ನೆಲ್ಲ ಕರತರಲು ಅನುಮತಿ ದೊರೆಯುತ್ತಿತ್ತೋ ಇಲ್ಲವೋ, ಯಾರು ಬಲ್ಲರು? ಶೀಲಕ್ಕನ ಮಕ್ಕಳನ್ನು ತಮ್ಮ ಮನೆಗೆ ಕರೆತರಲು ಯಾವ ಆಡಂಬರ, ಅನುಮತಿಗಳು ಬೇಕಿಲ್ಲವಾಗಿದ್ದ ದಿನವೊಂದಿತ್ತು. ಅದು ಹಿಂದೆ, ಬಲು ಹಿಂದೆ.

ಅವನು ಹೋದೊಂದು ದಿನದಲ್ಲಿ ಬಳಿ ಸುಳಿದ ನಾಲ್ಕಾರು ಸೂಸು ನುಡಿಗಳಿಂದಲೇ ಅವರ ಮನೆಯ ಆಡಳಿತೆಯನ್ನು ತಿಳಿಯಲು ಶಕ್ತನಾದ. ಒಳಗಿದ್ದೂ ಇಲ್ಲದಂತೆ ಆದ ಜಮುನೆಯನ್ನು ಅವನು ನೆನೆದ. ಆದರೆ ಇಷ್ಟು ದಿವಸಗಳ ಬಳಿಕವೂ ಅವರ ಮನೆಯ ಸುದ್ದಿಯನ್ನು ಕುಸುಮೆಯ ಮುಂದಕ್ಕೆ ಬಿಡಿಸಲಿಲ್ಲ. 'ಆ ಶೂರ್ಪನಖಿಯು ಹಾಗೆ

ಮಾಡುವವಳೆಂದು ನಾನು ಹೇಳಲಿಲ್ಲವೇ—ನಿಮಗೆ' ಎಂದು ಅವಳು ಹಿಗ್ಗಲು ಒಂದು ಅವಕಾಶವಾಗುತ್ತಿತ್ತಷ್ಟೆ. ಆದರೂ ಆ ಮಕ್ಕಳ—ಹರೆಕಲು ಅರಿವೆ, ಮಲಿನ ರೂಪಗಳನ್ನು ಕಂಡು, 'ಶೀಲಕ್ಕನ ಮಕ್ಕಳಲ್ಲವೇ!' ಏನಾದರೂ ಸಹಾಯಮಾಡಬೇಕು'—ಎಂದುಕೊಳ್ಳುತ್ತಿದ್ದ. ಆದರೆ ಮನಸ್ಸು ಕೃತಿಗೆ ಬರಲು, ಕುಸುಮೆಯ ಅಂಜಿಕೆ ಬರುತ್ತಿತ್ತು.

ಈ ಮೌನವನ್ನು ಮೊದಲು ಮುರಿದವನೆಂದರೆ ವೆಂಕಪ್ಪ. ಆತ ತಮ್ಮ ಮನೆಗೆ ಬಂದು ಹೋದ ಬಳಿಕೆಲ್ಲ, ವೆಂಕಪ್ಪ ಕೋರ್ಟಿನಲ್ಲಿ ಸಂಧಿಸಿದಾಗ ಒಂದೊಂದು ಮಾತನಾಡತೊಡಗಿದನು. ಬಿಡುವು ದೊರೆತಾಗ ಮಾತು ಬೆಳೆಯಿಸಿ ಹಳೆಯ ನೆನಪನ್ನು ಹೆಚ್ಚಿಸಿಕೊಡುತ್ತಿದ್ದ. 'ಮನೆಗೆ ಬರುವುದಿಲ್ಲವೇ?' ಎಂದರೆ ಮಾತ್ರ, 'ಬರುತ್ತೇನೆ—ನಿನ್ನೊಡನೆ ತುಂಬಾ ಮಾತನಾಡುವುದುಂಟು' ಎಂದು ಕೆಲವು ಬಾರಿ ಹೇಳಿದ್ದರೂ, ಬರಲು ಅನುಕೂಲವಾಗಲೇ ಇಲ್ಲ. ಕೊನೆಗೆ ಆ ಸರದಿಯೂ ಉಂಟಾಯಿತು. ಒಂದು ದಿವಸ ವೆಂಕಪ್ಪ ಆತನೊಡನೆ "ನಾಳೆ ನಿಮ್ಮ ಮನೆಗೆ ಬರುತ್ತೇನೆ"—ಎಂದ. "ನಾಳೆಗೇಕೆ ಮುಹೂರ್ತ? ಇವತ್ತೇ ಹೋಗುವ" ಎಂದರೆ, "ಈ ಹೊತ್ತು ಬೇಡ. ವಿಮಲೆಯನ್ನು ಉಡುಪಿಗೆ ಬಿಟ್ಟುಬರಬೇಕು; ಅವಳೀಗ ಬಸಿರಿ. ಚೊಚ್ಚಲು ಬಸಿರಿ. ಬಾಡಿಗೆ ಕಾರಿನಲ್ಲಿ ಹೋಗಿಬಿಟ್ಟು ಬರುತ್ತೇನೆ" ಎಂದ. "ಅಯ್ಯೋ ಮರುಳ! ಹೇಳಿದ್ದರೆ ನನ್ನ ಕಾರು ಕಳುಹಿಸುತಿದ್ದೆನಲ್ಲ." "ನೀನು ಕಳುಹಿಸುತ್ತಿದ್ದೆ. ಆದರೆ ನಮ್ಮ ವಿಮಲೆಗೆ, ನಿಮ್ಮ ಕುಸುಮನ ಕಾರೆಂದು ಕೇಳಿದರೆ, ಏನು ಅನಿಸುವುದೋ.." ಎಂದ. ತುಸು ಸಮಯವಾದ ಬಳಿಕ, ಯಾಕೋ ಮನಸ್ಸು ಬಲು ಖಿನ್ನವಾಗಿ "ನಾನು ಎರಡನೆಯ ಮದುವೆಯಾದುದು ಮೂರ್ಖತನ" ಎಂದೂ ಹೇಳಿಬಿಟ್ಟ.

ಅಲ್ಲಿಯೇ ಇಂಥ ಮಾತುಗಳ ವಿಚಾರವಿನಿಮಯ ಬಳಿತಲ್ಲೆಂದು ಸುಬ್ಬಯ್ಯ ಸುಮ್ಮಗಿದ್ದ. ಆಗ ಸುಬ್ಬಯ್ಯ "ನಾಳೆ ನಿಮ್ಮ ಮನೆ ಮಕ್ಕಳನ್ನು ನಮ್ಮಲ್ಲಿಗೆ ಕರೆದು ತರುತ್ತೇನೆ ಆಗಬಹುದಲ್ಲ. ಎಷ್ಟು ದಿವಸದಿಂದ ಹಾಗೆ ಮಾಡಬೇಕೆಂದು ಅನಿಸಿದ್ದರೂ ಬರುವುದಕ್ಕೆ ಆಗಲಿಲ್ಲ" ಎಂದು ಅವನನ್ನು ಬೀಳ್ಕೊಟ್ಟನು.

ಮರುದಿನ ಬೆಳಿಗ್ಗೆ ಕಾಫಿಯ ವೇಳೆಗೆ ಒಮ್ಮೆಗೇ ಸುಬ್ಬಯ್ಯ

"ಕುಸುಮಾ, ನೀನು ಸಿಟ್ಟಾಗುತ್ತೀಯೋ ಏನೋ. ಹಿಂದೊಮ್ಮೆ ವೆಂಕಪ್ಪನ ಮನೆಗೆ ಹೋದಾಗ ಮಕ್ಕಳನ್ನೆಲ್ಲ ಕರೆತರುತ್ತೇನೆ—ಎಂದಿದ್ದೆ. ಆಡಿದಮಾತು ಸುಳ್ಳಾಗಬಾರದಲ್ಲ. ಇವತ್ತು ವಿರಾಮವಿದೆ. ಆತನಿಗೂ ಹೇಳಿದ್ದೇನೆ."

"ಹಿಂದೆಂದು ಹೋದದ್ದು ನೀವು?" ಎಂದು ತನಖೆ ತೊಡಗಿತು. 'ನನಗೊಂದೂ ಹೇಳಬೇಡವೇ'-ಎಂದು ಆಕೆಯ ಆಕ್ಷೇಪವಾಯಿತು. ಅದಕ್ಕವನು 'ಚೆನ್ನಾದ ಸಂಗತಿಯಾದರೆ ಹೇಳುವುದು; ಬೇಸರದ ಸಂಗತಿಯನ್ನೇನು ಹೇಳುವುದು' ಎಂದ.

"ಆಗಲಿ—ಏನೂ ಮಾಡಿರಿ. ಆದರೆ ನಾನು ಹೇಳುತ್ತೇನಲ್ಲ: ಆ ಗಂಡುರಾಮಿಯು ಮಲಮಕ್ಕಳನ್ನು ತೀರ ಅಂಕೆಯಲ್ಲಿರಿಸಿದ್ದಾಳೆಂದು ಕೇಳಿದ್ದೆ. ಅವಳಿಗೆ ಆ ಮಕ್ಕಳು ನಮ್ಮಲ್ಲಿಗೆ ಬಂದರೆ, ತಂಬಾ ಹೊಟ್ಟೆ ಕಿಚ್ಚಾದೀತು" ಎಂದಳು.

"ಆ ಯೋಚನೆ ಬೇಡ. ಅವಳೀಗ ಬಸಿರಿಯಂತೆ. ನಿನ್ನೆಯಷ್ಟೆ ವೆಂಕಪ್ಪ ಅವಳನ್ನು ಉಡುಪಿಗೆ ಕರೆದುಕೊಂಡು ಹೋಗಿದ್ದಾನೆ. ಸಂಜೆಯೊಳಗೆ ಆತನೂ ಮನೆಗೆ ಬಂದಾನು.....ಕುಸುಮಾ, ಅವಳು ಇಷ್ಟರ ತನಕವೂ ಬಸಿರಿಯಾಗಲೇ ಇಲ್ಲ. ಅಲ್ಲವೇ....ನೀನೊಬ್ಬಳೇ ಅಲ್ಲ, ತಡವಾಗಿ ಹಡೆದವಳು" ಎಂದು ನಕ್ಕ.

"ನನ್ನನ್ನೇಕೆ ಅವಳೊಡನೆ ಗಂಟುಹಾಕುತ್ತೀರಿ? ನಾನೇನು ನಿಮ್ಮ ಕಣ್ಣಿಗೆ ಆ ಶೂರ್ಪನಖಿಯಂತೆ ಕಾಣಿಸುತ್ತಿದ್ದೇನೆಯೇ?"

"ಮಹಾರಾಯಿತಿ, ನಿನ್ನೊಡನೆ ಚೇಷ್ಟೆಗೂ ಮಾತನಾಡುವಂತಿಲ್ಲ" ಎಂದು ಕ್ಷಮೆಯಾಚಿಸುವ ಮೊಗದಿಂದ—"ಎಲ್ಲ ಮಕ್ಕಳೂ ಬಂದಾರು. ಊಟಕ್ಕಿರುತ್ತಾರೆ, ಸಂಜೆ ಕಾಫಿಗೂ ಇರಬಹುದು"-ಎಂದು ಅನುಮತಿ ಪಡೆದು ಹೊರಟುಹೋದನು. ಕುಸುಮೆಯ ಮನಸ್ಸು ಸಹ ವೆಂಕಪ್ಪನ ಕಡೆಗೊಮ್ಮೆ ಓಡಿತು. "ಅವರನ್ನೂ ಕರೆದು ತನ್ನಿ" ಎಂದು ಆಜ್ಞೆಯಾಯಿತು.

"ಅವನು ಉಡುಪಿಗೆ ಹೋಗಿದ್ದಾನೆ. ಈ ಹೊತ್ತು ಇಲ್ಲಿಗೆ ಬರುತ್ತಾನೆಂದಿದ್ದಾನೆ."

ಕುಸುಮೆಯ ಅಂತರಂಗದಲ್ಲಿ ವೆಂಕಪ್ಪನನ್ನು ಕುರಿತಾದ ಉತ್ಸಾಹ

ಪ್ರೇಮಗಳು ಸಂಪೂರ್ಣ ಮರೆಯಾಗಿರಲಿಲ್ಲ. ದೂರಾದುದರಿಂದ ಆತ ದೂರವೇನೋ ಆದ. ವಿಮಲೆಯನ್ನು ತಂದುಕೊಂಡು ತನಗೂ ವೈರಿಯಾದನೆಂದು ಅವಳಿಗನಿಸಿತ್ತು. ಇನ್ನೊಂದು ಕಾರಣದಿಂದಲೂ ಅವಳ ನೆನಪು ಅವನ ಕಡೆಗೆ ಓಡುತ್ತಿತ್ತು. ಸುಧೀರನ ಜನನದ ಬಳಿಕವೇ ಅವರ ಸ್ನೇಹವು ಕಡಿದಂತಾದುದು. ಅನಂತರ ಐದು ವರ್ಷಗಳು ಸಂದಿವೆ. ಮನಸ್ಸಿನಲ್ಲಿ ಸಂತಾನದ ಬಯಕೆ ಉತ್ಪನ್ನವಾಗಿದೆ. ಇನ್ನೊಂದು ಹೆಣ್ಣನ್ನು ಹಡೆಯುವುದು ಚೆನ್ನು-ಎಂದೆನಿಸುತ್ತಿದೆ. ತಾಯಿ ಕರುಳು. ಅಂತಹ ಕನಸುಗಳು ಕಂಡಾಗಲೆಲ್ಲ, ತನ್ನ ಪತಿಯಿಂದ ತನಗೆಲ್ಲಿಯ ಸಂತಾನವೆಂಬ ಅಪಸ್ವರ ಹೊರಡುತ್ತಲಿತ್ತು. ಅದನ್ನು ನೆನೆದರೆ ಸುಬ್ಬಯ್ಯನ ಮೇಲೆ ಆಕೆಯ ಬೇಸರ ಇಮ್ಮಡಿಯಾಗುವುದು. ವೆಂಕಪ್ಪನ ಕೊರಳಿಗೆ ಬೇರೊಂದು ಮಡದಿಯನ್ನು ತೂಗಿಸಿ, ತನ್ನ ಅವರ ಸಂಬಂಧ ಕೆಡಿಸಿದವನೇ ತನ್ನ ಪತಿ, ಎಂದು ಆಕೆ ತಿಳಿಯುವುದೂ ಉಂಟು.

ಒಮ್ಮೆ ಬೂದಿಯಿಂದ ಮರೆಯಾದ ನೆನಪಿನ ಕೆಂಡ, ತಿರುಗಿ ಬೂದಿ ಕಳಚಿ ಜ್ವಲಿಸತೊಡಗಿತು. ವೆಂಕಪ್ಪ ಮದುವೆಯಾಗುವುದಿಲ್ಲವೆಂದು ಕೇಳಿಯೇ ಅನುರಾಗದ ಉಸಿರು ಆ ಜ್ವಾಲೆಯನ್ನು ಮತ್ತಷ್ಟು ಉರಿಸಿತ್ತು. ಆತ ತಿರುಗಿ ತಮ್ಮ ಮನೆಗೆ ಬರುವಂತಾದರೆ ಎಷ್ಟು ಹಿತ—ಎಂದೆನಿಸಿತ್ತು. ಎಷ್ಟೊಮ್ಮೆ ಆಕೆಯು ಅವನೊಡನೆ, ಸುಬ್ಬಯ್ಯನನ್ನು ಎಡೆಗೆ ನಿಲ್ಲಿಸಿ ನೆನೆಯುವುದುಂಟು. ಅವರಲ್ಲಿ ಅಜಗಜಾಂತರವನ್ನು ಕಾಣುವುದುಂಟು. ಹಿಂದೆ 'ವಿಮಲೆಯ ಗುಲಾಮನಾಗಿದ್ದ ವೆಂಕಪ್ಪ' ಎಂದು ಅಸಹ್ಯತಾಳಿದವಳೇ ಒಮ್ಮಿಂದೊಮ್ಮೆ, 'ವಿಮಲೆಗೆ ಬಲಿಯಾಯಿತಲ್ಲ ಈ ಬಡ ಪುರುಷಾಮೃಗ' ಎಂದು ಯೋಚಿಸಿದಳು. ಆ ದುಷ್ಟ ಹೆಂಗುಸಿನ ಮೇಲಿನ ಸೇಡು, ಶೀಲಕ್ಕನ ಮಕ್ಕಳನ್ನು ಕುರಿತಾದ ಸಹತಾಪದಲ್ಲಿ ಕೊನೆಗಂಡಿತು. ಇನ್ನೆಂದೂ ಕಂಡಿರಲಾರದ ಉಪಚಾರವನ್ನು ಅವರಿಗೆ ಮಾಡುವೆನೆಂದು ಅಂದುಕೊಂಡು, ಅಡುಗೆಯವನಿಗೆ ಹುಕುಮುಗಳ ಸರಮಾಲೆಯನ್ನು ಒಪ್ಪಿಸಿದಳು.

ಈ ನಾಲ್ಕೈದು ವರ್ಷಗಳಿಂದ ದೂರಾದ ವೆಂಕಪ್ಪನ ಮನೆಯವರಿಂದ ಅವಳೂ ದೂರವಾಗಿದ್ದಳು. ಅವರ ಸುದ್ದಿ ಸಿಗುವುದೇ ಕಷ್ಟವಾಗಿತ್ತು.

ಆ ದೆಸೆಯಿಂದ ಅವಳ ಅಸೂಯೆಯು ಮರಿಯಾಗಿತ್ತು. ಜೀವನದ ಹೊಸ ಬಗೆಗಳು, ಹಳೆಯ ಅನೇಕ ಅಪ್ರಿಯ ವಿಚಾರಗಳನ್ನು ಕೊಚ್ಚಿಕೊಂಡು ಮಾಯಿಸಿದ್ದುವು. ಈ ದಿನವೇ ಅವಳ ಮನಸ್ಸು ತಿರುಗಿ ಉದ್ವೇಗಗೊಂಡುದು. ಅದು ಸವಿ ನೆನಪುಗಳಿಂದ. ಅದಕ್ಕೊಂದು ಪ್ರಬಲ ಕಾರಣವೆಂದರೆ, ತಾನೊಂದು ಚೆಲುವಿನ ಹೆಣ್ಣು ಕೂಸಿನ ತಾಯಾಗಬೇಕೆಂಬ ಬಯಕೆ. ಸುಧೀರನನ್ನು ಪಡೆದಂದಿನಿಂದ ಅವಳು ತಿರುಗಿ ಬಸಿರಿಯಾಗಿರಲಿಲ್ಲ. ಇಂದು ಆ ಬಯಕೆಯು ತಿರುಗಿ ಉಲ್ಬಣಗೊಂಡಿತು. ತಿರುಗಿ ಅವಳು ವೆಂಕಪ್ಪನ ಸಖ್ಯವನ್ನು ಬಯಸತೊಡಗಿದಳು. ಅವನಿಗಾಗಿ ಕನಿಕರಿಸಿದಳು. ವಿಮಲೆಯ ಮೇಲಿನ ಉಗ್ರಕೋಪದಲ್ಲಿ ಅವಳ ಕನಿಕರ ರೂಪಾಂತರಗೊಂಡಿತು. ವಿಮಲೆಯೊಂದು ಹೆಣ್ಣು ಹುಲಿ, ಅದರ ಬಾಯಿಗೆ ಬಲಿಯಾದವನೇ ವೆಂಕಪ್ಪ-ಎನಿಸುವ ಮರುಕವೂ ಉಂಟಾಯಿತು.

ತಮ್ಮ ಮನೆಗೆ ಬರಲಿರುವ ಗೆಳೆಯನ ಮಕ್ಕಳ ನೆನಪಿನಿಂದ ಕುಸುಮೆ ಓಡಾಡುವ ವೇಳೆಯಲ್ಲೇ, ಸುಬ್ಬಯ್ಯನ ವಾಹನವು ಆತನ ಮನೆಯ ಮುಂಗಡೆ ಹೋಗಿ ನಿಂತಿತು. ನಿಂತುದೇ ತಡ-ಮನೆ ಮಕ್ಕಳೆಲ್ಲರು ಅವನನ್ನು ತುಂಬಿಗಳಂತೆ ಕವಿದುಕೊಂಡರು. ಕೈಹಿಡಿದು, ಸೆರಗು ಹಿಡಿದು, ಮನೆಯೊಳಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿಕೊಂಡರು. ದಾರಿಯಲ್ಲೇ ಮಾಧವಿಯು ಅವನೊಡನೆ "ಹೋಗುವಾಗ ಮುಂದಿನ ಸೀಟಿನಲ್ಲಿ ನಾನು" ಎಂದಾಯಿತು.

"ಅಪ್ಪನಿಲ್ಲವೇ" ಎಂದು ಸುಬ್ಬಯ್ಯ ಕೇಳಿದ. ಪ್ರಾಯಶಃ "ವಿಮಲೆ ಹೋಗಿಯಾಯಿತಲ್ಲ" ಎಂದು ಖಚಿತಪಡಿಸಿಕೊಳ್ಳುವ ಸಲುವಾಗಿ ಇರಬೇಕು. "ನಿನ್ನೆಯೇ ಉಡುಪಿಗೆ ಹೋದರಲ್ಲ. ಆದರೆ ನೀವು ನಮ್ಮನ್ನು ಕರೆಯಬಹುದು. ಬಂದರೆ ತಪ್ಪದೆ ನಿಮ್ಮೊಟ್ಟಿಗೆ ನಿಮ್ಮ ಮನೆಗೆ ಹೋಗಿ ಬನ್ನಿ ಎಂದಿದ್ದಾರೆ" ಎಂದು ನಿರಂಜನ ತಿಳುಹಿಸಿದ. ಮೋಹನನು—"ಆದರೆ ಜಮುನಾ ಬರುವುದಿಲ್ಲವಂತೆ ನಮ್ಮೊಟ್ಟಿಗೆ; ಇಲ್ಲೇ ಮನೆ ಕಾಯುತ್ತಾಳಂತೆ" ಎಂದು ತಿಳಿಸಿದ.

"ಯಾಕೆ? ವಿಮಲು ಚಿಕ್ಕಮ್ಮಗೆ ತಿಳಿದೀತೆಂದೇ?"

"ಅವಳಿಗೆ ತಿಳಿದರೆ ತಿಳಿಯಲಿ, ಯಾರು ಹೆದರುತ್ತಾರೆಂದು

ಬೇಡವೇ" ಎಂದು ಅವಳಿಲ್ಲದಾಗ ಆತನ ವೈರ,ಬಾಯಿಂದ ನುಡಿಸಿತು.

"ಹಾಗಾದರೆ ಇನ್ನೇಕೆ?"

"ಅದೆಲ್ಲ ಏನು ಹೇಳುವುದು ಸುಬ್ಬಯ್ಯಣ್ಣ. ಅವಳಿಗೆ ಒಂದೇ ಒಂದು ಸರಿಯಾದ ಸೀರೆಯಿಲ್ಲ ಉಡಲು, ಏನು ಬಂದರೂ ತನಗೇ ಸಾಲದೆನ್ನುವ ಚಿಕ್ಕಮ್ಮನ ಮುಂದೆ,ಅವಳು ಮನೆನಾಯಿಗಿಂತ ಕಡೆಯಾಗಿದ್ದಾಳೆ. ಪಾಪ, ಅವಳ ಶಾಲೆ ಬಿಡಿಸಿಯಾಯಿತು. ಹುಡುಗಿಯರು ಅಷ್ಟೆಲ್ಲ ಓದಿ ಏನು ಮಾಡಬೇಕೆಂದು ಗದರಿಸಿ. ಈಗ ಅವಳು ಮನೆಯಲ್ಲಿ ಅಡುಗೆ ಮನೆ ಬಿಟ್ಟಿದ್ದರೆ ಚಿಕ್ಕಮ್ಮನ ಕಣ್ಣು ಕೆಂಪಾಗುತ್ತದೆ" ಎಂದು ನಿರಂಜನ ವಿವರಿಸಿದ.

ಸುಬ್ಬಯ್ಯ ಜಮುನೆಯನ್ನು ನೋಡಲು ಒಳಕೊಟಡಿಗೆ ಹೋದ. ಹಿಂದೆ ಬಂದಾಗ ಆಕೆಯನ್ನವನು ಮಾತನಾಡಿಸಿರಲಿಲ್ಲ. ಜಮುನೆ ತೀರ ಮಲಿನ ಚಿಂದಿಯನ್ನುಟ್ಟಿದ್ದಳು. ಅವಳೀಗ ಕಿಶೋರಿ.ರೂಪದಲ್ಲಿ ತುಂಬ ಚೆಲುವೆ. ತನ್ನ ಮಯಸ್ಸಿನ ನೆನಹು ಪೂರ್ಣ ಉಂಟಾಗಿದೆ. ಸುಬ್ಬಯ್ಯ ಬರಲು, ತೀರ ನಾಚುಗೆಯಿಂದ ತಲೆತಗ್ಗಿಸಿ ಬೇರೊಂದು ಕೊಟಡಿಗೆ ಕಾಲಿಟ್ಟಳು. ಸುಬ್ಬಯ್ಯ—"ಜಮುನಾ, ನಾನಲ್ಲವೇ—ಕರೆಯಲು ಬಂದದ್ದು. ನೀವೆಲ್ಲರೂ ಬರಬೇಕು, ನಿಮ್ಮದೇ ಮನೆಯಲ್ಲವೇ" ಎಂದ. ಆಕೆ ಮಾತನಾಡಲಿಲ್ಲ.

ಆತನ ಮನಸ್ಸಿಗೇನೇನೋ ಹೊಳೆಯಿತು. ಹೊರಕ್ಕೆ ಬಂದನು. 'ನಾನೀಗ ಪೇಟೆಗೆ ಹೋಗಿಬರುವೆ' ಎಂದ. ಅಷ್ಟರಲ್ಲಿ ಮನಸ್ಸು ಬದಲಿಸಿ 'ನಿರಂಜನ, ನೀನು ಬಾ' ಎಂದ. ಆದರೆ ಎಲ್ಲರೂ ಮೋಟರು ಏರುವ ಮನಸ್ಸಿನವರಾದುದರಿಂದ-ಜಮುನೆಯನ್ನು ಬಿಟ್ಟು, ಕಾರನ್ನೇರಿದರು. ಜನ ಹೆಚ್ಚಿತೆಂದು ಸುಬ್ಬಯ್ಯ ಡ್ರೈವರನನ್ನು ಮನೆಗೆ ಕಳುಹಿಸಿ, ತಾನೇ ಕಾರು ನಡೆಯಿಸಿ ಮನೆಗೆ ಹೊರಡುವ ಬದಲು,ನೆಟ್ಟಗೆ ಪೇಟೆಗೆ ಹೊರಟನು. ಕಾರು ಹಂಪನಕಟ್ಟೆಯ ಒಂದು ಹೆಸರಾದ ಜವುಳಿ ಅಂಗಡಿಯ ಮುಂಗಡೆ ಹೋಗಿ ನಿಂತಿತು. ಸುಬ್ಬಯ್ಯ ಅವರನ್ನು ಕರೆದುಕೊಂಡು ಅಂಗಡಿಯೊಳಕ್ಕೆಹೋದ. ಅವನ ಕೇಳಿಕೆಯಂತೆ-ಶರ್ಟಿಂಗ್ ಇಜಾರದ ಅರಿವೆ, ಪಂಚೆ, ಚೀಟಿ ಬಟ್ಟೆಗಳನ್ನು ತಂದಿರಿಸಿದರು. 'ನಿನಗೆ ಯಾವುದು, ಎಂದು ಸುಬ್ಬಯ್ಯ ಕೇಳುತ್ತಿದ್ದರೆ, ನಿರಂಜನ ಕಿರಿಮೊಗ

ಮಾಡಿ "ಸುಬ್ಬಯ್ಯ, ಇದಾವುದೂ ಬೇಡ. ನಮಗಾಗಿ ಯಾಕೆ ನೀವು ಖರ್ಚು ಮಾಡುತ್ತೀರಿ"-ಎಂದು ದಾಕ್ಷಿಣ್ಯತೋರಿಸಿದ. ಆದರೆ ಸುಬ್ಬಯ್ಯನ ಬಲವಂತಕ್ಕೆ ಎಲ್ಲರೂ ತಲೆಬಾಗಿದರು. ಆತ ಜಮುನೆಯ ಸಲುವಾಗಿ ಎರಡೆರಡು ಸುಂದರ ಸೀರೆಗಳನ್ನು ಕೊಂಡುಕೊಂಡ. ಜತೆಗೆ, ಒಪ್ಪುವ ರವಕೆಯ ಅರಿವೆಯನ್ನೂ ಕೊಂಡ. "ಬಿಲ್-ಎಷ್ಟಾಯಿತೋ" ಎಂದು ನಿರಂಜನ ಬೆರಗುಪಡುತ್ತಿರುವಾಗಲೇ, "ಬಿಲ್ ಮನೆಗೆ ಕಳುಹಿಸಿಬಿಡಿ" ಎಂದು, ಸುಬ್ಬಯ್ಯ ಕಾರಿನಲ್ಲಿ ಬಂದು ಕುಳಿತ. ಬಂಡಿ ಸರ್ರನೆ ಹೊರಟು ಪೆಂಟಲೆಂಡ್ ಪೇಟೆಯ ವೆಂಕಪ್ಪನ ಮನೆಗೇ ಬಂದಿತು. ಆ ಮಕ್ಕಳ ಕೋಲಾಹಲ ಹೇಳುವುದೇ ಬೇಡ. ಮಾಧವಿಯಂತು: "ಅಕ್ಕ, ನಿನಗೆ ಸೀರೆ ಬಂದಿದೆ"ಯೆಂದು ಕೂಗಿ ಕಿರುಚುತ್ತಾ, ಅವನ್ನು ಒಯ್ದು, ಅಕ್ಕನಿರುವಲ್ಲಿಗೆ ಹೋಗಿ ಮುಟ್ಟಿಸಿದಳು. ಅದರ ಮೇಲೆಯೂ ಜಮುನೆ ಮಾತನಾಡಳು. ಬಂದ ಸೀರೆಗಳು ತುಂಬ ಬೆಲೆಯವು. ಅವಳಂತಹವನ್ನು ಉಡದ ವರ್ಷಗಳಾದುವು. ಬಡ ಹುಡುಗಿ ತನ್ನ ದುರ್ದೈವವನ್ನೂ, ಸುಬ್ಬಯ್ಯನ ಕರುಣೆಯನ್ನೂ ನೆನೆದು ಕಂಬನಿ ಸುರಿದಳು. ಸುಬ್ಬಯ್ಯ ಬೆನ್ನು ಚಪ್ಪರಿಸಿ "ಹಾಗೆಲ್ಲ ಅಳಬಾರದು, ಬಾ" ಎಂದು ಬಲವಂತಪಡಿಸಿದ ಮೇಲೆ, ಹೊರಟಳು. ಹಾಗೆ ಬರುವೆನೆಂದರೂ ಹೊಸ ಸೀರೆ ಉಡಲಿಲ್ಲ. ಅದಕ್ಕೂ ಆಗ್ರಹಪಡಿಸಬೇಕಾಯಿತು. ಹೊಸ ಸೀರೆಗೆ, ತನ್ನ ಹಳೆಯ ರವಕೆ ಹೊಂದದೆಂದು ನೊಂದು, ಉಟ್ಟ ಸೆರಗಿಂದ ಮೈಬಿಗಿದು, ಬೇಕೋ ಬೇಡವೊ ಎಂಬ ನಡಿಗೆಯಿಂದ ಆಕೆ ಹೊರಟಳು. ಮನೆಯ ಆಳಿಗೆ ಎಚ್ಚರ ಹೇಳಿ, ಕೋಣೆಗಳಿಗೆ ಬೀಗ ಹಾಕಿಸಿ, ಸುಬ್ಬಯ್ಯ ಹೊರಟ. ಬಂಡಿಯಲ್ಲಿ ಕುಳಿತ ಕಿರುಗೂಸುಗಳಲ್ಲದೆ ಉಳಿದವರು ದಾರಿಯುದ್ದಕ್ಕೂ ಮೂಕರಾಗಿ ಉಳಿದರು. ಅವರೆಲ್ಲರು ಸುಬ್ಬಯ್ಯನ ಮನೆಯನ್ನು ಸೇರುವಾಗ ಸುಮಾರು ಹನ್ನೊಂದೂವರೆ ಘಂಟೆ ಆಗಿತ್ತು.

ಎಲ್ಲರೂ ಮೋಟರನ್ನು ಅವಸರದಿಂದಿಳಿದು ಸುಬ್ಬಯ್ಯನ ಮನೆಯನ್ನು ಹೊಕ್ಕರು. ಜಮುನೆ ಮಾತ್ರ ತೀರ ಮೆಲುನಡಿಗೆಯಿಂದ ತಲೆ ತಗ್ಗಿಸಿಕೊಂಡು, ಹಿಂದಿನಿಂದ ಬಂದಳು. ಆಕೆಗೆ ಕುಸುಮ ಸಣ್ಣಮ್ಮನನ್ನು ಕಾಣಲು ನಾಚುಗೆ. ಮೊದಲಿಂದಲೂ ಕುಸುಮೆಯ ವಿಷಯವಾಗಿ

ಅವಳಿಗೊಂದು ಒಳಗಣ ಭೀತಿ. ಈಗಂತು ಯವ್ವನದ ನಾಚಿಕೆ ಸೇರಿದೆ. ಎಡೆಯಲ್ಲಿ ತನ್ನ ಮಲಿನ ರವಕೆಯ ನೆನಪು ಮಾಯದಾಗಿದೆ. ಕುಸುಮೆ ಸಹ ಅತ್ಯಪೂರ್ವ ಪ್ರಸನ್ನತೆಯಿಂದ ಅವರೆಲ್ಲರನ್ನು ಬರಮಾಡಿಕೊಂಡಳು. ಜಮುನೆಯನ್ನು, ಎರಡೂ ತೋಳು ಹಿಡಿದು ಅಲುಗಿಸಿ, 'ಬಾ ಜಮುನಾ' ಎಂದಳು. ಪಾಪ ಅವಳ ಕವುಳಂತು ಬೆವರಿಂದ ತೊಯ್ಯುತ್ತಿತ್ತು. ಕಿರಿಯ ಸುಧೀರ, ಮಾಧವಿಯನ್ನು ಹಿಡಿದು "ನೀನು ನನ್ನಕ್ಕನಂತೆ, ಅಹುದೇ?" ಎಂದು ತಾಯಿ ಮಾಡಿಸಿದ ಪಾಠವನ್ನು ತೊದಲಿದನು. ಅವಳನ್ನು ತನ್ನ ಪಾಲಿಗೆ ಹಂಚಿಕೊಂಡವನಂತೆ ಮನೆಯೊಳಕ್ಕೆ ಎಳೆದು ತಂದನು. ಅವಳ ಮುಂದೆ ತನ್ನ ಆಟಿಕೆಗಳನ್ನು ಹರವಿ-"ಎಷ್ಟು ಚಂದ ನೋಡು"-ಎಂದು ಆಲಾಪಿಸಿದನು.

ಹುಡುಗರು ಹಟ್ಟಿಯಿಂದ ಹೊರಬಿದ್ದ ದನಗಳಂತೆ ಆಚೀಚೆ, ಮನೆತುಂಬ ಅಲೆದುವು. ಹಚ್ಚ ಹೊಸ ಕರುಗಳಂತೆ ನೆಗೆದಾಡಿದುವು. ಜಮುನೆ ಮಾತ್ರ-ಏನೇನೋ ನೆನಹಿಂದ, ಕುಸುಮೆಯೊಡನೆ ಹೋಗಿ ಅವಳ ಕೊಟಡಿಯಲ್ಲಿ ಕುಳಿತಳು. ಅವಳ ಪ್ರತಿ ಎಂಟು ಮಾತುಗಳಿಗೊಂದರಂತೆ ಉತ್ತರ ಕೊಡುತ್ತಿದ್ದಳು. ಬಿ. ಎ. ಓದುತ್ತಿರುವ ಪ್ರಬುದ್ಧನು ನಿರಂಜನ. ಆತನಿಗೆ ಸಂಸಾರದ ಅರಿವು ತುಂಬಾ ಬಂದಿತ್ತು. ಅದರಿಂದ ಮಕ್ಕಳಂತೆ ಮತಿಕೆಟ್ಟು ಓಡಾಡದೆ— ಸುಬ್ಬಯ್ಯನ ಕಚೇರಿಯಲ್ಲಿ ಅವನೊಡನೆ ಕುಳಿತು, ಮೆಲ್ಲಗೆ ಮಾತನಾಡುತ್ತಿದ್ದ. ಅವರಿವರೊಳಗೆ, ಮೆಲುಮಾತುಗಳಲ್ಲಿ, ಸಂಸಾರದ ದಾರುಣ ಕತೆಗಳ ಸಿಂಹಾವಲೋಕನ ನಡೆಯುತ್ತಿತ್ತು.

ಮೊದಲು "ಜಮುನೆಗೆ ಸುಮಾರು 19 – 20 ಅಲ್ಲವೇ" ಎಂದು ಕೇಳಿದ ಸುಬ್ಬಯ್ಯ. "ವರ ನಿಶ್ಚಯವಾಗಿದೆಯೇ" ಎಂದೂ ಕೇಳಿದ. ನಿನ್ನ ತಂದೆಗೇನೇನೋ ತೊಂದರೆಯಂತೆ' ಎಂದು ತಾನು ಅರ್ಧಮರ್ಧ ಕೇಳಿದ ವಿಚಾರಗಳನ್ನು ಸ್ಪಷ್ಟಪಡಿಸಲೆತ್ನಿಸಿದ. ತಮ್ಮ ಹಿತವಂದಿಗನಾದ ಸುಬ್ಬಯ್ಯನನ್ನು ಸಂಧಿಸಿದ್ದು ಅಪೂರ್ವಕ್ಕಾದರೂ, ನಿರಂಜನನು ಸರಳ ಭಾವದಿಂದ-"ಮನೆಗೊಬ್ಬಳು ಮಲತಾಯಿ ಕಾಲಿರಿಸಿದ ಬಳಿಕ, ಎಂತಹ ಮಾರಿ ಹೊಕ್ಕಂತಾಯಿತು-ಬರಿಯ ನಾಲ್ಕೇ ನಾಲ್ಕು ವರ್ಷಗಳಲ್ಲಿ!" ಎಂದು ಒಂದೊಂದಾಗಿ ಬಣ್ಣಿಸಿದ. ಜಮುನೆಯ ಮದುವೆ ಯೋಚನೆ

ಯಿಲ್ಲದೆ ಕುಳಿತ ಬಗ್ಗೆ ಮಾತು, ಅವಳನ್ನು ಅನಾದರಿಸುತ್ತಿದ್ದ ಬಗ್ಗೆ ಮಾತು, ತಮ್ಮ ವಿದ್ಯೆಗೆ ಬರುತ್ತಿರುವ ಅಡಚಣಿ, ಅವಳಿಗಾಗಿ ಹೊಸ ಮನೆಯ ಹುಮ್ಮಸದಿಂದ ಕಕ್ಷಿಗಾರರ ಹಣ ಬಳಸಿಕೊಂಡು, ಈಗ ಬಂದಿರುವ "ಮಾನಹೋಗುವ ಪ್ರಸಂಗ"—ಎಲ್ಲವೂ ಬಂದುವು- ಸುಬ್ಬಯ್ಯನ ಮನಸ್ಸಿಗೆ, ತನ್ನ ಹಳೆಯ ಗೆಳೆಯ-ಹೇಗೆ ಸಿಂಗನಿದ್ದವನು ಮಂಗನಾದನೆಂದು ತೋರಿತು. ಅವನ ಮುಖವೂ ಸಪ್ಪಗಾಯಿತು. ಸಹಾಯ ಮಾಡುವ ಮನಸ್ಸು ತುಂಬಿತ್ತಾದರೂ-ಒತ್ತಟ್ಟು ಕುಸುಮೆಯ ಅಂಜಿಕೆ; ಇನ್ನೊತ್ತಟ್ಟು ಕೆಸರಿಗೆ ಕಾಲಿಟ್ಟಂತೆ ತಾನೂ ಹುದುಗಿ ಹೋದರೇನು ಗತಿ-ಎಂಬ ಬೆದರಿಕೆಗಳು ಮನದಲ್ಲುಂಟಾದುವು.

ಅಷ್ಟರಲ್ಲಿ ಕುಸುಮೆ-"ಏನು-ದೊಡ್ಡ ಗಂಡುಸರಿಬ್ಬರು ಮಾತಿನಲ್ಲೇ ಮಗ್ನರಾದರೆ, ಬಂದ ಮಕ್ಕಳಾದರೂ ಉಣಬೇಡವೇ? ಅವು ಬಂದೇ ಒಂದು ತಾಸಾಯಿತು. ಅಡುಗೆ ಆಗಲೇ ಆಗಿತ್ತು" ಎಂದು ದೂರಿದಳು. "ಅಯ್ಯೋ, ಮಹಾರಾಯಿತಿ, ಕರೆದಿದ್ದರೆ ಬರುತ್ತಿರಲಿಲ್ಲವೇ" ಎಂದು ಸುಬ್ಬಯ್ಯ ಎದ್ದನು. 'ನಿರಂಜನ, ಏಳು, ಕಾಲು ತೊಳೆದುಕೊಂಡು ಬರುವ' ಎಂದು ಊಟಕ್ಕೆ ಅಣಿಯಾದನು.

ಎಲ್ಲರೂ ಜತೆಯಲ್ಲಿ ಊಟಕ್ಕೆ ಕುಳಿತರು. ಆದರೆ ಅವರೊಂದಿಗೆ ಕುಳಿತಿರಲು ಅಂಜಿದವಳೆಂದರೆ ಜಮುನೆ. ಸುಬ್ಬಯ್ಯ ತುಂಬ ಆಗ್ರಹಪಡಿಸಲು ತಾನು ಕುಸುಮಕ್ಕನೊಡನೆ ಕುಳಿತುಕೊಳ್ಳುವುದಾಗಿ ಹೇಳಿದಳು. ಜಮುನೆಯ ಪ್ರತಿಯೊಂದು ನಡೆಯೂ ಅವಳ ಹಿರಿಯ ಮನೋವ್ಯಥೆಯನ್ನು ಒಡಮೂಡಿಸಿ ತೋರಿಸುತ್ತಿತ್ತು.

ಆ ದಿನದ ಭೋಜನ ಅಪೂರ್ವದ್ದಾಗಿತ್ತು. ಕುಸುಮೆಯ ಧಾರಾಳತನವೆಲ್ಲ, ಅಡುಗೆಯಲ್ಲೂ, ಬಡಿಸುವಿಕೆಯಲ್ಲೂ ವ್ಯಕ್ತವಾಗಿತ್ತು. ಆ ಮಕ್ಕಳಾದರೂ ಗೆಳೆಯರ ಅಪೂರ್ವ ಸತ್ಕಾರವನ್ನು ತುಂಬ ಹರ್ಷಚಿತ್ತರಾಗಿ ಸ್ವೀಕರಿಸಿದರು. ಎಲ್ಲರ ಊಟವಾದ ಬಳಿಕ-ಹೆಂಗಳೆಯರ ಊಟ. ಅಂದರೆ ಕುಸುಮೆ ಜಮುನೆಯರಿಬ್ಬರೇ ಕುಳಿತುಕೊಂಡು ಊಟಮಾಡಿದರು. ಕುಸುಮೆ, ಗೆಳತಿಯನ್ನು ಆದರದಿಂದ ಮೇಲಿಂದ ಮೇಲೆ ಉಪಚರಿಸಿದಳು. ಜಮುನೆಗೆ ಮಾತ್ರ, ತಾಯಿ ಗತಿಸಿದಂದಿನಿಂದ, ತಾನು ಸಹಿಸಿದ ನೋವು ನಿಂದೆಗಳ ನೆನಪಾಗಿ, ಬಾಯಿಗಿರಿಸಿದ ತುತ್ತುಗಳನ್ನು

ನುಂಗುವುದೇ ಕಷ್ಟವಾಗಿತ್ತು. ಊಟಮಾಡಿ ಏಳುವಾಗ ಅವಳದು ಅರ್ಧ ಹೊಟ್ಟೆಯೇ.

ಅವಳಂತೆ ಅರೆ ಹೊಟ್ಟೆ ಊಟಮಾಡಿದವನು-ಸುಬ್ಬಯ್ಯ. ನಿರಂಜನನ ಬಾಯಿಂದ ಕೇಳಿದ ಹಲವಾರು ಸಂಗತಿಗಳು ಅವನ ಮನಸ್ಸನ್ನು ಆವರಿಸಿ ಪೀಡಿಸುತ್ತಿದ್ದುವು. ಅದರಿಂದ ಊಟ ಮುಗಿಯುತ್ತಲೇ ಆತನನ್ನು ಕರೆದುಕೊಂಡು ಪಡಸಾಲೆಗೆ ಬಂದು, ಮೊದಲಿನಂತೆ ಆರಾಮು ಕುರ್ಚಿಯಲ್ಲಿ ಕುಳಿತು, ಮಾತನಾಡತೊಡಗಿದನು.

“ಹಾಗಿದ್ದರೆ, ವಿಮಲೆ ಬಂದ ಮೇಲೆ ಮನೆಯಲ್ಲಿ ಯಾರೊಬ್ಬರಿಗೂ ಸುಖವಿಲ್ಲ-ಅಲ್ಲವೇ”

“ಸುಖ! ನಮ್ಮ ಮನೆಯಿಂದ ಎಂದೇ ಹೊರಟುಹೋಗಿದೆ.”

“ಇರಲಿ,ಅವಳಿಗೆ ಗಂಡನ ಮೇಲಾದರೂ ಪ್ರೀತಿ ಉಳಿದಿದೆಯೇ?”

“ಅದು ಹೇಗೆ ತಿಳಿಯುತ್ತದೆ ನಮಗೆ. ಆದರೆ ಅವಳ ಬಾಯಿಂದ ಹೊರಡುವ ಮಾತುಗಳನ್ನು ಕೇಳಿದರೆ, ಯಾವ ವಿಷಯದಲ್ಲಿಯೂ ಅವಳಿಗಿರುವ ಗೌರವ ಅಷ್ಟೇ ಅನ್ನಬೇಕು. ನನಗೆ, ಆದುದರ ವಿಷಯ ಚಿಂತೆಯಿಲ್ಲ. ಮುಂದಿನ ದಿನ ಇನ್ನೂ ಕಷ್ಟದ್ದು. ಜಮುನೆಗೊಂದು ಲಗ್ನವಾಗಿದ್ದರೆ ಇಷ್ಟರಲ್ಲಿ! ಅದರ ಮೊದಲೇ--ನಮ್ಮಪ್ಪ ಅವಳ ಅಂಜಿಕೆಗೆ ನಮನ್ನು ಅಜ್ಜನ ಮನೆಗೆ ಕಳುಹಿಸಿದರೂ ಕಳುಹಿಸಿದನೇ! ಅದೇ ಬಲವಂತ ದಿನ ನಿತ್ಯ ನಡೆಯುತ್ತಿದೆ. ‘ನನಗೆ ವಿದ್ಯೆ ಸಾಕು. ಬೇಕಾದರೆ ಒಂದು ಚಾಕರಿ ದೊರಕಿಸಿಕೊಂಡು, ತಮ್ಮಂದಿರನ್ನು ತಂಗಿಯರನ್ನು ಸಾಕಲಿ’ ಅನ್ನುತ್ತಾಳೆ.

“ಅಪ್ಪನ ಮೇಲೆ ಈಚೆಗೆ ಬಂದ ವಿಪತ್ತಿನ ವಿಷಯ ಅವಳಿಗೆ ತುಸುವಾದರೂ ಕರುಣೆಯಿಲ್ಲ. ಕಕ್ಷಿಗಾರರ ಹಣ! ಅವರು ಕೋರ್ಟಿಗೆ ದೂರು ಕೊಟ್ಟರೆ-ಮುಂದೆ ಏನಾದೀತೆಂಬ ಕಲ್ಪನೆಯೇ ಅವಳಿಗಿಲ್ಲ. ಉಡ್ಪಿಗೆ ಹೋಗುವ ದಿವಸವೂ ಆ ಚಿನ್ನ-ಈ ನಗ ಅನ್ನುತ್ತಲೇ ಇದ್ದಳು. ಅಂಥವಳ ಮುಂದೆ ಅವರಾದರೂ ಏನು ಮಾಡಿಯಾರು?”

ಸುಬ್ಬಯ್ಯ ಒಂದೊಂದನ್ನೂ ಬಿಡಿಸಿ ಕೇಳುತ್ತಿದ್ದ. ನಿರಂಜನನು “ನನಗೊಂದು ಬಿ. ಎಲ್. ಆಗಿಹೋಗಿದ್ದರೆ, ಮುಂದೇನಾದರೂ ಹೆದರಿಕೆಯಿಲ್ಲ. ಕಷ್ಟವೋ ಸುಖವೋ! ತಮ್ಮಂದಿರೂ ತಂಗಿಯರೂ ನನಗೆ

ಹೊರೆಯಾಗಲಾರರು. ಇತ್ತಲಾಗಿ ಅಪ್ಪ ಮನೆಯನ್ನು ಮಾರಾಟಮಾಡಿಯಾದರೂ, ಕಕ್ಷಿಗಾರರ ಬಾಯಿಯಿಂದ ಒಮ್ಮೆ ಬಚಾಯಿಸಿದ್ದರೆ ಆಗುತ್ತಿತ್ತು."

"ಎಷ್ಟಿದೆ ನಿನ್ನ ತಂದೆಗೆ ಸಾಲ?"

"ಅದನ್ನು ಅವರು ನಮ್ಮೊಡನೆ ಹೇಳುತ್ತಾರೆಯೇ? ಮನೆಯ ಸಾಲವೂ ಮುಗಿದಿಲ್ಲ. ಅದರ ಬಡ್ಡಿಯನ್ನೂ ಕೊಟ್ಟಿಲ್ಲ. ಮೇಲೆ ಇವರು ಬಳಸಿಕೊಂಡ ಹಣವೆಲ್ಲ-ಚಿಕ್ಕಮ್ಮನ ಸಿಂಗಾರಕ್ಕೇ ಹೋಗಿರಬೇಕು.... ನೀವು ಕೇಳಿದರೆ ಹೇಳುತ್ತಾರೆಯೋ ಏನೋ" ಎಂದನು. ಮಾತನಾಡುವಾಗಲೆಲ್ಲ ಸಂಸಾರದ ಭಾರವೆಲ್ಲ ತನ್ನ ಮೇಲೆಯೇ ಕುಸಿದುಬಿದ್ದಂತೆ ಆತ ವರ್ತಿಸುತ್ತಿದ್ದ. ಸುಬ್ಬಯ್ಯಗೆ ತುಂಬ ಬೇಸರವಾಯಿತು. "ನೋಡುವ, ಇವತ್ತು ಬರುತ್ತಾನಲ್ಲ. ನಾನೆಲ್ಲ ವಿಚಾರಿಸುತ್ತೇನೆ. ನನ್ನಿಂದಾಗುವ ಕೆಲಸವಾದರೆ ಏನೂ ಮಾಡಬಹುದು. ನನ್ನಶಕ್ತಿಗೆ ಮೀರಿದ್ದಾದರೆ ಏನು ಗತಿ? ಈಗ ನಿನ್ನೊಬ್ಬನ ವಿದ್ಯಾಭ್ಯಾಸಕ್ಕಾಗಿ ನೀನು ಯೋಚಿಸಬೇಕಾಗಿಲ್ಲ. ಬಿ. ಎಲ್. ಓದಲು ನಾನು ಹೇಗಾದರೂ ಮಾಡಿ ಖರ್ಚಿಗೆ ಕೊಟ್ಟೇನು. ಇತ್ತ,ಜಮುನೆಯಂತಹ ಹುಡುಗಿಗೆ ಗಂಡನನ್ನು ಹುಡುಕುವುದಕ್ಕೂ ಕಷ್ಟವಾಗಲಾರದು."

"ಮೊದಲು ಅವಳನ್ನು ಪಾರುಮಾಡಿಸಬೇಕು. ನಾವೆಲ್ಲ ಶಾಲೆಗೆ ಹೋಗಿ ಬರುವಾಗ ಅವಳ ಕಷ್ಟ ತಿಳಿಯುವುದಿಲ್ಲ. ಅಲ್ಲದೆ ಚಿಕ್ಕತಾಯಿ ತಿರುಗಿ ಬಂದರೆ, ಇವಳಿಗೆ ಇದ್ದ ಬಾಯಿಯೂ ಇಲ್ಲ. ದಿನವೆಲ್ಲ ಅವಳ ಬೈಗುಳು ಕೇಳಿಯೇ ಸಮಯ ಕಳೆಯಬೇಕು ಅವಳು. ಜಮುನೆಯ ಬೆಳವಣಿಗೆಯೇ ಅರ್ಧಕ್ಕರ್ಧ ನಿಂತಿದೆ."

ಇವರಿಬ್ಬರು ಈ ಕಡೆ ಮಾತನಾಡುತ್ತ ಕುಳಿತಿದ್ದಂತೆಯೇ, ಕೊಟಡಿಯೊಳಕ್ಕೆ ಕುಸುಮೆ ಜಮುನೆಯರು ಕುಳಿತಿದ್ದರು. ಇಬ್ಬರ ಪಾಲಿನ ಮಾತನ್ನೂ ಕುಸುಮೆಯೇ ಮುಗಿಸುತ್ತಿದ್ದಳೆಂದರೂ ಚಿಂತೆಯಿಲ್ಲ. ವಿಮಲೆಯ ಉಪಟಳವನ್ನು ಕೇಳಿ, ಟೀಕಿಸುವುದೆಂದರೆ ಅವಳಿಗೊಂದು ಔತಣವೇ ಆಗಿತ್ತು.

ಹೀಗೆಲ್ಲ ಮಾತುಗಳು ನಡೆಯುತ್ತಿರುವಾಗಲೇ ತಾಸು ನಾಲ್ಕಾಯಿತು. ಸಂಜೆಯ ಉಪಾಹಾರ, ಕ್ರಮವಾಗಿ ನಡೆಯಿತು. ಸುಬ್ಬಯ್ಯ

-"ಹೇಗೂ ಬಂದಿದ್ದೀರಿ. ಒಟ್ಟಿಗೆ ಸಿನೆಮಾ ನೋಡದೆ ಯುಗವಾಯಿತು; ಬನ್ನಿ, ಹೋಗುವ"-ಎಂದು ಪೀಠಿಕೆ ಹಾಕಿದ. ಸಣ್ಣವರೆಲ್ಲರು ತುಂಬ ಉತ್ಸಾಹದಿಂದ ಕುಣಿದಾಡಿದರು. ನಿರಂಜನ 'ನಾನೂ ಜಮುನೆಯೂ ಮನೆಗೇ ಹೋಗುತ್ತೇವೆ. ಅಲ್ಲಿ ಯಾರದರೂ ಬೇಡವೇ' ಎಂದು ವಾದಿಸಿದ. ಸುಬ್ಬಯ್ಯ ಅವರಿಬ್ಬರನ್ನು ಮೊದಲು ಮನೆಯ ತನಕ ಮುಟ್ಟಿಸಿ ಬಂದನು. ಅನಂತರ ಉಳಿದವರನ್ನು ಸಿನೆಮಾ ಪ್ರದರ್ಶನಕ್ಕೆ ಒಯ್ಯುವ ತಯಾರಿ ನಡೆಯಿಸಿದನು. ಐದೂವರೆಯಾಗುತ್ತಲೇ,ಅವರ ಮೋಟರು ಸಿನೆಮಾ ಮಂದಿರದ ಕಡೆಗೆ ಹೊರಟಿತು.

ಅವರು ಹೊರಟುಹೋದ ಹತ್ತು ನಿಮಿಷಗಳಲ್ಲಿ ವೆಂಕಪ್ಪನ ಸವಾರಿಯು ಉಡುಪಿಯಿಂದ ನೆಟ್ಟಗೆ ಅಲ್ಲಿಗೇನೆ ಆಗಮಿಸಿತು. ಮನೆಯ ಆಳಿನಿಂದ ಅವರೆಲ್ಲರೂ ಸಿನೆಮಾಕ್ಕೆ ಹೋದ ವಿಚಾರ ತಿಳಿಯಿತು. ಆಗಲೇ ಪ್ರಯಾಣದಿಂದ ಆತ ದಣಿದು ಬಂದಿದ್ದ. ಆಳಿನಿಂದ ನೀರನ್ನು ತರಿಸಿಕೊಂಡು, ಮುಖ ತೊಳೆದುಕೊಂಡು ಉಸ್ಸೆಂದು ಕುಳಿತ. ಉಪಾಹಾರ ಬಂದಿತು. ಅದನ್ನು ಮುಗಿಸಿದ. 'ಇನ್ನೇನು ಮಾಡಲಿ, ಕ್ಲಬ್ಬಿಗೆ ಹೊಗಲೇ,ಮನೆಗೇ?ಅಥವಾ ಅವರೆಲ್ಲರೂ ಬರುವ ತನಕ ಕಾದಿರಲೇ?' ಎಂದು ವಿಚಾರಮಾಡತೊಡಗಿದ. ಅಷ್ಟು ಬೇಗನೆ ಮನೆಗೆ ಹೋಗಿ ಮಾಡುವುದೇನು—ಎಂದು ತೋರಿತು. ಕ್ಲಬ್ಬಿಗೆ ಹೋಗುವುದಕ್ಕೂ ಮನಸ್ಸು ಬರಲಿಲ್ಲ. ಅವನು ಮಾಡಿಕೊಂಡ ಹಣದ ಗೊಂದಲಗಳಿಂದಾಗಿ, ಹತ್ತು ಮಂದಿ ಗೆಳೆಯರ ಮುಂಗಡೆಯಲ್ಲಿ ಅವನು ಉಲ್ಲಾಸವಾಗಿ ನಲಿಯುವ ಸ್ಥಿತಿಯಲ್ಲೂ ಇದ್ದಿರಲಿಲ್ಲ. ಸರಿ; ಉಳಿದ ಉಪಾಯವೆಂದರೆ ಇದ್ದಲ್ಲೇ ಇದ್ದು ಬಿಡುವುದು.

ಆವನ ಮನಸ್ಸೆಲ್ಲ ಆ ದಿನ ಬೇಸರದಿಂದ ಕುದಿಯುತ್ತಿತ್ತು. ವಿಮಲೆಯನ್ನು ಬೀಳ್ಕೊಡುವಾಗ ಅವಳು ಕಟ್ಟಪ್ಪಣೆ ಮಾಡಿದ್ದಳು—'ನಾನು ಮನೆಗೆ ಬರಬೇಕಾದರೆ, ನೀವು ಮಕ್ಕಳನ್ನು ಬೇರೆ ಮನೆಯಲ್ಲಿ ಕುಡ್ರಿಸಬೇಕು, ಅಜ್ಜನ ಮನೆಗೆ ಕಳುಹಿಸಲು ಇಷ್ಟವಿಲ್ಲದೆ ಹೋದರೆ"-ಎಂದು ಆಜ್ಞೆಯಾಗಿತ್ತು. ಅತ್ತ ಆ ಆಣತಿ, ಇತ್ತ ತಾನು ಬಳಸಿದ ಹಣ ತುಂಬಿಸದೆ ಹೋದರೆ ತಲೆಯ ಮೇಲೆ ಬೀಳುವ ಅವಮಾನದ ಆಕಾಶ—ಇವೆರಡರ ನೆನವರಿಕೆಯಲ್ಲಿ, ಹೆಣದ ಮುಖಮಾಡಿಕೊಂಡು ಕುಳಿತನು.

ಶರೀರಾಯಾಸದಿಂದ ಅಲ್ಲೇ ತೂಕಡಿಕೆ ಬಂದಿತು. ನಿದ್ದೆಯೂ ಬಂದಿತು.

ಸಿನೆಮಾಕ್ಕೆ ಹೋದವರು ಚಿತ್ರ ಮುಗಿಸಿಕೊಂಡು, ವೆಂಕಪ್ಪನ ಮನೆಯು ತನಕ ಪಯಣ ಬೆಳೆಯಿಸಿ, ಮಕ್ಕಳನ್ನು ಅಲ್ಲಿ ಬಿಟ್ಟು, ತಮ್ಮ ಮನೆಗೆ ಬರುವಾಗ, ಆತ ಆರಾಮ ಕುರ್ಚಿಯಲ್ಲಿ ಮಂಕನಂತೆ ವಿರಮಿಸುತ್ತಿದ್ದ. ಗಳಿಗೆಗೊಮ್ಮೆ, ಗೋಡೆಗೆ ತಗಲಿಸಿದ ಗಡಿಯಾರವನ್ನು ಕಾಣುತ್ತ ಸಮಯ ಎಣಿಸುತ್ತಿದ್ದ. [illegible]ದಿರಲೇ, ಹೊರಡಲೇ — ಎಂಬ ಪ್ರಶ್ನೆಗಳನ್ನು ತನಗೆ ತಾನೇ ಕೇಳಿಕೊಳ್ಳುವ. ಕಾರಿನ ಧ್ವನಿಯನ್ನು ಕೇಳುತ್ತಲೇ ಧೈರ್ಯವಾಯಿತು; ಎಚ್ಚತ್ತುಕೊಂಡ.

ಸುಬ್ಬಯ್ಯ ಅವನನ್ನು ಕಾಣುತ್ತಲೇ "ಎಷ್ಟು ಹೊತ್ತಾಯಿತು?" ಎಂದು ಕೇಳಿದ. ಕುಸುಮೆ 'ನೀವೂ ಬಂದಿದ್ದರೆ ಸಿನೆಮಾಕ್ಕೆ ಬರಬಾರದಿತ್ತೇ?' ಎಂದು ಉಪಚರಿಸಿದಳು. ಅಡುಗೆ ಸಿದ್ಧವಾದುದರಿಂದ, 'ಮೊದಲು ಊಟಕ್ಕೇಳು' ಎಂದು ಅವನನ್ನು ಎಬ್ಬಿಸಿಕೊಂಡು, ಭೋಜನದ ಕೆಲಸ ಸಾಗಿಸಿದರು.

ಊಟ ಮುಗಿದ ಬಳಿಕ ಮೂವರೂ ಹೊರಕ್ಕೆ ಬಂದರು. ವೆಂಕಪ್ಪ 'ಈಗ ಹೋಗುತ್ತೇನೆ' ಎಂದರೂ ಇಬ್ಬರ ಬಲವಂತದಿಂದ ಅಲ್ಲಿಯೇ ನಿಲ್ಲಬೇಕೆಂದಾಯಿತು. ಒಳಗೊಳಗೆ ಅವನ ಮನಸ್ಸು, — ಮನೆಗೆ ಹೋಗಿ ಮಕ್ಕಳಿಗೆ ಮುಖ ತೋರಿಸುವ ಸ್ಥಿತಿಯಲ್ಲೇ ಇರಲಿಲ್ಲ. ಅಲ್ಲದೆ ಅವಕಾಶಮಾಡಿಕೊಂಡು ತನ್ನ 'ಸಾಲಶೂಲ'ಗಳನ್ನು ಸುಬ್ಬಯ್ಯನ ಮುಂದೆ ಬಿನ್ನವಿಸಿಕೊಳ್ಳಬೇಕು; ಕುಸುಮೆಯ ಮನವನ್ನು ಒಲಿಸಿಕೊಂಡು, ತನ್ನ ಆಪತ್ತನ್ನು ನಿವಾರಿಸಿಕೊಳ್ಳಲು ಬಗೆಗಾಣಬೇಕೆಂದು ಹಾತೊರೆಯುತ್ತಿದ್ದ.

ಕುಸುಮೆ ಮಾತಿಗೆ ಮುಂದಾಳು: ತಾನಾಗಿ—'ಹಾಗಂತೆ, ಹೀಗಂತೆ' ಎಂದು ವಿಮಲೆಯ ನಡವಳಿಕೆಯ ವಿಷಯವನ್ನು ತೆಗೆದಳು. ಸಹತಾಪ ತೋರಿಸಿದಳು, ಅದೇ ಧೋರಣೆಯಿಂದ ಪತಿಯೊಡನೆ ವಾದಿಸಿದಳು. ಆದುದರಿಂದ ವೆಂಕಪ್ಪನ ಕೆಲಸವೆಂದರೆ, ಇದ್ದ ಕೊರಗಿಗೆ ಹೆಚ್ಚಿನ ಬಣ್ಣ ಸವರಿ, ಅವಳ ಕನಿಕರಕ್ಕೆ ತಕ್ಕವನಂತೆ ತೋರಿಸುವುದು.

ಕಕ್ಷಿಗಾರನ ಹಣ ಬಳಸಿಕೊಂಡುದಕ್ಕೆ, ಆತ ಅವಮಾನಕ್ಕೆ ಗುರಿಯಾಗದಂತೆ ಕಾಯುವ ವಿಚಾರ ಬಂದಿತು. ಆ ಕಕ್ಷಿಗಾರನ ಪರಿಚಯ

ಸುಬ್ಬಯ್ಯನಿಗಿತ್ತು. ಅದು ಕಷ್ಟವೆಂದು ತೋರಲಿಲ್ಲ. ಆದರೆ ಆತನ ಹಣವನ್ನು ತೆರುವ ದಾರಿ? ಜಂಂಕಕ್ಕೂ ಮಿಗುವ ಮೊಬಲಗು. ಅದಕ್ಕಾಗಿ ಈಗಲೇ ಹೊಣೆಯಲ್ಲಿ ನಿಂತ ಮನೆಯನ್ನು ಮಾರುವುದೆಂದು ಸೂಚಿಸಿದನು. ವೆಂಕಪ್ಪನು ಎಲ್ಲದಕ್ಕೂ "ಹೂಂ" ಅನ್ನುತ್ತಾನೆ. "ಆದರೆ ಮನೆ ಮಾರಿದರೆ ಮನೆಯಾಕೆ ಉರಿಯಾದಾಳಲ್ಲ" ಎಂಬ ಅಂಜಿಕೆಯನ್ನು ಮಾತ್ರ ತೋರಿಸಿದ. ಕುಸುಮೆಯು "ನೀವು ಅವಳಿಗೆ ಹೆದರಿ ಕುಳಿತರೆ, ಮಾನವೂ ಹೋಗಿ, ಅವಳೂ ಸಿಟ್ಟಾಗುವಂತಾಗುತ್ತದೆ" ಎಂದು ತಿಳಿಸಿದಳು. ಅನಂತರ ಜಮುನೆಯ ಲಗ್ನದ ವಿಚಾರ ಬಂದಿತು. ನಿರಂಜನನ ವಿದ್ಯಾಭ್ಯಾಸ ಬಂದಿತು. ಬಿಡಾರವು-ಎರಡಾಗುವ ವಿಷಯ ಬಂದಿತು. ಎರಡಾಗುವ ವಿಷಯ ಹೇಳುತ್ತ: "ನೋಡು ಸುಬ್ಬಯ್ಯ— ನನ್ನ ನಿನ್ನ ಸ್ನೇಹ ಇವತ್ತಿನದಲ್ಲ; ನೀನು ಒಮ್ಮೆ ಮಾನ ಕಾಯ್ದು ಕೊಟ್ಟರೆ, ಯಾವುದರಲ್ಲೂ ನಿನ್ನ ಮಾತನ್ನು ಮೀರುವುದಿಲ್ಲ"-ಎಂದು ಆಣೆಯನ್ನು ಮಾಡಿ ಹೇಳಿದ ಮೇಲೆ, ಈತ "ಆಗಲಿ ನೋಡುವ, ನನ್ನಿಂದಾದ ಪ್ರಯತ್ನವನ್ನು ಮಾಡುತ್ತೇನಪ್ಪ"— ಎಂದು ವಚನವಿತ್ತನು. ಎಲ್ಲಕ್ಕೂ ಕುಸುಮೆಯ ಬೆಂಬಲವಿದ್ದಂತೆ ಕಂಡುದರಿಂದ ಸುಲಭವಾಯಿತು. ಕುಸುಮೆಯು ಆ ರಾತ್ರಿ, ಪತಿಯೊಡನೆ "ಕೆಲಸವಾದ ಮೇಲೆ ವೆಂಕಪ್ಪ ಟೊಪ್ಪಿ ತಿರುಗಿಸಲಾರನಲ್ಲ" ಎಂದು ಅನುಮಾನವನ್ನು ಸೂಚಿಸಿದಳು. ಆದರೂ ಒಮ್ಮತದಿಂದ ಅವನ ನೆರವಿಗೆ ಹೋಗುವುದೆಂದು ನಿರ್ಣಯವಾಯಿತು. ಅವರ ಸಂಭಾಷಣೆ ಮುಗಿಯಿತು. ವೆಂಕಪ್ಪನೂ ಅಲ್ಲಿಯೇ ರಾತ್ರಿ ವಿಶ್ರಮಿಸಿ, ಬೆಳಿಗ್ಗೆ ಲಘುಚಿತ್ತನಾಗಿ ತನ್ನ ಮನೆಗೆ ಹಿಂದೆರಳಿದನು.

೧೩ನೆಯ ಅಧ್ಯಾಯ.

ಬೇಸಗೆಯ ರಜೆಗಾಗಿ ಸುಬ್ಬಯ್ಯ ಕಾದು ಕುಳಿತಿದ್ದ. ಆ ವಿರಾಮದ ಸಮಯವನ್ನು ವೆಂಕಪ್ಪನ ತಾಪತ್ರಯಗಳ ನಿವಾರಣೆಗೆ ಮೀಸಲಾಗಿರಿಸಿದ್ದ. ಈಗ ರಜೆ ಪ್ರಾಪ್ತಿಸಿತು. ಒಂದೊಂದನ್ನೆ ಅವನು ವ್ಯವಸ್ಥೆ ಮಾಡಬೇಕು. ಮೊದಲನೆಯ ಕೆಲಸವು— ಹಣದ ವ್ಯವಹಾರ. ಬಳಿಕ

ಜಮುನೆಗೆ ವರಾನ್ವೇಷಣ. ವಿಮಲೆಯು ಗಂಡನ ಮನೆಗೆ ಬರುವ ವಿಷಯದಲ್ಲಿ ಇರಿಸಿದ ಶರ್ಯತ್ತಿನ ವಿಷಯ ತಾನು ಕೈಹಾಕುವವನಲ್ಲ ವೆಂದು ಸುಬ್ಬಯ್ಯ ಸ್ಪಷ್ಟವಾಗಿ ನುಡಿದಿದ್ದ. ಹೆಂಡತಿಯ ಸಲುವಾಗಿ ಮಕ್ಕಳನ್ನು ದೂರವಿರಿಸು-ಎಂದಾಗಲೀ, ಮಕ್ಕಳ ಸಲುವಾಗಿ ಹೆಂಡತಿ ದೂರವಿರಲಿ—ಎಂದಾಗಲೀ, ಎರಡೂ ಅವನು ಹೇಳಬಾರದ ಸಂಗತಿ ಯಷ್ಟೆ. ಕುಸುಮೆಯೂ ಅದೇ ಸಮನೆಂದಿದ್ದಳು. ಅವಳ ಅಂತರಂಗವು ಮಾತ್ರ'ಅವಳೂ ಅವಳ ಮಗುವೂ ಉಡುಪಿಯಲ್ಲೇ ಬಿದ್ದಿರಲಿ. ತವರಿ ನವರಿಗೆ ಬುದ್ಧಿ ಯಿಲ್ಲವೇ?ಮಗಳ ಸಲ್ಲದ ಹಟವನ್ನು ತಡೆಯಬಾರದೆ?' ಎಂದಿತ್ತು. ಈ ನಡುವೆ ವಿಮಲೆಯು ಹಡೆದಾಗಿತ್ತು. ಅವಳೊಂದು ಗಂಡು ಶಿಶುವಿನ ತಾಯಿಯಾಗಿದ್ದಾಳೆಂದು ವಾರ್ತೆ ಬಂದಿತು.

ವೆಂಕಪ್ಪನು ಪತ್ನಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವೆನಾಗಿ ಯೋಚಿಸಿದ. ನಿರಂಜನನು ಬಿ. ಎಲ್. ಮುಗಿಯುವ ತನಕ ಎಲ್ಲರೂ ಜತೆಯಲ್ಲಿದ್ದು, ಮುಂದೆ ಅವನೊಂದಿಗೆ ಮಕ್ಕಳು ವಾಸಮಾಡುತ್ತಾರೆ- ಎಂದು ಹೆಂಡತಿಗೆ ಸಮಾಧಾನಹೇಳಲು ಹೋದ. ಆಕೆ ಹಡೆದು ಈಗ ತಿಂಗಳೆರಡಾಗಿತ್ತು. ಇನ್ನೂ ತವರಿನಲ್ಲಿ ಎರಡುಮೂರು ತಿಂಗಳು ಕಾಲ ಕಳೆದು ಬಾ-ಎಂದು ಉಪಚರಿಸಿದ. ಆದರೆ ವಿಮಲೆ ಬಗ್ಗುವ ಜಾತಿಯೇ ಆಗಿರಲಿಲ್ಲ. 'ನಿಮ್ಮ ಮಗ ವಕೀಲಿ ಮಾಡಿ ಉದ್ಧರಿಸುವುದನ್ನು ನೋ ಡುವ ತನಕ, ನಿಮ್ಮ ಮಕ್ಕಳೆಡೆಯ ನರಕವು ನನಗೆ ಬೇಡ'—ಎಂದು ಖಂಡಿತವಾಗಿ ನುಡಿದು ಬಿಟ್ಟಳು. ಜತೆಗೆ ವಿಮಲೆಯ ತಾಯಿಯೂ ಮಗಳ ಪಕ್ಷವಹಿಸಿ ಅಳಿಯನೊಡನೆ ರಣಾಗ್ರಕ್ಕೆ ಬಂದಳು. ಇದೇ ವೇಳೆಗೆ, ಸುಬ್ಬಯ್ಯನ ಮಾತುಗಳನ್ನು ಕೇಳಿ,ಮನೆಯನ್ನು ಆತ ಪರರಿಗೆ ವಿಕ್ರಯಿಸಲು ನಿರ್ಧರಿಸಿದ ಸುದ್ದಿ ಅವಳಿಗೆ ಮುಟ್ಟಿ, ಅವಳು ಶೂರ್ಪ ನಖಿಯಂತಾದಳು. ಅಂತು ಎಲ್ಲ ವಿಧದಿಂದಲೂ ಅವನ ಸಂಧಾನ ಕಾರ್ಯವು ವಿರಸವಾಯಿತು. ವಿಮಲೆಯ ಕುದುರೆಗೆ ಕಾಲು ಮೂರೇ, ಏಕೆ? ಎರಡು ಸಹ ಕಾಲುಗಳಿಲ್ಲ--ಎಂಬುದನ್ನು ಆತನು ಮನಗಾಣು ವಂತಾಯಿತು.

ಆದರೆ ಹೆಣ್ಣಿನ ವ್ಯಾಮೋಹ ಹಿರಿದು. ಅಷ್ಟೆಲ್ಲ ಧೂರ್ತೆ ವಿಮಲೆ ಯೆಂದು ತಿಳಿದಿದ್ದರೂ, ಮೈಮನಗಳೆಲ್ಲ ಅವಳ ಸಖ್ಯವನ್ನು ಹಂಬ

ಲಿಸುತ್ತಲೇ ಇದ್ದುವು. ಜಮುನೆಯು ಮಾತಿನಲ್ಲಿ "ಅವಳು-ಅಪ್ಪನಿಗೇ ನೋ ಮಂಕು ಬೂದಿಯೆರಚಿರಬೇಕು. ಇಲ್ಲವೇ ಮದ್ದರೆದು ಉಣಿಸಿ ರಲೂಬಹುದು." ನಿರಾಶನಾದ ಆತ, ತನ್ನ ಹಳೆಯ ಮಾವನ ಮನೆಗೆ ಹೋದ. ಶೀಲಕ್ಕನ ತಂದೆ ತಾಯಿಗಳ ಮುಂದೆ ತನ್ನ ಬನ್ನಗಳನ್ನೆಲ್ಲ ಹೇಳಿಕೊಂಡ. ಶೀಲಕ್ಕನ ತಾಯಿ, ಉಡುಪಿಯ ತನಕವೂ, ಏಕಾಏಕಿ ಸಂಧಾನಕ್ಕೆಂದು ತೆರಳಿದಳು. ಅಲ್ಲಿ ಮುಖಕ್ಕೆ ಮಸಿ ಸವರಿಕೊಂಡು ಮರಳಿ ಬಂದುದೂ ಆಯಿತು. ಎಲ್ಲರ ಬಾಯಲ್ಲೂ ವಿಮಲೆಯೇ ತಪ್ಪಿತಸ್ಥೆಳೆಂದು ಸ್ಥಾಪನೆಯಾಯಿತು. ಅದರಿಂದಾಗಿ ವೆಂಕಪ್ಪ ಅವಳೊಡನೆ ಕರುಣೆಯ ಭಿಕ್ಷೆ ಬೇಡಲಾಗಲಿಲ್ಲ. ಅದಕ್ಕೂ ಮುಂಚೆ—'ಹೋಗಲಿ ಅವಳಿಗೆ ತವರೇ ಹೆಚ್ಚಾದರೆ, ಅಲ್ಲೇ ಇರುತ್ತಾಳಂತೆ. ಅವಳ ಋಣ ವೊಂದು ಕಡಿಯಿತು' ಎಂದು ಉಸಿರುಗರೆಯುವಂತಾಯಿತು.

ವೆಂಕಪ್ಪ ತೀರ ಹತಾಶನಾಗುವುದಾಯಿತು. ಅವನ ಬಾನೆಲ್ಲ ಬಿರುಗಾಳಿ, ಕಾರ್ಮುಗಿಲು, ಸಿಡಿಲು ಮಿಂಚುಗಳ ಅಬ್ಬರದಿಂದ ತತ್ತರಿಸುವುದಾಯಿತು. ತಾನು ಇಷ್ಟೊಂದು ದಿನ ಕಾಲ, ಯಾವ ತೀರ್ಮಾನಕ್ಕೆ ಬಂದೆನೆಂದು ಯಾರಲ್ಲಿಯೂ ತಿಳಿಸುವ ಮುಖ ಅವನಿಗಿರಲಿಲ್ಲ. ನೆಟ್ಟಗೆ ಕಾರ್ಕಳದ ಪಯಣ ಮುಗಿಸಿ,ಮನೆಗೆ ಬಂದು ಕುಳಿತವನು,— ಸುಬ್ಬಯ್ಯನ ದರ್ಶನಕ್ಕೂ ಹೋಗಲಿಲ್ಲ. ಸುಬ್ಬಯ್ಯ ತಾನಾಗಿ ಅವನಲ್ಲಿಗೆ ಓಡುವಂತಾಯಿತು. ಆತನ ಪ್ರಯತ್ನದ ಫಲವಾಗಿ ಮನೆಯು ಸಾಲಕ್ಕೆ ಬಡ್ಡಿಕೊಡುವುದು ತಪ್ಪಿತು. ಬಳಸಿದ ಹಣವನ್ನು ರಾಜಿಯಿಂಡ ಸಲಿಸಲು ಒಪ್ಪಿಗೆ ದೊರೆಯಿತು. ಕೊನೆಗೆ ವೆಂಕಪ್ಪನ ದಾರುಣ ಕತೆಗೆ, ಸುಬ್ಬಯ್ಯ ಕಕ್ಷಿಯವನನ್ನು ಒಲಿಸಿ, ಅವನ ಮನೆಯನ್ನು ಕಕ್ಷಿಯವನ ಕೊರಳಿಗೆ ಕಟ್ಟಿದ್ದಾಯಿತು. ಆದರೂ, ಮೂರು ಸಾವಿರ ರೂಪಾಯಿಗಳ ಸಾಲ ಉಳಿಯಿತು. ಅದನ್ನು ತತ್ಕಾಲಕ್ಕೆ ತಾನೇ ಕೊಡಲು ಒಪ್ಪಿದ. ಅವನು ಈ ಪ್ರಸಂಗಕ್ಕೆ ಕೈ ಹಾಕದೆ ಹೋಗಿದ್ದರೆ ಸಾಲದ ಹೊರೆಯಲ್ಲದೆ,ಸನ್ನದಿಗೂ ಮೋಸ ಬರುವಂತಿತ್ತು. ಸುಬ್ಬಯ್ಯನ ಓಡಾಟಗಳಲ್ಲಿ, ನಿರಂಜನನು ತಂದೆಗಾಗಿ ಪಟ್ಟ ಶ್ರಮ ಸ್ವಲ್ಪವಲ್ಲ. ಮಂಕು ಹಿಡಿದ ವೆಂಕಪ್ಪನಿಗೆ—"ಆಗಲಿ, ನೀನು ಹೇಳಿದ್ದಕ್ಕೆ ಒಪ್ಪಿಗೆ" ಎಂಬಿತ್ಯಾದಿ ಉತ್ತರ ಸಲಿಸುವ ಕೆಲಸವಲ್ಲದೆ ಹೆಚ್ಚಿನದ್ದಿರಲಿಲ್ಲ.

ಇತ್ತ ವರನ ಶೋಧನೆಯ ಕೆಲಸವನ್ನು ಆತ ಮರೆತಿರಲಿಲ್ಲ. ಅವನಿಗದರಲ್ಲಿ ತುಂಬ ಉತ್ಸಾಹವಿತ್ತು. ವೆಂಕಪ್ಪ ತನಗೆ ಲಗ್ನ ಮಾಡಿಸಿದವನಲ್ಲವೇ? ಅದರಿಂದ ಅವನಿಗೊಬ್ಬ ಅಳಿಯನನ್ನು ದೊರಕಿಸಿಕೊಟ್ಟೆನಾದರೆ ಋಣ ಸಂದಾಯವಾದಂತೆ— ಎಂದು ತಿಳಿದಿದ್ದನು. ಸುದೈವಕ್ಕೆ ಆ ಕೆಲಸವೂ ಸುಲಭವಾಯಿತು. ಮಂಗಳೂರಲ್ಲೇ ಉಪಾಧ್ಯಾಯ ವೃತ್ತಿ ಮಾಡಿಕೊಂಡಿದ್ದ ಒಬ್ಬರು ಸ್ನೇಹಿತರ ಪರಿಚಯವಾಯಿತು. ಸ್ವಜಾತಿಯಲ್ಲಿ ಕೈ ಬೆರಳುಗಳಷ್ಟು ವಿದ್ಯಾವಂತರಿದ್ದರು. ಅವರಲ್ಲಿ ಶ್ಯಾಮರಾಯನೊಬ್ಬ,ಬಿ. ಎ. ಓದಿದ್ದಾನೆ. ತಿಂಗಳಿಗೆ ೬೦ ರೂಪಾಯಿಗಳ ವರಮಾನ ತರುತ್ತಿದ್ದ ಖಾಸಗಿ ಶಾಲಾ ಮಾಸ್ತರಿಕೆ ಅವನಿಗೆ. ಸುಬ್ಬಯ್ಯ ಒಂದು ದಿವಸ ಜಮುನೆಯನ್ನು ಮನೆಗೆ ಕರೆಯಿಸಿಕೊಂಡನು. ಕುಸುಮೆಯೇ ಅವಳನ್ನು ಸಾಲಂಕೃತಳನ್ನಾಗಿ ಮಾಡಿದಳು. ಶ್ಯಾಮರಾಯನಿಗೂ ನಿರಂಜನನಿಗೂ ಉಪಾಹಾರಕ್ಕೆ ಆಮಂತ್ರಣವಾಗಿತ್ತು. ಬಿಸಿಕಾಫಿ, ಉಪಾಹಾರಗಳ ಎಡೆಯಲ್ಲಿ ಅವರಲ್ಲಿನ ಪರಸ್ಪರ ಪರಿಚಯ ನಡೆಯಿತು. ಶ್ಯಾಮರಾಯ ಜಮುನೆಯನ್ನು ತುಂಬ ಮೆಚ್ಚಿದ. ಸುಬ್ಬಯ್ಯ ಅವಳನ್ನು ಹೊಗಳಿದ. ಆ ಮಾತುಗಳಿಗೆ ಕಿವಿಗೊಟ್ಟ. ವೆಂಕಪ್ಪನ ಮೇಲೆ ಕವಿದ ಮುಗಿಲುಗಳ ವಿಚಾರ ಅವನು ತಿಳಿದಿದ್ದನಾದರೂ, ಸುಬ್ಬಯ್ಯನ ಸ್ಪಷ್ಟ ಮಾತುಗಳಿಗೆ ಮನ್ನಣೆ ನೀಡಿದ. 'ತಾವೆಂದಂತೆ...... ತಥಾಸ್ತು" — ಎಂದ. ಆ ದಿನ ನಿರಂಜನಗೆ ಅದೆಷ್ಟು ಹಿಗ್ಗೋ! ಗಂಡಸರನ್ನು ಕಳುಹಿಸಿ, ಸುಬ್ಬಯ್ಯ ಮನೆಗೆ ಬಂದು, ಬೆನ್ನ ಮೇಲೆ ಕೈಯಿರಿಸಿ, "ಜಮುನಾ, ಅವರನ್ನು ಕರೆಯಿಸಿದ್ದು ಏಕೆಂದು ತಿಳಿಯಿತಲ್ಲ" ಎಂದನು. ಜಮುನಾ ನಾಚಿದಳು. ಆತನ ರಾಯಭಾರಕ್ಕಾಗಿ ಋಣಿಯಾದಳು. ಈ ಮೊದಲನೆಯ ನಿಶ್ಚಯ ಸಮಾರಂಭದ ಕಾಲದಲ್ಲಿ ವೆಂಕಪ್ಪ ಊರಲ್ಲೇ ಇದ್ದಿರಲಿಲ್ಲ. ಕಾರ್ಕಳದಲ್ಲೋ ಉಡುಪಿಯಲ್ಲೋ ಇದ್ದನಂತೆ. ಸುಬ್ಬಯ್ಯ ಆತ್ಮವಿಶ್ವಾಸದಿಂದ ಮುಂದುವರಿದ. ಆತ ಬಂದ ಮೇಲೆ "ನೀನಂದಂತೆ ನಾನು" ಎಂದನು. ಅದರ ಅರ್ಥವೆಂದರೆ— ಮದುವೆಯ ಖರ್ಚಿಗೆ ತಾತ್ಕಾಲಿಕವಾಗಿಯಾದರೂ ಸುಬ್ಬಯ್ಯ ದಂಡತೆರಬೇಕು-ಎಂಬುದಷ್ಟೆ.

ವೆಂಕಪ್ಪನ ಒಪ್ಪಿಗೆ ದೊರೆತ ತಿಂಗಳೊಳಗಾಗಿ, ಮಳೆಗಾಲ ಪ್ರಾರಂಭವಾಗುವ ಮೊದಲು, ಊರಿನ ದೇಗುಲವೊಂದರಲ್ಲಿ ಜಮುನೆ,

ಶ್ಯಾಮರಾಯರಿಗೆ ಲಗ್ನ ನೆರವೇರಿತು. ಸುಬ್ಬಯ್ಯ, ತನ್ನ ಮಗಳ— ಎಂಬಷ್ಟು ಮಮತೆಯಿಂದ ಜಮುನೆಗೆ ಅಲ್ಪಸ್ವಲ್ಪ ಒಡವೆಗಳನ್ನೂ ಮಾಡಿಸಿದ್ದ. ಚೆಲುವಿನ ಉಡುಗೆರೆ ಸಲಿಸಿದ್ದ. ನೊಮ್ಮಗಳ ಲಗ್ನಕ್ಕೆ ಅಜ್ಜ ಅಜ್ಜಿಯರೂ ಬಂದಿದ್ದರು. ಮದುವೆಯ ಊಟಉಪಚಾರಗಳು, ಅವನ ಮನೆಯಲ್ಲೇ ಚುಟುಕಿನಲ್ಲಿ ಮುಗಿದುವು. ಕಾರಣವೆಂದರೆ— ವೆಂಕಪ್ಪನ ಸ್ವಂತ ಮನೆಯನ್ನು ವಿಕ್ರಯಿಸಿಯಾಗಿತ್ತು. ಈಗ ಆತ, ಕದ್ರಿಗೆ ಸಮೀಪ, ಕಿರಿದಾದೊಂದು ಮನೆಗೆ ಬಂದಿದ್ದ. ಶಾಸ್ತ್ರಕ್ಕೆ ಮಾತ್ರ ದಂಪತಿಗಳು ಆ ಮನೆಯನ್ನು ಸಂದರ್ಶಿಸಿದರು. ಚಪ್ಪರ, ಔತಣ, ಉಪಚಾರಗಳೆಲ್ಲ ಸುಬ್ಬಯ್ಯನ ಮನೆಯಲ್ಲೇ ನಡೆದುವು. ಅಲ್ಲಿಂದ ಜಮುನೆಯು ಪತಿಗೃಹಕ್ಕೆ ತೆರಳಿದಳು. ಅವಳೇ ಪತಿಯ ಹೊಸಗೃಹದ ನಾಯಕಿಯೂ ಆದಳು. ಶಾಮರಾಯರಿಗೆ ತಾಯಿತಂದೆಗಳಿಲ್ಲ. ಕಿರಿಯಇಬ್ಬರು ತಮ್ಮಂದಿರು ದೂರದ ಊರಲ್ಲಿ ದುಡಿಯುತ್ತಿದ್ದರು. ಅವನು ಒಂಟಿಯಾಗಿ ಹಾಸ್ಟೆಲಿನಲ್ಲಿದ್ದನು. ಮದುವೆಯಾದ ಹತ್ತೆಂಟು ದಿನಕಾಲ ಸುಬ್ಬಯ್ಯ ಮಾವನ ಮನೆಯಲ್ಲಿ ಸಮಯವನ್ನು ಕಳೆದನು. ಈಗ ಸ್ವಂತ ಮನೆಯನ್ನು ಹೂಡಿದನು.

ತಮ್ಮ ಮನೆಯನ್ನು ಬಿಟ್ಟು ಪತಿಯ ನಿಲಯಕ್ಕೆ ಜಮುನೆ ಹೊರಟ ನೋಟ ಮಾತ್ರ ಸುಬ್ಬಯ್ಯನ ಎದೆಯಲ್ಲಿ ನಾಟಿಹೋಗಿತ್ತು. ಹೊರಗೆ ಬಂಡಿ ಬಂದು ನಿಂತಿತ್ತು. ಶ್ಯಾಮರಾಯ ಹೊಸ ಹೆಂಡತಿಯನ್ನು ಕಾದು ನಿಂತಿದ್ದಾನೆ. ಆದರೆ ಜಮುನೆ ಹೊರಕ್ಕೆ ಬರಲೊಲ್ಲಳು. ಆಕೆ ಕುಸುಮಕ್ಕನ ಕಾಲಿಗೆ ಎರಗಿದ್ದಳು. ಸುಬ್ಬಯ್ಯ ಹೊರಗೇನೆ ನಿಂತಿದ್ದ. ಕೊನೆಗೆ ಕುಸುಮೆ ಊಹೆಯಿಂದ ಸುಬ್ಬಯ್ಯನನ್ನು ಕರೆದಳು. ಬಡ ಹುಡುಗಿಯು ಅವನ ಕಾಲಿಗೆ ಬೀಳುವ ಬದಲು, ಮಗ್ಗುಲನ್ನು ತಬ್ಬಿಹಿಡಿದು ಮಗುವಿನಂತೆ ಅತ್ತಳು. "ನೀವು ನನ್ನನ್ನು ಉಳಿಸಿದಿರಿ. ನಿಮ್ಮ ಋಣ ಎಂದಿಗೂ ಮರೆಯೆ"ನೆಂದು ಕಣ್ಣೀರನ್ನು ಕರೆದಳು. ನಾಲ್ಕು ವರ್ಷಗಳ ಮಲತಾಯಿಯ ಹಿಂಸೆಯ ನೆನಹು ಅವಳನ್ನು ಕದಡಿತ್ತು. "ಇಂದು ತಾನು ಪಾರಾದೆನಲ್ಲಾ" ಎಂದೆನಿಸಿತು! ನಿಜಕ್ಕೂ ತಂದೆಯ ವಿಚಿತ್ರ ವರ್ತನೆಯಿಂದ ಅವನ ಮೇಲೆ ಇದ್ದ ಮಮತೆಯೆಲ್ಲವೂ ಲೋಪವಾಗಿತ್ತು. 'ನನಗೆ ಸಬ್ಬಯಣ್ಣ ತಂದೆ; ಅವರಿಲ್ಲವಾದರೆ ನಾನು ಬಾವಿಗೆ ಹಾರಿ

'ಕೊಳ್ಳಬೇಕಿತ್ತು' ಎಂಬ ಹಲವು ಕೃತಜ್ಞತಾಪೂರ್ವಕವಾದ ಮಾತುಗಳನ್ನಾಡಿದಳು. ಆತ ಆಕೆಯನ್ನು ಸಮಾಧಾನಗೊಳಿಸುತ್ತಾ, ಬಂಡಿಯು ತನಕ ಕರದೊಯ್ದು ವರನೊಂದಿಗೆ ಕುಳ್ಳಿರಿಸಿದನು. ತಿರುಗೊಮ್ಮೆ 'ಹೋಗುತ್ತೇನೆ ಅಣ್ಣ, ಹೋಗುತ್ತೇನೆ ಕುಸುಮಕ್ಕ'-ಎಂದಳು. ಆತ ನಗುತ್ತ, 'ಹೋಗುವುದೆಲ್ಲಿಗೆ, ಇದೇ ಊರೇ ನಿನ್ನಗಂಡನ ಮನೆ, ಇಲ್ಲೇ ಎರಡು ಫರ್ಲಾಂಗಿನಲ್ಲಿ. ನಿತ್ಯ ಇಲ್ಲಿಗೆ ಬಂದು ಹೋಗುತ್ತಿರಬೇಕು' ಎಂದನು. 'ಆಗಲಿ' ಎಂದು ಉತ್ತರ. ಅವಳ ಕಣ್ಣಿನ ಮುತ್ತಿನ ಹನಿಗಳು ಮನೆ ಮುಟ್ಟುವ ತನಕ ನಿಲ್ಲಲಿಲ್ಲ.

ಶ್ಯಾಮರಾಯನಿಗೆ ಸಹಚರಿಯನ್ನು ಗಂಟುಹಾಕಿದ ಸುಬ್ಬಯ್ಯನ ವಿಷಯವಾಗಿ ಒಂದೇ ಒಂದು ಕ್ಷಣ ಬೇಸರ ಪ್ರಾಪ್ತಿಸುವ ಯೋಗ ಬರಲಿಲ್ಲ. ಪತಿಗೃಹ ಸೇರಿದ ಗಳಿಗೆಯಿಂದ ಶ್ಯಾಮರಾಯನ ಪ್ರತೀಕವೆಂಬಂತೆ ಆಕೆ ವರ್ತಿಸತೊಡಗಿದಳು. ವೆಂಕಪ್ಪನ ಇತಿಹಾಸ ಕೇಳಿ, ಆತ ಕೆಲವೊಮ್ಮೆ'ನಾನು ಏನಃ ಮಾಡುತಿದ್ದೇನೆ,ಸುಬ್ಬಯ್ಯನ ಮಾತಿಗೆ ಮರುಳಾಗಿ' ಎಂದುಕೊಂಡಿದ್ದ. ಜಮುನೆಯ ನಿಕಟ ಪರಿಚಯದಿಂದ ಈ ಅಭಿಪ್ರಾಯವು ಬದಲಿಸಿತು. ಸುಬ್ಬಯ್ಯ ಭೇಟಿಯಾದಾಗ 'ಹೇಗಿದ್ದಾಳೆ ಹುಡುಗಿ?' ಎಂದರೆ 'ಜಮುನೆ ಒಂದು ರತ್ನ' ಎನ್ನುವ.

ಮಳೆಗಾಲ ಕಾಲಿಟ್ಟಿತು. ಊರಿನ ಬಾನು ಸದಾ ಮುಗಿಲುಗಳಿಗೆ ಚಪ್ಪರವಾಯಿತು. ಆದರೆ ವೆಂಕಪ್ಪನ ಮುಗಿಲು ಕವಿದಿದ್ದ ಬಾನು ಈಗ ಶುಭ್ರವಾಗುತ್ತ ಬಂದಿತು. ಸಾಲದ ಹೊರೆ ತಗ್ಗಿತು; ಮಾನ ಉಳಿಯಿತು; ಅಳಿಯ ದೊರೆತಾಯಿತು. ನಿರಂಜನನನ್ನು ಸುಬ್ಬಯ್ಯ ಮದ್ರಾಸಿಗೆ ಬಿ.ಎಲ್. ಓದಲು ಕಳುಹಿಸಿದನು. ಈಗ ಅವನೂ, ಕಿರಿಯ ಮಕ್ಕಳು ಮಾತ್ರ ಮನೆಯಲ್ಲಿ ಉಳಿದವರು. ಅವರನ್ನಿಷ್ಟು ಪೋಷಿಸಿ ದೊಡ್ಡದು ಮಾಡಿದರೆ ಆಯಿತು ತನ್ನ ಕೆಲಸ-ಎಂದು ತಿಳಿಯುತ್ತಾನೆ. ಇಲ್ಲ, ನಿರಂಜನ ಸ್ವಂತ ಪ್ರಾಕ್ಟೀಸು ಹೂಡಿದರೆ, ತಾನು ಕಿರಿಯರನ್ನು ಅವನಿಗೊಪ್ಪಿಸಿ, ತಿರುಗಿ ತನ್ನ ಮನಸ್ಸನ್ನು ಮುಷ್ಟಿಯಲ್ಲಿ ಹಿಡಿದ ವಿಮಲೆಯನ್ನು ಕೂಡಿ ಇರಬಹುದೆಂದು ಬಯಸುತ್ತಾನೆ. ಈಗಂತು ಅದು ಸಾಧ್ಯವಿಲ್ಲ. ಹಾಗಾಗಲು ಇನ್ನೂ ಎರಡು ಮೂರು ವರ್ಷಗಳ ಕಾಲ ಬೇಕೆನ್ನುವಾಗ ಅವನ ತುಟಿ ಒಣಗುತ್ತವೆ. ಅಲ್ಲಿಯ ತನಕ ವಿಮಲೆ ಬರಲು ಕಾಯಬೇಕೆ?

ಹೀಗೆಂದು, ಒಂದೆರಡು ಬಾರಿ ಅವನು ಉಡುಪಿಗೆ ಹೋಗಿದ್ದ. ಜಮುನೆಯ ಮದುವೆಗೆ ಕರೆಯಲು ಹೋಗಿದ್ದ. ತನ್ನ ಮನೋದಾಸ್ಯವನ್ನೆಲ್ಲ ಅವಳ ಮುಂದೆ ವ್ಯಕ್ತಮಾಡಿದ್ದ. ಆದರೆ, ತಲೆಯನ್ನೇ ಬಲಿತೆತ್ತರೂ ಒಲಿಯದ ದೈವ ಅವಳು.

ಹೀಗೆ ಮೂರು ವರ್ಷ ಕಾಲವನ್ನು ಅವನು ಕಳೆಯುವುದೆಂದರೆ ಕಷ್ಟ. ಅಷ್ಟರಲ್ಲಿ ಅವಳ ಮನಸ್ಸು ಬದಲಾಗದೇ? 'ಈ ಮೂರು ವರ್ಷ ಕಾಲ ಬೇಡವೆಂದಾದ ಮೇಲೆ, ಇನ್ನೇಕೆ ನಾನು ನಿಮಗೆ ಎನ್ನಲಾರಳೇ' ಎಂಬ ಅಂಜಿಕೆ. ನಡುವೆ ಉಡುಪಿಗೇನೆ ಹೋಗಿ ತಾನಿನ್ನು ವಕಾಲತ್ತು ನಡೆಯಿಸಿದರೆ ಸಮನಾಗದೇ-ಎಂದು ಹವಣಿಸುವ. ಅದೂ ನಿರಾಶೆಯ ಕನಸೇ? ಆಗ ಅದು ಹೊಸ ವಕಾಲತ್ತಿನಂತಾದರೆ? ಆಗಲೂ ಮಕ್ಕಳನ್ನು ಎಲ್ಲಿ ಬಿಡುವುದು? ಅವರ ವೆಚ್ಚ ಆರೈಕೆಗಳನ್ನು ತಾನಿಲ್ಲದೆ ನೋಡುವವರಾರು?

ಇದೊಂದು ವಿಚಾರದಲ್ಲಿ ಅವನ ಮನಸ್ಸು ತೊಳಲಾಡುತ್ತಿತ್ತು. ಯಾವ ನಿಲುಗಡೆಗೂ ಅದು ಬಾರದಾಯಿತು. ತನ್ನನ್ನೇ ಅದು ಆಶ್ರಯಿಸಿರಲಿಲ್ಲ. ಆದರೆ ದಿನಹೋದಂತೆ ಈ ಹೊಯ್ದಾಟ ಕಡಿಮೆಯಾಯಿತು. ಅದಕ್ಕೆ ಕಾರಣವೆಂದರೆ ಕುಸುಮೆ. ಕುಸುಮೆಯ ಮನೆಗೆ ಆತ ತಿರುಗಿ ಬರತೊಡಗಿದ. ಬಾಯಿತುಂಬ, ಗಂಡಹೆಂಡಿರನ್ನು ಅವರು ತೋರಿಸಿದ ಉಪಕೃತಿಗಾಗಿ, ಹೊಗಳಲು ಕಲಿತ. ಈಗ, ವಿಮಲೆಯನ್ನು ಕುಸುಮೆ ಅಲ್ಲಗಳೆದಷ್ಟು ಅವನಿಗೆ ಒಪ್ಪುಗೆಯಾಗುತಿತ್ತು. 'ಅದೊಂದು ಹೆಂಗಸಿನ ಜಾತಿಯೇ ಅಲ್ಲವಪ್ಪ' ಎಂಬ ಕುಸುಮೆಯ ಮಾತಿಗೆ, ಅವನು ಸಹಿಯೊಡ್ಡುತಿದ್ದ. ಈಬಗೆಯಿಂದ ಕುಸುಮೆಯ ಪೂರ್ವಸ್ನೇಹಕ್ಕೆ ಯೋಗ್ಯನಾಗಬೇಕೆಂಬುದೇ ಅವನ ಹಂಬಲವಾಯಿತು. ಆದರೂ ಆತನು ಸುಬ್ಬಯ್ಯ ಮನೆಯಲ್ಲಿರುವಾಗ ಕಾಲಿರಿಸಲು ಏತಕ್ಕೋ ಹಿಮ್ಮೆಟ್ಟುತಿದ್ದ. ಅವನು ಕ್ಲಬ್ಬಿನಲ್ಲಿರುವ ವೇಳೆಯನ್ನೇ ಆರಿಸಿ ಆಗಾಗ ಮನೆಗೆ ಬರುವ. 'ಸುಧೀರ, ನಿನ್ನ ಅಪ್ಪ ಎಲ್ಲಿ' ಎಂದು ಬೇಕೆಂದೇ ವಿಚಾರಿಸುವ. ಗಂಡ ಬಂದಾಗ ಕುಸುಮೆ, 'ವೆಂಕಪ್ಪಣ್ಣ ನಿಮ್ಮನ್ನು ಎರಡು ಮೂರಾವರ್ತಿ ಬಂದು ವಿಚಾರಿಸಿ ಹೋದರು' ಎನ್ನುವಳು.

ಇತ್ತ ಸುಬ್ಬಯ್ಯನ ಔದಾರ್ಯ ಮಾತ್ರ ಯಾರಿಂದಲೂ ಶಾಭಾ

ಸ್ಗಿರಿಯನ್ನು ತರಲೇ ಇಲ್ಲ. ಅವನೊಬ್ಬಿಬ್ಬರು ಮಿತ್ರರು 'ಸುಬ್ಬಯ್ಯ, ನೀನು ವೆಂಕಪ್ಪಣ್ಣನ ಗಾಣಕ್ಕೆ ನಿನ್ನ ಕೊರಳನ್ನು ಕೊಟ್ಟೆಯೇಕೆ, ಮಹಾರಾಯ?' ಎಂದೂ ಅಂದರು. ಬೇರೊಬ್ಬರು-'ಸುಬ್ಬಯ್ಯ, ಈಗಿನ ಕಾಲದಲ್ಲಿ ಪರೋಪಕಾರ ಮಾಡುವುದೆಂದರೆ ಹಾವಿಗೆ ಹಾಲೆರೆದಂತೆಯೇ-- ಬೇರೇನೂ ಇಲ್ಲ' ಎಂದು ವ್ಯಂಗ್ಯವಾಗಿ ಟೀಕಿಸಿದರು. ಸುಬ್ಬಯ್ಯ ಮನಸ್ಸಿನಲ್ಲಿ 'ಹೋದರೆ ೩೦೦೦, ೩೫೦೦ ರೂಪಾಯಿಗಳಷ್ಟು ಹೋದೀತು. ಆದರೆ ಆತ ಎಂತಹನಾದರೂ, ನಿರಂಜನ ಜಮುನೆಯರು ನನ್ನ ಉಪಕಾರ ಮರೆಯಲಾರರು' ಎಂದು ತೃಪ್ತನಾಗಿದ್ದ. ಆಗಾಗ ಜಮುನೆ, ಕೆಲವು ತಾಸುಗಳ ತನಕ ಅವರ ಮನೆಯಲ್ಲಿ ಕಾಲಕಳೆಯುವುದುಂಟು. ಕುಸುಮಕ್ಕನನ್ನು 'ಮನೆಗೆ ಬನ್ನಿ'— ಎಂದು ಪೀಡಿಸುವುದುಂಟು. ನಿರಂಜನನ ಪತ್ರಗಳು ಸುಬ್ಬಯ್ಯಗೆ ಆಗಾಗ ಬರುತ್ತಿದ್ದುವು. ಈ ಬಗೆಯಿಂದ ಸುಮಾರು ಹತ್ತೆಂಟು ತಿಂಗಳ ಕಾಲವೇ ಸಂದಿದೆ. ಈಗ ಎರಡನೆಯ ರಜೆಯೂ ಬರುವಂತಾಯಿತು.

* * * * *

ಒಂದು ದಿವಸ ಸುಬ್ಬಯ್ಯ ನಿತ್ಯದಂತೆ ಕೋರ್ಟಿನಲ್ಲಿ ಕುಳಿತು ಮಾತನಾಡುತಿದ್ದ; ಕಕ್ಷಿಗಾರರೊಂದಿಗೆ ದಾವೆಯ ವಿಷಯವಾಗಿ ಚರ್ಚೆ ನಡೆಯಿಸುತ್ತಲಿದ್ದ. ಆಗ, ಏಕೋ, ಅವನ ತಲೆತಿರುಗಿದಂತಾಯಿತು. ಜತೆಗೆ ಒಮ್ಮೆಗೇನೆ ಎದೆನೋವಿನ ಉದ್ರೇಕವೂ ಆದಂತಾಯಿತು. ಇಷ್ಟೊಂದು ದಿವಸ ಏನೂ ಶರೀರ ವೇದನೆಯಿಲ್ಲದ ಆತ, ಈಗ ಒಮ್ಮೆಗೇನೆ ಕಂಗಾಲಾಗಿ ಮನೆಗೆ ಬಂದನು. ಕುಸುಮೆ ಗಾಬರಿಯಾಗಿ ಅವನನ್ನು ಹಾಸುಗೆಯ ಮೇಲೆ ಮಲಗಿಸಿಬಿಟ್ಟು ಡಾಕ್ಟರರಿಗೆ ಹೇಳಿಕಳುಹಿಸಿದಳು. ಅವರೂ ಬಂದರು. ಆ ಸಂಜೆಯೊಳಗಾಗಿ ಹಲಕೆಲವು ಗೆಳೆಯರೂ ಅವನ ದರ್ಶನಮಾಡಿಕೊಂಡು ಹೋದರು. ಜಮುನೆಯಂತು ತುಂಬ ಕಾತರಳಾಗಿ, ಅವನ ಮಂಚದ ಬಳಿಯಲ್ಲೇ ಸುಳಿಯತೊಡಗಿದಳು. ಕುಸುಮೆ ಪತಿಯ ಶುಶ್ರೂಷೆಗೆ ಕುಳಿತಳು. ಡಾಕ್ಟರರು, "ಏನೂ ಗಾಬರಿಯಾಗುವ ಕಾರಣವಿಲ್ಲ. ಅವರಿಗೆ ತುಂಬ ಕಾಲ ವಿಶ್ರಾಂತಿ ಬೇಕು. ಕೆಲವು ದಿವಸ ಸಂದ ಬಳಿಕ, ನೀವು ಹವೆ ಬದಲಿಸಲು ಬೇರೊಂದು ಊರಿಗೆ ಹೋದರೂ ಉತ್ತಮವೇ"-ಎಂದು ಹೇಳಿಹೋದರು.

ಜತೆಗೆ ಚಿಕಿತ್ಸೆ, ಅನುಪಾನಗಳು ನಡೆದವು. ಮೇಲೆ ಕಡ್ಡಾಯದ ವಿಶ್ರಾಂತಿಯನ್ನು ವಿಧಿಸಿದರು. ಇದರಿಂದ ಆತ, ಗೆಳೆಯ ವೆಂಕಪ್ಪನಿಗೆ ತನ್ನೆಲ್ಲ ಕಕ್ಷಿಗಳನ್ನು ಒಪ್ಪಿಸಿದ. ಆದರೆ ಕೆಲವರು ಕಕ್ಷಿಗಾರರು ಆ ವಿಷಯದಲ್ಲಿ ಅತೃಪ್ತರಾದುದೂ ತಿಳಿಯಿತು. ಇದರಿಂದ ವೆಂಕಪ್ಪ ಹೇಗೆ ಜನರಲ್ಲಿ ಅವಹೇಳನಕ್ಕೆ ಗುರಿಯಾಗಿರುವನೆಂಬುದು ಸ್ಪಷ್ಟವಾಯಿತು. ಅಂತು, ವೆಂಕಪ್ಪ ನಿತ್ಯ ಮನೆಗೆ ಬಂದುಹೋಗುತ್ತ, ಸುಬ್ಬಯ್ಯನ ಕೆಲಸ ನಿರ್ವಹಿಸಿದನು. ಮನೆಯ ಸುಖದು:ಖಗಳನ್ನೂ ವಿಚಾರಿಸತೊಡಗಿದನು. "ಇಷ್ಟೆಲ್ಲ ಉಪಕಾರ ಮಾಡಿದ ಸುಬ್ಬಯ್ಯನ ವಿಷಯವಾಗಿ ನಾನೇನು ಮಾಡಿದರೂ ಅಲ್ಪವೇ" ಎಂದು ಹೆಮ್ಮೆ ಬೇರೆ ಕೊಚ್ಚಿಕೊಂಡನು.

ಸುಬ್ಬಯ್ಯಗೆ ವಿಶ್ರಾಂತಿ, ಔಷಧೋಪಚಾರಗಳಿಂದ ಒಮ್ಮೆ ಬಂದ ಕುತ್ತು ದಾಟಿತು. ಇನ್ನು ಗಡಿಬಿಡಿಯಿಲ್ಲ; ಆದರೆ ತುಂಬ ಶಾರೀರಿಕ ವಿಶ್ರಾಂತಿ ಬೇಕು. 'ಮನಸ್ಸಿನಲ್ಲಿ ಏನೂ ಚಿಂತೆಯಿಲ್ಲವಷ್ಟೆ'-ಎಂದು ಡಾಕ್ಟರರು ಕೇಳುತ್ತಿದ್ದರು. 'ದೇವರ ದಯೆಯಿಂದ ಅದೊಂದು ಕೊರತೆಯಿಲ್ಲ' ಎಂದು ಸುಬ್ಬಯ್ಯ ಉತ್ತರಿಸಿದ. ನಿಜವಾಗಿಯೂ ಆತನಿಗೆ ಅಂತಹ ಕ್ಲೇಶಗಳಿರಲಿಲ್ಲ. ಉದ್ಯೋಗವಿಲ್ಲದೆ ಒಂಟಿಯಾಗಿ ಇರಲು ಬೇಸರವಾಗುತ್ತಿತ್ತು. ಹಾಗೆ ಆಗಾಗ ಜಮುನೆ ಬಂದು, ಆತನ ಬಳಿಯಲ್ಲಿ ಕುಳಿತು, ಊರಿನ ಸುದ್ದಿಯನ್ನು ಹೇಳುತ್ತಿರುವಳು. ಅವನಿಗೇನಾದರೂ ಪುಸ್ತಕ ಓದಿ ಹೇಳುವಳು. ಇದರಿಂದ ಕುಸುಮೆಗೂ ಕೆಲಸ ಹಗುರಾಯಿತು. ಗಂಡ ಮಲಗಿರುವನೆಂದು ಅವಳು ಕ್ಲಬ್ಬಿನ ಹಾಜರಿಯನ್ನು ಬಹುದಿನಗಳ ತನಕ ತಪ್ಪಿಸಬೇಕಾಗಲಿಲ್ಲ.

ಅವನ ವಿಶ್ರಾಂತಿಯ ಕಾಲ ನಾಲ್ಕೈದು ತಿಂಗಳಿಗೂ ಮಿಕ್ಕಿತು. 'ಇನ್ನು ಬೇಕಾದರೆ ನೀವು ಹವೆ ಬದಲಿಸಲು ಹೋಗಿ ಬನ್ನಿ. ಈ ವರ್ಷವೆಲ್ಲ ವಕೀಲಿ ವೃತ್ತಿಯ ಯೋಚನೆ ಬಿಡಬೇಕು' ಎಂದು ಡಾಕ್ಟರರ ಆಜ್ಞೆಯಿತ್ತು. ಸುಬ್ಬಯ್ಯನ ಮನಸ್ಸೂ ಹಾಗೆ ವಿಶ್ರಾಂತಿಯನ್ನು ಕೋರುತ್ತಿತ್ತು. ಆರೋಗ್ಯವಾಗದೆಯಾವುದೂ ಬೇಡ ಎಂಬುದೇ ಅವನ ತೀರ್ಮಾನ. ಆದರೆ-"ಎಲ್ಲಿಗಾದರೂ ಹೊರಡೋಣವೇ" ಎಂದು ಕೇಳಿದರೆ ಮಾತ್ರ, ಕುಸುಮೆ ಉತ್ಸುಕಳಾಗಿ ಕಾಣಿಸಲಿಲ್ಲ.

ಸುಬ್ಬಯ್ಯ ಹೆಂಡತಿಯ ಉದಾಸೀನತೆಯಿಂದ ತುಂಬ ನೊಂದು

ಕೊಂಡ. ಒಂದು ದಿನ ಮನೆಗೆ ಬಂದ ವೈದ್ಯರು, "ಏನು ಹವೆ ಬದಲಾಯಿಸಲು ಹೊರಡುವುದಿಲ್ಲವೆ?"-ಎಂದು ಕೇಳಿದರು. "ಅವಳಿಗೆ ಅದು ಇಷ್ಟವಿಲ್ಲ" ಎಂಬ ಉತ್ತರ ಬಂದಿತು. ಡಾಕ್ಟರರು ಕುಸುಮೆಯನ್ನು ಕರೆದರು. ಆಕೆಯೊಡನೆ ದೀರ್ಘ ಮಾತನಾಡಿದರು. ಈ ಮಾತುಗಳ ಕೊನೆಕೊನೆಗೆ ಮಾತ್ರ ಅವರು, ನುಡಿಯನ್ನು ಮರೆತು, ಕೇವಲ ಕುಸುಮೆಯ ಅಂಗಾಂಗ ನಿರೀಕ್ಷಿಸುವವರಂತೆ ಕಂಡಿತು. ಕುಸುಮೆ ಹೊರಟು ಹೋದಳು. ಡಾಕ್ಟರರು ಸುಬ್ಬಯ್ಯಗೆ ತೀರ ಆಪ್ತರಾದುದರಿಂದ, ತುಂಬ ನೊಂದವರಂತೆ-'ಸುಬ್ಬಯ್ಯ, ನನ್ನ ಮಾತು ನಿನಗೆ ಹಿಡಿಯಲೇ ಇಲ್ಲವಲ್ಲ' ಎಂದು ಬೇಸರದಿಂದ ನುಡಿದರು.

"ಏನು!" ಎಂದು ಆತ ಗಾಬರಿಯಾಗಿ ನುಡಿದ.

ಡಾಕ್ಟರರು "ನಾನೇನೆಂದೆ? ಹೆಂಡತಿಯನ್ನು ದೂರವಿಡಬೇಕೆನ್ನಲಿಲ್ಲವೇ? ಆಕೆಯನ್ನು ನೋಡಿದೆನಲ್ಲ, ಕೆಲವು ತಿಂಗಳಾದವಳಂತೆ ಕಾಣುತ್ತಾಳೆ" ಎಂದರು.

"ಹೀಗೆಯೇ ನೀವು ಇರುವುದಾದರೆ—ಹವೆಯನ್ನು ಬದಲಿಸಲು ಹೋದರೂ ಒಂದೇ, ಇಲ್ಲವಾದರೂ ಒಂದೇ" ಎಂದು ತುಂಬ ಖಿನ್ನರಾಗಿ ನುಡಿದು ಹೋಗಿಬಿಟ್ಟರು. ಸುಬ್ಬಯ್ಯನ ಎದೆಯು ದಡಬಡಿಸಿತು. ಕುಸುಮೆಯ ಶರೀರ ಇತ್ತೀಚೆಗೆ ತುಂಬಿಕೊಂಡಂತೆ ಅವನಿಗೂ ಕಾಣಿಸಿತ್ತು. ಆದರೆ ಕಾರಣ ಎಣಿಸುವಷ್ಟು ಅನುಮಾನ ಅವನಿಗೆ ಬಂದಿರಲಿಲ್ಲ. ಅಲ್ಲದೆ ಹಾಸುಗೆಯಲ್ಲಿಯೆ, ಮನೆಯಲ್ಲಿ ಅನುಪಾನದಲ್ಲಿಯೇ ಕಾಲ ಕಳೆಯುತ್ತಿದ್ದ ಮನಸ್ಸು, ಎಲ್ಲದರಲ್ಲೂ ಹಿಂಜರಿಯುತ್ತಿತ್ತು. ಈಗ ಮಾತ್ರ ಡಾಕ್ಟರರು ನುಡಿದ ಮಾತು ಅವನ ಎದೆಯನ್ನು ನಡುಗಿಸಿತು. ಕುಸುಮೆಯು ತನ್ನನ್ನು ವಂಚಿಸಿರಬಹುದೇ—ಎಂಬ ಅನುಮಾನ ಮೊದಲ ಬಾರಿಗೆ ಅವನ ಎದೆಯನ್ನು ನಾಟಿತು. ಆತ ಒಂದೊಂದಾಗಿ ಸಂದ ದಿನಗಳನ್ನು ನೆನೆದು ಎಣಿಸಿದ. ತಾನು ಹಾಸುಗೆ ಹಿಡಿದೇ ಬಲು ದಿವಸಗಳಾದುವು. ಯಾವೊಂದು ದಿನವೂ ಡಾಕ್ಟರರ ಆಣತಿಯನ್ನು ತಾನು ಮೀರಿರಲಿಲ್ಲವೆಂದು ಅವನಿಗೆ ಅವನ ಮನಸ್ಸು ಹೇಳಲಾರದೇ? ಅಲ್ಲದೆ ಆ ಬಗೆಯ ಕಾಮದ ಕರೆಗೆ, ಅವನ ಬಳಲಿದ ಶರೀರ, ಕಿವಿಗೊಟ್ಟುದೂ ಇಲ್ಲ. ಹೀಗಿರಲು?

ಕುಸುಮೆಯನ್ನು ಅನಂತರ ಸಂಧಿಸಿದಾಗಲೆಲ್ಲ ಹುಲಿಗಣ್ಣುಗಳಿಂದ ಆತನು ನೋಡತೊಡಗಿದನು. ಆದರೂ ಬಾಯಿಯೊಡೆದು ಅವನಿಗೆ ಕೇಳುವ ಧೈರ್ಯ ಬರಲಿಲ್ಲ. ಡಾಕ್ಟರರು ಕೆರಳಿಸಿದ ಅನುಮಾನ ಚಿಗುರಿ, ಕುಡಿಯೊಡೆಯಿತು. ಕೊನೆಗೂ ಮೌನತಾಳಲಾರದೆ-ಕುಸುಮೆಯನ್ನು ಮಾತನಾಡಿಸಿದ. "ಯಾಕೋ,ಕೆಲ ಸಮಯದಿಂದೀಚೆಗೆ ತನಗೆ ಕಾಲಕಾಲಕ್ಕೆ ಮುಟ್ಟು ಆಗುತ್ತಲಿಲ್ಲ"ವೆಂದು ಆಕೆ ಬಾಯಿಹಾರಿಸಿ ನುಡಿದಳು. ಮಾತನ್ನು ಗೆದ್ದುದಾಯಿತು-ಆದರೆ ವಾಸ್ತವ ಸಂಗತಿಯೇನೆಂದು ಇಬ್ಬರೂ ಅರಿತಿದ್ದರು. ಸುಬ್ಬಯ್ಯನ ಮನಸ್ಸು "ಹಾವಿಗೆ ಹಾಲೆರದಂತೆ" ಎಂಬ ಗೆಳೆಯರ ನುಡಿಗಳನ್ನು ನೆನೆಯತೊಡಗಿತು. ಅದಕ್ಕೆ ಸಮನಾಗಿ ಆ ಮನೆಯಲ್ಲಿ ವೆಂಕಪ್ಪನು ಬಂದುಹೋಗುವುದೂ ನಿಂತಿತು. ವಕೀಲಿಗೆ ಸಂಬಂಧಪಟ್ಟ ಕೆಲಸಗಳಿಗೆ ತನ್ನ ಗುಮಾಸ್ತನನ್ನು ಅಟ್ಟಿ, ಆತ ಸುಮ್ಮನಿರತೊಡಗಿದ್ದ.

ಇದರಿಂದಲೋ ಏನೋ, ಕೆಲವು ದಿನ ಸುಬ್ಬಯ್ಯನ ಬೇನೆಯು ತೀರ ಉಲ್ಬಣಾವಸ್ಥೆಗೆ ಬಂದಿತು. ಅವನನ್ನು ಉಪಚರಿಸಲು ಕುಸುಮೆ ಬಂದರೆ ಅವನು ಕಿಡಿಕಿಡಿಯಾಗುತ್ತಿದ್ದ. ಬಳಿಯಲ್ಲಿ ಸುಧೀರನೋ ಜಮುನೆಯೋ ಬಂದು ಕುಳಿತರೆ ಮಾತ್ರ, ಎಲ್ಲ ವ್ಯಥೆಗಳನ್ನು ಮರೆತವರಂತೆ ವರ್ತಿಸುತ್ತಿದ್ದ.

೧೪ನೆಯ ಅಧ್ಯಾಯ

ಸುಬ್ಬಯ್ಯನ ಶರೀರವು ವಿಶ್ರಾಂತಿಯನ್ನೇನೋ ಪಡೆಯುತ್ತಿತ್ತು. ಆದರೂ ಮನಸ್ಸಿಗೆ ವಿಶ್ರಾಂತಿ ದೊರೆಯುವುದು ಕಠಿಣವಾಯಿತು. ಮನೆಯಲ್ಲಿ ಕುಸುಮೆಯನ್ನು ನೋಡುತ್ತಿದ್ದಂತೆ, ಅವನ ಮನಸ್ಸಿನಲ್ಲಿ ಒಮ್ಮೊಮ್ಮೆ ಜಿಗುಪ್ಸೆ ತುಂಬುವುದು; ಕೆಲವೊಮ್ಮೆ ಆತ ತುಂಬ ಚಿಂತೆಗೀಡಾಗುವನು. ಎಷ್ಟೋ ಬಾರಿ ಈ ಬೇನೆಯು ತನ್ನನ್ನು ಕೊಚ್ಚಿಕೊಂಡು ಹೋದರೆ ಪರಮ ಹಿತವಾಗುತಿತ್ತಲ್ಲ-ಎಂದು ತಿಳಿಯುವ. ತನ್ನ ಬಳಿಗೆ ಸುಧೀರ ಬಂದು "ಅಪ್ಪಾ, ಮಾತಾಡುವದಿಲ್ಲವೇ? ನಿನಗೆ ಬೇಸರವೇ?

ನೋವೇ” ಎಂದು ಮೆಲ್ಲಗೆ ಮೈಸವರಿ ಮಾತನಾಡಿಸುವಾಗ, ತನ್ನೆಲ್ಲ ನೋವುಗಳನ್ನು ಅಡಗಿಸಿಬಿಡುವ. “ಇಲ್ಲ ಮಗು, ನಾನು ಹುಷಾರಿದ್ದೇನೆ” ಎನ್ನುವ. ಮುಂದೆ ಹುಡುಗನ ಮನಸ್ಸನ್ನು ಬೇರೆ ವಿಷಯಕ್ಕೆ ಹರಿಯಲೆಂದು-ಅವನ ಶಾಲೆಯ ಪ್ರಸ್ತಾಪ ತೆಗೆಯುವ. ಮಿಸ್ ನಾರಾಯಣಿಯು ಅವನಿಗೆ ಶಾಲೆಯ ಉಪಾಧ್ಯಾಯಿನಿ. ಮೊದಲೇ ಪರಿಚಿತಳು. ಮೇಲೆ ಕುಸುಮೆಯ ಮಗನೆಂದು ಮುದ್ದಾಡುವವಳು. ಹೀಗಾಗಿ ತನ್ನನ್ನು ಉಬ್ಬಿಸಿ ಪ್ರಶ್ನೆ ಕೇಳುವ, ಕತೆ ಹೇಳಿಸುವ ಉಪಾಧ್ಯಾಯಿನಿಯನ್ನೂ ಶಾಲೆಯನ್ನೂ ಕುರಿತು ಆತ, ತುಂಬ ಹರಟುತ್ತಾನೆ.

ಎರಡು ಮೂರು ತಿಂಗಳಕಾಲ ಸರಿಯಿತು. ಸುಬ್ಬಯ್ಯ ತಿರುಗಿ ತಾನು ಉದ್ಯೋಗವನ್ನು ತೊಡಗಬಹುದೆಂಬಷ್ಟು ಆರೋಗ್ಯತಾಳಿದನು. ಆದರೂ ಮನಸ್ಸು ಬೇರೆಯೇ ಆವರಣವನ್ನು ಕೋರುತ್ತಿತ್ತು. ಕುಸುಮೆಯನ್ನು ಬಿಟ್ಟು ಬೆಂಗಳೂರಲ್ಲಿ ದಿನ ಕಳೆದು ಬರುವೆನೆಂದು ನಿಶ್ಚಯಿಸಿದ. ಹೊರಡುವ ದಿವಸವೇ, ಕುಸುಮೆಗೆ ಈ ಸಂಗತಿ ತಿಳಿಸಿದ. ಈಗ ಆಕೆಗೆ ಗಂಡನೊಡನೆ ಮುಖತೋರಿಸುವ ಧೈರ್ಯವಿರಲಿಲ್ಲ. ಮಾತನಾಡುವ ಧೈರ್ಯ ಮೊದಲೇ ಇಲ್ಲ. ‘ಏನು, ನಾನು ಬರಲೇ ಎಂದಾಗಲಿ, ಎಂದು ಬರುವಿರಿ?’ ಎಂದಾಗಲಿ ಪ್ರಸ್ತಾಪ ಸಹ ಮಾಡಲಿಲ್ಲ. ಇತ್ತ ಅವಳಂತು ಇನ್ನೆರಡು ತಿಂಗಳಲ್ಲಿ ಹೆರಿಗೆ ಮನೆ ಸೇರುವವಳಾದುದರಿಂದ ಪಯಣ ಹೊರಡುವ ಸ್ಥಿತಿಯೂ ಇಲ್ಲವಷ್ಟೆ. ಅವಳಿಗೂ ಅದು ಕಠಿಣ ಕಾಲವಾಗಿತ್ತು. ಮೊದಮೊದಲು-ತಾನು ತಿರುಗಿ ತಾಯಾಗಿ ಮಗಳನ್ನು ಹಡೆಯುವೆನೆಂಬ ಆಸೆಯಿದ್ದುದು, ಕರಗಿ, ಇಂದು “ಅಯ್ಯೋ, ಆದ ಅಪಮಾನ ಸಾಕು-ಮೊದಲಿನಂತೆ ಇದು ನಿಷ್ಫಲ ಬದುಕಾದರೇನೆ ಚೆನ್ನ” ಎಂಬ ಯೋಚನೆಯು ಮೂಡಿತು. ಗಂಡಹೆಂಡಿರಿಬ್ಬರ ಪಾಲಿಗೂ ಇದು ಸಂಧಿಕಾಲದಂತೆಯೇ ಕಂಡಿತು. ಅದರಿಂದಲೇ ಸುಬ್ಬಯ್ಯ-ಈ ಸಮಯ ಮನೆಯಲ್ಲಿರಲು ಬಯಸದೆ, ಮನೆಗೆ ಬೇಕಾಗುವ ಹಣದ ವ್ಯವಸ್ಥೆ ಮಾಡಿ, ಬೆಂಗಳೂರಿಗೆ ಹೋಗಿಬಿಟ್ಟನು.

ಮನೆಯಿಂದ ದೂರವಾದರೂ ಮನೆಯ ವಿಚಾರಗಳಿಂದ ಆತ ದೂರವಾಗಿರಲು ಶಕ್ಯವಿಲ್ಲವಷ್ಟೆ. ಕುಸುಮೆಯು, ಉಪಚಾರಕ್ಕೆ ಎಂಬಂತೆ “ಸುಧೀರ, ನಿಮ್ಮನ್ನು ಕೇಳುತ್ತಾನೆ. ನೀವು ಕ್ಷೇಮವಷ್ಟೆ” ಎಂದು

ಪತ್ರ ಬರೆದು ಮುಗಿಸುತ್ತಿದ್ದಳು. ಅವರ ಮನೆಗೆ ಅನುದಿನವೂ ಓಡಾಡುತ್ತಿರುವ ಜಮುನೆ ವಾರಕ್ಕೊಂದೆರಡು ಪತ್ರಗಳನ್ನು ಸುಬ್ಬಯ್ಯನಿಗೆ ಬರೆಯುತ್ತಿದ್ದಳು. ಅವಳ ಗಂಡ ಶ್ಯಾಮರಾಯನೂ ಅವರ ಮನೆಗೆ ಆಗಾಗ ಬಂದು ಹೋಗುತ್ತಿದ್ದನಾದುದರಿಂದ ಪತ್ನಿಯ ಕಾಗದಗಳ ಬೆಂಗಡೆಯಲ್ಲಿ ಅವನ ಒಂದೆರಡು ಪಂಕ್ತಿಗಳು ಸೇರಿರುತ್ತಿದ್ದುವು. ದೂರದಲ್ಲಿರುವಾಗ, ಅವೇ ಸ್ವಲ್ಪ ನುಡಿಗಳು ಸುಬ್ಬಯ್ಯಗೆ ಉಲ್ಲಾಸವನ್ನು ಕೊಡುತ್ತಿದ್ದುವು. ಅವನು ಬೆಂಗಳೂರಲ್ಲಿ ವಿರಾಮವಾಗಿ ಕುಳಿತಿದ್ದರೂ, ಊರುಮನೆಗಳ ಯೋಚನೆ ತಪ್ಪಿರಲಿಲ್ಲ. ಒಮ್ಮೊಮ್ಮೆ ಸುಧೀರನ ನೆನಪಾಗುವುದು. ನಾಳೆ ಈ ತಾಯಿಯ ಆರೈಕೆಯಲ್ಲಿ ತನ್ನ ಕೂಸು ಬೆಳೆದು ದೊಡ್ಡವನಾದಾನೇ?ಆದರೂ,ಯೋಗ್ಯನಾದಾನೇ-ಎಂದುಯೋಚಿಸುವನು. ಅದಕ್ಕಾಗಿ ತಾನು ಕೆಲವು ಸಮಯವಾದರೂ ಬದುಕಿ ಉಳಿದಿದ್ದರೆ ಲೇಸಾಗುತ್ತಿತ್ತು ಅನಿಸುವುದು; ಇನ್ನೊಮ್ಮೆ ಮನಸ್ಸು ಬದಲಿಸುವುದು. ಇಂದೋ ನಾಳೆಯೋ ಕುಸುಮೆ ಹಡೆಯಬಹುದು. ಜಮುನೆಯ ಪತ್ರ ಈಗಾಗಲೇ ಬಂದೀತು-ಈ ಮಗುವನ್ನು ಕಂಡರೆ ಮನಸ್ಸು ಏನಾಗುವುದೋ ಎಂದು ತಬ್ಬಿಬ್ಬಾಗುವನು.

ಎಪ್ರಿಲು ಪ್ರಾಪ್ತಿಸುವ ವೇಳೆಗೆ ಸರಿಯಾಗಿ, ಜಮುನೆಯ ಪತ್ರ ಬಂದಿತು. "ಅಣ್ಣಾ — ನಿಮಗೆ ಹೆಣ್ಣು ಶಿಶುವಾಗಿದೆ. ಎಂಥ ಚಂದದ ಮಗು-ಬಲ್ಲಿರಾ? ಏನು ಹೆಸರು ಇರಿಸುತ್ತೀರಿ" ಎಂದು ಕೇಳಿದ್ದಳು. ಅದೇ ಪತ್ರದಲ್ಲಿ — ಕುಸುಮೆಯು ಪ್ರಸೂತಿಗೃಹದಲ್ಲಿರುವುದಾಗಿಯೂ, ಆಗಾಗ ತನ್ನ ತಂದೆ ಅಲ್ಲಿಗೆ ಹೋಗಿ ಅವಳ ಆರೋಗ್ಯ ವಿಚಾರಿಸುತ್ತಿರುವನಾಗಿಯೂ, ತಾನೂ ತನ್ನಪತಿಯೂ ಹೋಗಿ ಬರುತ್ತಿರುವುದಾಗಿಯೂ — ವಾರ್ತೆ ಬರೆದಿತ್ತು.

ಇನ್ನು ಕೆಲವು ದಿವಸಗಳ ಬಳಿಕ ಕುಸುಮೆ ಸ್ವಗೃಹಕ್ಕೆ ಹಿಂದಿರುಗಿದ ವರ್ತಮಾನವೂ ಬಂದಿತು. ಅಲ್ಲಿಗೂ-ದೂರದ ವೆಂಕಪ್ಪನ ಸಂದರ್ಶನೆ ನಡೆಯುತ್ತಿರುವುದೆಂದು ತಿಳಿಯಿತು. ಅದು ಅವನನ್ನು ತುಂಬ ನೋವಿಗೆ ಗುರಿಮಾಡಿತು. ವೆಂಕಪ್ಪನಿಗೊಂದು ಪತ್ರ ಬರೆಯುತ್ತೇನೆಂದು ಯೋಚಿಸಿದ. "ವೆಂಕಪ್ಪ, ಹೇಗೂ ಇರಲಿ, ನೀನು ಮರ್ಯಾದಸ್ಥನಾದರೆ ಇನ್ನು ನನ್ನ ಮನೆಗೆ ಬರಲಿಕ್ಕಿಲ್ಲವೆಂದು ತಿಳಿದಿದ್ದೇನೆ" —

ಎಂದು ಬರೆದೇಬಿಟ್ಟ. ಆ ಪತ್ರ ತನ್ನ ಕರ್ತವ್ಯವನ್ನು ಮಾಡಿತು. ಅದು ವೆಂಕಪ್ಪನ ಆಗಮನವನ್ನು ತಡೆದಂತೆ, ಕುಸುಮೆಗೆ ಅವನಲ್ಲಿರು ಮಮತೆಯನ್ನು ತಡೆಯದಷ್ಟೆ. ಕೆಲ ದಿವಸಗಳ ಹಿಂದೆ ಅಂಜಿ ಅಳುಕಿದ ಅವಳ ಮನಸ್ಸು, ಗಂಡನ ಮೇಲೆ ತುಂಬ ಉಗ್ರವಾಯಿತು. "ಇವರನ್ನು ನಂಬಿದ್ದರೆ ನನಗೆ ಸಂತಾನದ ಋಣ ದುರ್ಲಭವೇ ಆಗಿತ್ತು.... ಅದು ಮಾತ್ರ ಇವರ ತಲೆಗೆ ಹೋದುದಿಲ್ಲ" ಎಂದು ತನ್ನಷ್ಟಕ್ಕೆ ರೇಗಾಡಿಕೊಂಡಳು.

ಈ ನಡುವೆ ನಿರಂಜನನ ಬಿ. ಎಲ್. ಪರೀಕ್ಷೆ ಸಮಾಪ್ತಿಯಾಯಿತು. ಆತ ತನ್ನ ಆಶ್ರಯದಾತನಾದ ಸುಬ್ಬಯ್ಯಣ್ಣನ ವಿಚಾರವಾಗಿ ತುಂಬ ಅಭಿಮಾನಿ. ಅವನ ಅನಾರೋಗ್ಯದ ಕತೆಯನ್ನು ಕೇಳಿ ತುಂಬ ಮರುಗಿದನು. ಆಗಾಗ ಅವನನ್ನು ಸಂತೈಸುತ್ತ ಪತ್ರ ಬರೆಯುತ್ತಿದ್ದನು. ಪರೀಕ್ಷೆ ಮುಗಿಯುತ್ತಲೇ ಬೆಂಗಳೂರಿಗೇನೆ ಬಂದನು. ನಿರಂಜನನನ್ನು ಕಂಡು ಸುಬ್ಬಯ್ಯಗೆ ತುಂಬ ಹರ್ಷವಾಯಿತು. "ಎಂದು ಊರಿಗೆ ಹೊರಡುತ್ತೀರಿ? ಈಗ ನೀವು ಮೊದಲಿಗಿಂತಲೂ ಪುಷ್ಟರಾಗಿ ಕಾಣಿಸುತ್ತೀರಿ. ಇಲ್ಲಿ, ಬಲ್ಲ ಡಾಕ್ಟರರೊಬ್ಬರಿಗೆ ಪ್ರಕೃತಿ ತೋರಿಸಿಕೊಂಡು—ಬರುವ" ಎಂದು ಉಪದೇಶಿಸಿದನು. ಅವನೆಂದಂತೆ ಡಾಕ್ಟರರ ಸಂದರ್ಶಣೆಯಾಯಿತು, "ನೀವು ಅತಿಯಾಗಿ ಶ್ರಮಿಸದಿದ್ದರೆ, ಯಾವ ಭೀತಿಯೂ ಇಲ್ಲ" ಎಂದರು. ಅಲ್ಲದೆ "ರೋಗದ ನೆನವರಿಕೆಯನ್ನು ಮಾಡುತ್ತಲಿರಬೇಡಿ" ಎಂದು ಡಾಕ್ಟರರು ಉಪದೇಶಿಸಿ ಕಳುಹಿಸಿದರು. ಊರಿಗೆ ಹೊರಡಲು ತೊಡಕಿಲ್ಲವಾದರೂ ಸುಬ್ಬಯ್ಯ ಇನ್ನೂ ಹೊರಡಲು ಸಿದ್ಧನಿಲ್ಲ. ನಿರಂಜನನ ಒತ್ತಾಯಕ್ಕೆ, "ಕೋರ್ಟು ತೆರೆಯುವ ಮುಂಚಿತವಾಗಿ ಹೋಗಿ ಸೇರಬೇಡವೇ? ಈ ಒಂದು ವರ್ಷ ಉದ್ಯೋಗ 'ಕಜಗೆಟ್ಟು'ದು ಸಾಕು" ಎಂದ. ಆದರೂ ತನ್ನ ಮನದ ವಿಪ್ಲವಗಳ ಸುಳಿವನ್ನು ಮಾತ್ರ ನಿರಂಜನನಿಗೆ ಒಪ್ಪಿಸಲಿಲ್ಲ. ಅವನನ್ನು ತನ್ನ ಬೆಂಬಲವಾಗಿರಿಸಿಕೊಳ್ಳುವೆನೆಂಬ ಗ್ರಹಿಕೆಯಿಂದ ಆತ ಊರಿಗೆ ಮರಳಿದನು.

ಮನೆಯಲ್ಲಿ ಕಾಲಿರಿಸಿದೊಡನೆ ನಿರಂಜನನು "ಮಗು, ನಾವು ಬಂದಿದ್ದೇವೆ" ಎಂದುಸುರಿದನು. ಕುಸುಮೆ ಎರಡು ತಿಂಗಳ ಬಾಣಂತಿ. ಒಳಗಿಂದಲೇ "ಯಾರು ನಿರಂಜನನೇ?" ಎಂದು ಕೇಳುತ್ತಲೇ 'ನಾನು ಮತ್ತು ಸುಬ್ಬಯ್ಯ' ಎಂದ. ತಿರುಗಿ ಮಾತು ಹೊರಡಲಿಲ್ಲ. ಸುಬ್ಬಯ್ಯ

ತನ್ನ ಮನೆಯಲ್ಲಿಯೇ ತಾನು ಅತಿಥಿಯೆಂಬಂತೆ ಹೊರಗೆ ಆರಾಮವಾಗಿ ಕುಳಿತ. ಸುಧೀರ ಓಡಿ ಬಂದನು; ಆಳು ಬಂದವರಿಗೆ ಉಪಚಾರ ನಡೆಸಿದನು. ಕುಸುಮೆಯು ಪತಿಯ ಆರೋಗ್ಯದ ವಿಚಾರವಾಗಿ ನಿರಂಜನನನ್ನು ಕೇಳಿದಳು. ಸುಬ್ಬಯ್ಯ ಮನೆಯೊಳಕ್ಕೆ ಹೋಗುವಾಗ ಕುಸುಮೆಯು ಕೊಟಡಿಯ ಬಳಿಯಿಂದ ಸರಿದರೂ, ಒಳಕ್ಕೆ ಕಾಲಿರಿಸಲಿಲ್ಲ. ನಿರಂಜನನು ಅಲ್ಲಿ ಕಾಫಿ ಕುಡಿದು, ಬಳಿಕ ತನ್ನ ಮನೆಗೆ ತೆರಳಿದನು.

ಮರುದಿವಸ ಸುಬ್ಬಯ್ಯಣ್ಣನು ಬಂದ ವಾರ್ತೆ ಕೇಳಿ, ಜಮುನೆ ಓಡೋಡಿ ಬಂದಳು. ಅವಳಾಗ 'ಹೊಸ ಕೂಸನ್ನು' ಎತ್ತಿ ಮುದ್ದಾಡಿಸಿ, ಸುಬ್ಬಯ್ಯಣ್ಣನ ಕೈಯ್ಯಲ್ಲಿ ಕೊಡಬಂದಳು. ಕುಸುಮೆಗೆ ಅದು ಹೊಳೆಯಿತು. "ಎಲ್ಲಿಗೇ....."— ಎಂದು ಕೇಳುತ್ತಿರುವಾಗಲೇ, ಕೂಸನ್ನೆತ್ತಿಕೊಂಡು ಆಕೆ ಹೊರತಂದಾಯಿತು. ಆರಾಮ ಕುರ್ಚಿಯ ಮೇಲೆ ಕುಳಿತ ಸುಬ್ಬಯ್ಯನ-ಕೈಯ್ಯಲ್ಲಿ ತುರುಕಿಯೂಯಿತು. ಎದುರಿಗೆ ಜಮುನೆ. ಅವಳ ಪ್ರೀತಿಯ ಮಾತುಗಳು.ಆ ಸುಂದರವಾದ ಹೂವನ್ನು ಕುರಿತಾದ ಉತ್ಸಾಹ....ಎರಡು ಕ್ಷಣ ಕಾಲ ಆತ ಸ್ತಬ್ಧನಾಗಿದ್ದ. ಕೂಸು ನಕ್ಕಿತು! ಜಮುನೆ "ಹೂಂ— ನೋಡಿ ನಿಮ್ಮ ಗುರುತು ಆಗಿಹೋಯಿತು ಅದಕ್ಕೆ. ಮಗು ಚಂದವಿಲ್ಲವೇ? ನನಗೆ ಕೊಡಿ ಅದನ್ನು" ಎಂದಳು. ಸುಬ್ಬಯ್ಯ ಕೊಡಲು ಎತ್ತಿಹಿಡಿಯುತ್ತಲೇ....ನಾನು ಹಾಗಲ್ಲ ಕೇಳಿದ್ದು "ಅದನ್ನು ನನಗೇನೆ ಕೊಡಬೇಕೆಂದದ್ದು" ಎಂದಳು. ಆತನು ನಕ್ಕನು. ಕೂಸಿನ ನಿಷ್ಕಳಂಕವಾದ ನಗು, ಅವನ ಹೃದಯವನ್ನೂ ಒಲಿಸಿತ್ತು."ಅದಕ್ಕೇನು ಹೆಸರಿಡುತ್ತೀರಿ" ಎಂದು ಜಮುನೆಯ ಪ್ರಶ್ನೆ!

'ಯೋಚನೆಮಾಡುವ' ಎಂದಾತನ ಉತ್ತರ. ಸುಬ್ಬಯ್ಯ ಆ ನೆಚ್ಚಿನ ಹುಡುಗಿಯನ್ನು ಕಂಡು ನಗುತ್ತಿರುವಾಗಲೇ ಏನೋ ಅನಿಸಿತು: "ಕಳ್ಳಿ!" ಎಂದ.

"ಯಾರು ನಾನೇ?" ಎಂದು ಕೇಳಿದಳು ಜಮುನೆ.

"ಅಹುದು. ಇಷ್ಟೆಲ್ಲ ಕಾಗದಗಳನ್ನು ಬರೆದವಳು, ತಾನು ಬಸಿರಿಯೆಂಬುದನ್ನು ತಿಳಿಸಬೇಡವೇ?"

'ಹೂ........ನೀವು ಬಂದರೆ ತಿಳಿಯುವುದಿಲ್ಲವೇ....ಅದಕ್ಕೇಕೆ ಕಾಗದ."

"ಅಷ್ಟು ಜೋರಿದ್ದೀ ನೀನು? ಹೋಗಲಿ-ಜಮುನಾ, ನಿನ್ನ ಮಗುವಿಗೂ ಅದಕ್ಕೂ ಒಂದೇ ದಿವಸ ಹೆಸರಿರಿಸುವ."

"ಅಲ್ಲಿಯ ತನಕ ಅದನ್ನು ಕರೆಯಬೇಡವೆ"

"ಪುಟಾಣಿ" ಎಂದು ಕರೆದರಾಯಿತು.

"ಛೀ........ಪುಟಾಣಿ— ಅದೆಂಥ ಹೆಸರು! ಪುಟಾಣಿ, ಬಟಾಣಿ, ಬಟಾಟೆ!"

"ಹಾಗಾದರೆ ಬಟಾಟೆಯೇ ಆಗಲಿ"

"ಹೂಂ. ಹೂಂ....ಇದಕ್ಕೆ ಚಂದವಾದ ಹೆಸರಿಡಬೇಕು."

"ನೀನೇ ಹೇಳಿಬಿಡಲ್ಲ. ನೀನು ಈ ಮಗುವಿಗೆ ಹೆಸರಿರಿಸುವುದು; ನಾನು ಇಟ್ಟ ಹೆಸರು ನಿನ್ನ ಮಗುವಿಗೆ."

"ಆಗಲಿ....ನಾಳೆ ಒಳ್ಳೆಯ ಹೆಸರನ್ನು ಯೋಚಿಸಿ ಬರುತ್ತೇನೆ."

"ಶ್ಯಾಮನನ್ನು ಕೇಳಬೇಕೆ?"

ಜಮುನೆ ತುಸು ನಾಚಿದಳು. "ಎಲ್ಲಕ್ಕೂ ಅವರನ್ನು ಕೇಳಬೇಕೆ? ನನಗೆ ಸ್ವಲ್ಪವೂ ಬುದ್ಧಿಯಿಲ್ಲವೆಂದು ತಿಳಿದಿರಾ?" ಎಂದಳು.

ಮರುದಿವಸ ಆಕೆ ಬಂದವಳು ಸುಬ್ಬಯ್ಯನನ್ನು ಕಾಣುವಾಗಲೇ, ಆತನ ಕೂಸನ್ನು ಎತ್ತಿಕೊಂಡು ಬಂದಳು. ಅದನ್ನು ಸುಬ್ಬಯ್ಯನ ಕರದಲ್ಲಿರಿಸಿ "ನೋಡಿ ಎಷ್ಟು ನಗುತ್ತದೆ! ತುಂಬ ಜೋರಾದೀತು ಈ ಮಗು...." ಎಂದಳು. ತುಸು ಹೊತ್ತು ಹೋಗಲು 'ಈ ಮಗು ಯಾರ ಹಾಗೆ ಹೇಳಿ --ನಿಮ್ಮ ಹಾಗೆಯೋ, ಕುಸುಮಕ್ಕನ ಹಾಗಿದೆಯೋ ಹೇಳಿ. ನನಗಿದು ಕುಸುಮಕ್ಕನ ಹಾಗೆಯೇ ಕಾಣಿಸುತ್ತದೆ. ಆದರೆ ಅವರು ಅನ್ನುತ್ತಾರೆ -ಅದು ನಿಮ್ಮ ಹಾಗಂತೆ"-ಎಂದಳು. ಸುಬ್ಬಯ್ಯ ನಕ್ಕನು. ಅವನು ಮನಸ್ಸು ತೃಪ್ತಿಗೊಂಡುದರಿಂದ ಎಂದೂ ನಕ್ಕಿರಲಾರನು. ಈ ತನಕ ಜಮುನೆ ಅಲ್ಲಿಗೆ ತಾನು ನೆನಪಿರಿಸಿಕೊಂಡು ಬಂದಿದ್ದ ಹೆಸರನ್ನು ಬಚ್ಚಿಟ್ಟಿದ್ದಳು.ಕೂಸನ್ನು ಸುಬ್ಬಯ್ಯನ ಬಳಿಯಿಂದ,ಕುಸುಮಕ್ಕನ ಬಳಿಗೊಯ್ದು —'ಅಕ್ಕ ನಿಮ್ಮ ಮಗುವಿಗೆ ಚಂದವಾದ ಹೆಸರು ಆರಿಸಿಬಂದಿದ್ದೇನೆ' ಎಂದಳು. "ಏನದು" ಎಂದು ಕೇಳಲು, ಜಮುನೆ ನಗುತ್ತ "ಲಲನಾ" ಎಂದು ನುಡಿದಳು. 'ಅದೂ ಆಗಬಹುದು'-ಎಂದಳು ತಾಯಿ. ಹಿಂದಣ ದಿನ ಸುಬ್ಬಯ್ಯ ಆಕೆಯೊಡನೆ ನಡೆಸಿದ ಸಲ್ಲಾಪ ಕೇಳಿದ ಅವಳು,

ಈ ನಾಮಕರಣಗಳ ಸಂಧಾನಕ್ಕೆ ತಾನು ಕೈಹಾಕಲಾರೆ-ಎಂದೇ ಎಣಿಸಿದ್ದಳು. ಜಮುನೆಯ ಉತ್ಸಾಹವೂ ಅವಳಿಗೆ ಹಿತವೆನಿಸಲಿಲ್ಲ. ಆದರೆ ಉಪಚಾರಕ್ಕೆಂಬಂತೆ "ಅವರೊಪ್ಪಿದರೆ ಆದೀತು" ಎಂದಳು. ಅದರಿಂದ ಹೆಸರು ಅವರ ಬಳಿಗೆ ಹೋಯಿತು. ಸುಬ್ಬಯ್ಯನು ಅದಕ್ಕೆ ಒಪ್ಪಿದ್ದಾಯಿತು.

ಹೀಗೆ ಬಹು ದಿವಸಗಳ ತನಕ ಆ ಮನೆಯಲ್ಲಿ ಸುಧೀರನೋ ಜಮುನೆಯೋ ಪತಿಪತ್ನಿಯರ ನಡುವಣ ಸಂಧಾನಕ್ಕೆ ಕರ್ತೃಗಳಾಗಿದ್ದರು. ಜಮುನೆಗೆ ಗಂಡಹೆಂಡಿರೊಳಗೆ ಏನೋ ಬೇಸರ ಉಂಟಾಗಿದೆಯೆಂದು ತೋಚದೆ ಹೋಗಲಿಲ್ಲ. ಅದೇನು ಎಂದು ತಿಳಿಯಲು ಅವಳಿಗೂ ಹಂಬಲವಾಗಿತ್ತು. ಆದರೆ ಯಾರನ್ನೂ ಕೇಳುವ ಸಾಹಸವಿಲ್ಲ. ಕುಸುಮೆಯನ್ನು ಕೇಳಿದರೆ "ನನಗೇನು ಗೊತ್ತು? ನಿನಗೇಕೆ?" ಎಂದು ಶೀವಿಯ ಮಾತನ್ನಾಡಿ ಮುಗಿಸಿದಳು. ಅದರಿಂದ--ತಪ್ಪು ಇರುವುದಾದರೂ ಆಕೆಯ ಕಡೆಗೇನೆ ಇರಬೇಕೆಂದು ಜಮುನೆಯು ಊಹಿಸಿದಳು. ಅದಕ್ಕೂ ಮುಂದುವರಿದು ಸುಬ್ಬಯ್ಯಣ್ಣನನ್ನು ಅವಳು ಕೇಳಲಾರಳು.

ವರ್ಷದ ಉದ್ಯೋಗಕ್ಕೆ ಪ್ರಾರಂಭವಾಯಿತು. ಸುಬ್ಬಯ್ಯ ತಿರುಗಿ ತನ್ನ ಕಾಯಿದೆ ಪುಸ್ತಕಗಳ ಮುಖಸಂದರ್ಶನೆ ನಡೆಸತೊಡಗಿದನು. ಕೋರ್ಟಿಗೆಹೋಗಿ ಬರಲು, ಅವನಿಗೆ ಯಾವ ತೊಡಕೂ ಕಾಣಿಸುತ್ತಿರಲಿಲ್ಲ. ಮನೆಗೆ ಬಂದರೆ, ಅವನ ಮಾತೆಲ್ಲ ಬಹುವಾಗಿ ಸುಧೀರನೊಬ್ಬನೊಡನೆಯೇ. ತಾಯಿಗೇನು ಬೇಕಾದರೂ ಸುಧೀರನೇ ಬಂದು, ಕೇಳಿ ಉತ್ತರ ಒಯ್ಯಬೇಕು. ಇತ್ತ ಜಮುನೆಯು ತುಂಬಿದ ಬಸಿರಿಯಾಗಿ ಸೂತಕಗೃಹವನ್ನು ಸೇರಿದಳು. ಸುಬ್ಬಯ್ಯ ಆಕೆಯ ಮೇಲಿನ ವ್ಯಾಮೋಹದಿಂದ ಆಗಾಗ ಆಸ್ಪತ್ರೆಯ ತನಕ ಹೋಗಿಬರುವ. ಅಲ್ಲಿಯೇ ವೆಂಕಪ್ಪನ ದರ್ಶನ ಒಂದೆರಡು ಬಾರಿ ಅವನಿಗುಂಟಾಗಿತ್ತು-ಆದರೆ ಅವರೊಳಗೆ ಮಾತುಕತೆಯಾಗದಿದ್ದುದು ಜಮುನೆಯ ಗೋಚರಕ್ಕೂ ಬಂದಿತು.

ನಿರಂಜನನು ಬಿ. ಎಲ್. ಮುಗಿಸಿದ ತಮ್ಮನನ್ನು ಉದ್ಯೋಗದ ಬೇಟೆಗೆಂದು ಮುಂಬಯಿಗೆ ಹೋಗಲು ಪ್ರೋತ್ಸಾಹಿಸಿದ. ತಾನು ಸನ್ನದನ್ನು ದೊರಕಿಸಿಕೊಂಡದ್ದಾಯಿತು. ಇನ್ನು ನಿತ್ಯ ಯಾರದ್ದಾದರೂ ಆಫೀಸಿನಲ್ಲಿ ಕುಳಿತು-ಅಭ್ಯಾಸ ಮಾಡಬೇಕಲ್ಲ. ಅವನ ಗಮನವೆಲ್ಲ

ಸುಬ್ಬಯ್ಯನ ವಿಷಯವಾಗಿಯೇ ಇತ್ತು. ಅಲ್ಲಿಯ ತನಕವೂ ಅದೇ ಸಾಧ್ಯವೆಂದು ಅವನು ತಿಳಿದಿದ್ದನು. ಆದರೆ ಒಂದು ದಿವಸ-ತಂದೆಯು "ನಿರಂಜನ, ಏನು ಮದ್ರಾಸಿನಲ್ಲಿ ಎಪ್ರೆಂಟಿಸ್ ಮಾಡಿ ಬರುತ್ತೀಯಾ? ಇಲ್ಲವೆ-ಇಲ್ಲಿ ಯಾರಾದರೂ...' ಎಂದ. ತನ್ನೊಡನೆ ಮಗನೂ ಲಾಯರಿ ಹೂಡುವ ಸಂಭವ ಎಣಿಸಿಕೊಂಡಿರಲಿಲ್ಲ. ಕಾರಣವೆಂದರೆ—ಆತನ ಮನಸ್ಸು, ಮಕ್ಕಳನ್ನು ಅವನ ಕೊರಳಿಗೇನೆ ಕಟ್ಟಿ, ತಾನು ಬೇರೆ ಬಿಡಾರ ಹೂಡುವುದೆಂಬ ಬಯಕೆಯಲ್ಲಿತ್ತು. ಅದು ಎಷ್ಟಿಲ್ಲವೆಂದರೂ, ವಿಮಲೆಯ ಬಳಿಗೆ ಓಡುತ್ತಿತ್ತು. ಅವಳನ್ನು ಕರೆಯಿಸಿಕೊಳ್ಳುವರೆ ಸಂಧಾನ ನಡೆಯಿಸುತ್ತಿದ್ದ. ಅವನು ಬೇರೆಯೇ ಮನೆಮಾಡಿಕೊಂಡಿರುವಲ್ಲಿ ಅವಳು ಬರುವಂತಿದ್ದಳು. ಹಿಂದೆ ಕೆಲವು ದಿನ ಕಾಲ ವಿಮಲೆಯ ನೆನಪನ್ನೇ ಆತ ತೊಡೆದು ಹಾಕಿದ್ದನು. ಅವನ ಹುಚ್ಚೆಲ್ಲವು ಕುಸುಮೆಯನ್ನು ಆವರಿಸಿತ್ತು. ಆದರೆ ನಡುವೆ ನಡೆದ ಕೋಲಾಹಲದಿಂದ, ಅವರ ಮನೆಗೆ ತಾನಿನ್ನು ಓಡಾಡುತ್ತಿರುವುದಾಗಲಿ, ತಮ್ಮ ಕಳ್ಳ ಪ್ರಣಯ ಸುಸೂತ್ರವಾಗಿ ಸಾಗುವುದಾಗಲಿ, ಸಾಧ್ಯವಾಗಿ ಕಾಣಿಸಲಿಲ್ಲ. ಅದರಿಂದ ತಿರುಗಿ ಮನಸ್ಸು ವಿಮಲೆಯ ಮರೆಯನ್ನೇ ಸೇರುವುದರಲ್ಲಿತ್ತು.

ನಿರಂಜನನು ಭವಿಷ್ಯವನ್ನು ತಂದೆಯೊಡನೆ ಚರ್ಚಿಸುವ ಬದಲು, ತನ್ನ ಓದನ್ನು ಸಾಧ್ಯವನ್ನಾಗಿ ಮಾಡಿದ ಹಿತೈಷಿಯ ಕಡೆಗೇನೆ ಓಡಿದ. ಅವನಿಗೆ ತಾವೆಷ್ಟು ಋಣಿಗಳೆಂಬುದು ತಿಳಿದಿತ್ತು. ವೆಂಕಪ್ಪನಿಗೂ ಸುಬ್ಬಯ್ಯನಿಗೂ ಗೆಳೆತನ ಕಡಿದು ಹೋಗಿದೆ—ಎಂಬುದು ಅವನಿಗೆ ಸುಲಭದಲ್ಲಿಯೇ ತಿಳಿಯಿತು. ಇತ್ತ ಸುಬ್ಬಯ್ಯನ ಮನೆಯೊಳಗೇನೆ ಸುಖವಿಲ್ಲ-ಎಂಬುದು ತಂಗಿಯಿಂದಲೂ, ತನ್ನ ಪರಿಶೀಲನೆಯಿಂದಲೂ ಗೋಚರವಾಯಿತು. ಸ್ವಸಂಸಾರದ ವಿಚಾರದಲ್ಲಿ ಸಂಪೂರ್ಣ ಮೌನ ತಾಳಿದ ಸುಬ್ಬಯ್ಯನ ವಿಷಯದಲ್ಲಿ, ಆತಗೆ ತುಂಬ ವ್ಯಥೆಯಾಯಿತು. ಆದರೆ ಸುಮಸಾಟಿಯಾಗಿ ನಿಂತು, ಅವನ ಕೊರಗನ್ನು ಕುರಿತು ಕೇಳಿ, ವಿಚಾರಿಸಿ, ತಿಳಿಯುವ ಧೈರ್ಯವೂ ಬರಲಾದರು.

ಅಂತು ನಿರಂಜನನು "ಅಪ್ಪನಿಗೆ ಖುಶಿಯೋ ಅಲ್ಲವೋ—ನಾನು ನಿಮ್ಮ ಜತೆಯಲ್ಲೇ ಇರುತ್ತೇನೆ. ಆದಷ್ಟು ಬೇಗ ಸ್ವಂತ ಬಿಡಾರ ಮಾಡಬೇಕು—ಎಂದೆನಿಸಿದೆ" ಎಂದು ನುಡಿದ. "ಏನು? ಉಡುಪಿಯಿಂದ ನಿನ್ನ

ಚಿಕ್ಕಮ್ಮ ಬರುತ್ತಾಳಂತೇನು"? ಎಂದು ಸುಬ್ಬಯ್ಯ ಕೇಳಿದನು. "ಇರ ಬೇಕು" ಎಂದು ಉತ್ತರ ದೊರೆಯಿತು. ಅನಂತರ ಸುಬ್ಬಯ್ಯನ ಒಪ್ಪಿಗೆ ದೊರೆಯಿತು. ಆತ "ನಿರಂಜನ, ನೀನು ನನ್ನಹೊರೆಯನ್ನು ತುಸು ಕಡಿಮೆ ಮಾಡುವಿಯೆಂದು ನಂಬಿಕೆಯಿತ್ತು. ಆದರೆ ನನ್ನಿಂದಲೇ ಆ ತೀರ್ಮಾನ ವಾಗುವ ಇಷ್ಟವಿರಲಿಲ್ಲ" ಎಂದ.

"ನಿಮ್ಮ ಹೊರೆಯುನ್ನು ನಾನೇನು ಹೊತ್ತೇನು? ನೀವು ನಮ್ಮ ದನ್ನು ಹೊತ್ತ ಅರಿವಾಸಿಯುಷ್ಟಾದರೂ ನನ್ನಿಂದ ಹೊರಲು ಸಾಧ್ಯವೇ" ಎಂದು ನಿರಂಜನ ಆಶ್ಚರ್ಯ ಸೂಚಿಸಿದನು.

"ಹಾಗಲ್ಲ ನಿರಂಜನ. ನನಗೆ ಆರೋಗ್ಯ ಕೆಟ್ಟಿದೆ. ನಾನು ಎಂದು ಕಣ್ಮುಚ್ಚಿದರೂ ಕಣ್ಮುಚ್ಚಿದೆನೇ. ನನಗೆ ಸಾವಿನ ಹೆದರಿಕೆಯಿದೆಯೆಂದು ತಿಳಿಯಬೇಡ ಎಷ್ಟು ಬೇಗ ಸತ್ತೆನೋ ಅಷ್ಟು ಒಳ್ಳೆಯದೇ ನನಗೆ— ಆದರೆ ನನ್ನ ಮಕ್ಕಳು ದಾರಿಯಲ್ಲಿ ಬೀಳಬಾರದಲ್ಲ" ಎಂದನು. ನಿರಂಜ ನಗೆ ಇನ್ನಷ್ಟು ಆಶ್ಚರ್ಯವಾಯಿತು. "ಯಾಕೆ ನಿಮಗೆ ಅಂಥ ಹೆದ ರಿಕೆ? ಡಾಕ್ಟರರು ಏನೇನೂ ಹೆದರಿಕೆಯಿಲ್ಲ ಅಂದಿಲ್ಲವೇ...."

"ಅವರಂದಿರಬಹುದು. ನನಗಾದರೂ ಇಂದೇ ಸಾಯುವೆನೆಂಬ ಹೆದರಿಕೆಯೂ ಇಲ್ಲ. ಆದರೆ ಬದುಕುವ ಇಚ್ಛೆಯೂ ಇಲ್ಲ; ಹೋಗಲಿ" ಎಂದು ಮಾತನ್ನು ಬದಲು ವಿಷಯಕ್ಕೆ ಹರಿಸಿದ್ದಾಯಿತು.

ಆ ಸಮಯದಲ್ಲಿ ಅವರಿಗೆ ದೊರಕಿದ ಸಂತೋಷದ ಸಂಗತಿ ಯೆಂದರೆ ಜಮುನೆಯ ಬಾಣಂತಿತನದ್ದು. ಅವಳೀಗ ಹೆಣ್ಣು ಕೂಸೊಂ ದರ ತಾಯಿ. ಸುಬ್ಬಯ್ಯ ಬಳಿಗೆ ಬಂದಾಗಲೇ 'ಏನು ಹೆಸರು, ಏನು ಹೆಸರು?' ಎಂದು ಆತುರದಿಂದ ಕೇಳಿದ್ದಳು. 'ಶೀಲ—ನಿನ್ನಮ್ಮನ ಹೆಸರೇ?' ಎಂದು ಸುಬ್ಬಯ್ಯ ಹೇಳುತ್ತಲೇ 'ನನಗೂ ಹಾಗೆನಿಸುತ್ತಿತ್ತು' ಎಂದಳು. ಶೀಲನನ್ನು ಕರೆದುಕೊಂಡು ಅವಳು ಸ್ವಂತ ಮನೆಗೆ ಬಂ ದಳು. ಅದೇ ವೇಳೆಗೆ ಸಮನಾಗಿ ಜಮುನೆಯ ತಮ್ಮ ಮೋಹನನು, ಮುಂಬಯಿಯಲ್ಲೊಂದು ಕೆಲಸ ದೊರಕಿಸಿಕೊಂಡುದರಿಂದ, ಮೆಟ್ರಿಕ್ಕು ಮುಗಿಸಿದ್ದ ಇನ್ನೊಬ್ಬ ತಮ್ಮನನ್ನು ತನ್ನಲ್ಲಿಗೇನೆ ಬರಮಾಡಿಕೊಂಡ. ಇನ್ನುಳಿದವನೆಂದರೆ ರಂಜನ, ಮಾಧವಿಯರು ಮಾತ್ರ. ನಿರಂಜನನು ಆದಷ್ಟು ಬೇಗನೆ ಅವರಿಗಾಗಿ ಒಂದು ಬಿಡಾರದ ಮನೆಯನ್ನು ಹೂಡಿ

ದ್ದಾಯಿತು. ಅದಕ್ಕೆ ಸುಬ್ಬಯ್ಯನದೇ ಬಲವಂತ ಹೊರತು, ಆತನ ವರಮಾನವಲ್ಲ. ಅಂತು—ವೆಂಕಪ್ಪನೀಗ ಸಪತ್ನಿಕನಾಗಿ ಸುಖಿಸಲು ಅಭ್ಯಂತರವಾವುದೂ ಇರಲಿಲ್ಲ.

ಅದೇ ಕ್ರಿಸ್‌ಮಸ್ ರಜೆಗೆ ವೆಂಕಪ್ಪ ಮೂರು ವರ್ಷಗಳ ಬಳಿಕ, ವಿರಹಿ ವಿಮಲೆಯನ್ನು ಕರೆಯಲು ಹೋಗಿ, ಅತ್ತೆಯ ಮನೆಯಲ್ಲಿ ತಿರುಗಿ ಜೋತುಬಿದ್ದುದಾಯಿತು. ಹೋದ ಅಳಿಯನಿಗೆ ಅನ್ನವೇನೋ ದೊರೆಯಿತು; ಆದರೆ ಮನ್ನಣೆ ಮಾತ್ರ ದೊರೆಯಲಿಲ್ಲ. 'ಮೂರು ವರ್ಷ ಕಾಲ ನಾನಿಲ್ಲದೆ ನಿಮಗೆ ಸುಖವಾಗಿ ಕಳೆಯಿತಂತೆ, ಇನ್ನೂ ಹಾಗೇನೆ ಹೋಗಲಾರದೇ'-ಎಂದು ವಿಮಲೆ ಹಂಗಿಸಿದಳು. ಕೊನೆಗೆ ಸಂಧಾನ ರೂಪವಾಗಿ ವೆಂಕಪ್ಪನೇ ಅಲ್ಲಿಗೆ ಬಂದಿರಬಹುದು ಎಂಬ ಸೂಚನೆ ಬಂದಿತು. ವಿಮಲೆಯ ತಂದೆಯು ಕಾಲವಾಗಿದ್ದ. ಸೋದರನೊಬ್ಬನು ಹೇಳದೆ ಕೇಳದೆ ಪರಾರಿಯಾಗಿದ್ದ. ಅವರ ಮನೆಯ ವಹಿವಾಟುಗಳನ್ನು ನೋಡುವವರಿದ್ದಿಲ್ಲ. ಆದರೂ ಆಕೆಯ ಜಂಬ ಕಡಿಮೆಯಾಗಿರಲಿಲ್ಲ. ಅಂತು ವೆಂಕಪ್ಪ ತನ್ನ ಕಚೇರಿಯನ್ನು ಉಡುಪಿಗೇನೆ ತಿರುಗಿಸಿದ. ತನಗೆ ವಕಾಲತಿನ ಆದಾಯ ಇಲ್ಲದೆ ಹೋದರೂ, ಅತ್ತೆಯ ಮನೆಯು ಅನುಕೂಲವಂತರ ಮನೆಯೆಂಬುದನ್ನು ಅವನು ಅರಿತಿದ್ದ.

ಕೊನೆಯ ಬೆಳಕು

ಸುಧೀರನಿಗೀಗ ಹದಿನೆರಡು ವಯಸ್ಸು ಕಳೆದಿದೆ. ಬಲು ಚುರುಕಿನ ತುಂಟನಾಗಿ ಬೆಳೆದಿದ್ದಾನೆ. ಸುಬ್ಬಯ್ಯನಲ್ಲಿ ಅಷ್ಟೊಂದು ಮೋಹ ಅವನಿಗೆ. ಸುಬ್ಬಯ್ಯನಾದರೂ ಮಕ್ಕಳ ಮುಂದೆ ತುಂಬ ಉತ್ಸಾಹವಾಗಿಯೇ ಇರುತ್ತಾನೆ, ಅವರಿಗಾಗಿ ನಗು ನಟಿಸುತ್ತಾನೆ; ಆಸಕ್ತಿ ತೋರಿಸುತ್ತಾನೆ. ಅದನ್ನು ತೋರಿಸುವುದೇನೊ ತುಂಬ ಕಷ್ಟವಾಗಿತ್ತು. ಕಾರಣ —ದಿನಹೋದಂತೆ ಸುಧೀರನ ರೂಪ ಮೋಹನ, ಮದನರಂತೆಂದು ಅವನಿಗೆ ಕಾಣಿಸುತ್ತಿದೆ. ಹಿಂದಿನಿಂದಲೂ ತನ್ನ ಕುಸುಮೆ ತನ್ನನ್ನು ವಂಚಿ

ಸಿಯೇ ಬಾಳ್ವೆ ಸಾಗಿಸಿದಳಲ್ಲಾ ಎಂಬ ಸಂಶಯವು ಅವನಲ್ಲಿ ಖಚಿತ ವಾಗಿ ಬೇರೂರಿಬಿಟ್ಟಿದೆ. ಸುಧೀರನ ಬೆನ್ನಿಗೆ ಬಂದಂಥ ಲಲನೆಯಂತು ಅಣ್ಣನ ಬೆನ್ನಿಗೇನೆ ಬಂದ ಹುಡುಗಿಯಾಗಿ ಕಾಣಿಸುತ್ತಾಳೆ. ಮಾಧವಿ, ಜಮುನೆಯರ ಎಳೆ ತನದ ಹೋಲಿಕೆಗಳೆಲ್ಲ ಅವಳಲ್ಲಿ ಒಡಮೂಡಿವೆ. ಹಾಗೆಂದು ಆ ಹಸುಳೆಗಳ ಮೇಲೆ ಸ್ನೇಹ ತುಂಬ. ಬಾಳ್ವೆಯು ತುಂಬ ಮುಳ್ಳುಗಳಿವೆ ಎಂದು ಅರಿಯದ ಆ ಕೂಸುಗಳ ಮುಂದೆ, ನಿಷ್ಕಳಂಕ ಮನಸ್ಸುಗಳ ಮುಂದೆ, ಸುಬ್ಬಯ್ಯ ಒಂದೇ ಒಂದು ದಿವಸ ನೊಂದು ದಿಲ್ಲ, ಅವರನ್ನು ಗದರಿಸಿದುದಿಲ್ಲ. ಜಮುನೆಯಂತಹ ಹುಡುಗಿಯನ್ನು ಕುರಿತು 'ಮನಸಾ ತನ್ನ ಮಗಳು' ಎಂಬ ವ್ಯಾಮೋಹ ತಳೆದವನಿಗೆ, ಈ ಕೂಸುಗಳು ಬೇರೆಯಾದಾವೆ?

ಆದರೆ— ಅದೇ ಔದಾರ್ಯ, ಕ್ಷಮೆಗಳು ಕುಸುಮೆಯ ಮೇಲೆ ಉಂಟಾಗಲೇ ಇಲ್ಲ. ಗಂಡ ಹೆಂಡಿರಿಬ್ಬರ ನಡುವೆ ಬೀಗ ಮುದ್ರೆಯೊತ್ತಿದ ಬಾಯಿಯೇ. ಎಷ್ಟು ಬಾರಿ ಸುಧೀರ ವಿಚಕ್ಷಣನಾಗಿ "ಅಪ್ಪಾ, ನೀನು ಅಮ್ಮನ ಹತ್ತಿರ ಮಾತೇ ಆಡುವುದಿಲ್ಲವೇ?" ಎಂದು ಕೇಳಿದುದುಂಟು. ಕೇವಲ ಅವನ ಇಷ್ಟದ ಸಲುವಾಗಿ ಎಂಬಂತೆ 'ಕುಸುಮಾ, ಅಡುಗೆ ಆಗಿದೆಯೇ?' ಎಂದು ಅಡುಗೆ ಮನೆಯನ್ನು ಸೇರದ ಮಡದಿಯನ್ನು ಅವನು ಮಾತನಾಡಿಸಿದ್ದುಂಟು. ಅದು ಬರಿಯ ನಾಟಕವಷ್ಟೆ. ಕುಸುಮೆ, ಗಂಡ ಮನೆಯಲ್ಲಿರುವಾಗ ಮನೆಯಲ್ಲಿರುವುದಕ್ಕೇನೆ ಬಯಸುವುದಿಲ್ಲ. ಅವಳಾಯಿತು; ಸ್ತ್ರೀ ಸಮಾಜವಾಯಿತು. ಅವಳ ಕಾರುಭಾರುಗಳೆಲ್ಲವು ಸಾರ್ವಜನಿಕ ಚಟುವಟಿಕೆಗಳಲ್ಲಿ ಕಳೆಯುತ್ತವೆ. ಗತ್ಯಂತರವಿಲ್ಲದೆ, ರಾತ್ರಿಮಾತ್ರ, ಗಂಡಹೆಂಡಿರಿಬ್ಬರ ಮೈಮೇಲೆ ಒಂದೇ ಮಾಡಿನ ನೆರಳು ಕವಿಯುತ್ತದೆ. ಬೆಳಗಿನ ಸೂರ್ಯ ಒಬ್ಬರ ನೆರಳನ್ನು ಹಾಗೆ ಇನ್ನೊಬ್ಬರ ಮೇಲೆ ಕೆಡುದುದೂ ಉಂಟು. ಆದರೆ ಒಬ್ಬರ ಮನಸ್ಸನ್ನು ಇನ್ನೊಬ್ಬರ ಮನಸ್ಸಿನ ಹಾದಿಯಲ್ಲಿ ಕೆಡೆಯಲೇ ಇಲ್ಲ. ಕುಸುಮೆ ತಗ್ಗಿದ್ದರೆ, ಬಗ್ಗಿದ್ದರೆ, ಸುಬ್ಬಯ್ಯನಲ್ಲಿ ಕ್ಷಮೆ ಕೇಳಿದ್ದರೆ, ತನ್ನದು ತಪ್ಪು ಎಂದಿದ್ದರೆ-ಎಂಥ ಅಕ್ಷಮ್ಯ ನಡತೆಯನ್ನೂ ಮರೆಯುವವ ಆತ. ಆದರೆ ಆ ಬಗೆ ಮಾತ್ರ ಕುಸುಮೆಯ ರಕ್ತದಲ್ಲಿ ಬೆರತೇ ಇರಲಿಲ್ಲ.

ಈ ಕೆಲವು ವರ್ಷಗಳಲ್ಲಿ ಅವಳ ಸ್ವಭಾವ ಇನ್ನಷ್ಟು ವಿಚಿತ್ರವಾ

ಗಿತ್ತು. ಪತಿಯ ಸ್ನೇಹ ದೂರವಾಯಿತು. ಆಚೆ ಗೆಳೆಯನೆನಿಸಿದ ವೆಂಕಪ್ಪನೂ ದೂರವಾದನು. ಆದರೂ ತಾನೆಂತಹ ಜಿಡುಕನ್ನುಂಟುಮಾಡಿಕೊಂಡೆನೆಂಬ ನೋವು ಅವಳ ಮನಸ್ಸಿಗೆ ಉಂಟಾಗಲಿಲ್ಲ. ಆಕೆ ತನ್ನ ನಡತೆಗೆ ಸಮರ್ಥನೆ ದೊರಕಿಸಲು ಪ್ರಯತ್ನಿಸುವವಳೇ ಹೊರತು ತನ್ನ ಕೊರತೆಯ ಲವಲೇಶವನ್ನು ಕಾಣುವ ಸ್ವಭಾವದವಳಾಗಿರಲಿಲ್ಲ. ಅವಳಲ್ಲಿರುವ ಅಂತರಂಗ ಅವಳಿಗೇನೆ ತೆರೆದ ಪುಸ್ತಕ. ಏನಾದರೂ ಅವಳ ಸುಖದುಃಖಗಳಲ್ಲಿ ಪಾಲುಗಾರ್ತಿಯರಿದ್ದರೆ ಅದು ನಾರಾಯಣಿಯೊಬ್ಬಳೇ. ಅವಳಿಗೆ ಅವರ ಗೃಹಕೃತ್ಯದ ವಿಚಾರ ಅನುಮಾನದಿಂದಲೂ, ಮಾತಿಂದಲೂ ತಿಳಿಯುವುದು ದುಸ್ಸಾಧ್ಯವಾಗಿರಲಿಲ್ಲ. ಆಕೆಯೊಬ್ಬಳೇ, ಗೆಳೆತನದಲ್ಲಿ, ಅವಳ ನೆರಳಿಗಿಂತ ಮಿಗಿಲೆನಿಸಿ ವರ್ತಿಸುವವಳು. ಕುಸುಮೆಯ ಯಾವ ಚಾಕರಿಗೂ ಅವಳು ಮುಂದೆ. ಕುಸುಮೆಯನ್ನು ಹೊಗಳುತ್ತಿದ್ದು ತನ್ನ ದಿನ ಕಳೆಯುವ ಶೀಲದವಳಾದ ನಾರಾಯಣಿಯೂ ಹಿತೋಪದೇಶದಿಂದ ಕುಸುಮೆಯ ಮನಸ್ಸನ್ನು ಬಾಗಿಸಲು ಯತ್ನಿಸಲಿಲ್ಲ. ಹಾಗೆ ಯತ್ನಿಸಿದ್ದರೆ ಅದು ಸಾಧ್ಯವಿತ್ತೋ ಇಲ್ಲವೋ-- ಯಾರುಬಲ್ಲರು?

ಆದರೆ ಅದೊಂದು ದಿನ, ಸಂತೆ ಮುಗಿದ ಮೇಲೆ, ಎಣ್ಣೆಗೆ ಹೋದರೆಂಬಂತೆ-ಅಂಥ ಕುಸುಮೆಯ ಹೆಮ್ಮೆಯೂ ಬಗ್ಗಿತು. ಸುಬ್ಬಯ್ಯನು ಅವಳ ವಸ್ತು ಒಡವೆಗಳಿಗೆ ಯಾವ ಕೊರತೆಯನ್ನೂ ಉಂಟುಮಾಡುತ್ತಿರಲಿಲ್ಲ. ಅವಳವನ ಮನೆಯೊಡತಿ ಮಾತ್ರ ಆಗಿರಲಿಲ್ಲ. ಸುಬ್ಬಯ್ಯನ ವರಮಾನ ತುಂಬ ಉಕ್ಕಿತ್ತು. ಅವನಿಗೆ ನಿರಂಜನನ ಪೂರ್ಣ ಬೆಂಬಲ ಬೇಕಾಗಿತ್ತು. ಇದರಿಂದ ನಿರಂಜನನ ಜೀವನಕ್ಕೂ ತೊಂದರೆಯುಂಟಾಗಲಿಲ್ಲ. ಆರೇಳು ವರ್ಷಗಳಲ್ಲಿ ನಿರಂಜನನು -- ಸಾಮಾನ್ಯ ಗಳಿಕೆಯ ಮಟ್ಟಕ್ಕೇರಿದುದಲ್ಲದೆ, ತಂದೆಯು ಮಾಡಿಟ್ಟ ಸಾಲವನ್ನು ತೀರಿಸಲು ಯತ್ನಿಸಿದ. ಸಾಲ ಸಲಬೇಕಾದುದು ಸುಬ್ಬಯ್ಯನಿಗೇ; ಅದು ಕಾಗದ ಪತ್ರವಿಲ್ಲದ ಸಾಲ. ಅದರಿಂದಲೇ ನಿರಂಜನನಿಗೆ ನೋವು. ಕೊಡಲು ಹೋದಾಗಲೆಲ್ಲ "ನೀನದನ್ನು ಬೇರೆಯೇ ತೆಗೆದಿರಿಸು..." ಎನ್ನುತ್ತಿದ್ದ. ಆತನದನ್ನು ತಂದೆಯ ಸಾಲಕ್ಕೇನೆ ಮೀಸಲಾಗಿ ಇರಿಸುತ್ತಿದ್ದ. ತನ್ನ ತಂದೆ ಸುಬ್ಬಯ್ಯನಂಥ ಗೆಳೆಯನ ಋಣವನ್ನು ಕಡಿದುಕೊಂಡು, ಮಾತಿ

ಲ್ಲದೆ ಉಡುಪಿಗೆ ಹೋದುದು, ಅವನಿಗೆ ಇಷ್ಟಿಷ್ಟು ಚೆಂದವಾಗಿ ಕಾಣಿಸಲಿಲ್ಲ.

ನಿರಂಜನನೀಗ ಸಂಸಾರಿ. ಅವನಿಗೆ ಲಗ್ನವಾಗಿದೆ. ಮನೆಯಲ್ಲಿ ರಡು ಕೂಸುಗಳು ಬೆಳೆಯುತ್ತಿವೆ, ತಮ್ಮಂದಿರ ಆರೈಕೆ ಅವನೇ ನೋಡುತ್ತಿದ್ದಾನೆ. ಮಾಧವಿಗೂ ಒಂದು ನಂಟುತನ ಕಂಡಿದ್ದಾನೆ. ಮೇಲೆ ಸ್ವಂತ ಆವಶ್ಯಕತೆಗಳನ್ನು ಮುಷ್ಟಿಯಲ್ಲಿರಿಸಿಕೊಂಡು, ಸುಬ್ಬಯ್ಯನ ಋಣವನ್ನು ಹರಿಯಿಸಲೆತ್ನಿಸುತ್ತಿದ್ದಾನೆ.

ನಿರಂಜನನು ಬೆಳೆದು ಬರುತ್ತಿರುವ ರೀತಿಯಿಂದ ಸುಬ್ಬಯ್ಯ ತುಂಬ ಉತ್ಸಾಹಿತನಾದ. ಎಂಥ ತಂದೆಗೆ ಎಂಥ ಮಕ್ಕಳು--ಎಂದು ಅವನು ಉದ್ಗರಿಸುವುದುಂಟು. ಏಕೋ ಅವನ ಮನಸ್ಸಿನಲ್ಲಿ, ತಾನು ಬಹುದಿನ ಬಾಳಲಾರೆನೆಂಬೊಂದು ಚಿಂತೆಯಿದ್ದುದರಿಂದ, ತನ್ನ ಕೂಸುಗಳ ರಕ್ಷಣೆಯಾಗಬೇಕಾದರೆ ಅವನಿಂದಲೇ ಆಗಬೇಕೆಂದು ತಿಳಿದಿದ್ದ. ಆತನ ನಡತೆಯೆಲ್ಲ ವಿರಕ್ತನಂತೆಯೇ ಇದೆ. ಬಲವಂತದಿಂದ ವ್ಯಾಮೋಹವನ್ನು ಮುರಿಯುವವನಂತೆ ಇದ್ದಾನೆ. ಲೌಕಿಕದಲ್ಲಿ ಬೇಕಷ್ಟೇ ಆಸಕ್ತಿ. ಮನೆಯ ಆಡಳಿತೆಯಲ್ಲಿ ತಟಸ್ಥ. ಮಕ್ಕಳ ಪಾಲಿಗೆ ಮುದ್ದಿನ ತಂದೆ. ಚಿಂತೆ ಬಂತೆಂದರೆ ಗೀತೆಯೋ, ಅಧ್ಯಾತ್ಮವೋ -- ಇಂಥದರಲ್ಲಿಯೇ ಸಮಯ ಕಳೆಯುತ್ತಾನೆ. ಮೊದಲಿನಂತೆ ಈಗ ಕ್ಲಬ್ಬಿನಲ್ಲಿ ಸಮಯ ಕಳೆಯುವುದೂ ಇಲ್ಲ. ಒಂಟಿಯಾಗಿ ವಿಹಾರಕ್ಕೆ ಹೋಗುವ. ಕೆಲವು ಬಾರಿ ಮಕ್ಕಳನ್ನು ಕರೆದುಕೊಂಡು ಅಲೆದಾಡುವ. ಕೆಲವು ಬಾರಿ ತನ್ನ ನಿರಂಜನ, ಜಮುನೆಯರ ಮಕ್ಕಳನ್ನು ಮನೆಯಲ್ಲಿ ಆಡಿಸುತ್ತ ಕುಳಿತಿರುವ. ಬಹಳ ವರಮಾನವಿರುವ ದಾವೆಗಳನ್ನು--ನಿರಂಜನನಿಗೆ ನೋಡಲು ಹೇಳಿಬಿಡುವುದುಂಟು. ಕಕ್ಷಿಗಾರರು ಮುಖ ಸಪ್ಪಗೆ ಮಾಡಿದರೆ -"ಹಿಂದಕ್ಕೆ ನಾನಿಲ್ಲವೇ? ಯಾಕೆ ನಿಮಗೆ ಅನುಮಾನ" ಎಂದುಬಿಡುವ.

ಏನೋ ಒಂದು ದಿವಸ ಬಲು ದೊಡ್ಡ ಒಂದು ಕಕ್ಷಿಯಲ್ಲಿ ಅವನು ತಲ್ಲೀನನಾಗಬೇಕಾಯಿತು. ತೀರ ಹಿಂದಿನ ಮಿತ್ರರು; ತೀರ ಹಳೆಯ ದಾವೆ; ಎಲ್ಲಿಲ್ಲದ ಗೊಂದಲಗಳನ್ನು ಕೂಡಿಕೊಂಡ ಸಮಸ್ಯೆ. ಮುಂದೆ ಅದು ಹೈಕೋರ್ಟಿನಲ್ಲೇ ಮುಗಿಯಬೇಕಾದ್ದಾದರೂ, ಅದರ ಪ್ರಥಮ ಚಿಕಿತ್ಸೆಯನ್ನು ಚೆನ್ನಾಗಿ ಮಾಡಬೇಕೆಂಬುದರಿಂದ — ಒಂದು ವಾರವೆಲ್ಲ

ಶ್ರಮಿಸಿದ. ರಿಕಾರ್ಡು ತಿರುಗಿಸುವುದು, ಲಾ ಗ್ರಂಥಗಳನ್ನು ಅಡಿಮೇಲಾಗಿಸುವುದು, ದಿನದಿನ ಮುಂದುವರಿಯುತ್ತಿದ್ದ ದಾವೆಯಲ್ಲಿ ಕಂಠಶೋಷಣೆ ಮಾಡಿಕೊಳ್ಳುವುದು-ಹೀಗೆ ವಾರದ ತನಕ ನಡೆಯಿತು. ಒಂದು ದಿನ ಹಾಗೆಯೇ ಕೆಲಸ ಮುಗಿಸಿ ಮನೆಗೆ ಬಂದು ಕುಳಿತವನಿಗೆ ಕಣ್ಣು ಕತ್ತಲೆಯಾಯಿತು. ಎದೆನೋವಾಯಿತು. ತನಗೇಕೋ ಹಳೆಯ ಬೇನೆ ತಿರುಗಿ ಉದಯಿಸಿತೆಂಬ ಅನುಮಾನವಾಯಿತು. ಕುಸುಮೆ ಕಕ್ಕಾಬಿಕ್ಕಿಯಾದಳು. 'ಡಾಕ್ಟರರಿಗೆ ಹೇಳಲೇ' ಅಂದಳು...."ನನಗಾಗಿ ಯಾರೂ ಬೇಡ"-ಎಂದು ಆತ ನುಡಿದ. ನಿಜಕ್ಕೂ ಆತನ ಮನಸ್ಸು ಹಾಗೇನೆ ಇತ್ತು. "ಬಹುದಿನಗಳ ಮನಸ್ಸಿನ ಬಯಕೆಯೇ ಸಾವು"-ಎಂಬಂತಿತ್ತು. ಆ ಒಂದು ಮಾತೇನೆ ಕುಸುಮೆಯನ್ನು ತಬ್ಬಿಬ್ಬಾಗಿ ಮಾಡಿತು. ಅವಳು ನಿರಂಜನನನ್ನು ಕರೆಯಿಸಿದಳು. ಅವನ ಹೇಳಿಕೆಯಿಂದ, ಹಿಂದೆ ಚಿಕಿತ್ಸೆ ನಡೆಯಿಸಿದ ಡಾಕ್ಟರರೇ ಬರುವಂತಾಯಿತು. ಔಷಧೋಪಚಾರಗಳಾದುವು. ಶ್ರಮದ ಕಾರಣವನ್ನು ನಿರಂಜನ ತಿಳಿಸಿದನು. ವೈದ್ಯರು "ಏನಾಗಲಾರದು. ಆದರೂ ಇನ್ನು ಮುಂದೆ, ಅವರು ಉದ್ಯೋಗಕ್ಕೆ ತಥಾಸ್ತು ಅಂದರೂ ಚಿಂತೆಯಿಲ್ಲ. ಈ ಆರು ವರ್ಷಗಳಲ್ಲಿ ಅವರ ವರ್ಚಸ್ಸು ಬದಲಾಗಿದೆ. ಅವರಿಗೆ ಮುಪ್ಪು ಧಾವಿಸಿ ಬಂದಂತಿದೆ" ಎಂದರು. ಸುಬ್ಬಯ್ಯಣ್ಣನ ಆಪತ್ತನ್ನು ಕೇಳಿ, ಜಮುನೆ ತಿರುಗಿ ಅವನ ಪಾದಸೇವೆಗೆ ಸಿದ್ಧಳಾದಳು. ಅವಳ ಪಾಲಿಗೆ ಸುಬ್ಬಯ್ಯಣ್ಣ ಮೊದಲಿನಿಂದಲೂ ದೇವರೇ. ಈಗೀಗ, ಅವನ ವಿರಕ್ತಮಾರ್ಗವನ್ನು ಕಂಡಂತು, ಅವನು ಅವಳ ಪಾಲಿಗೆ ಪರಿಪೂರ್ಣ ದೇವರಾಗಿದ್ದಾನೆ. ಕುಸುಮೆಗೆ ಮಾತ್ರ ಪತಿಯ ಬಳಿಗೆ ಬರುವ ಧೈರ್ಯವೇ ಇಲ್ಲ. ಬಳಿಯಲ್ಲಿ ಸುಳಿಯುತ್ತಾಳೆ, ಜಮುನೆಯೊಡನೆ ಹೇಗಿರುವರೆಂದು ಕೇಳಿ ತಿಳಿಯುತ್ತಾಳೆ; ಆದರೆ ತಾನೇ ಸಮೀಪಿಸಲು ನಡುಗುತ್ತಾಳೆ.

ಮೂರು ನಾಲ್ಕು ದಿವಸಗಳ ಕಾಲ ಹೀಗೆಯೇ ಸರಿಯಿತು. ಸುಬ್ಬಯ್ಯ ಮಲಗಿದಲ್ಲಿಂದಲೇ ಎಲ್ಲ ಉಪಚಾರಗಳನ್ನು ಸ್ವೀಕರಿಸುತ್ತಾನೆ. ಯಾರೊಡನೆಯೂ ಹೆಚ್ಚಿಗೆ ಮಾತನಾಡುವುದಿಲ್ಲ. ಜಮುನೆ ಬಂದಾಗ ಗೀತೆಯಿಂದಲೋ, ವಚನಾಮೃತದಿಂದಲೋ ಏನಾದರೂ ಶ್ಲೋಕ ಓದಲುಹೇಳಿ, ಮಲಗಿದಲ್ಲಿಂದಲೇ ಕೇಳುತ್ತಾನೆ. ನಡುವೆ ಅವನು ನಡೆ

ಯಿಸಿದ ಒಂದೇಒಂದು ಲೌಕಿಕವೆಂದರೆ ಒಂದು ಉಯಿಲು. ನಿರಂಜನ 'ಏಕೆ, ಏಕೆ' ಎಂದರೂ ಅದನ್ನು ಅವನಿಂದ ಬರೆಯಿಸಿದನು. ತನ್ನ ಆಸ್ತಿ ಪಾಸ್ತಿಗಳಿಗೆ ಅವನನ್ನು ರಕ್ಷಕನನ್ನಾಗಿ ಇರಿಸಿದನು. ನಿರಂಜನ ಮಾತ್ರ, ಅದರೊಳಗೆ ಕುಸುಮೆಯ ಹೆಸರನ್ನು ಸೇರಿಸದೆ ಇರಲಿಲ್ಲ. ಓದಿ ಹೇಳು ವಾಗ ಮಾತ್ರ ಅದನ್ನು ಸುಬ್ಬಯ್ಯಗೆ ಹೇಳಲಿಲ್ಲ. ಹಾಗೆಂದು ಕುಸು ಮೆಯ ಸುಖಜೀವನಕ್ಕೆ ಕೊರತೆತರುವ ಉದ್ದೇಶ ಸುಬ್ಬಯ್ಯನಲ್ಲಿರಲಿಲ್ಲ.

ಈ ಘಟನೆಯಾದ ಬಳಿಕ ಉಯಿಲಿನ ಪ್ರತಿ ಆತನ ತಲೆಯ ಅಡಿ ಯಲ್ಲೇ ಇರುತ್ತಿತ್ತು. ನಿರಂಜನ ನಿತ್ಯವೂ "ನೀವೇಕೆ ಅವಸರ ಮಾಡಿ ದಿರಿ. ಡಾಕ್ಟರರು ಧೈರ್ಯ ಹೇಳುತ್ತಾರಲ್ಲ" ಅನ್ನುತ್ತಲೇ ಇದ್ದ. ಅವನ ಮನಸ್ಸು ಮಾತ್ರ ಹಾಗೆ ಹೇಳುತ್ತಿರಲಿಲ್ಲ. ಜಮುನೆಗೆ ಮಾತ್ರ "ಸುಬ್ಬ ಯ್ಯಣ್ಣನ ಮನಸ್ಸು ಬದುಕಲು ಹವಣಿಸುತ್ತಲಿಲ್ಲ" ಎಂಬುದು ತೀರ ಸ್ಪಷ್ಟವಾಗಿತ್ತು. ಅದರಿಂದವಳು ಒಂದು ವಿಷಯದಲ್ಲಿ ತೀರ ಕಾತರ ಳಾಗಿದ್ದಾಳೆ. ಸಾಯುವ ಮುನ್ನ ಕುಸುಮೆಯೊಡನೆ ಪ್ರಸನ್ನನಾಗಿದ್ದು ಆತ ಸಾಯಬೇಕೆಂದು ಅವಳ ಲವಲವಿಕೆ. ಇತ್ತೀಚೆಗಂತು ಕುಸುಮೆಯ ಮುಖ ತೀರ ಇಳಿದುಹೋಗಿತ್ತು. ಅವಳು ಅನ್ನಪಾನಗಳನ್ನು ಸಮನಾಗಿ ಮಾಡುತ್ತಿರಲಿಲ್ಲ. ಅವಳಿಗೂ ಜಮುನೆಯೇ ಸಮಾಧಾನ ಹೇಳಬೇಕು. ಅವಳ ಉತ್ತರವಿಷ್ಟೆ: "ನನ್ನಂತಹ ನಾಯಿ ಬದುಕಿದರೇನು ಸತ್ತರೇನು" -ಎಂದು. ಆ ಮಾತನ್ನು ಕೇಳಿದಾಗಿಂದ ಜಮುನೆಯ ಮನಸ್ಸು ಕರಗಿ ಹೋಗಿತ್ತು. ಆದರೂ ನಿಮ್ಮ ಅಂತಃ ಕಲಹದ ಮೂಲವೇನೆಂದು, ಆ ಎಳೆಯಳು ಹಿರಿಯಳನ್ನು ಕೇಳಬಲ್ಲಳೇ?

ಒಂದು ಸಂಜೆ ಆಕೆ, ಸುಬ್ಬಯ್ಯನ ಕಾಲೊತ್ತುತ್ತ ಕುಳಿತಿರುವಾಗ ಆಕೆಗೆ ಕಂಬನಿ ಬಂದಿತು. ಕಂಬನಿ ಬಂದುದೇ ಕುಸುಮೆಯ ನೆನವರಿ ಕೆಯಿಂದ.

"ಏಕೆ, ಅಳುತ್ತೀ ಮಗು?" ಎಂದು ಕೇಳಿದ ಸುಬ್ಬಯ್ಯ.

"ನಾನು ಏನಾದರು ಬೇಡಿದರೆ ನಡೆಯಿಸಿಕೊಡುತ್ತೀರಾ?"

"ಅಂಥದೇನು ಮಗು? ನನ್ನಿಂದಾಗುವುದು ಮಾಡುತ್ತೇನಮ್ಮ"

ಜಮುನೆಗೆ ಧೈರ್ಯವಾಯಿತು. "ನೀವು ಸಿಟ್ಟಾಗಬಾರದು...... ಸಣ್ಣಮ್ಮ ನಿತ್ಯ ಅಳುತ್ತಿದ್ದಾರೆ. ಏಕೇ ಏನೋ--ಅವರಿಗೆ ನಿಮ್ಮ ಹತ್ತಿರ

ಬರಬೇಕೆಂದು ಕುತ್ತಿಗೆಯ ತನಕ ಮನವಿದೆ. ಯಾಕೋ ಅಂಜುತ್ತಾರೆ. ನಿಮ್ಮೊಳಗೆ ಏನಿದ್ದರೂ-ಮರೆತುಬಿಡಬೇಕು"--ಎಂದಳು. ಜಮುನೆಯು ಈ ವಿಚಿತ್ರ ಪ್ರಾರ್ಥನೆಯನ್ನು ಕೇಳಿ ಅವನಿಗೂ ಕಂಬನಿಮಿಡಿಯಿತು. ತುಸು ಹೊತ್ತು ಸುಮ್ಮನಿದ್ದನು. "ಸಿಟ್ಟಾದಿರಾ?" ಎಂದು ಆಕೆ ಕೇಳಲು "ಸಿಟ್ಟೇಕೆ-ಮಗು. ಈ ಪ್ರಪಂಚವನ್ನು ಬಿಡುವವರು ಯಾವ ಮೋಹ ವನ್ನೂ ಇರಿಸಿಕೊಳ್ಳಬಾರದು. ಹಾಗೆ ನಾನೂ ವೈರವನ್ನು ಇರಿಸಿಕೊಳ್ಳ ಬಾರದು. ಇಲ್ಲವಾದರೆ ನಾನೀ ತನಕ ಓದಿದ್ದು ಏನು ಫಲ?" ಎಂದನು.

ಅದೇ ಬಡದನಿಯಲ್ಲಿ "ಅವಳನ್ನು ಕರೆ"-ಎಂದನು. ಜಮುನೆಯು ಓಡೋಡಿ 'ಸಣ್ಣಮ್ಮ, ಕರೆಯುತ್ತಾರೆ ನಿಮ್ಮನ್ನು' ಎಂದು ಹೇಳಿದಳು. ಕುಸುಮೆಗೆ ಒಮ್ಮೆಗೇ ಎದೆ ಜಲ್ಲೆಂದಿತು. ಗಲ್ಲಿಗೇರುವ ಅಪರಾಧಿನಿ ಯಂತೆ ಮುಖ ವಿವರ್ಣವಾಯಿತು. ತುಸು ಹೊತ್ತು ಆಕೆ ಕದಲಲಿಲ್ಲ. ಜಮುನೆ-ನಡೆದ ಸಂಧಾನ ತಿಳಿಸಿದಳು. ತಲೆಬಾಗಿದ ಅವಳನ್ನು ಕರೆದು ಕೊಂಡು ಬಂದಳು. ಕುಸುಮೆ ಮಂಚದ ಬಳಿಯಲ್ಲಿ ಹಾಗೆ ನಿಂತಿದ್ದಳು. ಸುಬ್ಬಯ್ಯ, "ಕುಸುಮಾ-ಕುಳಿತುಕೋ" ಎಂದು ನುಡಿದನು; ಆಧ್ವನಿಯೇ ಬೇರೆ; ಅದು ಅಪಾರ ಮರುಕ ತುಂಬಿದ ಧ್ವನಿ, ಕುಸುಮೆ ಕುಳಿತಿರಲಾ ರಳು, ನಿಂತಿರಲಾರಳು. ಗದ್ಗತಿತಳಾಗಿ ರೋದಿಸುತ್ತ ಅವನ ಕಾಲನ್ನು ಹಿಡಿದಳು. "ಒಂದು ಸಾರಿಗೆ ಕ್ಷಮಿಸಿ-ನನ್ನನ್ನು. ನಾನು ಹುಚ್ಚಿ; ನಾನು ಮರುಳಿ" ಎಂದು ತನ್ನನ್ನು ಅನಂತವಾಗಿ ಶಪಿಸಿಕೊಂಡಳು. ಸುಬ್ಬ ಯ್ಯನೇ ಸಮಾಧಾನ ಹೇಳಬೇಕು. "ಕುಸುಮಾ-ಸುಮ್ಮನಾಗು. ಎಲ್ಲ ಮರೆತು ಬಿಡು......ನನಗೂ ದ್ವೇಷವಿಲ್ಲ" ಎಂದನಾತ. ಬಹು ಹೊತ್ತು ಮೂವರೂ ಮಂಕರಂತೆಯೇ ಅಲುಗಾಡದೆ ಕುಳಿತಿದ್ದರು.

ಆ ರಾತ್ರಿಯೇ ಸುಬ್ಬಯ್ಯನ ಅಂತಿಮ ಶ್ವಾಸಗಳು ಎಳೆಯುತ್ತಿ ದ್ದುವು. ದಣಿದಣಿದು ಕುಸುಮೆ, ಜಮುನೆಯರು ಅವನ ಪಾದಸೇವೆ ಮಾಡುತ್ತಿದ್ದರು. ರೋದಿಸುತ್ತಿರುವ ಸುಧೀರನು ಅವನ ಬಳಿ ಮಲಗಿ ದ್ದನು. ಹತ್ತಾರುಮಂದಿ ಗೆಳೆಯರು ಬಳಿಯಲ್ಲಿ ಕಾಲ ನಿರೀಕ್ಷಿಸುತ್ತಿ ದ್ದರು. ಸುಬ್ಬಯ್ಯ ಏನೋ ಸಂಜ್ಞೆ ಮಾಡಿದ; ಜಮುನೆಗೆ ತಿಳಿಯಿತು. ಆಕೆ, ಆತನ ಬಳಿಗೆ ಬಂದು ಗೀತೆಯ ಶ್ಲೋಕಗಳನ್ನು ನಡುಗುವ ಧ್ವನಿ ಯಿಂದ ಉಸುರುತ್ತಿದ್ದಳು.

ಸುಬ್ಬಯ್ಯನ ಪಾದಗಳನ್ನು—ಶೀತವೇರಿದ ಮೇಲೆಯೂ ಭ್ರಮಿಷ್ಟಳಾಗಿ ಮೈಮರೆತ ಕುಸುಮೆ—ಕೈಯಿಂದ ಸವರುತ್ತಲೇ ಇದ್ದಳು. ಶವಕ್ಕೆ ಸ್ನಾನಮಾಡಿಸಲು ತೆಗೆಯುವಾಗಲೇನೆ ಅವಳ ಗಂಟಲಿಂದ ಚಿತ್ಕಾರ ಹೊರಟುದು. ಪತಿಯು ತನ್ನಿಂದ ಆಗಲೇ ಪಾರಾಗಿದ್ದನೆಂಬ ದುಃಖ ಸ್ಫೋಟವಾಯಿತು.

Printed at the Harsha Printery & Publications
Puttur S. K. 51. March-48-1,000